

ಮಹಾಭಾರತದ ಪಾತ್ರ-ಸಂಗತಿಗಳು

ಅ.ರಾ.ಮಿತ್ರ

ಸಂಪುಟ 2

ಮಹಾಭಾರತದ ಪಾತ್ರ ಸಂಗತಿಗಳು

ಸಂಪುಟ ೨

ಮನೋಹರ ಗ್ರಂಥಮಾಲೆ

ಮಹಾಭಾರತದ ಪಾತ್ರ ಸಂಗತಿಗಳು

ಸಂಪುಟ ೨

ಅ. ರಾ. ಮಿತ್ರ

ವಸಂತ ಪ್ರಕಾಶನ
ನಂ. 10, ತುಲಸಿತೋಟ,
ಬೆಂಗಳೂರು – 560 053.
ದೂರವಾಣಿ: 22287876, 9844098336

Mahabharatada Patra Sangatigalu - Vol 2 - written by A.R. Mitra, and published by Vasantha Prakashana, No. 10, Tulasi Thota, Bangalore-560 053.
Phone: 22287876

ಪ್ರಥಮ ಮುದ್ರಣ: 2005
First Print : 2005

Pages : viii + 198

Price : Rs. 100.00
ಬೆಲೆ : ರೂ. 100.00

ಮುಖಪುಟ ವಿನ್ಯಾಸ: *ಚಂದ್ರನಾಥ ಆಚಾರ್ಯ*

ಪ್ರಕಾಶಕರು:
ವಸಂತ ಪ್ರಕಾಶನ
ನಂ. **10**, ತುಲಸಿತೋಟ,
ಬೆಂಗಳೂರು – **560 053.**
ದೂರವಾಣಿ: **22287876, 9844098336**

ಡಿ.ಟಿ.ಪಿ.:
ಲೇಜರ್ ಲೈನ್ ಗ್ರಾಫಿಕ್ಸ್
ಬೆಂಗಳೂರು **27.** ದೂರವಾಣಿ: **22278231.**

ಮುದ್ರಕರು:
ಸ್ಟಾಂಡರ್ಡ್ ಪ್ರಿಂಟರ್ಸ್
111,
ಶಂಕರಪುರಂ, ಬೆಂಗಳೂರು - **4.**

ಮೊದಲ ಮಾತು

ವ್ಯಾಸಭಾರತದಲ್ಲಿ ಬರುವ ಮಹಾಭಾರತ ಕಾಲದ ಮತ್ತು ಹಿಂದಿನ ಕಾಲದ ಜನಗಳ ರಾಜರ ಋಷಿಗಳ ಪ್ರಾಣಿಪಕ್ಷಿಗಳ ಪರಿಚಯ ನಿಮಗಿಲ್ಲಿ ಒಂದೇ ಕಡೆ ಲಭ್ಯವಾಗುವಂತೆ ಮೂರು ಸಂಪುಟಗಳಲ್ಲಿ ವಿವರಿಸಿದ್ದೇನೆ. ಇದು ಎರಡನೆಯ ಸಂಪುಟ ಒಂದು ಕೈಪಿಡಿಯ ರೂಪದಲ್ಲಿ ಕಿರು ವಿಶ್ವಕೋಶ ರೂಪದಲ್ಲಿ, ಇಲ್ಲಿಯ ಪಾತ್ರಸಂಗತಿಗಳನ್ನು ಯೋಜಿಸಲಾಗಿದೆ. ಸಾಮಾನ್ಯವಾಗಿ ಭಾರತವನ್ನು ಪರಂಪರೆಯಿಂದ ಕೇಳಿಕೊಂಡು ಬಂದಿರುವ ನಮ್ಮ ಜನ ಪಾಂಡವರು ಕೌರವರು ಕೆಲವರು ಯಾದವರು ವಿರಾಟರು ಮತ್ಸ್ಯರು ಇವರನ್ನು ಬಿಟ್ಟು ಉಳಿದವರ ಬಗೆಗೆ ಹೆಚ್ಚು ತಿಳಿದಿಲ್ಲ. ಮಹಾಭಾರತದ ಒಟ್ಟಂದವನ್ನು ಹೆಚ್ಚಿಸಿರುವ ಸಣ್ಣಪುಟ್ಟ ಪಾತ್ರಗಳ ಹಿರಿಮೆ ಅವರಿಗೆ ಗೊತ್ತಿಲ್ಲ. ಅಂಥ ಸುಮಾರು 280 ಪಾತ್ರಗಳ ಪರಿಚಯ ಈ ಗ್ರಂಥಗಳಲ್ಲಿವೆ. ಕೃಷ್ಣಸಾರಥಿ ದಾರುಕ, ಪ್ರದ್ಯುಮ್ನನ ಸಾರಥಿ ದಾರುಕಿ, ದುರ್ಯೋಧನನ ಹೆಂಡತಿ ಚಿತ್ರಾಂಗಿ, ಪರಾಶರರನ್ನು ಹೆತ್ತ ಅದೃಶ್ಯಂತಿ, ಘಟೋತ್ಕಚನ ಮಗ ಅಂಜನ ಪರ್ವ, ಅರ್ಜುನನ ಮಗ ಇಲಾ (ರಾ) ವಂತ, ಶಿಖಂಡಿಗೆ ತನ್ನ ಗಂಡಸುತನವನ್ನು ಎರವಲಾಗಿ ಕೊಟ್ಟ ಸ್ಥೂಲಕರ್ಣ, ಹಾಗೆಯೇ ಉಗ್ರಾಯುಧ, ವಿಭಾವಸು, ಕಾಲಕವೃಕ್ಷೀಯ, ಜಾನಪದಿ-ಇಂಥ ನೂರಾರು ಪುಟ್ಟ ಪಾತ್ರಗಳ ಸಾಧನೆಯ ಸೀಳು ನೋಟ ಇಲ್ಲಿದೆ. ಈ ಎಲ್ಲ ಪಾತ್ರಗಳ ಅಧ್ಯಯನದಿಂದ ಮಹಾಭಾರತದ ಒಂದು ಸಮಗ್ರ ಒಳನೋಟ ಲಭ್ಯವಾಗುತ್ತದೆಂಬ ನಂಬಿಕೆ ನನ್ನದು.

ಕನ್ನಡ ಪ್ರಭ ಪತ್ರಿಕೆಯ ಗೆಳೆಯ ಕಥೆಗಾರ ಸದಾಶಿವ ನನ್ನಿಂದ ಇಂಥ 160 ಪಾತ್ರ-ಸಂಗತಿಗಳನ್ನು ಬರೆಸಿ ಸೊಗಸಾದ ಚಿತ್ರಗಳ ಸಮೇತ ಕನ್ನಡ ಪ್ರಭದ ಭಾನುವಾರದ ವಿಶೇಷ ಅಂಕಣದಲ್ಲಿ ಪ್ರಕಟಿಸಿದರು. ಅವುಗಳ ಜತೆಗೆ ಇನ್ನು 140 ಪಾತ್ರ-ಸಂಗತಿಗಳ ವಿಶ್ಲೇಷಣೆ ಇಲ್ಲಿಯ ಮೂರು ಸಂಪುಟಗಳಲ್ಲಿ ನಡೆದಿದೆ.

ಬರಿಯ ಪಾತ್ರಗಳಲ್ಲದೆ ಕೆಲವು ಮಾಹಿತಿಗಳನ್ನೂ ಇಲ್ಲಿ ಕೊಡಲಾಗಿದೆ. ಉದಾಹರಣೆಗೆ ಕೌರವರು ಎಷ್ಟು ಮಂದಿ? ಅವರ ಹೆಸರೇನು? ಜಂಬೂ ದ್ವೀಪದ ವೈಶಿಷ್ಟ್ಯವೇನು? ಆ ಕಾಲದ ನದಿಗಳ ಕಿರುಪರಿಚಯ ಭಾರತದಲ್ಲಿ ಹೇಗೆ ಮೂಡಿದೆ? ಚಕ್ರವ್ಯೂಹ ಮೊದಲಾದ ವ್ಯೂಹಗಳ ಸಮಾಚಾರವೇನು? ಯುದ್ಧದ ನಿಯಮಗಳೇನು? – ಇಂಥ ಹತ್ತಾರು ಸಂಗತಿಗಳ ವಿವರವನ್ನು ಇಲ್ಲಿ ಕಾಣಬಹುದಾಗಿದೆ. ಇನ್ನೊಂದು ಸಂಗತಿ ಮಹಾಭಾರತ ಕಾಲದ ವ್ಯಕ್ತಿಗಳ ಜೊತೆಗೆ ಮಹಾಭಾರತದಲ್ಲಿ ಉಕ್ತವಾಗಿರುವ ಪೂರ್ವಕಾಲೀನರ ಕಥೆಗಳು ಇಲ್ಲಿ ಬರುತ್ತವೆ.

ತುಂಬ ಸಂಕ್ಷೇಪವಾಗಿ ಬರೆದಿರುವುದರಿಂದ ವಾಚಕರಿಗೆ ಅನುಕೂಲವಾಗುತ್ತದೆಂದು ಭಾವಿಸಿದ್ದೇನೆ. ಗ್ರಂಥ ವಿಸ್ತಾರದ ಭಯದಿಂದ ಮುಖ್ಯಾಂಶಗಳನ್ನು ಬಿಡದೆ ಅಡಕವಾಗಿ ಚಿತ್ರಿಸುವ ಪ್ರಯತ್ನ ಮಾಡಿದ್ದೇನೆ.

ಇಲ್ಲಿ ಬರುವ ಹಲವಾರು ಪಾತ್ರಗಳು ಮಹಾಭಾರತದಲ್ಲೇ ಅಲ್ಲದೆ ನಮ್ಮ

ಪುರಾಣಗಳಲ್ಲಿ ರಾಮಾಯಣ ಭಾಗವತಾದಿಗಳಲ್ಲಿ ವೇದಗಳಲ್ಲಿ ಉಲ್ಲೇಖಿತವಾಗಿವೆ. ಆದರೆ ಭಾರತದಲ್ಲಿ ಬರುವ ಸಂಗತಿಗಳನ್ನು ಮಾತ್ರ ಮನಸ್ಸಿನಲ್ಲಿಟ್ಟುಕೊಂಡು ಬರೆದಿದ್ದೇನೆ.

ಈ ಮೂರು ಸಂಪುಟಗಳನ್ನು ಪ್ರೀತಿಯಿಂದ ಹೊರತರುತ್ತಿರುವ ವಸಂತ ಪ್ರಕಾಶನದ ಶ್ರೀ ಕೆ. ವಿ. ಶ್ರೀನಿವಾಸನ್ ಮತ್ತು ಶ್ರೀ ಕೆ.ಎಸ್. ಮುರಳಿ ಅವರಿಗೆ ನಾನು ಆಭಾರಿಯಾಗಿದ್ದೇನೆ. ಅವರ ಒತ್ತಡವಿಲ್ಲದಿದ್ದರೆ ಪುಸ್ತಕಗಳು ಇಷ್ಟು ಬೇಗ ಹೊರಬರುತ್ತಿರಲಿಲ್ಲ.

ಈ ಪುಸ್ತಕಗಳ ಕಲಾ ಸೌಂದರ್ಯ ಹೆಚ್ಚಲು ಕಾರಣರಾಗಿರುವ ಗೆಳೆಯ ಚಂದ್ರನಾಥ ಆಚಾರ್ಯರ ಸೂಕ್ಷ್ಮ ಕಲಾ ಪ್ರಜ್ಞೆಗೆ ನಮಸ್ಕಾರ. ಅಲ್ಲದೆ ಒಳಚಿತ್ರಗಳನ್ನು ಸುಂದರವಾಗಿ ಮೂಡಿಸಿರುವ ಮೋನಪ್ಪ ಅವರಿಗೆ ಅಭಿನಂದನೆಗಳು.

ಅಳಿಯ ಗೌತಮ್, ಮಗಳು ಸೌಮ್ಯ ಮತ್ತು ಪತ್ನಿ ಲಲಿತಾಮಿತ್ರ ಈ ರಚನೆಗಳ ಹಿಂದೆ ನಿಂತು ಸಹಕರಿಸಿದ್ದಾರೆ. ಅವರಿಗೆ ಪ್ರೀತಿಯ ನೆನಪುಗಳು.

ಈ ಕೋಶದ ರಚನೆಗೆ ನೆರವಾಗಿರುವ ಕನ್ನಡ, ತೆಲುಗು, ಹಿಂದಿ, ಸಂಸ್ಕೃತ ವ್ಯಾಸಭಾರತಗಳನ್ನು ಅವುಗಳ ವ್ಯಾಖ್ಯಾನಗಳನ್ನು ವಿಶೇಷವಾಗಿ ಸ್ಮರಿಸಬಯಸುತ್ತೇನೆ. ಅಲ್ಲದೆ ಅನೇಕ ಕೋಶಗ್ರಂಥಗಳು ಈ ವ್ಯಕ್ತಿಗಳ ಪರಿಚಯ ಮಾಡಿಕೊಳ್ಳುವುದಕ್ಕೆ ಸಹಾಯಕವಾಗಿವೆ. ಕನ್ನಡ ತೆಲುಗು ಸಂಸ್ಕೃತಗಳ ಮತ್ತು ಇಂಗ್ಲಿಷ್ ಮಹಾಭಾರತ-ಪುರಾಣಕೋಶ ಗ್ರಂಥಗಳನ್ನು ಅವುಗಳ ರಚಯಿತರನ್ನು ಕೃತಜ್ಞತೆಯಿಂದ ನೆನೆಯುತ್ತೇನೆ.

ಮೂರು ಸಂಪುಟಗಳು ಯಶಸ್ವಿಯಾದರೆ ಅವುಗಳ ಇಂಗ್ಲಿಷ್ ಅನುವಾದವನ್ನು ಸಿದ್ಧಪಡಿಸುವುದಕ್ಕೆ ಮಾಸ್ತಿಯವರ ಮೊಮ್ಮಗಳೂ ಸಾಹಿತ್ಯಾಸಕ್ತರೂ ಆದ ಲಂಡನ್ನಿನ ಡಾ॥ ವಸಂತಶ್ರೀಯವರು ಕೃಪೆಯಿಂದ ಒಪ್ಪಿ ಈಗಾಗಲೇ ಒಂದು ಸಂಪುಟವನ್ನು ಸಿದ್ಧಪಡಿಸಿದ್ದಾರೆ. ಮೂರನ್ನು ಒಂದೇ ಸಂಪುಟದಲ್ಲಿ ಹೊರತರುವ ಬಯಕೆ ನಮ್ಮದು.

ಭಾರತಾಸಕ್ತರು ಮತ್ತು ಸಂಶೋಧನಾಸಕ್ತರು ಈ ಗ್ರಂಥದ ಅಧ್ಯಯನದಿಂದ ಲಾಭ ಪಡೆಯಲಿ ಎಂದು ಆಶಿಸುತ್ತೇನೆ.

– ಅ. ರಾ. ಮಿತ್ರ

ಪರಿವಿಡಿ

ಶ್ವೇತಕೇತು

ಈ ಹೆಸರಿನವರು ಮಹಾಭಾರತದಲ್ಲಿ ಹಲವರಿದ್ದಾರೆ. ಆದರೆ ಮಹಾಭಾರತದ ಶಾಂತಿಪರ್ವದಲ್ಲಿ ಉಕ್ತನಾಗಿರುವ ಉದ್ಧಾಲಕ ಮುನಿಯ ಮಗನಾದ ಶ್ವೇತಕೇತು ಇವರೆಲ್ಲೆಲ್ಲ ಪ್ರಮುಖನಾದವನು. ಮಾನವ ಸಮಾಜದಲ್ಲಿ ಮನುಷ್ಯರ ನಡೆವಳಿಕೆಗಳ ಸದಾಚಾರ ಸಂಹಿತೆಯನ್ನು ರೂಪಿಸಿಕೊಟ್ಟವನೆಂಬ ಕಾರಣಕ್ಕಾಗಿ ಈತ ಪ್ರಸಿದ್ಧನಾಗಿದ್ದಾನೆ. ಮುಖ್ಯವಾಗಿ ಗಂಡುಹೆಣ್ಣುಗಳ ಸ್ವಚ್ಛಂದ ಲೈಂಗಿಕ ಪ್ರವತ್ತಿಗೆ ಒಂದು



ನೀತಿಯ ಕಡಿವಾಣವನ್ನು ಹಾಕಿದ್ದು ಇವನ ಸಾಧನೆ ಎನ್ನಬಹುದು. ಮದುವೆಯಾದ ಹೆಣ್ಣು ಗಂಡುಗಳು ಹೇಗೆ ಒಂದು ಶೀಲ ಸಂಹಿತೆಗೆ ಒಳಗಾಗಬೇಕೆಂಬ ನಿಯಾಮಕವನ್ನು ಮಾಡಿದ ಕೀರ್ತಿ ಈತನಿಗೆ ಸಲ್ಲುತ್ತದೆ. ಅಷ್ಟಾವಕ್ರಯೋಗಿಯು ಉದ್ದಾಲಕನ ಮಗಳ ಮಗ. ಶ್ವೇತಕೇತು ಇವನ ಗೆಳೆಯನಾಗಿದ್ದ. ಈತ ಅಷ್ಟಾವಕ್ರನ ಬಳಿ 'ಉದ್ದಾಲಕನು ತನ್ನ ತಂದೆಯಲ್ಲ' ಎಂದು ಹೇಳುತ್ತಾನೆ. ಉದ್ದಾಲಕನು ತನ್ನ ಶಿಷ್ಯರಲ್ಲಿ ಒಬ್ಬನನ್ನು ತನ್ನ ಹೆಂಡತಿಯ ಸಂಗ ಮಾಡುವಂತೆ ಮಾಡಿ ಮಗನನ್ನು ಪಡೆದನೆಂದು ಹೇಳಲಾಗಿದೆ. ಮೊದಲೇ ತಂದೆಯ ನಡತೆಯಿಂದ ಬೇಸತ್ತಿದ್ದ ಶ್ವೇತಕೇತುವಿಗೆ ಮುಂದೆ ನಡೆದ ಇನ್ನೊಂದು ಘಟನೆ ನಮ್ಮ ಸಮಾಜದ ಕುಟುಂಬ ಪದ್ಧತಿಯಲ್ಲಿ ಕೆಲವು ಕಟ್ಟುಪಾಡುಗಳನ್ನು ತರಬೇಕೆಂಬ ಬಯಕೆಯನ್ನು ಉಂಟು ಮಾಡಿತು.

ನಡೆದದ್ದು ಇಷ್ಟೆ. ಶ್ವೇತಕೇತು ಅಂದು ಮನೆಯಲ್ಲೇ ಇದ್ದ. ಅಪ್ಪ ಉದ್ದಾಲಕನೂ ಇದ್ದ. ಇವರ ಬಳಿಗೆ ಒಬ್ಬ ಬ್ರಾಹ್ಮಣ ಬಂದ. ಉದ್ದಾಲಕನ ಹೆಂಡತಿ. ಕೈಯನ್ನು ಭದ್ರವಾಗಿ ಹಿಡಿದುಕೊಂಡು 'ನಡಿ ಹೋಗೋಣ' ಎಂದು ಕರೆದುಕೊಂಡು ಹೊರಟ. ಉದ್ದಾಲಕ ಈ ದೃಶ್ಯವನ್ನು ನೋಡುತ್ತ ಸುಮ್ಮನಿದ್ದ. ಶ್ವೇತಕೇತುವಿಗೆ ಮಾತ್ರ ಈ ದೃಶ್ಯ ಸಿಟ್ಟು ತರಿಸಿತ್ತು. ಕೆರಳಿದ ಮಗನನ್ನು ಕಂಡು ಉದ್ದಾಲಕ ಹೇಳಿದ.

"ಮಗು, ಕೋಪ ಮಾಡಿಕೊಳ್ಳಬೇಡ. ಇದು ಆರ್ಯಧರ್ಮದಲ್ಲಿ ಅಂಗೀಕೃತವಾದ ಒಂದು ಪದ್ಧತಿಯಾಗಿದೆ. ಸ್ತ್ರೀಯರು ಸ್ವತಂತ್ರರು, ಯಾವ ಅಡ್ಡಿಯೂ ಇಲ್ಲದವರು." ಮಗನಿಗೆ ಸಹಿಸಲಾಗಲಿಲ್ಲ. 'ಮಾ ತಾತ ಕೋಪಂ ಕಾರ್ಷೀತ್ವಂ ಏಷ ಧರ್ಮಃ ಸನಾತನಃ' (ಮಗನೇ, ಕೋಪಿಸಿಕೊಳ್ಳಬೇಡ. ಇದು ಸನಾತನ ಕಾಲದಿಂದ ಬಂದಿರುವ ಧರ್ಮ) ಎಂಬ ಅಪ್ಪನ ಮಾತಿಗೆ ಮಗ ಒಪ್ಪಲಿಲ್ಲ. ಕುಟುಂಬ ವ್ಯವಸ್ಥೆಯನ್ನೇ ಹಾಳು ಮಾಡುವ ಈ ದುಷ್ಟಪದ್ಧತಿ ಪ್ರಾಣಿ ಲೋಕದ್ದು ಎಂದು ಅವನಿಗನ್ನಿಸಿತು. ಹಾಗಾಗಿ ಅವನು ಕುಟುಂಬದಲ್ಲಿ ಸತಿ-ಪತಿಯರು ನಡೆದುಕೊಳ್ಳಬೇಕಾದ ವಿಧಿ ವಿಧಾನಗಳನ್ನು ವಿವರವಾಗಿ ಬರೆದಿಟ್ಟ. ಅಲ್ಲಿಯ ತನಕ ವಿವಾಹಿತ ಗಂಡು-ಹೆಣ್ಣುಗಳು ಪರಪುರುಷ-ಪರಸ್ತ್ರೀಯರೊಂದಿಗೆ ನಡೆಸುತ್ತಿದ್ದ ಲೈಂಗಿಕ ವ್ಯವಹಾರಗಳಿಗೆ ಕಡಿವಾಣ ಹಾಕಿದ. ಇವನಿಂದಾಗಿ ಎಲ್ಲ ಹಳೆಯ ಕಂದಾಚಾರದ ಕುಟುಂಬ ಪದ್ಧತಿ ಮಾಯವಾಗಿ ಒಂದು ಹೊಸ ನಡವಳಿಕೆಯ ಸೂತ್ರ ಸ್ಥಾಪಿತವಾಯಿತು.

* * * *

ಸಮುದ್ರ ಮಥನ

ವಿಷ್ಣುವು ಮೋಹಿನಿಯ ರೂಪವನ್ನು ಧರಿಸಿ ಬಂದು ಅಮೃತವನ್ನು ದೇವ-ದಾನವರಿಗೆ ಸಮನಾಗಿ ಹಂಚುವುದಾಗಿ ಹೇಳಿ ವಂಚಿಸಿದ ಪ್ರಸಂಗ ಸಮುದ್ರ ಮಥನದ್ದು. ದೇವದಾನವರಿಬ್ಬರೂ ಅಮೃತಕ್ಕಾಗಿ ಹಾಲುಗಡಲನ್ನು ಮಥಿಸುವ ತೀರ್ಮಾನ ಕೈಗೊಂಡರು. ಮಥನದ ಕ್ರಮವನ್ನು ಮೇರು ಪರ್ವತದಲ್ಲಿ ಕುಳಿತು ತೀರ್ಮಾನಿಸಿದರು. ಕೂಲಂಕಷವಾಗಿ ಚರ್ಚಿಸಿದ ಬಳಿಕ ಭಾರಿಯ ಮಂದರ ಪರ್ವತವನ್ನು ಕಡೆಗೋಲಾಗಿ ವಾಸುಕಿಯನ್ನು ಹಗ್ಗವಾಗಿ ಕೆಳಗೆ ಕೂರ್ಮನನ್ನು ಆಧಾರವಾಗಿ ಇರಿಸಿದರು. ಹನ್ನೊಂದು ಸಾವಿರ ಯೋಜನ ಉದ್ದಗಲಗಳಿಂದ ಮಂದರ ಪರ್ವತವನ್ನು ಆದಿಶೇಷನು ಎತ್ತಿ ತಂದನು. ಅಧಿಕೋತ್ಸಾಹದಿಂದ ದೇವದಾನವರು ಮಥಿಸುವ ಕ್ರಿಯೆಯಲ್ಲಿ ತೊಡಗಿದರು.

ಈ ಅದ್ಭುತ ಮಥನ ನಡೆದದ್ದು ಅಮೃತದ ಸಲುವಾಗಿ ತಾನೇ! ಆದರೆ ಮೊದಲು ಬಂದದ್ದು ಘೋರ ವಿಷ! ಹಾಲಾಹಲ! ಆ ವಿಷಾಗ್ನಿಯಿಂದ ಹೊರಟ ಕೆಂಡದ ಉಂಡೆಗಳು ಲೋಕಕ್ಕೇ ಅಪಾಯಕಾರಿಯಾಗುವ ಸಂಭವವಿತ್ತು. ಆದರೆ ಅಪಾರ ಕರುಣೆಯಿಂದ ಮಹೇಶ್ವರನು ಆ ಘೋರ ವಿಷವನ್ನು ತಾನೇ ಗಂಟಲಲ್ಲಿರಿಸಿಕೊಂಡ. ಆದುದರಿಂದಲೇ ಅವನಿಗೆ ನೀಲಕಂಠ, ವಿಷಕಂಠ ಎಂಬ ಹೆಸರುಗಳು ಬಂದಿವೆ.

ಅಮೃತ ಬರುವ ಮುನ್ನ ಸಮುದ್ರದಿಂದ ಮೇಲೆದ್ದ ಕೆಲವು ವ್ಯಕ್ತಿಗಳೂ ಉಪ ವಸ್ತುಗಳೂ ಸೊಗಸಾದುವೇ. ಚಂದ್ರ, ಜ್ಯೇಷ್ಠಾದೇವಿ, ಲಕ್ಷ್ಮೀದೇವಿ, ಉಚ್ಚೈಶ್ರವಸ್ಸು, ಕೌಸ್ತುಭ, ಧನ್ವಂತರಿ, ಐರಾವತ, ಮದ್ಯ ಮೊದಲಾದವುಗಳು ಉದ್ಭವಿಸಿದುವು. ಲಕ್ಷ್ಮಿ ಮತ್ತು ಕೌಸ್ತುಭಗಳು ವಿಷ್ಣುವಿನ ಪಾಲಾದವು. ಲಕ್ಷ್ಮಿ ಕೌಸ್ತುಭಗಳಿಗೆ ಅವನ ಎದೆಯಲ್ಲಿ ಜಾಗ! ಐರಾವತ ಎಂಬ ಆನೆ ಉಚ್ಚೈಶ್ರವಸ್ ಎಂಬ ಕುದುರೆ ದೇವೇಂದ್ರನಿಗೆ ಸೇರಿದವು.

ಕೊನೆಗೆ ಉಳಿದದ್ದು ಅಮೃತ ತಾನೆ! ಇದನ್ನು ಮಾತ್ರ ದೇವದಾನವರಿಬ್ಬರೂ ತಮಗೆ ಬೇಕೆಂದು ಜಗಳವಾಡಿದರು. ಕೊನೆಗೆ ವಿಷ್ಣುವು ಮೋಹಿನಿಯ ರೂಪದಲ್ಲಿ ಅಮೃತವನ್ನು ಹಂಚಲು ಬಂದು ನಿಂತಳು. ಆ ಭುವನ ಮೋಹಿನಿಯ ರೂಪಕ್ಕೆ ಮರುಳಾದ ರಾಕ್ಷಸರು ಆಕೆ ಅಮೃತವನ್ನು ಹಂಚಲಿ ಎಂದು ಹೇಳಿದರು. ಎರಡು ವರ್ಗಗಳವರನ್ನೂ ಎರಡು ಸಾಲಾಗಿ ಕುಳ್ಳಿರಿಸಿದ ಮೋಹಿನಿ ನಾಟ್ಯ ಭಂಗಿಯಲ್ಲಿ ವಿನಿಯೋಗದ ನಾಟಕವಾಡುತ್ತಾ ಮೊದಲ ಪಂಕ್ತಿಯಲ್ಲಿದ್ದ ದೇವತೆಗಳಿಗೇ ಎಲ್ಲವನ್ನೂ ಬಡಿಸಿ ಖಾಲಿಯಾದ ಮಡಕೆಯನ್ನು ಉಳಿಸಿದಳು. ಈ ಮಧ್ಯೆ ರಾಹು ಎಂಬುವನು ದೇವತೆಗಳ ಸಾಲಿನಲ್ಲಿಯೇ ಕುಳಿತು ಅಮೃತವನ್ನು ಸೇವಿಸಲಾರಂಭಿಸಿದ. ಈ ದೃಶ್ಯವನ್ನು ನೋಡಿದ ಸೂರ್ಯಚಂದ್ರರು ವಿಷ್ಣುವಿಗೆ ಸಂಗತಿಯನ್ನು ತಿಳಿಸಿದರು. ಕೂಡಲೇ ಆ ಅಮೃತವೂ ರಾಹುವಿನ ಕಂಠ ರಂಧ್ರವನ್ನು ಸೇರುವುದಕ್ಕಿಂತ ಮುಂಚೆಯೇ ತನ್ನ ಚಕ್ರದಿಂದ ಕುತ್ತಿಗೆಯನ್ನು ಉರುಳಿಸಿದ. ಮುಖಭಾಗವು

ಅಮೃತವನ್ನು ಕುಡಿದಿದ್ದುದರಿಂದ ಅದು ಚಿರಂಜೀವಿಯಾಗಿ ಉಳಿದುಕೊಂಡು ಕಂಠದ ಕೆಳಗಿನ ಭಾಗವೆಲ್ಲ ಕತ್ತರಿಸಿ ಬಿತ್ತು.

ಈ ವಂಚನೆಯಿಂದ ಕುಪಿತರಾದ ದಾನವರಿಗೂ ದೇವತೆಗಳಿಗೂ ಘೋರವಾದ ಯುದ್ಧ ನಡೆಯಿತು. ಸಮುದ್ರ ತೀರದಲ್ಲಿ ನಡೆದ ಈ ಯುದ್ಧದಲ್ಲಿ ರಾಕ್ಷಸ ಪಡೆ ನಿರ್ನಾಮವಾಯಿತು. ಅಳಿದುಳಿದ ರಾಕ್ಷಸರು ಸಮುದ್ರದಲ್ಲಿ ಅಡಗಿ ಜೀವ ಉಳಿಸಿಕೊಂಡರು.

* * * *

ಉಪರಿಚರ ವಸು

ಇವನೂ ವಸುಗಳಲ್ಲಿ ಒಬ್ಬ. ಆದರೆ ಸದಾ ಆಕಾಶಗಾಮಿಯಾಗಿ ಸಾಗುವ ವಿಶೇಷ ಸೌಲಭ್ಯ ಇವನಿಗಿದ್ದುದರಿಂದ ಉಪರಿ (ಮೇಲೆ) ಚರ (ಚಲಿಸುವ) ವಸು ಎಂಬ ಹೆಸರು ಬಂದಿದೆ. ಮಹಾರಾಜನಾಗಿದ್ದು ಎಲ್ಲವನ್ನೂ ತ್ಯಜಿಸಿ ತಪಸ್ಸು ಮಾಡುತ್ತಿದ್ದ ಈತನ ಬಳಿಗೆ ದೇವೇಂದ್ರನು ಸಮಸ್ತ ದೇವತಾಗಣದೊಂದಿಗೆ ಬಂದು "ವಸುರಾಜ, ನಿನ್ನ ತಪಸ್ಸಿಗೆ ಮೆಚ್ಚಿದೆ. ನನ್ನ ಸ್ನೇಹಿತನಾಗಿ ನೀನು ಇಷ್ಟ ಬಂದಾಗ ನನ್ನ ರಾಜ್ಯಕ್ಕೆ ಬಂದು ಹೋಗುತ್ತಿರಬಹುದು. ಇತ್ತ ಮೊದಲಿನಂತೆ ಧರ್ಮದಿಂದ ರಾಜ್ಯವಾಳಿಕೊಂಡಿರು" ಎಂದು ಹೇಳಿ ಅವನಿಗೆ ದೇವತ್ವವನ್ನು ಕೊಟ್ಟ. ಸುವರ್ಣ ಮಣಿಗಣದಿಂದ ಕೂಡಿದ ದಿವ್ಯ ವಿಮಾನವನ್ನೂ ಆಯುಧಗಳನ್ನೂ, ದೇಹವನ್ನು ಕಾಪಾಡುವ ಎಂದಿಗೂ ಬಾಡದ ಇಂದ್ರಮಾಲೆ ಎಂಬ ಪದ್ಮಮಾಲೆಯನ್ನೂ, ಶಿಕ್ಷೆ-ರಕ್ಷೆಗಳಿಗೆ ಸಹಾಯಕವಾದ ಒಂದು ಬಿದಿರ ಬೆತ್ತವನ್ನೂ ದಯಪಾಲಿಸಿದ. ಈ ಉಪಕಾರಕ್ಕೆ ಪ್ರತಿಯಗಿ ವಸುರಾಜನು ಭೂಮಿಯಲ್ಲೆಲ್ಲ ವರ್ಷಕ್ಕೊಮ್ಮೆ ಇಂದ್ರೋತ್ಸವವು ವೈಭವದಿಂದ ಜರುಗುವಂತೆ ಏರ್ಪಡು ಮಾಡಿದ.ಇಂದ್ರೋತ್ಸವದಿಂದ ರಾಜರ ಆಯುಸ್ಸು ವರ್ಧಿಸುತ್ತದೆ, ಸಂತಾನ ವೃದ್ಧಿಯಾಗುತ್ತದೆ, ಪ್ರಜೆಗಳ ಸಂತೋಷ ಹೆಚ್ಚುತ್ತದೆ ಎಂದು ಪ್ರಚಾರ ಮಾಡಿ ಈ ಉತ್ಸವವನ್ನು ಲೋಕಪ್ರಿಯಗೊಳಿಸಿದ. ದೇವೇಂದ್ರನ ವರದಿಂದ ವಸುರಾಜನಿಗೆ ಬೃಹದ್ರಥ, ಮಣಿವಾಹನ, ಸೌಬಲ, ಯದು, ರಾಜನ್ಯ ಎಂಬ ಐವರು ಮಕ್ಕಳಾದರು. ಅವರನ್ನೆಲ್ಲ ಬೇರೆ ಬೇರೆ ದೇಶಗಳ ರಾಜರನ್ನಾಗಿ ವಸುರಾಜನು ಪ್ರತಿಷ್ಠಾಪಿಸಿದ. ತಾನು ರಾಜರ್ಷಿ ಎಂದು ಖ್ಯಾತಿ ಪಡೆದು ರಾಜ್ಯವಾಳುತ್ತಿದ್ದ.

ಒಂದು ದಿನ ಒಂದು ಘಟನೆ ನಡೆಯಿತು. ಅವನ ರಾಜಧಾನಿಯ ಸಮೀಪದಲ್ಲಿ ಶುಕ್ತಿಮತಿ ಎಂಬ ನದಿ. ಕೋಲಾಹಲ ಎಂಬ ಪರ್ವತವು ಈ ನದಿಯಲ್ಲಿ ಮೋಹಗೊಂಡಿತು. ಈ ನದಿ ಪರ್ವತಗಳ ಸಮಾಗಮದ ಪರಿಣಾಮವಾಗಿ ಒಬ್ಬ ಕುಮಾರ ಮತ್ತು ಒಬ್ಬಳು ಮಗಳು ಜನಿಸಿದರು. ಆದರೆ ಈ ಪರ್ವತವು ನದಿಯ ಮೇಲೆ ಬೀಳಲು ಬಂದಾಗ ವಸುರಾಜನು ಅದನ್ನು ತಡೆದು ನದಿಯನ್ನು ಉಳಿಸಿದ್ದನೆಂಬ ಉಪಕಾರದ ಸ್ಮರಣೆಗಾಗಿ ಶುಕ್ತಿಮತಿಯು ತನ್ನ ಮಗನಿಗೆ 'ವಸುಪಾದ' ಎಂಬ ಹೆಸರಿಟ್ಟು ರಾಜನಿಗೆ ಕಾಣಿಕೆಯಾಗಿ ಕೊಟ್ಟಳು. ಅವನು ಮುಂದೆ ವಸುರಾಜನ ಸೇನಾಧಿಪತಿಯಾದ. ಹಾಗೆಯೇ ಶುಕ್ತಿಮತಿಯು ತನ್ನ ಮಗಳಾದ ಗಿರಿಕೆಯನ್ನು ರಾಜನಿಗೆ ಅರ್ಪಿಸಿದಳು. ಅವಳನ್ನು ರಾಜನು ಧರ್ಮಪತ್ನಿಯಾಗಿ ಸ್ವೀಕರಿಸಿದ.

ಗಿರಿಕೆ ಋತುಮತಿಯಾದಾಗ ಅವಳಿಗೆ ಜಿಂಕೆಯ ಮಾಂಸವನ್ನು ತರಲು ವಸುರಾಜ ಕಾಡಿಗೆ ಹೋದ. ಆದರೆ ಅವನ ಮನಸ್ಸಿನ ತುಂಬ ಗಿರಿಕೆ ತುಂಬಿದ್ದಳು. ಹೀಗೆ ಮೋಹದಲ್ಲಿ ಅವನ ವೀರ್ಯ ಸ್ಖಲನವಾದಾಗ ಅದನ್ನು ಒಂದು ಎಲೆಯ ದೊನ್ನೆಯಲ್ಲಿರಿಸಿ ಒಂದು ಹದ್ದಿನ ಸಂಗಡ ಹೆಂಡತಿಗೆ ಕಳಿಸಿದ. ಇನ್ನೊಂದೆಡೆಗೆ ಆ ದೊನ್ನೆಯನ್ನು ಮಾಂಸವೆಂದು ತಿಳಿದು ಮತ್ತೊಂದು ಹದ್ದು ಆಕ್ರಮಣ ಮಾಡಿದಾಗ ಆ ದೊನ್ನೆ ಕೆಳಗೆ ಯಮುನಾ ನದಿಗೆ ಬಿದ್ದಿತು. ಆ ನೀರಿನಲ್ಲಿ ಅದ್ರಿಕ ಎಂಬ ಶಾಪಗ್ರಸ್ತ

ಅಪ್ಸರೆ ಹೆಣ್ಣು ಮೀನಾಗಿದ್ದಳು. ಆ ಮೀನು ವೀರ್ಯವನ್ನು ನುಂಗಿ ಗರ್ಭಿಣಿಯಾಯಿತು. ಆ ಮೀನನ್ನು ಹಿಡಿದ ಬೆಸ್ತರ ಮುಖಂಡ ದಾಶರಾಜನು ಆ ಮಕ್ಕಳಿಗೆ ಮತ್ಸ್ಯರಾಜ, ಮತ್ಸ್ಯಗಂಧಿ ಎಂಬ ಹೆಸರಿಟ್ಟಿತು. ಈ ಮತ್ಸ್ಯರಾಜನೇ ಮುಂದೆ ಮತ್ಸ್ಯದೇಶಕ್ಕೆ ಅಧಿಪತಿಯಾದ. ಮತ್ಸ್ಯಗಂಧಿಯು ವೇದವ್ಯಾಸ, ಚಿತ್ರಾಂಗದ ವಿಚಿತ್ರವೀರ್ಯ ಎಂಬ ಮಕ್ಕಳನ್ನು ಪಡೆದದ್ದು ಮಹಾಭಾರತದಲ್ಲಿ ಮಹತ್ವದ ಸಂಗತಿಯಾಗಿದೆ.

* * * *

ಸುಮಿತ್ರ

ಸುಮಿತ್ರ ಎಂಬುವನು ಹೈಹಯ ವಂಶದ ಒಬ್ಬ ದೊರೆ. ಈ ದೊರೆಯ ಕಥೆಯನ್ನು ಹೇಳುವ ನೆಪದಲ್ಲಿ ಭೀಷ್ಮರು ಶಾಂತಿಪರ್ವದ 125ನೇ ಅಧ್ಯಾಯದಲ್ಲಿ ಮನುಷ್ಯನ ಆಸೆಗಿಂತ ದುರ್ಬಲವಾದದ್ದು ಬೇರಾವುದೂ ಇಲ್ಲ, ಆಸೆಯನ್ನು ಹತ್ತಿಕ್ಕಿಕೊಳ್ಳುವವನಿಗಿಂತ ದೊಡ್ಡವನು ಯಾರೂ ಇಲ್ಲ ಎಂದು ಸ್ಪಷ್ಟವಾಗಿ ಸಾರಿದ್ದಾರೆ.

ಸುಮಿತ್ರ ಒಮ್ಮೆ ಬೇಟೆಗೆ ಹೊರಟ. ಒಂದು ಜಿಂಕೆಯ ಮೇಲೆ ಬಾಣ ಬಿಟ್ಟು ಗಾಯಗೊಳಿಸಿ ಅಟ್ಟಿಸಿಕೊಂಡು ಹೋದ. ಅದು ಇವನ ಬಾಣಕ್ಕೆ ಹೆದರದೆ ಓಡುತ್ತ ಓಡುತ್ತ ಮತ್ತೆ ಸುಮಿತ್ರನ ಬಳಿಗೆ ಬರುತ್ತ ಅವನನ್ನು ಬಲುದೂರ ಕರೆದೊಯ್ದಿತು. ಕೊನೆಗೆ ಸಿಗದೆ ವನದಲ್ಲಿ ಮಾಯವಾಯಿತು.

ಆಯಾಸಗೊಂಡು ಬಾಯಾರಿದ್ದ ರಾಜ ಋಷಭ ಋಷಿಯ ಆಶ್ರಮದ ಬಳಿಗೆ ಬಂದ. ರಾಜನಿಗೆ ತುಂಬ ಕಳವಳ. ಆಸೆಯ ಸ್ವರೂಪವೇನು, ಪರಿಣಾಮವೇನು, ಇದನ್ನು ಹತ್ತಿಕ್ಕುವುದು ಹೇಗೆ ಎಂಬ ಸಮಸ್ಯೆಗಳು ಅವನನ್ನು ಕಾಡಿದುವು. ಅಲ್ಲಿದ್ದ ಋಷಭ ಮುನಿಗಳು ಸುಮಿತ್ರನಿಗೆ ಆಸೆಯನ್ನು ಕುರಿತ ಇನ್ನೊಂದು ಕಥೆ ಹೇಳಿದರು ಅದು ಋಷಭರ ಅನುಭವಕ್ಕೆ ಬಂದ ಕಥೆಯೇ ಆಗಿತ್ತು.

ಋಷಭರು ತನು ಎಂಬ ಋಷಿಯ ಆಶ್ರಮಕ್ಕೆ ಒಮ್ಮೆ ಹೋದರಂತೆ. ಆ ಋಷಿ ಸಾಮಾನ್ಯ ಮನುಷ್ಯರಿಗಿಂತ ಎಂಟುಪಟ್ಟು ಕೃಶನಾಗಿದ್ದವನು. ಋಷಭರು ಅವನ ಬಳಿ ಹೋದ ಸಮಯಕ್ಕೆ ವೀರದ್ಯುಮ್ನ ಎಂಬುವನು ಬರಬೇಕೆ ? ಅವನು ಭೂರಿದ್ಯುಮ್ನ ಎಂಬ ಮಗನನ್ನು ಕಳೆದುಕೊಂಡು ಹುಡುಕುತ್ತ ದುಃಖದಲ್ಲಿದ್ದ. ಅವನ ಸಂಕಟವನ್ನರಿತು ತೆಳ್ಳನೆಯ ಆ ಉದ್ದನೆಯ ಋಷಿ ಹೇಳಿದ.

"ಆಸೆಗಿಂತ ದುರ್ಬಲವಾದದ್ದು ಬೇರೆ ಇಲ್ಲ. ಆಸೆಯನ್ನು ಯಾರು ಹತ್ತಿಕ್ಕಲಾರರೋ ಇವರೇ ದುರ್ಬಲರು. ಹತ್ತಿಕ್ಕಿದವರು ಪುಷ್ಟರು-ದುರ್ಲಭರು! ಲೋಕದಲ್ಲಿ ಕೃತಘ್ನರು, ನೃಶಂಸಿಗಳು, ಆಲಸಿಗಳು ತಮ್ಮ ಆಸೆಯನ್ನು ಪೂರ್ಣ ಪ್ರಮಾಣದಲ್ಲಿ ಪೂರೈಸಿಕೊಳ್ಳಲಾರದೆ ದುರ್ಬಲರಾಗುತ್ತ ಹೋಗುತ್ತಾರೆ. ಹೀಗೆ ಆಸೆಯ ಬಾಯಿಗೆ ಸಿಕ್ಕವನು ನನ್ನಂತೆ ಉದ್ದವಾದ ಬಯಕೆಯಿಂದ ನರಳುತ್ತಾನೆ. ನನ್ನಂತೆ ಕೃಶನಾಗುತ್ತ ಹೋಗುತ್ತಾನೆ."

ವೀರದ್ಯುಮ್ನನು ಕೊನೆಗೆ ಉಪದೇಶ ಪಡೆದು ಹಿಂದಿರುಗಿದನೆಂದು ಹೇಳುತ್ತಿರುವಾಗಲೇ ಸುಮಿತ್ರನಿಗೆ ಬುದ್ಧಿ ಹೇಳುತ್ತಾರೆ ಋಷಭಮುನಿ.

"ಸುಮಿತ್ರ, ಆಸೆ ಎಂಬುದು ನಾನು ಕಂಡ ತನು-"ಋಷಿ"ಯಂತೆ ಸುಮ್ಮನೆ ಎತ್ತರಕ್ಕೆ ಬೆಳೆಯುತ್ತದೆ. ಆದರೆ ಆ ಎತ್ತರವನ್ನು ಅರಗಿಸಿಕೊಳ್ಳಲಾರದೆ ದೇಹ

ಕೃಶವಾಗುತ್ತದೆ. ನೀನೂ ಅಷ್ಟೆ. ಅಟ್ಟಿಸಿಕೊಂಡು ಬಂದ ಜಿಂಕೆಯನ್ನು ಮರೆತು ಸಮಾಧಾನದಿಂದ ಊರಿಗೆ ಹೊರಡು".

ನಮ್ಮ ಬಯಕೆಗಳ ಪಟ್ಟಿ ಬೆಳೆದಂತೆ ಅವು ದುರ್ಲಭವಾದ್ದರಿಂದ ಮನಸ್ಸಿನ ದುರ್ಬಲತೆಯೂ ಬೆಳೆಯುತ್ತ ಹೋಗುತ್ತದೆ ಎಂದು ಹೇಳಲು ಭೀಷ್ಮರು ಈ ಕಥೆಯನ್ನು ಧರ್ಮರಾಯನಿಗೆ ಹೇಳುತ್ತಾರೆ.

* * * *

ಅಕ್ಷೋಹಿಣಿ

ಹಿಂದಿನ ಚತುರಂಗ ಸೇನೆಯ ಒಂದು ನಿಶ್ಚಿತ ಸಂಖ್ಯಾಸೂಚಕ ಶಬ್ದ ಅಕ್ಷೋಹಿಣಿ. ಇದರಲ್ಲಿ ಆನೆ ಕುದುರೆ ರಥ ಕಾಲಾಳುಗಳ ಸಂಖ್ಯೆ ಉಲ್ಲೇಖಿತವಾಗಿರುತ್ತದೆ. ಮಹಾಭಾರತದ ಸೈನ್ಯ ನಿರ್ಣಯ ಪರ್ವದಲ್ಲಿ ಈ ಬಗೆಗೆ ವಿವರಗಳಿವೆ. ವಾಸ್ತವವಾಗಿ ಮೂಲಶಬ್ದ ಅಕ್ಷೌಹಿಣೀ. ಅಕ್ಷಾಣಾಂ ಊಹಿನೀ-ಊಹ: ಸಮೂಹ: ಸೋऽಸ್ಯಾಮಸ್ತಿ (ಸಂಸ್ಕೃತ ಕನ್ನಡ ಶಬ್ದಕೋಶ. ಸಂಪುಟ1, ಪುಟ 10). ಮಹಾಭಾರತ ಯುದ್ಧದಲ್ಲಿ ಕೌರವರ ಕಡೆ ಹನ್ನೊಂದು, ಪಾಂಡವರ ಕಡೆ ಏಳು ಅಕ್ಷೌಹಿಣೀ ಸೇನೆಗಳಿದ್ದುವು ಎಂದು ಉಲ್ಲೇಖಿತವಾಗಿದೆ. ಇವುಗಳನ್ನು ಒಂಬತ್ತು ಉಪವಿಭಾಗದಲ್ಲಿ ಗುರುತಿಸಬಹುದು. ಪತ್ತಿ, ಸೇನಾ ಮುಖ, ಗುಲ್ಮ, ಗಣ, ವಾಹಿನೀ, ಪೃತನಾ, ಚಮೂ, ಅನಿಕಿನೀ ಮತ್ತು ಅಕ್ಷೌಹಿಣೀ. ಒಂದೊಂದು ಮಂಡಲದ ಸಂಖ್ಯೆಯ ಮೂರರಷ್ಟು ಎರಡನೆಯದರದಲ್ಲಿರುತ್ತದೆ. ಹೀಗೆ ವರ್ಧಿಸುತ್ತಾ ಹೋಗುವುದರಿಂದ ಈ ಶ್ರೇಣಿಯನ್ನು ಸರಿಯಾದ ಕ್ರಮದಲ್ಲಿ ಬರೆಯಬೇಕು. ಉದಾ:

	ಆನೆ	ರಥ	ಕುದುರೆ	ಕಾಲಾಳು
ಪತ್ತಿ	1	3	3	5
ಸೇನಾಮುಖ	3	3	9	15
ಗುಲ್ಮ	9	9	27	45
ಗಣ	27	27	81	135
ವಾಹಿನೀ	81	81	243	405
ಪೃತನಾ	243	243	729	1215
ಚಮೂ	729	729	2187	3645
ಅನೀಕಿನೀ	2187	2187	6561	10935
ಅಕ್ಷೌಹಿಣೀ	21870	21870	65610	109350

ಸಾಮಾನ್ಯವಾಗಿ ಅನೀಕಿನಿಯವರೆಗೆ ಕ್ರಮವಾಗಿ ಒಂದಕ್ಕಿಂತ ಒಂದು ಮೂರರಷ್ಟು ಅಧಿಕವಾಗಿರುವುದನ್ನು ಕೋಷ್ಟಕದಲ್ಲಿ ಕಾಣಬಹುದು. ಹತ್ತು ಅನೀಕಿನಿ ಎಂದರೆ ಒಂದು ಅಕ್ಷೋಹಿಣಿ. ಅಂದರೆ ಮಹಾಭಾರತ ಯುದ್ಧದಲ್ಲಿ ಭಾಗವಹಿಸಿದ ಚತುರಂಗ ಸಂಖ್ಯೆ ಹೀಗಿದೆ:

ಆನೆ *3,95,660*
ರಥಗಳು *3,95,660*

ಕುದುರೆಗಳು	*11,80,980*
ಕಾಲಾಳು	*19,68,300*

ಇವುಗಳಲ್ಲಿ ಶೇಕಡ 95ರಷ್ಟು ಭಾಗ ಯುದ್ಧದಲ್ಲಿ ನಾಶವಾಗಿರುವುದನ್ನು ಗಮನಿಸಿದರೆ ನಡೆದ ದುರಂತದ ಪ್ರಮಾಣ ತಿಳಿದುಬರುತ್ತದೆ. ಈ ಚತುರಂಗ ಸೇನೆಗೆ ಸಹಾಯಕವಾದ ನಾಲ್ಕು ವಿಭಾಗಗಳನ್ನೂ ಮಹಾಭಾರತದಲ್ಲಿ ಗುರುತಿಸಲಾಗಿದೆ. ಅವು 1 ವಿಷ್ಟಿ (ಅಂದರೆ ಸಾಗಾಣಿಕೆಗೆ ಸಂಬಂಧಿಸಿದ ಅಂಶಗಳ ನಿರ್ವಹಣೆ ಆಯುಧಗಳು, ಬಾಣಗಳು, ವೈದ್ಯಕೀಯ ಉಪಚಾರ ಸಾಮಗ್ರಿ ಇತ್ಯಾದಿ).

2. ನೌಕೆ (ನದಿಗಳಲ್ಲಿ ನೌಕೆಯ ಮೂಲಕ ಸಹಾಯ ಸಾಮಗ್ರಿ, ಸೇನೆ ಆಹಾರ ಇತ್ಯಾದಿ ಸರಬರಾಜು) 3. ಗೂಢಚಾರರು. 4. ದೇಶಿಕರು ಅಂದರೆ ಬಹುಶಃ ಸೇನೆಯ ಮಾರ್ಗ ಸೂಚನೆ ಕೊಡುವವರು. ಶಾಂತಿ ಪರ್ವದಲ್ಲಿ ಈ ಎಂಟನ್ನೂ ವಿವರಿಸುವ ಒಂದು ಶ್ಲೋಕವಿದೆ. (ಅಧ್ಯಾಯ 59).

ರಥಾ ನಾಗಾ ಹಯಾಶ್ಚೈವ ಪಾದಾತಾಶ್ಚೈವ ಪಾಂಡವ
ವಿಷ್ಟಿರ್ನಾವಶ್ಚ ನರಾಶ್ಚೈವ ದೇಶಿಕಾ ಇತಿಚಾಷ್ಟವಃ

ಅಕ್ಷೌಹಿಣಿಯ ಸಂಖ್ಯೆಯ ವಿಷಯದಲ್ಲಿ ಮಹಾಭಾರತದಲ್ಲಿಯೇ ವ್ಯತ್ಯಾಸಗಳಿವೆ ಎಂದು ರಾವ್ ಬಹದ್ದೂರ್ ಚಿಂತಾಮಣಿ ವೈದ್ಯರೆಂಬ ವಿದ್ವಾಂಸರು ಹೇಳಿದ್ದಾರೆ.

* * * *

ವ್ಯುಷಿತಾಶ್ವ-ಭದ್ರೆ



ಹೆಣ ಮಾತನಾಡುವುದನ್ನು ಕೇಳಿದ್ದೀರಾ? ಪತ್ನಿಗೆ ಮಕ್ಕಳನ್ನು ಕರುಣಿಸುವುದನ್ನು ಕೇಳಿದ್ದೀರಾ? ವ್ಯುಷಿತಾಶ್ವ ಎಂಬವನ ಕಥೆಯಲ್ಲಿ ಮಹಾಭಾರತದ ಆದಿಪರ್ವದ 112ನೆಯ ಪರ್ವದಲ್ಲಿ ಇದನ್ನು ವಿವರಿಸಲಾಗಿದೆ. ಇವನು ಪುರುವಂಶದ ಒಬ್ಬ ಪ್ರಸಿದ್ಧ ದೊರೆ, ನೀತಿಶಾಸ್ತ್ರಜ್ಞ, ಧರ್ಮವಿದ. ಅವನು ಮಾಡುತ್ತಿದ್ದ ಯಾಗಗಳಿಗೆ ಸ್ವಯಂ ದೇವೇಂದ್ರನೇ ಬರುತ್ತಿದ್ದನಂತೆ.

ವ್ಯುಷಿತಾಶ್ವನ ಪತ್ನಿಯು ಕಕ್ಷೀವಂತನ ಮಗಳಾದ ಭದ್ರೆ, ಪರಮ ಸುಂದರಿ, ಪತಿಸೇವಾ ಪರಾಯಣೆ. ಆದರೆ ಅತಿಕಾಮಿಯಾಗಿದ್ದ ವ್ಯುಷಿತಾಶ್ವನು ಕ್ಷಯರೋಗ ಪೀಡಿತನಾಗಿ ತೀರಿಕೊಂಡ. ಮಕ್ಕಳಿಲ್ಲದ ಅವನ ಪತ್ನಿ ಭದ್ರೆ ದುಃಖಾಕ್ರಾಂತಳಾಗಿ ದರ್ಭೆಯ ಹಾಸಿನ ಮೇಲೆ ಮಲಗಿ ಪತಿದರ್ಶನಕ್ಕೆ ಹಾತೊರೆದಳು. ಶವಸಂಸ್ಕಾರ ಮಾಡಲು ಬಿಡದೆ ಹೆಣವನ್ನು ಅಪ್ಪಿಕೊಂಡು ತನಗೆ ಮಕ್ಕಳನ್ನು ಕರುಣಿಸಬೇಕೆಂದು ಪ್ರಾರ್ಥಿಸಿದಳು. ಆಗ ಶವವೇ ಮಾತಾಡಿತು.

'ಉತ್ತಿಷ್ಠ ಭದ್ರೇ ಗಚ್ಛತ್ವಂ ದದಾನೀವ ವರಂ ತವ
ಜನಯಿಷ್ಯಾಮಿ ಅಪತ್ಯಾನಿ ತ್ವಯ್ಯಹಂ ಚಾರುಹಾಸಿನೀ'

(ಏಳು; ನಿನಗೆ ಮಕ್ಕಳಾಗುವಂತೆ ವರವನ್ನು ಕೊಡುತ್ತೇನೆ.) ಅವಳ ವ್ರತ, ಛಲಗಳು ಗೆದ್ದವು. ಭದ್ರೆಯು ಆ ಶವದಿಂದ ಮೂರು ಮಂದಿ ಶಾಲ್ವರನ್ನೂ ನಾಲ್ಕು ಮಂದಿ ರುದ್ರರನ್ನೂ ಮಕ್ಕಳಾಗಿ ಪಡೆದಳು.

'ರೂಪೇಣ ಅಸದೃಶೀ ಭುವಿ' (ರೂಪದಲ್ಲಿ ಭದ್ರೆಗೆ ಸಮಾನರಾದವರು ಈ ಲೋಕದಲ್ಲೇ ಇರಲಿಲ್ಲ) ಎಂದು ಪ್ರಸಿದ್ಧಳಾಗಿದ್ದ ಭದ್ರೆಯು ಸತ್ತಮೇಲೂ ಪತಿಯನ್ನು ಕೈಬಿಡದೆ ನೆರಳಿನಂತೆ ಅವನನ್ನು ಅನುಸರಿಸುವಷ್ಟು ಪ್ರೀತಿಯುಳ್ಳವಳಾಗಿದ್ದಳು. 'ದಶನಾಗಬಲಾನ್ವಿತ' (ಹತ್ತು ಆನೆಗಳ ಬಲ ಹೊಂದಿದವನು) ಎನ್ನಿಸಿಕೊಂಡಿದ್ದ ವ್ಯುಷಿತಾಶ್ವನು ಭದ್ರೆಯ ಗುಣಕ್ಕೆ ಮನಸೋತು ಛಾಯಾರೂಪದಲ್ಲಿ ಅವಳೊಂದಿಗೆ ವಿಹರಿಸಿದ್ದು ಪುರಾಣದ ಇತಿಹಾಸದಲ್ಲಿ ಕೂಡ ಒಂದು ಅಪೂರ್ವ ಘಟನೆ ಎನ್ನಬೇಕು.

ಈ ಕಥೆಯನ್ನು ಶತಶೃಂಗ ಪರ್ವತದಲ್ಲಿ ಕುಂತಿಯು ಪಾಂಡುರಾಜನಿಗೆ ಹೇಳುತ್ತಿರುವುದನ್ನು ಗಮನಿಸಬೇಕು. ದೈಹಿಕವಾಗಿ ಅಲ್ಲದಿದ್ದರೂ ತಪಸ್ಸು ಮತ್ತು ಯೋಗಗಳ ಬಲದಿಂದ ಪಾಂಡುವೂ ಹೀಗೆ ಮಾಡಬಹುದು ಎಂದು ಕುಂತಿ ಪರ್ಯಾಯವಾಗಿ ಸೂಚಿಸುತ್ತಿದ್ದಾಳೆ. ತನ್ನ ವಾರಗಿತ್ತಿ ಗಾಂಧಾರಿಯು ಗರ್ಭಿಣಿಯಾಗಿದ್ದಾಳೆಂದು ಸುದ್ದಿ ಬಂದ ಮೇಲೆ ಕುಂತಿಯ ಅಂತರಂಗದಲ್ಲೂ ಪುತ್ರರನ್ನು ಪಡೆಯುವ ಬಯಕೆ ಉತ್ಕಟವಾದುದರಲ್ಲಿ ಆಶ್ಚರ್ಯವಿಲ್ಲ. ಮಕ್ಕಳನ್ನು ಪಡೆಯಲೇಬೇಕೆಂಬ ಸಂಕಲ್ಪಶಕ್ತಿ ಅವಳಲ್ಲಿ ಜಾಗ್ರತವಾದಾಗ ಗಂಡನಿಗೆ ವ್ಯುಷಿತಾಶ್ವ ಭದ್ರೆಯರ ಕಥೆಯನ್ನು ಹೇಳಿರುವುದರ ಔಚಿತ್ಯವನ್ನು ಮೆಚ್ಚಬೇಕು. ಇದನ್ನು ಕೇಳಿ ಪಾಂಡುರಾಜನು ಕಲ್ಮಾಷಪಾದನ ಪತ್ನಿ ಮದಯಂತಿಯು ವಸಿಷ್ಠ ಮಹರ್ಷಿಗಳ ಸಂಗಮಾಡಿ ಅಶ್ಮಕನೆಂಬ ಪುತ್ರನನ್ನು ಪಡೆದ ಕಥೆಯನ್ನು ಕುಂತಿಗೆ ಹೇಳಿ ಅವಳೂ ಹಾಗೆ ಮಕ್ಕಳನ್ನು ಪಡೆಯಲಿ ಎಂದು ಸೂಚಿಸುತ್ತಾನೆ. ಇದರಿಂದ ಮಹಾಭಾರತವು ಸುಂದರ ಉಪಕಥೆಗಳ ಆಗರವಾಗಿರುವುದನ್ನು ಕಾಣಬಹುದು.

* * * *

ಸಾಂಬ

ಹುಡುಗಾಟ ಮತ್ತು ವಿವೇಕ ರಹಿತ ವರ್ತನೆ ಎಂಥ ಅನಾಹುತವನ್ನು ತರಬಲ್ಲುದು ಎಂಬುದಕ್ಕೆ ಸಾಂಬನ ಕಥೆ ಒಂದು ಜ್ವಲಂತ ನಿದರ್ಶನ. ಸಾಂಬ ಎಂದರೆ ಅರ್ಧನಾರೀಶ್ವರ ಶಿವ ಎಂದರ್ಥ. ಇವನು ಶಿವನ ವರದಿಂದ ಶ್ರೀ ಕೃಷ್ಣ-ಜಾಂಬವತಿಯವರ ಮಗನಾಗಿ ಹುಟ್ಟಿದವನು.

ಸಾಂಬನು ಅರ್ಜುನನ ಶಿಷ್ಯನಾಗಿ ಧನುವಿದ್ಯೆಯನ್ನು ಕಲಿತ. ಅಪ್ಪನೊಂದಿಗೆ ಒಂದು ರಾಜಸೂಯಯಾಗದಲ್ಲಿ ಭಾಗವಹಿಸಿದ್ದ. ಅಭಿಮನ್ಯು-ಉತ್ತರೆಯರ ವಿವಾಹದಲ್ಲೂ ಹಾಜರಿದ್ದ ಮಹಾಭಾರತ ಯುದ್ಧದಲ್ಲೂ ಪಾಲುಗೊಂಡಿದ್ದ.

ಮೌಸಲ ಪರ್ವದಲ್ಲಿ ಸಾಂಬನ ದುರಹಂಕಾರ ಪ್ರವೃತ್ತಿ ವರ್ಣಿತವಾಗಿದೆ. ಒಂದು ದಿನ ಸಾರಣ ಮೊದಲಾದ ಯಾದವ ವೀರರೊಂದಿಗೆ ಸಾಂಬ ಬರುತ್ತಿದ್ದ. ಅವರೆಲ್ಲರ ಅಂತರಂಗದಲ್ಲಿ ಅವನೀತಿ ಹುಟ್ಟಿತ್ತು. ಆದುದರಿಂದ ಋಷಿಗಳನ್ನು ಕಂಡಾಗ ಒಂದು ನಾಟಕವಾಡಿದರು. ಸಾಂಬನಿಗೆ ಹೆಣ್ಣಿನ ವೇಷ ತೊಡಿಸಿ ಗರ್ಭಿಣಿಯಂತೆ ಕಾಣುವ ಹಾಗೆ ಮಾಡಿ ಋಷಿಗಳ ಬಳಿಗೆ ಬಂದು.

"ಈಕೆ ಬಭ್ರುವಿನ ಹೆಂಡತಿ ಗರ್ಭಿಣಿ ಎಂಥ ಮಗು ಹುಟ್ಟಬಹುದೆಂಬುದನ್ನು ದಯವಿಟ್ಟು ಹೇಳಿ."

ಋಷಿಗಳು ಸಾಂಬನನ್ನು ದೃಷ್ಟಿಸಿ ನೋಡಿದರು. ಅವರ ಕಪಟವೆಲ್ಲ ತಿಳಿದುಹೋಯಿತು. ಈ ಬಗೆಯ ಕಿಡಿಗೇಡಿತನ ಅವರಿಗೆ ಹಿಡಿಸಲಿಲ್ಲ ನೇರವಾಗಿ ಹೇಳಿದರು.

"ಈತ ಕೃಷ್ಣನ ಮಗನಾದ ಸಾಂಬ. ಒಂದು ಭಯಂಕರವಾದ ಲೋಹದ ಒನಕೆಯನ್ನು ಹೆರುತ್ತಾನೆ. ಆ ಒನಕೆಯು ಅಂಧಕ ವೃಷ್ಣಿ ಮತ್ತು ಭೋಜ ವಂಶದ ಎಲ್ಲರ ಸಾವಿಗೆ ಕಾರಣವಾಗುತ್ತದೆ."

ಈ ಶಾಪವನ್ನು ಕೇಳಿ ಸಾಂಬ ತಲ್ಲಣಿಸಿದ ಸ್ನೇಹಿತರೊಂದಿಗೆ ಅಜ್ಜ ವಸುದೇವನ ಬಳಿಗೆ ಹೋದ. ಮರುದಿನ ಸಾಂಬನು ಒಂದು ಒನಕೆಯನ್ನು ಹೆತ್ತ. ವಸುದೇವನ ಸಲಹೆಯಂತೆ ಸಾಂಬ ಮತ್ತು ಸ್ನೇಹಿತರು ಆ ಒನಕೆಯನ್ನು ಕುಟ್ಟಿ ಪುಡಿಪುಡಿ ಮಾಡಿ ಸಮುದ್ರಕ್ಕೆ ಎಸೆದರು. ಆದರೆ ಋಷಿ ವಾಕ್ಯ ಸುಳ್ಳಗುವುದುಂಟೆ ಆ ಪುಡಿಗಳಲ್ಲಿ ಸಮುದ್ರ ತೀರದುದ್ದಕ್ಕೂ ಭಾರಿಯ ಜೇಂಡುಗಳಾಗಿ ಬೆಳೆದುವು.

ಒಂದು ದಿನ ಯಾದವರೆಲ್ಲ ಸಮುದ್ರ ತೀರದಲ್ಲಿ ಸೇರಿ ಚೆನ್ನಾಗಿ ಕುಡಿದು ಅಮಲಿನಲ್ಲಿ ಮಾತಾಡುತ್ತಿದ್ದರು. ಸಾತ್ಯಕಿ, ಕೃತವರ್ಮ ಪ್ರದ್ಯುಮ್ನ ಚಾರುದೇಷ್ಣ ಸಾಂಬ ಮತ್ತು ಅಂಧಕ, ಭೋಜ, ವೃಷ್ಣಿಗಳೆಲ್ಲ ಅಲ್ಲಿದ್ದರು. ಸಾತ್ಯಕಿ ಕೃತವರ್ಮರಿಗೆ ಜಗಳವಾಗಿ ಯಾದವರಲ್ಲಿ ಎರಡು ಗುಂಪಾಗಿ ಹೊಡೆದಾಟ ಆರಂಭವಾಯಿತು. ಸಮುದ್ರತೀರದಲ್ಲಿ ಬೆಳೆದಿದ್ದ ಒನಕೆಯ ಜೇಂಡುಗಳನ್ನೇ ಹಿಡಿದು ಕಾದಾಡಿ ಕೃಷ್ಣ ಬಲರಾಮರನ್ನುಳಿದು ಎಲ್ಲರೂ ಸತ್ತರು.

ಮೌಸಲ ಪರ್ವದ ಮೂರನೇ ಅಧ್ಯಾಯದಲ್ಲಿ ಈ ದುರಂತ ಕಥೆಯ ಚಿತ್ರಣವಿದೆ.

ತರುಣ ಜನಾಂಗಕ್ಕೆ ಕೀಟಲೆಯ ಸ್ವಭಾವ ಇದ್ದರೆ ಅದೇನೂ ದೊಡ್ಡ ತಪ್ಪಲ್ಲ. ಆದರೆ ವಯಸ್ಕರಾದ, ತ್ರಿಕಾಲ ಜ್ಞಾನಿಗಳಾದ ಋಷಿಜನಗಳೊಂದಿಗೆ (ಕಣ್ವ, ನಾರದ, ವಿಶ್ವಾಮಿತ್ರ ಎಂದು ಹೇಳಲಾಗಿದೆ) ಈ ಬಗೆಯ ಕೀಟಲೆ ಮಾಡಿದರೆ ಅದಕ್ಕೆ ತಕ್ಕ ಶಿಕ್ಷೆಯನ್ನು ಅವರುಗಳೇ ಅನುಭವಿಸಬೇಕಾಗುತ್ತದೆ. ಅಷ್ಟೇ ಅಲ್ಲ. ಅವರ ಉದ್ಧಟ ವರ್ತನೆಯಿಂದಾಗಿ ಸಮಸ್ತ ಯದುವಂಶವೇ ನಿರ್ನಾಮವಾಗುವಂತಾಯಿತು.

* * * *

ಉತ್ತರೆ

ಸುಂದರಯೂ ಬಾಲಕಿಯೂ ಆದ ಉತ್ತರೆ ವಿರಾಟರಾಯನ ಮಗಳು. ಉತ್ತರನ ತಂಗಿ, ಅಭಿಮನ್ಯುವಿನ ಹೆಂಡತಿ ಮತ್ತು ಪರೀಕ್ಷಿತನ ತಾಯಿ ವಿರಾಟಪರ್ವದಿಂದ ಮತ್ತು ಮುಂದೆ ಹಲವಾರು ಪರ್ವಗಳಲ್ಲಿ ಈಕೆಯೆ ಪ್ರಸಕ್ತಿಯಿದೆ.

ಅಜ್ಞಾತವಾಸ ಕಾಲದಲ್ಲಿ ಅರ್ಜುನನು ಊರ್ವಶಿಯ ಶಾಪದಿಂದ ಬೃಹನ್ನಲೆಯಾದ ನ(ಳ)ಷ್ಟೆ. ಇಂದ್ರನ ಊರಿನಲ್ಲಿ ಗಂಧರ್ವರಿಂದ ಗೀತ ನೃತ್ಯ ವಾದ್ಯಗಳನ್ನು ಕಲಿತಿದ್ದುದು ವಿರಾಟ ನಗರದಲ್ಲಿ ಸಹಾಯಕವಾಯಿತು ನೇರವಾಗಿ ವಿರಾಟನಲ್ಲಿಗೆ ಬಂದು ತನ್ನ ಕಲಾ ಪ್ರತಿಭೆಯನ್ನು ಪ್ರಸ್ತಾವಿಸಿ.

ಗಾಯಾಮಿ ನೃತ್ಯಾಂ ಅಥ ವಾದಯಾಮಿ
ಭದ್ರೋऽಸ್ಮಿ ನೃತ್ಯೆ ಕುಶಲೋऽಸ್ಮಿ ಗೀತೇ

ಎಂದು ಪರಿಚಯಿಸಿಕೊಂಡು

ತ್ವಂ ಉತ್ತರಾಯೈ ಪ್ರದಿಶಸ್ವ ಮಾಂ ಸ್ವಯಂ
ಭವಾಮಿ ದೇವ್ಯಾ ನರದೇವ ನರ್ತಕ:

'ಉತ್ತರೆಯ ಶಿಕ್ಷಕನಾಗುವ ಅವಕಾಶವನ್ನು ನನಗೆ ಕೊಡು' ಎಂದು ನೇರವಾಗಿ ಕೇಳಿದ ವಿರಾಟನು ಅವನನ್ನು ಚೆನ್ನಾಗಿ ವೈದ್ಯಕೀಯ ತಪಾಸಣೆಗೆ ಒಳಪಡಿಸಿ ಉತ್ತರೆಗೂ ಇತರ ಯುವತಿಯರಿಗೂ ನೃತ್ಯ-ಗಾನಶಿಕ್ಷಣ ಕೊಡಲು ಕಳಿಸಿದ.

ಉತ್ತರ ಗೋಗ್ರಹಣ ಕಾಲದಲ್ಲಿ ವಿರಾಟನಿಲ್ಲದಾಗ ತಾನೊಬ್ಬನೇ ಕೌರವ ಸೇನೆಯನ್ನು ಕೊಚ್ಚಿ ಹಾಕುವುದಾಗಿ ಜಂಬ ಕೊಚ್ಚಿಕೊಂಡ ಉತ್ತರನು ಸರಿಯಾದ ಸಾರಥಿಯಿಲ್ಲವೆಂದು ಕೊರಗಿದಾಗ ಸೈರಂಧ್ರಿಯ ಸಲಹೆಯಂತೆ ಉತ್ತರೆಯು ಬೃಹನ್ನಳೆಯ ಬಳಿಗೆ ಬಂದು.

ಸಾ ಸಾರಥ್ಯಂ ಮಮ ಭ್ರಾತು:
ಕುರುಸಾಧು ಬೃಹನ್ನಲೇ

ಎಂದು ಕೇಳಿಕೊಂಡಳು ಬೃಹನ್ನಲೆ ಒಪ್ಪಿ ಉತ್ತರನೊಂದಿಗೆ ಸಂಭಾಷಿಸಿ ಯುದ್ಧಕ್ಕೆ ಹೊರಡಲು ಸಿದ್ಧಳಾದಳು. ಆಗ ಬಾಲ್ಯ ಸಹಜವಾದ ಭಾವದಿಂದ ಉತ್ತರೆಯೂ ಅವಳ ಗೆಳತಿಯರೂ ಬೃಹನ್ನಲೆಯನ್ನು ಕೇಳಿದ್ದೇನು ಗೊತ್ತೆ:

"ಬಹನ್ನಲೇ ಆನಯೇಥಾ ವಾಸಾಂಸಿ ರುಚಿರಾಣಿಚ
ವಿಜಿತ್ಯ ಸಂಗ್ರಾಮ ಗತಾನ್ ಭೀಷ್ಮ ದ್ರೋಣ ಮುಖಾನ್ ಕುರೂನ್

ಅವರಿಗೆಲ್ಲ ಗೊಂಬೆ ತಯಾರು ಮಾಡುವುದಕ್ಕಾಗಿ ಯುದ್ಧ ಭೂಮಿಯಿಂದ ಭೀಷ್ಮ ದ್ರೋಣ ಕೌರವರುಗಳು ಧರಿಸಿದ್ದ ದಿವ್ಯವರ್ಣದ ವಸ್ತ್ರಗಳು ಬೇಕಾಗಿವೆ ಎಂಬುದೇ ಅವರ ಕೋರಿಕೆ!

ಮುಂದೆ ಅರ್ಜುನನ ಸಾಹಸವನ್ನು ಮೆಚ್ಚಿದ ಮತ್ತು ಅವರೆಲ್ಲ ಪಾಂಡವರೆಂದು ತಿಳಿದು ಆನಂದಿಸಿದ ವಿರಾಟನು ಅರ್ಜುನನ ಮಗ ಅಭಿಮನ್ಯುವಿಗೆ ಉತ್ತರೆಯನ್ನು

ಕೊಟ್ಟು ಮದುವೆ ಮಾಡುವ ಪ್ರಸ್ತಾವ ಮಾಡಿದ. ಪಾಂಡವರು ಕೃಷ್ಣ ಸುಭದ್ರೆ ಎಲ್ಲ ಒಪ್ಪಿದ್ದರಿಂದ ಮದುವೆ ವೈಭವದಿಂದ ನೆರವೇರಿತು.

ಯುದ್ಧ ಸಂದರ್ಭದಲ್ಲಿ ಉತ್ತರೆ ಗರ್ಭಿಣಿ ಯುದ್ಧವೆಲ್ಲ ಮುಗಿದಿತ್ತು. ಆದರೆ ಅಶ್ವತ್ಥಾಮನಿಗೆ ಪಾಂಡವ ವಂಶವನ್ನು ನಿರ್ನಾಮ ಮಾಡುವ ಛಲ ಅದಕ್ಕೆ 'ಅಪಾಂಡವಾಸ್ತ್ರ' ಪ್ರಯೋಗ ಮಾಡಿ ಉತ್ತರೆಯ ಗರ್ಭದಲ್ಲಿದ್ದ ಪಿಂಡಕ್ಕೆ ಹಿಂಸೆ ನೀಡಿದ ವೇದನೆ ತಾಳಲಾರದೆ ಉತ್ತರೆ ಕಿರುಚಾಡಿದಾಗ ಕೃಷ್ಣನು ಬಂದು ಉತ್ತರೆಯ ಗರ್ಭವನ್ನು ಒಳಹೊಕ್ಕು ನೋಡಿ ಪಿಂಡವನ್ನು ಕಾಪಾಡಿದ. ಆದ್ದರಿಂದಲೇ ಉತ್ತರೆಯ ಮಗನಿಗೆ 'ಪರೀಕ್ಷಿತ್' ಎಂದು ಹೆಸರಾಯಿತು.

ಕೊನೆಗೆ ಕೌರವ ವಂಶದಲ್ಲಿ ಯುಯುತ್ಸು ಉಳಿದುಕೊಡಂತೆ ಪಾಂಡವ ವಂಶದಲ್ಲಿ ಉಳಿದುಕೊಂಡವನೆಂದರೆ ಉತ್ತರೆಯ ಮಗ ಪರೀಕ್ಷಿತ್ ಮಾತ್ರ.

* * * *

ಯುಯುತ್ಸು

ಕೌರವ ಸೋದರರಲ್ಲಿ ದುರ್ಯೋಧನ ದುಶ್ಯಾಸನ ವಿಕರ್ಣರ ನೆನಪಿಗೆ ಬರುವವನೆಂದರೆ ಯುಯುತ್ಸು. ಇವನು ನೂರು ಜನ ಕೌರವರ ಪಟ್ಟಿಯಲ್ಲಿ ಬರುವುದಿಲ್ಲ. ಒಬ್ಬ ವೈಶ್ಯ ಜಾತಿಯವಳಿಂದ ಧೃತರಾಷ್ಟ್ರನು ಈತನನ್ನು ಪಡೆದದ್ದರಿಂದ ಇವನು 105 ಕೌರವರ ಪಟ್ಟಿಯಲ್ಲಿ ಬರುತ್ತಾನೆ. ಇವನಿಗೆ ಕರಣ ಎಂಬ ಹೆಸರೂ ಇದೆ. ಕೌರವರ ಪಕ್ಷದಲ್ಲಿದ್ದರೂ ನ್ಯಾಯಾನ್ಯಾಯ ವಿವೇಚನೆಯುಳ್ಳ ಈತ ಭಿನ್ನವಾಗಿ ಚಿಂತಿಸುತ್ತಿದ್ದನೆಂಬುದಕ್ಕೆ ಬಾಲ್ಯದಿಂದಲೇ ಉದಾಹರಣೆಗಳಿವೇ ಬಾಲ್ಯದಲ್ಲಿ ಭೀಮನಿಗೆ ವಿಷಪೂರಿತ ಆಹಾರವನ್ನು ಕೊಟ್ಟು ಅವನ ಜೀವ ತೆಗೆಯಬೇಕೆಂದು ಕೌರವರು ಹಂಚಿಕೆ ಮಾಡಿದ್ದಾಗ ಅದನ್ನು ರಹಸ್ಯವಾಗಿ ಪಾಂಡವರಿಗೆ ತಿಳಿಸಿದ ಕೀರ್ತಿ ಈತನಿಗೆ ಸಲ್ಲುತ್ತದೆ.

ಕೊನೆಕೊನೆಗಂತೂ ಕೌರವನ ಅನ್ಯಾಯ ಹೆಚ್ಚುತ್ತ ಹೋಗಿದೆ ಎನ್ನಿಸಿದಾಗ ರಾಮಾಯಣದಲ್ಲಿ ಅಣ್ಣನ ಪಕ್ಷವನ್ನು ತ್ಯಜಿಸಿದ ವಿಭೀಷಣನಂತೆ ಯುಯುತ್ಸುವೂ ಭೀಷ್ಮಪರ್ವದಲ್ಲಿ (ಅಧ್ಯಾಯ 53) ಕುರುಕ್ಷೇತ್ರ ಮೈದಾನದಲ್ಲಿ ಪಾಂಡವರ ಕಡೆಗೆ ಸೇರಿಕೊಂಡು ಯುದ್ಧ ಮಾಡುತ್ತಾನೆ.

ಯುಯುತ್ಸುವನ್ನು ವ್ಯಾಸರು ಯೋಧರಲ್ಲಿ ಶ್ರೇಷ್ಠ, ಧನುರ್ಧರರಲ್ಲಿ ಉತ್ತಮ, ಶೌರ್ಯಸಂಪನ್ನ, ಸತ್ಯಪ್ರತಿಜ್ಞ, ಮಹಾ ಬಲಶಾಲಿ ಎಂದೆಲ್ಲ ಕರೆದಿದ್ದಾರೆ. ದ್ರೋಣ ಪರ್ವದಲ್ಲಿ ಧೃತರಾಷ್ಟ್ರನು ಸಂಜಯನೊಡನೆ ಮಾತಾಡುವಾಗ ಯುಯುತ್ಸುವಿನ ಪರಾಕ್ರಮಕ್ಕೆ ಒಂದು ನಿದರ್ಶನ ಕೊಡುತ್ತಾನೆ. ಹಿಂದೆ ಅನೇಕ ರಾಜರು ಯುಯುತ್ಸುವಿನ ಮೇಲೆ ಕೋಪ ಮಾಡಿಕೊಂಡು ವಾರಣಾವತದಲ್ಲಿ ಅವನನ್ನು ಕೊಲ್ಲಲು ಆರು ತಿಂಗಳವರೆಗೆ ಭಯಂಕರವಾಗಿ ಕಾದಾಡಿದರೂ ಅವರಿಗೆ ಜಯ ಸಿಕ್ಕಲಿಲ್ಲವಂತೆ! ದ್ರೋಣ, ಉವಾಕ, ಭಗದತ್ತ ಸುಬಾಹು ಮೊದಲಾದವರ ವಿರುದ್ಧ ಹೋರಾಡಿದವನು. ಯುಯುತ್ಸು ಕಾಂಚನ ಧ್ವಜನಾದ ಈತನ ಕುದುರೆಗಳ ಹಿರಿಮೆಯಲ್ಲಿ ಯುದ್ಧ ಪರ್ವಗಳಲ್ಲಿ ವ್ಯಕ್ತವಾಗಿದೆ.

ಮಹಾಯುದ್ಧ ಮುಗಿದ ಮೇಲೂ ಕೌರವರ ಕಡೆಯಲ್ಲಿ ಉಳಿದುಕೊಂಡ ವೀರನೆಂದರೆ ಯುಯುತ್ಸು ಒಬ್ಬನೇ. ಧೃತರಾಷ್ಟ್ರನ ಮಕ್ಕಳ ಪೈಕಿ ಇದ್ದ ಮಹಾರಥಗಳಲ್ಲಿ ಇವನೂ ಒಬ್ಬನಾಗಿದ್ದ-

ಯುದ್ಧ ಮುಗಿದ ಮೇಲೆ ಸತ್ತ ಕೌರವ ವೀರರಿಗೆಲ್ಲ ಶ್ರದ್ಧ ಕ್ರಿಯೆಯನ್ನು ಮಾಡುವ ಜವಾಬ್ದಾರಿಯನ್ನು ಧರ್ಮರಾಯನು ಯುಯುತ್ಸುವಿಗೆ ವಹಿಸಿದ್ದನೆಂದೂ ಅದನ್ನು ಯುಯುತ್ಸು ಸಮರ್ಪಕವಾಗಿ ಮಾಡಿದನೆಂದೂ ಹೇಳಲಾಗಿದೆ. ಯುದ್ಧಾನಂತರ ಧರ್ಮರಾಯನ ಆಜ್ಞೆಯಂತೆ ಕೌರವ ಪಕ್ಷದ ಮಹಿಳೆಯರನ್ನೆಲ್ಲ ಗೌರವ ಪೂರ್ವಕವಾಗಿ ಹಸ್ತಿನಾವತಿಗೆ ಕರೆತಂದ ಕೀರ್ತಿಯೂ ಇವನಿಗೇ ಸಲ್ಲುತ್ತದೆ. ಹೊಸ ಚಕ್ರವರ್ತಿಯಾಗಿ ಅಧಿಕಾರ ಸ್ವೀಕರಿಸಿದ ಧರ್ಮರಾಯನು ಯುಯುತ್ಸುವನ್ನು ಯುವರಾಜನನ್ನಾಗಿ ಮಾಡಿದ್ದು ಮೆಚ್ಚತಕ್ಕ ಅಂಶವಾಗಿದೆ. ಮುಂದೆ ಅಶ್ವಮೇಧಯಾಗಕ್ಕೆ ಮರುತ್ತರಾಯನು ಬಿಟ್ಟುಹೋಗಿದ್ದ ಚಿನ್ನವನ್ನು ತರಲು ಹೋದ

ಧರ್ಮರಾಯನು ರಾಜ್ಯಾಡಳಿತ ನೋಡಿಕೊಳ್ಳಲು ಯುಯುತ್ಸುನಿಗೇ ಒಪ್ಪಿಸಿದ್ದು ಯುಯುತ್ಸು ದಿನ ಪ್ರಾಮಾಣಿಕತೆಯ ದ್ಯೋತಕವಾಗಿದೆ. ಕೊನೆಯಲ್ಲೂ ಅಷ್ಟೆ ಉತ್ತರೆಯ ಮಗನೂ, ರಾಜ್ಯದ ಏಕೈಕ ವಾರಸುದಾರ ಆದ ಪರೀಕ್ಷಿತನಾಗಿ ರಾಜ್ಯಪಟ್ಟವನ್ನು ಕಟ್ಟಿ ಯುಯುತ್ಸುವಿಗೆ ರಾಜ್ಯರಕ್ಷಣೆಯ ಜವಾಬ್ದಾರಿಯನ್ನು ಒಪ್ಪಿಸಿ ಧರ್ಮರಾಯನು 'ಮಹಾಪ್ರಸ್ಥಾನ'ವನ್ನು ಆರಂಭಿಸಿರುವುದನ್ನು ನೋಡಿದರೆ ಯುಯುತ್ಸುವಿನ ಮೇಲೆ ಪಾಂಡವರಲ್ಲೂ ಎಷ್ಟು ವಿಶ್ವಾಸವಿತ್ತು ಎಂಬುದು ಸ್ಪಷ್ಟವಾಗುತ್ತದೆ.

*　*　*　*

ವ್ಯೂಹಗಳು

ವ್ಯೂಹಸ್ತು ಬಲ ವಿನ್ಯಾಸ: ಎಂದು ಅಮರಕೋಶ ಹೇಳುತ್ತದೆ. ಅಂದರೆ ವ್ಯೂಹ ಎನ್ನುವುದು ಯುದ್ಧದಲ್ಲಿ ಸೇನೆಯನ್ನು ನಿಲ್ಲಿಸುವ ಒಂದು ಕ್ರಮ ಸೇನೆಯನ್ನು ಒಂದು ಪೂರ್ವನಿಶ್ಚಿತ ತಂತ್ರದಲ್ಲಿ ವ್ಯವಸ್ಥಿತವಾಗಿ ನಿಲ್ಲಿಸಿ ಶತ್ರುಗಳಿಗೆ ಗೊಂದಲವನ್ನುಂಟು ಮಾಡುವುದೇ ವ್ಯೂಹದ ಉದ್ದೇಶ. ಈ ವ್ಯೂಹಗಳ ಬಗೆಗೆ ವಿವರಗಳನ್ನು ಕೊಡುವ ಕಪ್ಪನಂತುಲ ಲಕ್ಷ್ಮಣ ಶಾಸ್ತ್ರಿಗಳು ಈ ವ್ಯೂಹಗಳ ಸೃಷ್ಟಿ ರೂಪರೇಖೆ ಗೊತ್ತಾಗುವುದಿಲ್ಲ ಎಂದು ದ್ರೋಣಪರ್ವದ ತೆಲುಗು ಅವತರಣಿಕೆಯಲ್ಲಿ ಹೇಳುತ್ತಾರೆ.

ವ್ಯೂಹಗಳಲ್ಲಿ ದಂಡ, ಭೋಗ, ಅಸ್ತ್ರಮಂಡಲ ಮತ್ತು ಅಸಂಹತ ಎಂದು ನಾಲ್ಕು ಭಾಗಗಳಿವೆ. ಪಾಂಡವ-ಕೌರವ ಸೇನೆಯವರಿಬ್ಬರೂ ಈ ವ್ಯೂಹಗಳನ್ನು ಬಳಸಿದ್ದಾರೆ. ಉದಾಹರಣೆಗೆ ಕೆಲವನ್ನು ನೋಡೋಣ.

'ಪಂಚವ್ಯೂಹೋ ಮಹಾರಾಜ ಆಚಾರ್ಯೇಣಾಭಿಕಲ್ಪಿತಂ' ಈ ಐದರಲ್ಲಿ ಮುಖ್ಯವಾಗಿ ಗರುಡವ್ಯೂಹ, ಚಕ್ರ(ಪದ್ಮ) ವ್ಯೂಹ ಶಕಟವ್ಯೂಹಗಳು ದ್ರೋಣರವು.

ಕ್ರೌಂಚವ್ಯೂಹ ಮಂಡಲಾರ್ಥ ವ್ಯೂಹಗಳು ಧರ್ಮರಾಯನವು ಚಂದ್ರವ್ಯೂಹ ಸಂಶಪ್ತಕರು ರಚಿಸಿದ್ದು.

ಇವುಗಳೇ ಅಲ್ಲದೆ ಶ್ಯೇನ ವ್ಯೂಹ (ಡೇಗೆ ಆಕಾರದ್ದು) ಸರ್ವತೋ ಭದ್ರವ್ಯೂಹ, ಹಂಸವ್ಯೂಹ, ಅಸಹುವ್ಯೂಹ, ಮಕರವ್ಯೂಹ, ಅರ್ಧಚಂದ್ರವ್ಯೂಹ, ವಿಜಯವ್ಯೂಹ, ಸೂಜೀವ್ಯೂಹ, ವಜ್ರವ್ಯೂಹಗಳೂ ಇವೆ (ವಿವರಗಳಿಗೆ ನೋಡಿ ಅಗ್ನಿ ಪುರಾಣ-2à36)

ಪಕ್ಷಿ ಪ್ರಾಣಿಗಳ ಆಕಾರದ ವ್ಯೂಹಗಳೇ ಹೆಚ್ಚಾಗಿದೆ. ತುಂಬ ಎತ್ತರದ ಗುಡ್ಡ ಪ್ರದೇಶದಿಂದ ನೋಡಿದರೆ ಈ ವ್ಯೂಹಗಳ ಮೊಸಳೆಯಂತೆ, ಪದ್ಮದಂತೆ, ಬಂಡಿಯ ಗಾಲಿಯಂತೆ, ಹಂಸದಂತೆ ಡೇಗೆಯಂತೆ ಕಾಣುತ್ತಿದ್ದುದರಿಂದ ಈ ಬಗೆಯ ಹೆಸರುಗಳು ಬಂದಿವೆ. ಇವುಗಳಲ್ಲೆಲ್ಲ ತುಂಬ ಸಂಕೀರ್ಣವಾದದ್ದೆಂದರೆ ಚಕ್ರವ್ಯೂಹ ಅಥವಾ ಪದ್ಮವ್ಯೂಹ! ಇದು ಒಳಕ್ಕೆ ತೆರೆದುಕೊಳ್ಳುತ್ತದೆ ನಿಜ. ಆದರೆ ಮುಂದೆ ಶತ್ರುಗಳು ಯೋಜಿಸಿರುವ ನಿಟ್ಟಿನಲ್ಲೇ ನಡೆದು ದಾರಿ ತಪ್ಪಬೇಕಾಗುತ್ತದೆ. ಅಭಿಮನ್ಯುವನ್ನು ಒಳಗೆ ಬಿಟ್ಟುಕೊಂಡ ನಂತರ ಸೈಂಧವನು ಶಿವನಿಂದ ಪಡೆದಿದ್ದ ವರದ ಸಹಾಯದಿಂದ ಭೀಮ ಧೃಷ್ಟದ್ಯುಮ್ನ ಸಾತ್ಯಕಿಗಳಾದಿಯಾಗಿ ಯಾರನ್ನೂ ಒಳಗೇ ಬಿಡದೆ ಕಾಡಿಸಿ ಅಭಿಮನ್ಯು ವಧೆಗೆ ಕಾರಣನಾದ.

ಈಗ ಒಂದು ವ್ಯೂಹದ ಬಗೆಗೆ ಮಾಹಿತಿ ಪಡೆಯೋಣ. ಗರುಡವ್ಯೂಹ: ದ್ರೋಣರು ರಚಿಸಿದ್ದು. (ಆಧಾರ: ದ್ರೋಣ ಪರ್ವಮುಗಪ್ಪಗಂತುಲ ಲಕ್ಷ್ಮಣಶಾಸ್ತ್ರಿ ಪುಟ65)

ಉದ್ದೇಶ =ಧರ್ಮರಾಯನನ್ನು ಹಿಡಿಯುವುದು

ಮುಖಸ್ಥಾನದಲ್ಲಿ ದ್ರೋಣ, ಶಿರೋಭಾಗದಲ್ಲಿ ದುರ್ಯೋಧನ, ಅವನ ತಮ್ಮಂದಿರು ಮತ್ತು ಸೈನಿಕರು ನೇತ್ರಸ್ಥಾನದಲ್ಲಿ ಕೃಪ ಕೃತವರ್ಮ ಮತ್ತು ಇತರರು, ಕುತ್ತಿಗೆಯ ಭಾಗದಲ್ಲಿ ಕವಚಧಾರಿಗಳಾದ ಭೂತಶರ್ಮ ಕ್ಷೇಮಶರ್ಮ ಕರಕಾಶ ಕಳಿಂಗ

ಸಿಂಹದರು ಆಧೀರರುಶೂರರು, ದಾಶೇರಕಗಣ, ಯವನ ಕಾಂಭೋಜ, ಶೂರಸೇನ, ದರದ, ದೂದ್ರ, ಕೇಕಯ, ಯವನ ಇತ್ಯಾದಿ.

ದಕ್ಷಿಣ ಭಾಗದಲ್ಲಿ ಭೂರಿಶ್ರವ ಸೋಮದತ್ತ, ಶಲ್ಯಬಾಹ್ಲಿಕ ಮೊದಲಾದವರು.

ಪ್ರಾಚೀನ ಗ್ರೀಕರಸೇನೆಯುನ್ನು ಈ ಬಗೆಯ ವ್ಯೂಹಗಳಿದ್ದುವೆಂದು ಹೇಳಲಾಗಿದೆ.

ವ್ಯೂಹಕ್ಕೆ ಪ್ರತಿವ್ಯಾಹವೂ ಇತ್ತೆಂದು ಹೇಳಲಾಗಿದೆ. ಆದರೆ ಅದು ಹೇಗೆ ಮೂಲವ್ಯೂಹವನ್ನು ಭೇದಿಸುತ್ತಿತ್ತು ಎಂಬುದು ಸ್ಪಷ್ಟವಾಗುವುದಿಲ್ಲ.

* * * *

ದಾಶರಾಜ

ಇವನಿಗೆ ಉಚ್ಚೈಶ್ರವಸ್ ಎಂಬ ಹೆಸರೂ ಇದೆ. ನಿಷಾದರಾಜ ಎಂದೂ ಹೇಳುತ್ತಾರೆ. ಯಮುನಾ ತೀರದಲ್ಲಿ ದೋಣಿಗಳಲ್ಲಿ ಜನರನ್ನು ಸಾಗಿಸು ಈತನದು. ಇವನಿಗೆ ನದಿಯ ತೀರದಲ್ಲಿ ಇಬ್ಬರು ಮಕ್ಕಳು ಸಿಕ್ಕಿದರು. ವಸು ಮತ್ತು ಅದ್ರಿಕಾ ಇವರ ಮಕ್ಕಳು ಅವರು ಮತ್ಸ್ಯ ಮತ್ತು ಸತ್ಯವತಿ ಎಂಬ ಹೆಸರಿಟ್ಟು ಅವರನ್ನು ಸಾಕಿದ. ಮತ್ಸ್ಯನನ್ನು ಬೇರೊಬ್ಬರಿಗೆ ದತ್ತು ಕೊಟ್ಟ. ಮೀನಿನ ಹೊಟ್ಟೆಯಲ್ಲಿ ಹುಟ್ಟಿದ ಇವಳು ಮತ್ಸ್ಯಗಂಧಿಯಾಗಿದ್ದಳು. ಸತ್ಯವತಿಯು ಸಾಹಸಿಯೂ ಸ್ವತಂತ್ರ ಮನೋಧರ್ಮದವಳೂ ಆದ ಮಗಳನ್ನು ಧರ್ಮಾರ್ಥವಾಗಿ ನಾವೆಯನ್ನು ನಡೆಸುವಂತೆ ದಾಶರಾಜನು ನೇಮಿಸಿದ. ಪರಾಶರನನ್ನು ಮೆಚ್ಚಿ ಕೂಡಿ ವೇದವ್ಯಾಸನನ್ನು ಹೆತ್ತು ಪರಾಶರನಿಗೆ ಒಪ್ಪಿಸಿ ಕನ್ಯೆಯಾಗಿ ಹಿಂದಿರುಗಿ ಬಂದ ಸತ್ಯವತಿಯ ರೂಪವನ್ನು ನೋಡಿ ಶಂತನು ಮಹಾರಾಜನು ಮೆಚ್ಚಿ ಮದುವೆಯಾಗ ಬಯಸಿದಾಗ ದಾಶರಾಜನು ಈ ಆಹ್ವಾನವನ್ನು ನಯವಾಗಿಯೇ ತಿರಸ್ಕರಿಸುವ ಧೈರ್ಯ ತೋರಿದ್ದಾನೆ ಈಗ ಮಹಾರಾಣಿಯಾಗುವ ಭಾಗ್ಯ ಬಂದಿದ್ದರೂ ತುಂಬ ವಯಸ್ಸಾಗಿರುವ ಮಹಾರಾಜನು ಕಾಲವಾದ ಮೇಲೆ ಮಗಳಗತಿಯೇನು ಅವಳ ಮಕ್ಕಳ ಗತಿಯೇನು ಎಂಬ ದೀರ್ಘಾಲೋಚನೆ ಅವನದು. ಇದನ್ನು ಮಾಡಲಾಗದೆ ಕೊರಗುತ್ತಿದ್ದ ತಂದೆಗೋಸ್ಕರ ದೇವವ್ರತ (ಭೀಷ್ಮ)ನೇ ದಾಶರಾಜನ ಬಳಿಗೆ ಬಂದ, "ದಾಶರಾಜ ನಿನ್ನ ಮಗಳನ್ನು ನಮ್ಮ ತಂದೆಗೆ ಮದುವೆ ಮಾಡಿಕೊಡು ರಾಜ್ಯದ ಮೇಲೆ ನನಗಿರುವ ಅಧಿಕಾರವನ್ನು ಬಿಟ್ಟುಕೊಟ್ಟಿದ್ದೇನೆ." ಇದು ನನ್ನ ಪ್ರತಿಜ್ಞೆ ದಾಶರಾಜನಿಗೆ ಅಲ್ಲಿಗೂ ಸಮಾಧಾನವಿಲ್ಲ.

"ದೇವವ್ರತ ನಿನ್ನ ಪ್ರತಿಜ್ಞೆ ಸಾಧುವಾದದ್ದೇ ನನ್ನ ಮಗಳ ಹಿತ ಅದರಲ್ಲಿ ಅಡಗಿದೆ ನಿಜ. ಆದರೆ ನಾಳೆ ನಿನಗೂ ಮದುವೆಯಾಗುತ್ತದೆ. ನಿನ್ನ ಮಕ್ಕಳು ಸುಮ್ಮನಿರುತ್ತಾರೆಯೆ ?"

ಎರಡನೆಯ ಅಡ್ಡಿಯನ್ನು ಪರಿಹರಿಸಿಕೊಳ್ಳುವ ಉದ್ದೇಶದಿಂದ ದಾಶರಾಜನು ಬುದ್ಧಿವಂತಿಕೆಯಿಂದಲೇ ಈ ಪ್ರಶ್ನೆ ಹಾಕಿದ. ದೇವವ್ರತನ ಬಳಿ ಅದಕ್ಕೂ ಉತ್ತರ ಸಿದ್ಧವಾಗಿತ್ತು: "ದಾಶರಾಜ ನಿನ್ನ ಅನುಮಾನ ಸರಿಯಾದದ್ದೇ ನನ್ನ ಎರಡನೆಯ ಪ್ರತಿಜ್ಞೆಯನ್ನು ಕೇಳು. ನನ್ನ ಸಂತಾನ ತರಬಹುದಾದ ಅಡ್ಡಿಯನ್ನು ಕುರಿತು ಚಿಂತಿಸುತ್ತಿದ್ದಿಯೇ ಇಲ್ಲಿ ಕೇಳು ನಾನು ಬ್ರಹ್ಮಚರ್ಯವನ್ನು ಪಾಲಿಸುತ್ತೇನೆ. ಮದುವೆಯನ್ನೇ ಮಾಡಿಕೊಳ್ಳುವುದಿಲ್ಲ. ಅಪುತ್ರಕನಾದ ನನಗೆ ನರಕದ ಭಯವೂ ಇರುವುದಿಲ್ಲ. ತಪ್ಪೇ ಮಹಿಮೆಯಿಂದ ಪುಣ್ಯಲೋಕವನ್ನು ಸಂಪಾದಿಸಿಕೊಳ್ಳುತ್ತೇನೆ. ತಾಯಿ ಸತ್ಯವತಿಯ ಮಕ್ಕಳಿಗೇ ರಾಜ್ಯವು ಲಭಿಸುತ್ತದೆ."

ಈ ಧೀರನಿಲುವಿನ ಮಹತ್ತರ ಪ್ರತಿಜ್ಞೆಯಿಂದಾಗಿ ದೇವವ್ರತನಿಗೆ ಅಂದಿನಿಂದ 'ಭೀಷ್ಮ' ಎಂಬ ಹೆಸರು ಬಂದಿತು. ದಾಶರಾಜನು ಇಲ್ಲಿ ಸಂದರ್ಭದ ಲಾಭ

ಪಡೆಯುತ್ತಿದ್ದಾನೆಂದು ಯಾರೂ ಭಾವಿಸುವಂತಿಲ್ಲ. ತನ್ನ ಮಗಳು ಮತ್ತು ಆಕೆಯ ಸಂತಾನ ಸುಖವಾಗಿರಲೆಂಬುದೇ ದಾಶರಾಜನ ಆಶಯವಾಗಿತ್ತು.

'ರಾಜಾ ಪ್ರತ್ಯಕ್ಷದೇವತಾ' ಎಂದು ಜನ ನಂಬಿಕೊಂಡಿದ್ದ ಆ ಕಾಲದಲ್ಲೂ ಸಾಮಾನ್ಯ ನಿಷಾದನೊಬ್ಬನು ಸ್ವತಂತ್ರವಾಗಿ ತನ್ನ ಅಭಿಪ್ರಾಯವನ್ನು ವ್ಯಕ್ತಪಡಿಸುವ ಆತ್ಮಸ್ಥೈರ್ಯವನ್ನು ಪ್ರಕಟಪಡಿಸಿದ್ದು ಮೆಚ್ಚಿಕೊಳ್ಳಬೇಕಾದ ಸಂಗತಿಯಾಗಿದೆ. ರಾಜಶಾಸನವು ಪ್ರಜಾಪ್ರಭುತ್ವದ ಮೌಲ್ಯವನ್ನು ಎತ್ತಿಹಿಡಿದಿರುವುದೂ ಗಮನಾರ್ಹವಾದ ವಿಚಾರವೇ ಆಗಿದೆ.

*　　*　　*　　*

ಸುಬಲ

ಸುಬಲನು ಗಾಂಧಾರಿಯ ಮತ್ತು ಶಕುನಿಯ ತಂದೆ. ಗಾಂಧಾರ ರಾಜ್ಯದ ಒಡೆಯ. ಕುರುವಂಶದ ಯದುವಿನ ಸೋದರನಾದ ತುರ್ವಸುವಿನ ವಂಶದವನು.



ಸಿಂಧೂ ನದಿಯಿಂದ ಕಾಬೂಲ್‌ವರೆಗಿನ ವಿಸ್ತಾರವಾದ ಸಾಮ್ರಾಜ್ಯಕ್ಕೆ ಒಡೆಯನಾಗಿದ್ದ. ಪುರುಷಪುರ (ಅಥವಾ ಈಗಿನ ಪೇಷಾವರ್) ಈತನ ರಾಜಧಾನಿಯಾಗಿತ್ತು. ಇವನ

ಒಬ್ಬಳೇ ಮಗಳು ಗಾಂಧಾರಿ ಧರ್ಮಚಾರಿಣಿಯಾಗಿದ್ದಳು. ಶಿವನನ್ನು ಕುರಿತು ತಪಸ್ಸು ಮಾಡಿ ನೂರು ಮಕ್ಕಳಾಗುವಂತೆ ವರವನ್ನು ಪಡೆದುಕೊಂಡಿದ್ದಳು. ತನ್ನ ಸೋದರ ಧೃತರಾಷ್ಟ್ರನಿಗೆ ಹೆಣ್ಣು ಹುಡುಕುತ್ತಿದ್ದ ಭೀಷ್ಮನು ಗಾಂಧಾರಿಯನ್ನು ವಿವಾಹ ಮಾಡಿಕೊಡಬೇಕೆಂದು ಸುಬಲ ಮಹಾರಾಜನಿಗೆ ಹೇಳಿ ಕಳುಹಿಸಿದ. ಆಗ ಸುಬಲ ರಾಜನ ಮನಸ್ಸಿನಲ್ಲಿ ಎದ್ದ ನಾನಾ ಭಾವಗಳನ್ನು ವ್ಯಾಸರು ಸೂಕ್ಷ್ಮವಾಗಿ ಚಿತ್ರಿಸಿದ್ದಾರೆ.

ಅಚಕ್ಷುರಿತಿ ತತ್ರಾಸೀತ್ ಸುಬಲಸ್ಯ ವಿಚಾರಣಾ
ಕುಲಂಖ್ಯಾತಿಂಚ ವೃತ್ತಂಚ ಬುದ್ಧ್ಯಾತು ಪ್ರಸಮೀಕ್ಷ್ಯಸಃ
ದದೌತಾಂ ಧೃತರಾಷ್ಟ್ರಾಯ ಗಾಂಧಾರೀಂ ಧರ್ಮಚಾರಿಣೀಂ.

ಧೃತರಾಷ್ಟ್ರನಿಗೆ ಕಣ್ಣಿಲ್ಲ ಎಂಬ ಸಂಗತಿ ತಿಳಿದು ಮಗಳ ಭವಿಷ್ಯ ಹಾಳಾಗಬಾರದೆಂಬ ಕಾರಣಕ್ಕೆ ಈ ಸಂಬಂಧವನ್ನು ತಿರಸ್ಕರಿಸುವ ಮನಸ್ಸು ಆತನಿಗೆ. ಆದರೆ ಸೂಕ್ತ ವರನನ್ನು ಹುಡುಕುವಾಗ ಹೆಣ್ಣು ಹೆತ್ತವರು ಗಂಡಿನ ಕುಲ, ಖ್ಯಾತಿ ಮತ್ತು ಶೀಲಗಳಿಗೆ ಹೆಚ್ಚಿನ ಬೆಲೆ ಕೊಡುತ್ತಾರೆ. ಹಾಗೆ ನೋಡಿದಾಗ ಕೌರವರದು ತನ್ನದೇ ವಂಶದಿಂದ ಕವಲಾಗಿರುವ ಒಂದು ಶ್ರೇಷ್ಠ ವಂಶ. ಈ ವಂಶದ ಕೀರ್ತಿ ಜಗತ್ತಿಗೇ ಹರಡಿಕೊಂಡಿದೆ. ಆದ್ದರಿಂದ ಪ್ರಬಲ ರಾಜನು ಅಳಿಯನಾದರೆ ರಾಜಕೀಯವಾಗಿಯೂ ತನ್ನ ಕೆಲವು ಸಮಸ್ಯೆಗಳು ಪರಿಹಾರವಾಗುತ್ತವೆ. ಕೊನೆಯದಾಗಿ ಶೀಲ. ಯದು, ಪೂರು, ಕುರು ಈ ಮೂರು ವಂಶ ಶಾಖೆಗಳು ಶೀಲದಲ್ಲಿ ಉನ್ನತಿಯನ್ನು ಸಾಧಿಸಿದ ಕುಲಗಳಲ್ಲವೇ ?

ಭೀಷ್ಮನ ಶ್ರೀರಕ್ಷೆಯಿರುವ ಕುರುಕುಲಕ್ಕೆ ಎಂದಿಗೂ ಕೇಡಿಲ್ಲವಲ್ಲ. ಹೀಗೆ ನಾಲ್ಕಾರು ದಿಕ್ಕುಗಳಿಂದ ಯೋಚಿಸಿ ಕೊನೆಗೆ ಮದುವೆಗೆ ಒಪ್ಪಿಗೆ ಕೊಟ್ಟ. ತಂದೆಯ ಮಾತನ್ನು ಮೀರಲಾರದ ಪರಮಸಾಧ್ವಿ ಏಕೈಕ ಮಗಳು ಗಾಂಧಾರಿ ಗಂಡನಿಗೆ ಇಲ್ಲದ ನೇತ್ರ ಸಂಪತ್ತು ತನಗೂ ಬೇಡವೆಂದು ತನ್ನ ಕಣ್ಣಿಗೂ ಬಟ್ಟೆ ಕಟ್ಟಿಕೊಂಡಳು. (ಬಬಂಧ ನೇತ್ರೇ ಸ್ವೇ ರಾಜನ್ ಪತಿವ್ರತ ಪರಾಯಣಾ....).

ಶಕುನಿ ಮಗ. ಗಾಂಧಾರಿ ಒಬ್ಬಳೇ ಮಗಳು ಎಂದು ಕೆಲವು ಪಾಠಗಳಲ್ಲಿ ಆದಿ ಪರ್ವದ 103ನೇ ಅಧ್ಯಾಯ ಸ್ಪಷ್ಟವಾಗಿ ಹೇಳುತ್ತದೆ. ಆದರೆ ಕೆಲವು ಪಾಠಗಳಲ್ಲಿ ಮತ್ತು ಕೆಲವು ಕೋಶಗಳಲ್ಲಿ ಸುಬಲನಿಗೆ ಗಾಂಧಾರಿಯೇ ಅಲ್ಲದೆ ಸತ್ಯವ್ರತೆ, ಸತ್ಯಸೇನೆ, ಸುದೇಷ್ಣೆ, ಸಂಹಿತೆ, ತೇಜಶ್ರವೆ, ಸುಶ್ರವೆ, ನಿಕೃತಿ ಶುಭಾ, ಶಂಬರೆ ಮತ್ತು ದಶಾರ್ಣ ಎಂಬ ಹತ್ತು ಹೆಣ್ಣು ಮಕ್ಕಳಿದ್ದಾರೆಂದು ಸುಬಲನು ಗಾಂಧಾರಿಯ ಜೊತೆಗೆ ಇವರನ್ನೆಲ್ಲ ಧೃತರಾಷ್ಟ್ರನಿಗೆ ಮದುವೆ ಮಾಡಿಕೊಟ್ಟನೆಂದೂ ಹೇಳಲಾಗಿದೆ.

* * * *

ಅಕೃತ ವ್ರಣ

ಅಕೃತವ್ರಣ ಎಂಬುವವನು ಪರಶುರಾಮರ ಶಿಷ್ಯ. ಈತ ಅಂಬೆನೆ ಸಹಾಯಮಾಡಿ ಭೀಷ್ಮನಿಗೇ ಅವಳನ್ನು ಕೊಟ್ಟು ಮದುವೆ ಮಾಡಿಸುವ ಸಂಕಲ್ಪ ಹೊತ್ತವನು. ಆಕಸ್ಮಿಕವಾಗಿ ಇವನನ್ನು ಸಂಧಿಸಿದ ಅಂಬೆ ಪರಶುರಾಮನ ಕೃಪೆಗೂ ಪಾತ್ರಳಾಗಿ ಅದೃಷ್ಟ ಪರೀಕ್ಷೆಗೆ ಪ್ರಯತ್ನಿಸುತ್ತಾಳೆ.

ವಿಚಿತ್ರವೀರ್ಯನನ್ನು ಒಲ್ಲದೆ ತನ್ನ ಪ್ರಿಯನಾದ ಸಾಲ್ವನ ಬಳಿಗೆ ಅಂಬೆ ಹೋಗುತ್ತಾಳಷ್ಟೆ. ಆದರೆ ಭೀಷ್ಮರಿಂದ ಸ್ವಯಂವರ ಮಂದಿರದಲ್ಲಿ ಸೋತಿದ್ದ ಸಾಲ್ವನು ಅಂಬೆಯನ್ನು ತಿರಸ್ಕರಿಸುತ್ತಾನೆ. ಎಲ್ಲ ಕಡೆ ಸೋತ ಅಂಬೆ.

'ನ ಶಕ್ಯಂ ಕಾಶಿನಗರಂ ಪುನರ್ಗಂತು ಪಿತುರ್ಗೃಹಾನ್' ಎಂದುಕೊಳ್ಳುತ್ತಾಳೆ. ಕೊನೆಗೆ ಕಾಡಿಗೆ ಹೋಗಿ ಋಷಿಗಳ ಬಳಿ

"ದುಃಖದ್ವಯಲಿದಂ ಭದ್ರೇ
ಕತರಸ್ಯ ವಿಕೀರ್ಷಸಿ..."

"ಅಮ್ಮಾ ನಿನ್ನ ದುಃಖ ಎರಡು ಬಗೆಯದು. ಆದರೆ ಅಪರಾಧಿ ಸೌಧಪತಿಯಾದ ಸಾಲ್ವನೋ ಅಥವಾ ಭೀಷ್ಮನೋ? ನೀನೇ ಹೇಳು. ಇಬ್ಬರೂ ನಮ್ಮ ಗುರುಗಳಿಗೆ ಬೇಕಾದವರೇ ಸಾಲ್ವನಿಗೆ ಸರಿಯಾದ ಶಾಸ್ತಿಮಾಡುತ್ತಾರೆ ಅದೇರೀತಿ ಭೀಷ್ಮನದು ತಪ್ಪು ಎನಿಸಿದರೆ ಅವನೊಂದಿಗೆ ಯುದ್ಧ ಮಾಡಿ ಸೋಲಿಸಿ ನಿನ್ನನ್ನು ಭೀಷ್ಮನು ಪರಿಗ್ರಹಿಸುವಂತೆ ಮಾಡುತ್ತಾರೆ..."

ಆದರೆ ಅಂಬೆ ಏನೂ ಉತ್ತರ ಹೇಳದೆ 'ನೀವೇ ನಿಶ್ಚಯಿಸಿ' ಎಂದಳು. ಅಕೃತವ್ರಣನು ತನ್ನ ಗುರುಗಳು ಪರಶುರಾಮರು ಅಲ್ಲಿಗೆ ಬರುವ ತನಕ ಕಾದಿದ್ದು ಅವರಿಗೆ ಸಮಸ್ಯೆಯನ್ನು ವಿವರಿಸಿದ. ಗುರುಗಳು ಮತ್ತೆ ಅಂಬೆಯನ್ನು ಕೇಳಿದಾಗ ಅವಳು ಭೀಷ್ಮನ ಮೇಲೆ ದೂರು ಕೊಟ್ಟಳು. ಇದೇ ಸಂದರ್ಭವನ್ನು ಕಾದಿದ್ದ ಅಕೃತವ್ರಣನು

"ಗುರುಗಳೇ ಅಂಬೆ ನಿಮ್ಮ ಪಾದ ಹಿಡಿದು ಬೇಡಿದ್ದಾಳೆ ದುರಹಂಕಾರಿ ಕ್ಷತ್ರಿಯ ಭೀಷ್ಮನು ನನ್ನ ಸಮಾನ ಯಾದವನಿದ್ದಾನೆ? ಎಂದು ಬೀಗುತ್ತಿದ್ದಾನೆ. ಅವನಿಗೆ ಬುದ್ಧಿ ಕಲಿಸುಬೇಕು."

ಎಂದು ಉತ್ತೇಜಿಸಿದ ಅಕೃತವ್ರಣನು ಅಂಬೆಯ ಪಕ್ಷವನ್ನು ವಹಿಸಿ ಆಕೆಗಿಂತಲೂ ಉಗ್ರವಾಗಿ ಮಾತಾಡಿ ಪರಶುರಾಮರನ್ನು ಪ್ರೀತಿಯ ಶಿಷ್ಯ ಭೀಷ್ಮರ ಮೇಲೇ ಯುದ್ಧಕ್ಕೆ ಬಿಟ್ಟದ್ದು ವಿಚಿತ್ರವಾಗಿ ಕಾಣುತ್ತದೆ. ಆದರೆ ಅಂಬೆಯ ಮತ್ತು ಅಕೃತವ್ರಣನ ಆಸೆ ನೆರವೇರಲಿಲ್ಲ. ಕುರುಕ್ಷೇತ್ರದಲ್ಲಿ ನಡೆದ ಮೂವತ್ತು ದಿನಗಳ ಘೋರ ಯುದ್ಧದಲ್ಲಿ ಪರಶುರಾಮರಿಗೆ ಸೋಲಾಯಿತು ಎಂಬುದು ಎಲ್ಲರಿಗೂ ತಿಳಿದ ವಿಷಯವೇ ಆಗಿದೆ.

* * * *

ಉಪಕೀಚಕರು

ಕೀಚಕನ ಭಾವ ವಿರಾಟರಾಜ ಒಬ್ಬ ಸೂತ ದೊರೆ. ಕ್ಷತ್ರಿಯನಿಗೆ ಬ್ರಾಹ್ಮಣ ಸಂಬಂಧವಾಗಿ ಹುಟ್ಟುವ ಮಕ್ಕಳು ಸೂತರು. ಕೇಕಯನೆಂಬವನು ಅಂಥ ಪ್ರಸಿದ್ಧ ಸೂತರಾಜರಲ್ಲಿ ಒಬ್ಬ. ಅವನಿಗೆ ಮಾಲವರಾಜ ಕನ್ಯೆ ಮಾಲವಿಯೊಂದಿಗೆ ವಿವಾಹ ಸಂಬಂಧ ಏರ್ಪಟ್ಟು ಕೀಚಕನೂ ಚಿತ್ರಾ ಎಂಬ ಮಗಳೂ ಹುಟ್ಟಿದರು. ಈ ಚಿತ್ರಾ ಎಂಬುವಳೇ ಸುದೇಷ್ಣೆ ಎಂಬ ಹೆಸರು ಪಡೆದು ವಿರಾಟ ರಾಜನ ಪತ್ನಿಯಾದಳು. ಇವರೆಲ್ಲರ ವಿಚಾರವು ವಿರಾಟಪರ್ವದ ಹದಿನಾರನೆಯ ಅಧ್ಯಾಯದಲ್ಲಿ ಬರುತ್ತದೆ.

ಕಾಲಕ್ರಮದಲ್ಲಿ ಕೀಚಕನಿಗೆ ಒಂದು ನೂರಐದು ಜನ ಸೋದರರು ಹುಟ್ಟಿ ಇವರೆಲ್ಲ ಉಪಕೀಚಕರೆನ್ನಿಸಿಕೊಂಡರು. ಅಣ್ಣ ಕೀಚಕನು ವಿರಾಟರಾಯನ ಸೇನಾಪತಿಯೂ ದರ್ಪಿಷ್ಠನೂ ಆಗಿದ್ದುದರ ಜೊತೆಗೆ ಕಾಲೇಯ ರಾಕ್ಷಸರ ಅಂಶೋತ್ಪನ್ನನೂ ಆಗಿದ್ದು ಅವನೂ ಅವನ ತಮ್ಮಂದಿರೂ ರಾಕ್ಷಸ ಸ್ವಭಾವವನ್ನು ರೂಢಿಸಿಕೊಂಡವರಾಗಿದ್ದರೆಂದು ವಿರಾಟಪರ್ವದಲ್ಲಿ ಹೇಳಲಾಗಿದೆ.

ದ್ರೌಪದಿಯನ್ನು ಕೆಣಕಿದ ಕೀಚಕನು ನಾಗಾಯುತ ಬಲೀದನೇ (ಯುದ್ಧದಲ್ಲಿ ಹತ್ತುಸಾವಿರ ಆನೆಗಳ ಬಲಹೊಂದಿದ್ದವನು) ಎನ್ನಿಸಿಕೊಂಡ ವೀರನಾಗಿದ್ದರೂ ಮುಖದಲ್ಲಿ ಮುದ್ದೆಯಾಗಿ ಗುರುತೇ ಸಿಕ್ಕದ ವಿರೂಪಿಯಾಗಿ ಸತ್ತನಷ್ಟೇ. ಭೀಮನಿಂದ ಈ ಕೊಲೆ ನಡೆದರೂ ಸೈರಂಧ್ರಿಯ ಪತಿಗಳಾದ ಗಂಧರ್ವರ ಕೃತ್ಯವಿದೆಂದು ಸಾರಲಾಯಿತು. ಅಣ್ಣನ ಕಟ್ಟಾ ಬೆಂಬಲಿಗರಾಗಿದ್ದ ಉಪಕೀಚಕರು ಇದಕ್ಕೆಲ್ಲ ಸೈರಂಧ್ರಿಯೋ ಕಾರಣಳೆಂದು ತಿಳಿದು.

ದಹ್ಯತಾಂ ಶೀಘ್ರಮಸತೀ
ಯತ್ಕೃನೇ ಕೀಚ ಕೋ ಹತಃ

ಅವಳನ್ನು ಕೀಚಕನ ಹೆಣದೊಂದಿಗೇ ಸುಡಲು ಶ್ಮಶಾನಕ್ಕೆ ಹೋಗಲು ನಿರ್ಧರಿಸಿ ವಿರಾಟನ ಅನುಮತಿ ಪಡೆಯಲು ತೆರಳಿದರು. ಕಟ್ಟುವಡೆದ ಸೈರಂಧ್ರಿಯು ಪಾಂಡವರ ಗುಪ್ತನಾಮಗಳನ್ನು ಉಲ್ಲೀಖಿಸಿಃ

"ಜಯೋ ಜಯಂತೋ ವಿಜಯೋ ಜರತ್ಸೇನೋ ಜಯದ್ಬಲಃ
ತೇಮೇ ವಾಚಂ ನಿಜಾನಂತು ಸೂತಪುತ್ರಾ ನಯಂತಿ ಮಾಮ್ ಎಂದು ಮೊರೆಯಿಟ್ಟಳು.

ಆ ಧ್ವನಿ ಕೇಳಿಸಿಕೊಂಡ ಭೀಮನ ಹೆದ್ದಾರಿಯಲ್ಲಿ ಹೋಗದೆ ಪ್ರಹರಿಗೋಡೆಯಿಂದ ಮರದ ಮೇಲೆ ಹತ್ತಿ ಉಪಕೀಚಕರ ಬೆನ್ನಟ್ಟಿ ಹೊರಟ. ಆ ವೇಳೆಗೆ ಅವರು ವಿರಾಟನ ಅನುಮತಿ ಪಡೆದು ದ್ರೌಪದಿಯನ್ನು ಕೀಚಕನ ಜೊತೆಗೆ ಸುಡಲು ಹೊರಟಿದ್ದರು ಭೀಮನ ದೊಡ್ಡ ಮರವೊಂದನ್ನು ಸವರಿ ಎರಡು ಕೈಯಿಂದಲೂ ಎತ್ತಿ ದಂಡ ಹಸ್ತನಾದ ಯಮನಂತೆ ಹೆಗೆಲನೇರಿಸಿಕೊಂಡು ಅವರ ಮೇಲೆ ನುಗ್ಗಿದ. ಸಿಂಹದಂತೆ ನುಗ್ಗಿಬರುತ್ತಿರುವ ಇವನನ್ನು ಕಂಡು ಭಯಭೀತರಾದ ಉಪಕೀಚಕರು ಭಯದಿಂದ ಅಡಗಿಕುಳಿತರು. ಸೈರಂಧ್ರಿಯನ್ನು ಬಿಡುಗಡೆ ಮಾಡಿದರೆ

ತಮ್ಮ ಜೀವ ಉಳಿದೀತೆಂದು ಅದನ್ನು ಮಾಡಿ ಓಡಿದರು. ಆದರೆ ಭೀಮನು ಹಾಗೆಲ್ಲ ಯಾವ ಕೆಲಸವನ್ನು ಅರ್ಧದಲ್ಲೇ ಬಿಡುವವನಲ್ಲವಲ್ಲ. ಕೈಯಲ್ಲಿ ಭಾರಿಯ ಮರವೂ ಇತ್ತಲ್ಲ. ಅದರ ಪರಿಣಾಮ ಏನು ಗೊತ್ತೆ; ವ್ಯಾಸರ ಬಾಯಲ್ಲೇ ಕೇಳಬೇಕು:

"ಶತಂ ಪಂಚಾಧಿಕಂ ಭೀಮಃ
ಪ್ರಾಹಿಣನೋದ್ ಯಮಸಾದನಂ"

(ಆ ಮರದ ಆಯುಧದಿಂದಲೇ ಭೀಮನು ಆ ನೂರೈದು ಉಪಕೀಚಕರನ್ನೂ ಯಮಸದನಕ್ಕೆ ಅಟ್ಟಿದನು.)

* * * *

ಬಾಹ್ಲಿಕ

ಇವನಿಗೆ ವಾಹ್ಲಿಕ ಎಂದೂ ಹೆಸರಿದೆ 'ವಾಹ್ಲಿಕಂ ಪ್ರಪಿತಾ ಮಹಂ' ಎರಡೂ ಇವನ ಬಗೆಗೆ ಹೇಳಲಾಗಿದೆ. ಮಹಾಭಾರತದಲ್ಲಿ ಬಹಳ ವಯಸ್ಸಾದ ಯೋಧರು ಇದ್ದದ್ದು ನಿಜ. ಕೌರವ ಭೀಮಾದಿಗಳೇ ಅರವತ್ತು ದಾಟಿದ್ದುದನ್ನು ಜ್ಞಾಪಿಸಿಕೊಳ್ಳಬೇಕು. ಇನ್ನೂ ಹಿರಿಯರೆಂದರೆ ದ್ರೋಣ, ಶಲ್ಯ, ಭಗದತ್ತ ಕೃಪ ಮೊದಲಾದವರು. ಅವರೆಲ್ಲರಿಗಿಂತ ಹಿರಿಯರೆಂದರೆ ಭೀಷ್ಮರಲ್ಲವೇ ಆದರೆ ವಾಹ್ಲಿಕ ಮಹಾರಾಜನ ಭೀಷ್ಮರಿಗೆ ಚಿಕ್ಕಪ್ಪನಾಗಬೇಕು ಎಂದರೆ ಅವನ ವಯಸ್ಸನ್ನು ಊಹಿಸಿಕೊಳ್ಳಿ.

ಬಾಹ್ಲಿಕನೂ ಪ್ರಸಿದ್ಧ ಕುರುವಂಶಕ್ಕೇ ಸೇರಿದವನು. ಕುರು ಎಂಬ ದೊರೆಯ ಮಗ ಒಂದನೇ ಜನಮೇಜಯ. ಈ ವಂಶದ ಪ್ರತೀಪ ಮಹಾರಾಜ ಮತ್ತು ಶಿಬಿ ದೇಶದ ರಾಜಕುಮಾರಿ ಸುನಂದೆ-ಇವರಿಗೆ ಮೂವರು ಮಕ್ಕಳು. ದೇವಾಪಿ, ಶಂತನು ಮತ್ತು ಬಾಹ್ಲಿಕ. ಪ್ರತೀಪನ ಮರಣಾನಂತರ ದೇವಾಪಿ ನಿರಾಸಕ್ತನಾಗಿದ್ದುದರಿಂದ ಶಂತನು ಬಾಹ್ಲಿಕರು ರಾಜರಾದರು. ಆದರೆ ಶ್ರೀಮಂತ ಸೋದರ ಮಾವನ ರಾಜ್ಯವನ್ನು ಆಳಲು ಒಪ್ಪಿ ಶಂತನುವಿಗೇ ರಾಜ್ಯವನ್ನು ಬಿಟ್ಟು ಬಾಹ್ಲಿಕನು ಕುರುವಂಶದಿಂದ ಬೇರ್ಪಡೆಯಾದ. ತನ್ನ ಅಣ್ಣನ ಮಗನಾದ ಚಿಕ್ಕಪ್ಪ ಭೀಷ್ಮರೊಂದಿಗೆ ಅವನ ಸಂಬಂಧ ಚೆನ್ನಾಗಿದ್ದುದರಿಂದ ಉದ್ದಕ್ಕೂ ಕುದುವಂಶದ ಹಿತೈಷಿಯಾಗಿಯೇ ಉಳಿದ. ಕೌರವ ಪಕ್ಷದ ವೀರರ ಪಟ್ಟಿಯಲ್ಲಿ ಮತ್ತೆ ಮತ್ತೆ ಪ್ರಸ್ತಾವಿತನಾಗುವ ಬಾಹ್ಲಿಕ ಇಳಿವಯಸ್ಸಿನಲ್ಲೂ ಭೀಷ್ಮದ್ರೋಣಾದಿಗಳೊಂದಿಗೆ ಸೇರಿ ಉತ್ಸಾಹದಿಂದ ಯುದ್ಧದಲ್ಲಿ ಭಾಗವಹಿಸಿದ್ದಾನೆ ನಿಜ. ಆದರೆ ವಾಸ್ತವವಾಗಿ ಈತನಿಗೆ ಪಾಂಡವ-ಕೌರವರು ಹಗೆಗಳಾಗುವುದು. ಇಷ್ಟವಿಲ್ಲ-ಅದನ್ನು ಸಭೆಯಲ್ಲಿ ಎಲ್ಲರೆದುರಿಗೆ ಹಲವಾರು ಬಾರಿ ಹೇಳಿದ್ದಾನೆ. ದ್ಯೂತವನ್ನು ನೇರವಾಗಿ ವಿರೋಧಿಸಿದವರಲ್ಲಿ ಬಾಹ್ಲಿಕನು ಪ್ರಮುಖನಾಗಿದ್ದಾನೆ. ಸ್ವಭಾವತಃ ಶಾಂತಿ ಪ್ರಿಯನಾದ ಈತ ಪಾಂಡವ-ಕೌರವ ಯುದ್ಧವನ್ನು ತಪ್ಪಿಸಲು ಮಹಾನ್ ಪ್ರಯತ್ನ ಮಾಡಿದ್ದಾನೆ. ಕೌರವರ ರಾಯಭಾರಿಯಾಗಿದ್ದ ಸಂಜಯನು ಹಿಂದಿರುಗಿ ಬಂದು ಸುದ್ದಿ ಹೇಳಿದಾಗ ಬಾಹ್ಲಿಕ ಆಸಕ್ತಿಯಿಂದ ಕೌರವ ಸಭೆಗೆ ಬಂದಿದ್ದನ್ನು ಗಮನಿಸಬೇಕು. "ಭರತರ ನಡುವೆ ಶಾಂತಿ ನೆಲಸುವುದನ್ನು ಬಿಟ್ಟರೆ ನನಗೆ ಬೇರೆ ಆಸೆಗಳೇ ಇಲ್ಲ" ಎಂಬ ಅವನ ಹೇಳಿಕೆಯಲ್ಲಿ ವ್ಯಕ್ತವಾಗುವ ಕಾಳಜಿಯನ್ನು ಗಮನಿಸಬೇಕು. ಪಾಂಡವ ಕೌರವರ ಬಗೆಗೆ ಅವನ ಚಿಂತನೆಯೂ ಅಪೂರ್ವವಾಗಿದೆ ದ್ರೋಣಪರ್ವದ ಮೂರನೆಯ ಅಧ್ಯಾಯದಲ್ಲಿ ಅವನು ಹೇಳುವ ಮಾತು ಅರ್ಥಪೂರ್ಣವಾದದ್ದು: "ಸತ್ಪುರುಷರಾದ ಪಾಂಡವರು ಅಸುಖಿಗಳಾಗಿದ್ದಾರೆ.ದುಷ್ಟ ಕೌರವನು ಸುಖಿಯಾಗಿದ್ದಾನೆ. ಇದನ್ನು ನೋಡುವ ಮಿತಬುದ್ಧಿಯ ಜನರು ದುಷ್ಟ ಜೀವನವೇ ಒಳ್ಳೆಯದೆಂದು ಭಾವಿಸಬಹುದು."

ಇಷ್ಟಾದರೂ ಯುದ್ಧದಲ್ಲಿ ಅವನು ಭೀಷ್ಮದ್ರೋಣ ಕೃಪಾದಿಗಳಂತೆ ಕೌರವನ ಪಕ್ಷದಲ್ಲೇ ಇದ್ದು ಹೋರಾಡುತ್ತಾನೆ. ಲಕ್ಷಣ(?) ಎಂಬ ರಥವನ್ನೇರಿ ಇವನು ಯುದ್ಧಕ್ಕೆ

ಬಂದು ನಿಂತ ಸಂದರ್ಭ ಸಂಶಪ್ತಕ ಪರ್ವದಲ್ಲಿದೆ. ಘಟೋತ್ಕಚ ಸಾತ್ಯಕಿ ಭೀಮ ಅರ್ಜುನ ಮೊದಲಾದ ಪಾಂಡವ ವೀರರ ಮೇಲೆ ಈತ ಯುದ್ಧ ಮಾಡುತ್ತಾನೆ ಕೊನೆಗೆ ಇವನನ್ನು ಇವನ ಮಕ್ಕಳಾದ ಸೋಮದತ್ತಾದಿಗಳನ್ನು ಭೀಮನು ಕೊಲ್ಲುತ್ತಾನೆ.

ಈ ಹಿರಿಯ ಪ್ರಜೆಯ ಬಗೆಗೆ ಕೌರವ ಪಾಂಡವ ಪಡೆಗಳೆರಡಕ್ಕೂ ಗೌರವವಿತ್ತು ಎಂಬುದು ಸ್ಮರಣೀಯ ಸಂಗತಿಯಾಗಿದೆ.

* * * *

ಅಗಸ್ತ್ಯ ಮುನಿ

ಕಾಲಕೇಯರನ್ನು ಬೇಗೂಬಡಿಯುವುದಕ್ಕಾಗಿ ಸಮುದ್ರದ ನೀರನ್ನೆಲ್ಲ ಆಪೋಶನವಾಗಿ ತೆಗೆದುಕೊಂಡವರು ಅಗಸ್ತ್ಯರು ಹೊಟ್ಟೆ ಸೀಳಿಕೊಂಡು ಬರುತ್ತಿದ್ದ ವಾತಾಪಿಯನ್ನು ಹೊಟ್ಟೆಯೊಳಗೇ ಕರಗಿಸಿದವರು, ದಕ್ಷಿಣ ಉತ್ತರಭಾರತದಗಳ ಸಾಂಸ್ಕೃತಿಕ ಸೇತುವಾದವರು, ವಿಂಧ್ಯೆ ಬೆಳೆಯದಂತೆ ನಿಯಂತ್ರಿಸಿದವರು ತಾನು ಸೃಷ್ಟಿಸಿದವಳನ್ನು ತಾನೇ ಮದುವೆಯಾದವರು, ಕಾವೇರಿಯ ಹರಿವಿಗೆ ಕಾರಣನಾದವರು ಮುಂತಾಗಿ ಪ್ರಸಿದ್ಧನಾಗಿರುವ ಅಗಸ್ತ್ಯರು, ಭಾರತದ ಕಾವ್ಯ, ಪುರಾಣ, ಐತಿಹ್ಯ ಇತಿಹಾಸಗಳಲ್ಲಿ ಚಿರಪ್ರಶಂಸೆಗೆ ಪಾತ್ರರಾಗಿದ್ದಾರೆ. ಇತ್ತ ತಮಿಳು ಸಂಸ್ಕೃತಿಯೂ ಅಗಸ್ತ್ಯರು ತನ್ನವನೆಂದು ಒಪ್ಪುತ್ತದೆ. ಮಹಾಭಾರತದಲ್ಲಿಯೂ ಅಗಸ್ತ್ಯರು ಹಲವಾರು ಬಾರಿ ಪ್ರಸ್ತಾವಕ್ಕೆ ಒಳಗಾಗಿದ್ದಾರೆ. ಇವರಿಗೆ ಕುಂಭಜ ಎಂಬ ಹೆಸರೂ ಇದೆ. ಮೈತ್ರಾವರುಣಿ ಎಂದೂ ಕರೆಯುತ್ತಾರೆ.

ಅಗಸ್ತ್ಯರು ಮಿತ್ರಾವರುಣರ ಮಗ, ಬ್ರಹ್ಮರ್ಷಿ. ಮಿತ್ರಾವರುಣರು ಸಮುದ್ರ ತೀರದಲ್ಲಿ ಹೋಗುತ್ತಿರುವಾಗ ಉರ್ವಶಿಯನ್ನು ನೋಡಿ ವೀರ ಪತನವಾಗಿ ಮಡಿಕೆಯಲ್ಲಿ ಬೆಳೆದು ಅಗಸ್ತ್ಯವಸಿಷ್ಠರು ಹುಟ್ಟಿದರು ಎಂದು ಪುರಾಣ ಹೇಳುತ್ತದೆ. ದ್ರೋಣನ ಅಸ್ತ್ರವಿದ್ಯ ಗುರುವಾಗಿದ್ದ ಅಗ್ನಿವೇಶನಿಗೆ ಅಸ್ತ್ರವಿದ್ಯೆಯನ್ನು ಕಲಿಸಿದ ಗುರುವಾಗಿದ್ದ ಬ್ರಹ್ಮಚಾರಿಯಾಗಿದ್ದ ಅಗಸ್ತ್ಯರು ಒಂದು ಸಲ ತಾವೇ ಒಬ್ಬಳು ಸುಂದರ ಕನ್ಯೆಯನ್ನು ಸೃಷ್ಟಿಸಿದರು. ಅನಂತರ ಅವಳನ್ನು ವಿದರ್ಭರಾಜನಿಗೆ ದತ್ತು ಮಗಳಾಗಿ ದಾನವಿತ್ತಿದರು ಎಂದು ವನಪರ್ವ ಹೇಳುತ್ತದೆ. ಮುಂದೆ ತಾನು ಮದುವೆಯಾಗಿ ಮಗನನ್ನು ಪಡೆಯದಿದ್ದರೆ ತನ್ನ ಪಿತೃಗಳಿಗೆ ಮೋಕ್ಷಸಿಗುವುದಲ್ಲಿ ಎಂದು ತಿಳಿದು ಬಂದಾಗ ಮದುವೆಯಾಗುವ ನಿರ್ಧಾರ ಮಾಡಿದರು. ಅನಂತರ ತಾನೇ ವಿದರ್ಭರಾಜನ ಬಳಿಗೆ ಹೋಗಿ ನಿನ್ನ ಮಗಳನ್ನು ನನಗೆ ಧಾರೆ ಎರೆದುಕೊಡು ಎಂದು ಕೇಳಿದರು. ಈ ವಿಚಿತ್ರಕ್ಕೆ ಬೆರಗಾದರೂ ರಾಜನು ತುಂಬ ಸಂತಸದಿಂದ ಮದುವೆ ಮಾಡಿಕೊಟ್ಟ. ಇವನ ಪತ್ನಿಯೇ ಪುರಾಣ ಪ್ರಸಿದ್ಧಳಾದ ಲೋಪಾ ಮುದ್ರೆಯ ಇವಳು ಸಿಂಧೂ ತೀರ್ಥದಲ್ಲಿ ಅಗಸ್ತ್ಯರ ಕೈಹಿಡಿದಳ. ಆ ತೀರ್ಥದ ಹೆಸರು ಪ್ಲಕ್ಷಾವತರಣ ಅಗಸ್ತ್ಯ-ಲೋಪಾಮುದ್ರೆಯರ ಮಗ ದೃಢಸ್ಸು ಅಥವಾ ಇಧ್ಮವಾಹ ಇವಳಿಂದ ಪ್ರೇರಿತಳಾಗಿ ಲೋಪಾಮುದ್ರೆಯನ್ನು ಸುಖವಾಗಿರಿಸಲು ಅಗಸ್ತ್ಯರು ಧನಸುಗ್ರಹಕ್ಕೆ ಹೊರಡುತ್ತಾರೆ. ಇಲ್ವಲನಿಂದಲೂ ಹಣಬೇಡಲು ಬಂದಾಗ ಅನುಷಂಗಿಕವಾಗಿ ವಾತಾಪಿಯನ್ನು ಕೊಲ್ಲಬೇಕಾಯಿತು. ಇಂದ್ರನ ಸ್ಥಾನಕ್ಕೆ ಬಂದು ಸಪ್ತರ್ಷಿಗಳೊಡನೆ ತುಂಬ ಕೆಟ್ಟದಾಗಿ ನಡೆದುಕೊಂಡ ನಹುಷನಿಗೆ ''10000ವರ್ಷದವರೆಗೆ ಸರ್ಪವಾಗಿರು ಎಂದು ಶಾಪವಿತ್ತು ಅಹಂಕಾರವನ್ನು ತಗ್ಗಿಸಿದ ಕೀರ್ತಿ ಅಗಸ್ತ್ಯರಿಗೆ ಸಲ್ಲುತ್ತದೆ. ಒಂದು ಸಲ ಭಾರಿಯ ಕ್ಷಾಮ 12 ವರ್ಷ ದೇಶವನ್ನು ಕಾಡಿದಾಗ ಈತ ಮಾನಸಿಕ ಅಥವಾ ಸ್ಪರ್ಶಯಜೂಗಳನ್ನು ತುಂಬ ಶ್ರದ್ಧೆಯಿಂದ ಮಾಡಿದ್ದೇ ಅಲ್ಲದೆ ತಮ್ಮತಮ್ಮ ತಪಶ್ಯಕ್ತಿಯಿಂದ ಯಜ್ಞಕ್ಕೆ ಬೇಕಾದ ಸಂಪತ್ತೆಲ್ಲ ಸ್ವರ್ಗಮೃತ್ಯ ಪಾತಾಳ ಲೋಕದಿಂದ

ತನ್ನೆಡೆಗೆ ತರಿಸಿಕೊಂಡರು. ಸ್ವಯಂ ಇಂದ್ರನೇ ಬಂದು ಯಜ್ಞದಲ್ಲಿ ಹವಿಸ್ಸನ್ನು ಸ್ವೀಕರಿಸಿ ಹರಸಿ ಹೋದನಂತೆ.'

ಸಮಗ್ರ ಭಾರತದಲ್ಲಿ ಓಡಾಡಿದ ಮಹರ್ಷಿ ಎಂದರೆ ಅಗಸ್ತ್ಯರು. ಭಾರತದ ಎಲ್ಲ ಭಾಗಗಳಲ್ಲೂ ಪ್ರಕೀರ್ತಿತರಾಗಿದ್ದಾರೆ. ದಕ್ಷಿಣ ಭಾರತದಲ್ಲಂತು ಅವರು ಮನೆಮಾತಾಗಿದ್ದಾರೆ ಇದು ಭಾರತದ ಅಗಸ್ತ್ಯರ ಕಥೆಯಾಗಿ ಲೋಕೋಪಕಾರ ಮತ್ತು ಲೋಕ ಕಲ್ಯಾಣದ ಕಾಳಜಿ ಉಳ್ಳ ವ್ಯಕ್ತಿಯನ್ನು ನಮ್ಮೆದುರಿಗೆ ಇರಿಸುತ್ತದೆ ಇನ್ನು ಪುರಾಣಗಳಲಂತೂ ಈತನ ಚರಿತ್ರವು ವರ್ಣಮಯವಾಗಿ ಸಾಹಸಮಯವಾಗಿ ಕಂಗೊಳಿಸಿದೆ.

* * * *

ಉತ್ತರಕುಮಾರ (ಭೂಮಿಂಜಯ)



ಲೋಕ ವಾಸ್ತವವನ್ನು ಅರಿಯದೆ ಬರಿಯ ಭ್ರಮೆಯ, ಕನಸಿನ, ಕಾಲ್ಪನಿಕ ಲೋಕದಲ್ಲಿ ವಿಹರಿಸುವ ಎಲ್ಲ ಜನರ ಪ್ರತಿನಿಧಿಯಾಗಿ ಉತ್ತರ ಕುಮಾರನಿದ್ದಾನೆ. ಈತ ವಾಸ್ತವವಾಗಿ ಯುದ್ಧ ಭೂಮಿಯನ್ನೇ ಕಂಡವನಲ್ಲ. ಹೋರಾಡಿದವನೂ ಅಲ್ಲ. ಆದರೆ ಅಪ್ಪನ ಪ್ರೀತಿ, ಅಂತಃಪುರದ ನಾರಿಯರ ಸ್ತುತಿ ಈ ವಲಯದಲ್ಲೇ ವಿಜೃಂಭಿಸಿದ ಈತ ತಾನು ನಿಜವಾದ ಕಲಿಯೆಂದು ಭಾವಿಸಿ ಬೃಹನ್ನಳೆಯನ್ನು ಸಾರಥಿಯಾಗಿ

ಮಾಡಿಕೊಂಡು ಕೌರವರ ಮೇಲೆ ಯುದ್ಧಕ್ಕೂ ಹೊರಡುತ್ತಾನೆ. ಪಾಂಡವರ ಸುಳಿವನ್ನು ತಿಳಿಯಲು ಕೌರವನು ವಿರಾಟನ ಗೋ ಸಂಪತ್ತನ್ನು ಕಟ್ಟಿ ಯುದ್ಧಕ್ಕೆ ಬಂದ ಸಂದರ್ಭ ಅದು. ಅದರ ಮಹತ್ವ ಉತ್ತರನಿಗೆ ತಿಳಿದದ್ದು ನಿಜವಾಗಿ ಯುದ್ಧ ಭೂಮಿಯಲ್ಲಿ ನಿಂತಾಗಲೇ. ಅವನ ಯುದ್ಧೋತ್ಸಾಹದ ಜ್ವರ ಇಳಿದು ಹೋದುದನ್ನು ವ್ಯಾಸರು ಹಾಸ್ಯಮಯವಾಗಿ ಚಿತ್ರಿಸಿದ್ದಾರೆ. ಯುದ್ಧಕ್ಕೆ ಹೊರಡುವ ಮುನ್ನ ಅಂತಃಪುರದಲ್ಲಿ ಅವನಾಡಿದ್ದ ಆಟಾಟೋಪದ ಮಾತುಗಳಿಗೂ ಈಗ ಕೌರವ ಸೇನೆಯನ್ನು ಕಂಡಾಗ ಆಡುವ ಭಯದ ಮಾತುಗಳಿಗೂ ನಡುವೆ ಇರುವ ಅಸಂಗತಿಯೇ ಇಲ್ಲಿ ಹಾಸ್ಯ ಸ್ಫೋಟಕ್ಕೆ ಕಾರಣವಾಗುತ್ತದೆ. ಗಳಿತ ಪೌರುಷನಾದ ಉತ್ತರನು ರಥವನ್ನು ಹಿಂದಿರುಗಿಸು ಎಂದು ಬೃಹನ್ನಳೆಯನ್ನು ಕಾಡುತ್ತಾನೆ. ಮುಂದೆ ಈ ವಿಷಯವಾಗಿ ಅರ್ಜುನ-ಉತ್ತರಕುಮಾರರ ನಡುವೆ ನಡೆಯುವ ಸಂವಾದ ವ್ಯಾಸ ಭಾರತದ ಉತ್ತಮ ಸಂವಾದ ಭಾಗಗಳಲ್ಲಿ ಒಂದಾಗಿದೆ. ಕನ್ನಡ-ತೆಲುಗು ಭಾರತಗಳಲ್ಲಿಯಂತೂ ಈ ಪ್ರಸಂಗ ತುಂಬ ವಿಸ್ತೃತವಾಗಿ ಹಾಸ್ಯರಸದ ಮಡುವನ್ನೇ ಸೃಷ್ಟಿಸಿದೆ.

ಕೊನೆಗೆ ಅರ್ಜುನ ರಥದಿಂದಿಳಿದೋಡಲು ಯತ್ನಿಸಿದ ಉತ್ತರನ ಜುಟ್ಟು ಹಿಡಿದು ಮನವೊಲಿಸಿ ಶಮೀವೃಕ್ಷದ ಬಳಿಗೆ ಕರೆದೊಯ್ದು ಅವನಿಂದ ಶಸ್ತ್ರಾಸ್ತ್ರಗಳನ್ನು ತೆಗೆಸಿಕೊಂಡು ತಾನು ಅರ್ಜುನ ಎಂಬುದನ್ನು ತಿಳಿಸಿ ಧೈರ್ಯ ತುಂಬಬೇಕಾಯಿತು. ಹಾಗೆ ಧೈರ್ಯ ಬಂದ ಮೇಲೆ ವ್ಯಾಸರ ಉತ್ತರಕುಮಾರನು ರಥದ ಸಾರಥಿಯಾಗಲು ಒಪ್ಪುತ್ತಾನೆ. ಚಾಕಚಕ್ಯತೆಯಿಂದ ಗಂಭೀರವಾಗಿ ರಥವನ್ನು ನಡೆಸುತ್ತಾನೆ. ಆದರೆ ದೇಶಿ ಮಹಾಭಾರತಗಳು ಈ ಹಾಸ್ಯ ಪ್ರಸಂಗಗಳನ್ನು ಮುಂದಕ್ಕೂ ವಿಸ್ತರಿಸುತ್ತವೆ.

ಮುಂದೆ ಏಕಾಕಿಯಾಗಿ ಅರ್ಜುನನು ಕೌರವರನ್ನೆಲ್ಲ ಸದೆಬಡಿದು ಸಮ್ಮೋಹನಾಸ್ತ್ರ ಪರವಶರನ್ನಾಗಿ ಮಾಡಿ ಅವರ ಆಭರಣ ವಸ್ತ್ರಗಳನ್ನು ಗುರುತಿಗೆಂದು ತೆಗೆಸಿಕೊಂಡು ಬರುತ್ತಾನಷ್ಟೆ. ಹಿಂದಿರುಗಿ ಬರುವ ವೇಳೆಗೆ ಉತ್ತರನೇ ಶತ್ರುಗಳನ್ನು ಸದೆ ಬಡಿದನೆಂಬ ಗಾಳಿ ಸುದ್ದಿ ಹರಡಿತ್ತಲ್ಲ. ನಿಜ ಸಂಗತಿಯನ್ನು ತಂದೆಗೆ ಹೇಳುವ ಬಯಕೆ ಉತ್ತರನಿಗೆ. ಆದರೆ ಅರ್ಜುನನು ಈ ಸುದ್ದಿ ಗುಟ್ಟಾಗಿರಲೆಂದು ಹೇಳಿದ್ದರಿಂದ "ಅಪ್ಪ, ನನಗೆ ಒಬ್ಬ ದಿವ್ಯ ಪುರುಷನ ಸಹಾಯ ಸಿಕ್ಕಿತು" ಎಂದಷ್ಟೆ ಹೇಳುತ್ತಾನೆ. ಮರುದಿನ ಎಲ್ಲ ಸಂಗತಿ ಬಯಲಾಗುತ್ತದೆ.

ಉತ್ತರ ಮುಂದೆ ಗಂಭೀರ ಯುವಕನಾಗುತ್ತಾನೆ. ಮಹಾಭಾರತ ಯುದ್ಧದಲ್ಲಿ ಉತ್ಸಾಹದಿಂದ ಭಾಗವಹಿಸಿ ವೀರಾವೇಶದಿಂದ ಹೋರಾಡುತ್ತಾನೆ. ಕೊನೆಗೆ ಶಲ್ಯನಿಂದ ಉತ್ತರನ ವಧೆಯಾಗುತ್ತದೆ.

'ಉತ್ತರನ ಪೌರುಷ ಒಲೆ ಮುಂದೆ' ಎಂಬ ಗಾದೆಯು ಮೂಲವಸ್ತುವಾಗುವಷ್ಟು ಮನೋರಂಜಕ ಸಾಮಗ್ರಿ ಉತ್ತರನಲ್ಲಿದೆ.

*   *   *   *

ಸುದಕ್ಷಿಣ

ರಾಜರುಗಳು ಎಷ್ಟೇ ವೈಭವ ಪೂರ್ಣ ಭೋಗ ಜೀವನವನ್ನು ನಡೆಸಿದರೂ, ಸಪ್ತ ವ್ಯಸನಗಳಲ್ಲಿ ಮುಳುಗಿದ್ದರೂ ಮಹಾಯುದ್ಧ ಎಂದ ಕೂಡಲೇ ಅವರ ಕಿವಿ ನೆಟ್ಟಗಾಗುತ್ತವೆ. ಪರಾಕ್ರಮ ಪ್ರದರ್ಶನಕ್ಕೆ ಅವರ ಭುಜಗಳು ಕುಣಿಯುತ್ತಿರುತ್ತವೆ. ಕರ ಬಂದ ಕೂಡಲೇ ತಮಗೆ ಪ್ರಿಯವಾದ ಪಕ್ಷಕ್ಕೆ ಸೇರಿ ಹೋರಾಡಲು ನುಗ್ಗಿ ಬಿಡುತ್ತಾರೆ ಕಾಬೂಲಿನ (ಕಾಂಬೋಜ) ರಾಜ ಸುದಕ್ಷಿಣ ಈ ನಿಯಮಕ್ಕೆ ಅತೀತವಲ್ಲ. ಕೌರವನಿಂದ ಪ್ರಾರ್ಥನೆಯ ಕಲೆಬಂದ ಕೂಡಲೇ ತನ್ನಲ್ಲಿದ್ದ ಒಂದು ಅಕ್ಷೋಹಿಣಿಯ ಭಾರಿಯ ಸೇನೆಯೊಂದಿಗೆ ಕುರುಕ್ಷೇತ್ರದಲ್ಲಿ ಬಂದಿಳಿತ ಸಮಸ್ತ ವೈಭವೋಪೇತ ದಿವ್ಯಾಭರಣಗಳೊಂದಿಗೆ ಅವನು ಯುದ್ಧಕ್ಕೆ ಹೊರಡುತ್ತಿದ್ದನೆಂದು ಮಹಾಭಾರತದಲ್ಲಿ ಹೇಳಲಾಗಿದೆ. ಇದನ್ನು ಸಮರ್ಥಿಸುವಂತೆ ಅವನು ಅನೇಕ ಮುಖ್ಯ ಭೂಷಣಾಲಂಕೃತನಾಗಿ ಪರ್ವತದಂತೆ ದರ್ಶನೀಯ ವ್ಯಕ್ತಿಯಾಗಿದ್ದನೆಂದು ದ್ರೋಣ ಪರ್ವದ ಬರುತ್ತನೆಯ ಅಧ್ಯಾಯವು ಸಮರ್ಥಿಸುತ್ತದೆ. ಇವನು ದ್ರೌಪದೀ ಸ್ವಯಂವರದಲ್ಲಿ ಭಾಗವಹಿಸಿದ್ದನೆಂದು ತಿಳಿದುಬರುತ್ತದೆ 'ರಥಾತಿರಥಸಂಖ್ಯಾನ ಪರ್ವ'ದಲ್ಲಿ ಈತನನ್ನು 'ರಥಿ' ಎಂದು ಕರೆಯಲಾಗಿದೆ. ಕೌರವನ ಕಡೆ ಹೋರಾಡಿದ ವೀರರುಗಳಲ್ಲಿ ಅಗ್ರಗಣ್ಯನೆಂದು ಮಹಾಭಾರತ ಗುರುತಿಸುತ್ತದೆ ಭಾರಿಯ ಯವನ ಮತ್ತು ಶಕರ ಸೇನೆ ಇವನೊಂದಿಗೆ ಬಂದಿತ್ತು. ಇವನ ಹಲವಾರು ತಮ್ಮಂದಿರೂ ಅಣ್ಣನ ಸಂಯಮಕ್ಕೆಂದು ಕೌರವ ಸೈನ್ಯಕ್ಕೆ ಬಂದು ಸೇರಿದ್ದರು.

ಮೊದಲ ದಿನ ಸುದಕ್ಷಿಣನು ಶ್ರುತಕರ್ಮನೊಂದಿಗೆ ದ್ವಂದ್ವ ಯುದ್ಧವನ್ನು ಮಾಡಿದನೆಂದು ಹೇಳಲಾಗಿದೆ. ಅರ್ಜುನ ಅಭಿಮನ್ಯುಗಳೊಂದಿಗೂ ಹೋರಾಡಿದ ಕೀರ್ತಿ ಇವನದು. ಕೌರವ ಸೇನೆಯ ದಂಡನಾಯಕರುಗಳೆಲ್ಲ ಈತನ ಪೌರುಷವನ್ನು ಬಲ್ಲವರಾಗಿದ್ದರು. ಭೀಷ್ಮರು ನಿರ್ಮಿಸಿದ್ದ ಸರ್ವತೋಭದ್ರ ಎಂಬ ವ್ಯೂಹದ ಬಲಭಾಗದಲ್ಲಿ ನಿಂತು ಹೋರಾಡಿದ ಕೀರ್ತಿ ಈತನಿಗೆ ಸಲ್ಲುತ್ತದೆ ಹಾಗೆಯೇ ಭೀಷ್ಮರ ಕ್ರೌಂಚವ್ಯೂಹದಲ್ಲೂ ಈತ ಮಿಂಚಿದ್ದಾನೆ. ದ್ರೋಣರ ಆಜ್ಞೆಯಂತೆ ಸೈಂಧವನ್ನನ್ನು ಅರ್ಜುನನಿಂದ ಕಾಪಾಡುವ ಹೊಣೆ ಹೊತ್ತವರಲ್ಲಿ ಸುದಕ್ಷಿಣನೂ ಪ್ರಮುಖವಾಗಿದ್ದಾನೆ. ದ್ರೋಣರ ಗರುಡವ್ಯೂಹದಲ್ಲಿ ಈತನಿಗೆ ಸ್ಥಾನವಿದ್ದಿತು. ಅರ್ಜುನನೊಡನೆ ನೇರವಾಗಿ ಹೋರಾಡುವ ಅವಕಾಶವೂ ಈತನಿಗೆ ಸಿಕ್ಕಿತ್ತು. ಘೋರವಾಗಿ ಕಾದಾಡಿದ ಕೊನೆಗೆ ಅರ್ಜುನನು ಇವನನ್ನು ಕೊಂದುಹಾಕಿದ. ಪ್ರೀತಿಯ ಅಣ್ಣನಾದ ಸುದಕ್ಷಿಣನ ಸಾವಿಗಾಗಿ ಮರುಗಿದ ಅವನ ವೀರ ತಮ್ಮಂದಿರು ಕೂಡ ಅರ್ಜುನನೊಂದಿಗೆ ಭಯಂಕರವಾಗಿ ಕಾದಾಡಿ ಸತ್ತರು.

ಯುದ್ಧದ ಹಸಿದ ಹೊಟ್ಟೆಗೆ ಒಂದು ದೇಶದ ಜನ ಸಾಕಾಗುವುದಿಲ್ಲವೆಂದು ಕಾಣುತ್ತದೆ. ಆದ್ದರಿಂದ ದೇಶವಿದೇಶದ ಸೇನೆಗಳಲ್ಲಿ ಕೌರವ-ಪಾಂಡವರ ಪರವಾಗಿ ಹೋರಾಡಲು ಬಂದುವು. ಆದರೆ ಗೆದ್ದವನು ಧರ್ಮರಾಯನಾದರೂ ಅವನ ಸೇನೆ ಹೇಳ ಹೆಸರಿಲ್ಲದಂತಾದುದು ದೌರ್ಭಾಗ್ಯ.

ಜರತ್ಕಾರು

ಜರತ್ಕಾರು ಒಬ್ಬ ಯಾಯಾವರ. ಅಂದರೆ ಭಿಕ್ಷಾವೃತ್ತಿಯಿಂದ ಜೀವನ ನಡೆಸುವ ಸಂಚಾರೀ ಸಾಧಕ. ಜರತ್ಕಾರು ಎಂಬ ಹೆಸರಿನ ಒಬ್ಬ ಪುರುಷ, ಮಹಿಳೆ ಇಬ್ಬರೂ ಇಲ್ಲಿ ಬರುತ್ತಾರೆ ಜರತ್ಕಾರು ಎಂದರೆ ಕೃಶವಾದ ದೇಹವುಳ್ಳವರು ಎಂದರ್ಥ.

ಜರತ್ಕಾರು ಎಂಬುವವನು ಒಬ್ಬ ಬ್ರಹ್ಮಚಾರೀ ಮದುವೆಯಾಗುವ ಇಚ್ಛೆಕೂಡ ಅವನಿಗಿರಲಿಲ್ಲ ಲೋಕ ಸಂಚಾರಿಯಾದ ಈತ ಒಮ್ಮೆ ಹಿಮಗಿರಿಯ ಪ್ರದೇಶದಲ್ಲಿ ಸಂಚಾರಿಸುತ್ತಿದ್ದಾಗ ಒಂದು ಕಂದನದಲ್ಲಿ ಹುಲ್ಲಿನ ಹಗ್ಗವನ್ನು ಜಗ್ಗಿ ಹಿಡಿದು ತಲೆಕೆಳಕಾಗಿ ನೇತಾಡುತ್ತಿದ್ದ ಪಿತೃಗಳ ದರ್ಶನವಾಯಿತು. ಆ ಹುಲ್ಲಿನ ಹಗ್ಗವನ್ನು ಕಾಲ ಮೂಷಿಕಗಳು ಕಚ್ಚುತ್ತಿವೆ. ಬಿದ್ದರೆ ಕೆಳಗೆ ಭಾರಿಯ ಪ್ರಪಾತ ಈ ಸ್ಥಿತಿಯಲ್ಲಿ ಕೂಗುತ್ತಿದ್ದವರು ತನ್ನ ಪಿತೃಗಳೇ ಎಂಬುದು ಅವರನ್ನು ವಿಚಾರಿಸಿದಾಗ ತಿಳಿಯಿತು. ಜರತ್ಕಾರುವೇ ತಮ್ಮ ವಂಶದ ಕೊನೆಯ ಕುಡಿ ಎಂಬುದನ್ನು ಅವರು ಗುರುತಿಸಿದ್ದೇ ಅಲ್ಲದೆ "ಜರತ್ಕಾರು, ನೀನು ಮದುವೆಯಾಗಿ ಮಗನನ್ನು ಪಡೆಯುವ ತನಕ ನಮಗೆ ಈ ವಿಪತ್ತಿನಿಂದ ಬಿಡುಗಡೆಯಿಲ್ಲ" ಎಂದು ಗೋಳಾಡಿದರು. ಇದು ತನ್ನ ಇಷ್ಟಕ್ಕೆ ವಿರೋಧವಾಗಿದ್ದರೂ ಜರತ್ಕಾರು ನಿರ್ವಾಹವಿಲ್ಲದೆ ಒಪ್ಪಿಕೊಂಡ.

ಆದರೆ ಮದುವೆಗೆ ಅವನು ಮೂರು ಷರತ್ತುಗಳನ್ನು ಹಾಕಿದ. (1) ಕನ್ಯೆಯ ಹೆಸರೂ ಜರತ್ಕಾರು ಎಂದೇ ಇರತಕ್ಕದ್ದು. (2) ಕನ್ಯೆಯ ಬಂಧುಗಳೇ ನನ್ನ ಬಳಿಗೆ ಬಂದು ಕನ್ಯೆಯನ್ನು ಒಪ್ಪಿಸಿಕೊಡಬೇಕು. (3) ಮದುವೆಯಾಗುವ ಕನ್ಯೆ ಎಂದೂ ತನಗೆ ಅಪ್ರಿಯವಾಗುವಂತೆ ನಡೆದುಕೊಳ್ಳಬಾರದು. ಅತ್ಯಂತ ವಿಧೇಯಳಾಗಿರಬೇಕು.

ನಾಗರಾಜನಿಗೆ ಈ ಸಂಗತಿ ತಿಳಿಯಿತು. ಆಶ್ಚರ್ಯವೆಂದರೆ ಅವನ ತಂಗಿಯ ಹೆಸರೂ ಜರತ್ಕಾರು. ಅವಳು ಜರತ್ಕಾರುವಿನ ಎಲ್ಲ ಷರತ್ತುಗಳಿಗೆ ಒಪ್ಪಿದಳು. ಮದುವೆಯೂ ಆಯಿತು. ತನ್ನ ಮಾತಿಗೆ ತಕ್ಕಂತೆ ಆಕೆ ಪತಿಯ ಇಷ್ಟಾರ್ಥಗಳನ್ನರಿತು ನಡೆದುಕೊಂಡಳು. ಕಾಲಾಂತರದಲ್ಲಿ ಆಕೆ ಗರ್ಭಿಣಿಯಾದಳು.

ಆದರೆ ಒಂದು ದಿನ ಅವಳ ಪಾಲಿಗೆ ಸಮಸ್ಯೆಯಾಗುವ ಒಂದು ಸಂಗತಿ ಜರುಗಿತು. ಒಂದು ಮಧ್ಯಾಹ್ನ ಜರತ್ಕಾರುವು ಬಂದ. ಆಯಾಸದಿಂದ ಹೆಂಡತಿಯ ತೊಡೆಯ ಮೇಲೆ ಮಲಗಿ ನಿದ್ರಿಸಿದ.ಸಂಜೆಯಾಗಿ ಹೊತ್ತು ಮುಳುಗುವ ಸಮಯ ಬಂದರೂ ಅವನು ಏಳದೆ ನಿದ್ರೆ ಮಾಡುತ್ತಿದ್ದ ಹೆಂಡತಿಗೆ ತುಂಬ ಹೆದರಿಕೆಯಾಯಿತು. ಅವನನ್ನು ಎಬ್ಬಿಸಿದರೆ ನಿದ್ರಾ ಭಂಗ ಎಂದು ಶಾಪ ಕೊಡುತ್ತಾನೆ. ಹಾಗೇ ಮಲಗಲು ಬಿಟ್ಟರೆ ಸಂಧ್ಯಾವಂದನೆಯ ಕಾರ್ಯನಿಂತು 'ಸಂಧ್ಯಾ ಲೋಪ'ವಾಗುತ್ತದೆ. ಅದರಿಂದಲೂ ಸಿಟ್ಟು ಮಾಡಿಕೊಂಡು ಶಾಪ ಕೊಡಬಹುದು. ಕೊನೆಗೆ ಅವಳು ಗಂಡನ ದಿನಚರಿಗೆ ವ್ಯತ್ಯಸವಾಗದಂತೆ ಅವನನ್ನು ಎಬ್ಬಿಸಿದಳು. ಗಂಡ ಕೆರಳಿದ ಇವಳು ಸಮಾಧಾನದಿಂದ ಗಂಡನೊಂದಿಗೆ ತರ್ಕಿಸಿದಳು. ತನ್ನ ಮಹಿಮೆ ಹೆಂಡತಿಗೆ ತಿಳಿದಿಲ್ಲವಲ್ಲ ಎಂಬ ಸಂಕಟ ಜರತ್ಕಾರುವಿಗೆ. ಏನೆಂದರೆ ತಮ್ಮಿಂದ ಅರ್ಘ್ಯವನ್ನು ಎತ್ತಿಸಿಕೊಳ್ಳದೆ ಸೂರ್ಯನು ಮುಳುಗುವುದೇ ಇಲ್ಲ ಎಂಬುದು ಆತನ ತರ್ಕ. ಕೊನೆಗೆ

ಜರತ್ಕಾರು ಹೆಂಡತಿಯನ್ನು ಬಿಟ್ಟು ಸಂಸಾರ ಜೀವನದಿಂದ ಮುಕ್ತನಾಗಿ ಕಾಡಿಗೆ ಹೋದ ಹೋಗುವ ಮುನ್ನ "ನಿನ್ನ ಗರ್ಭದಲ್ಲಿ ಹುಟ್ಟುವ ಮಗ ನಾಗಕುಲವನ್ನು ವಿಪತ್ತಿನಿಂದ ಪಾರುಮಾಡುತ್ತಾನೆ." ಎಂದು ಆಶ್ವಾಸನೆ ಕೊಟ್ಟು ಹೋದ. ತನ್ನ ತಂಗಿ ಆ ನಾಗಮಣಿಯನ್ನು ನಾಗರಾಜನು ಚೆನ್ನಾಗಿ ನೋಡಿಕೊಂಡ. ಅವಳ ಮಗನೇ ಆಸ್ತಿಕ ಮುಂದೆ ಆಸ್ತಿಕನು ಜನಮೇಜಯನ ಬಳಿಗೆ ಹೋಗಿ ಸರ್ಪಯಜ್ಞವನ್ನು ನಿಲ್ಲಿಸಿದ್ದು ಎಲ್ಲರಿಗೂ ತಿಳಿದಿರುವ ಕಥೆ.

* * * *

ಬಲರಾಮ

ಬಲರಾಮ, ಬಲದೇವ, ಸಂಕರ್ಷಣ, ಹಲಾಯುಧ ಪ್ರಾಣಿ ಈ ರೀತಿ ಹಲವಾರು ಹೆಸರುಗಳಿಂದ ಪ್ರಸಿದ್ಧನಾದವನು ಬಲರಾಮ. ಮಹಾಭಾರತದ ಎಲ್ಲ ಮುಖ್ಯ ಪರ್ವಗಳಲ್ಲೂ ಈತನನ್ನು ಕುರಿತ ವಿಚಾರಗಳಿವೆ. ಶ್ರೀಕೃಷ್ಣನ ಅಣ್ಣನಾದ ಈತ ವಸುದೇವ-ರೋಹಿಣಿಯರ ಮಗ, ಇದ್ರಸೇನನ ಮೊಮ್ಮಗ, ವಾಸ್ತವವಾಗಿ ಇವನು ಹುಟ್ಟಿದ್ದು ದೇವಕಿಯ ಗರ್ಭದಲ್ಲಿ. ಆದರೆ ಕಂಸ ಭಯದಿಂದ ಆ ಭ್ರೂಣವನ್ನು ತೆಗೆದು ತಂದು ರೋಹಿಣಿಯ ಗರ್ಭದಲ್ಲಿ ಸಂಕರ್ಷಿಸಿದ್ದರಿಂದ ಸಂಕರ್ಷಣ ಎಂಬ ಹೆಸರು ಈತನಿಗೆ ಬಂದಿತು. ಮಹಾ ಬಲಶಾಲಿಯಾಗಿದ್ದುದರಿಂದ ಬಲಭದ್ರ ಎಂಬ ಹೆಸರು ಬಂದಿದೆ. ನೇಗಿಲು ಈತನ ಆಯುಧವಾಗಿದ್ದು ಬಹುಶಃ ಭಾರತದಲ್ಲಿ ಪಶುಪಾಲನೆಯ ಯುಗ ಮುಗಿದು ಭೂಮಿಯನ್ನು ಉತ್ತು ಬೆಳೆ ತೆಗೆಯುವ ಕ್ರಮ ಆರಂಭವಾದುದನ್ನು ಇದು ಸೂಚಿಸುತ್ತದೆ ಮೌಸಲಪರ್ವದಲ್ಲಿ ಬಲರಾಮ ಕೃಷ್ಣರು ಬೆಳ್ಳಗೆ, ಕಪ್ಪಗೆ ಇದ್ದದ್ದು ಏಕೆಂಬ ಸಂಗತಿ ಚರ್ಚಿತವಾಗಿದೆ. ವಿಷ್ಣುವಿನ ಬಿಳಿಯ ಕೂದಲು ರೋಹಿಣಿಯ ಗರ್ಭದಲ್ಲಿ ಸೇರಿದ್ದರಿಂದ ಬಲರಾಮ ಬೆಳ್ಳಗೂ, ಕರಿಗೂದಲಿನಿಂದ ಕೃಷ್ಣ ಕಪ್ಪಗೂ ಆದರಂತೆ !

ಕನ್ನಡ ತೆಲುಗು ಮತ್ತು ಕೆಲವು ಜನಪ್ರಿಯ ಭಾರತಗಳು ಕೃಷ್ಣನಿಗೂ ಬಲರಾಮನಿಗೂ ಒಂದು ಬಗೆಯ ಇರುಸು ಮುರುಸು, ಪೈ ಪೋಟಿ ಇತ್ತು ಎನ್ನುತ್ತವೆ. ಅವನು ಕೌರವ ಪಕ್ಷಪಾತಿ ಎಂದು ಸ್ಪಷ್ಟವಾಗಿ ಹೇಳುತ್ತದೆ. ಆದರೆ ವ್ಯಾಸಭಾರತದಲ್ಲಿ ಈ ಭಾವನೆ ಇಲ್ಲವೇ ಇಲ್ಲ. ಬಲರಾಮನು ಸದಾ ಶ್ರೀಕೃಷ್ಣನನ್ನು ಬೆಂಬಲಿಸುತ್ತಿದ್ದವನೇ. ಅವನ ಮಾತಿಗೆ ಬೆಲೆ ಕೊಟ್ಟು ಬಲರಾಮನು ಸುಭದ್ರಾ ಹರಣ ನೋಡಿದ ಅರ್ಜುನನನ್ನು ಕ್ಷಮಿಸಿದನಲ್ಲವೆ ? ಉಳಿದ ಯಾದವರಂತೆ ಕೌರವನ ಕಡೆ ಸೇರದೆ ತೀರ್ಥಯಾತ್ರೆಯ ನೆವದಿಂದ ಮಹಾಭಾರತ ಯುದ್ಧವನ್ನು ಕೈಬಿಟ್ಟದ್ದು ಶ್ರೀಕೃಷ್ಣನ ಎದುರು ಪಕ್ಷದಲ್ಲಿ ನಿಲ್ಲಬಾರದೆಂಬ ತೀರ್ಮಾನದಿಂದ ಭಾಗವತಾದಿಗಳಲ್ಲಿ ಬಲರಾಮನು ನೈಮಿಷಾರಣ್ಯದಲ್ಲಿ ಸೋತನು ತಾನು ಬಂದಾಗ ಎದ್ದು ನಿಂತು ಗೌರವಿಸಲಿಲ್ಲವೆಂಬ ಸಿಟ್ಟಿಗೆ ಅವನನ್ನು ಕೊಂದು ಪ್ರಾಯಶ್ಚಿತ್ತಾರ್ಥವಾಗಿ ತೀರ್ಥ ಯಾತ್ರೆಗೆ ಹೋದನೆಂದು ಹೇಳಲಾಗಿದೆ ಇದು ನಂಬಲರ್ಹವಾದ ಕಾರಣವೆನ್ನಿಸುವುದಿಲ್ಲ.

ತಮ್ಮ ಶ್ರೀ ಕೃಷ್ಣನೊಂದಿಗೆ ಪ್ರಭಾಸ ಕ್ಷೇತ್ರದಲ್ಲಿ ಸಂದೀಪನಿಯ ಆಶ್ರಮದಲ್ಲಿ ವಿದ್ಯೆಕಲಿತ ಬಲರಾಮನಿಗೆ ಪಾಂಡವ-ಕೌರವರ ಬಗೆಗೆ ಸಮಾನ ಪ್ರೀತಿಯಿತ್ತು. ದ್ರೌಪದೀ ಸ್ವಯಂವರದ ಸಂದರ್ಭದಲ್ಲಿ ಸುದ್ದಿ ತಿಳಿದು ಬಲರಾಮನು ಕೃಷ್ಣನೊಂದಿಗೆ ಕುಂಬಾರರ ಮನೆಗೆ ಹೋಗಿ ಕುಂತಿಯನ್ನೂ ಪಾಂಡವರನ್ನೂ ಕಂಡುಬಂದ. ಮುಂದೆ ಭೀಷ್ಮನಿಗೆ ಗದಾಯುದ್ಧದ ಶಿಕ್ಷಣ ಕೊಟ್ಟವನೂ ಬಲರಾಮನೇ ಕೌರವನೊಂದಿಗೆ ಸಂಧಿ ಮಾಡಿಕೊಳ್ಳಿ ಎಂದು ಕೃಷ್ಣ ಧರ್ಮರಾಯಾದಿಗಳಿಗೆ ಸಲಹೆ ಕೊಟ್ಟವನೂ ಅವನೇ. ದಾಯಾದಿಗಳಲ್ಲಿ ಕಲಹವಾಗಬಾರದು ಎಂಬ ತೀರ್ಮಾನ ಅವನದು. ನಾರದನಿಂದ

ಕೌರವ ವಂಶನಾಶದ ಬಗೆಗೆ ಕೇಳಿ ಕುರುಕ್ಷೇತ್ರಕ್ಕೆ ಬಲರಾಮನು ಬಂದಾಗ ಕೌರವ-ಭೀಮರ ನಡುವೆ ಗದಾಯುದ್ಧಕ್ಕೆ ಬಲರಾಮನು ಬಂದಾಗ ಕೌರವ-ಭೀಮರ ನಡುವೆ ಗದಾಯುದ್ಧಕ್ಕೆ ಏರ್ಪಾಟಾಗಿತ್ತು. ಅವರಿಬ್ಬರನ್ನೂ ಸ್ಯಮಂತ ಪಂಚಕಕ್ಕೆ ಕರೆತಂದು ಅಲ್ಲಿ ಗದಾಯುದ್ಧಕ್ಕೆ ಏರ್ಪಾಡು ಮಾಡಿದ. ಭೀಮನದು ವಂಚನೆಯ ಹೊಡೆತ ಎಂದು ಕೆರಳಿದರೂ ಕೃಷ್ಣನ ಸಮಾಧಾನದ ಮಾತಿಗೆ ಒಪ್ಪಿದ್ದು ಅವನ ಹಿರಿಮೆ.

ದ್ವಾರಕಿಯಲ್ಲಿ ಮಿತಿಮೀರಿ ಮದ್ಯಪಾನ ಮಾಡುತ್ತಿದ್ದ ಯಾದವರನ್ನು ನಿಯಂತ್ರಿಸಲು ಮದ್ಯಪಾನ ನಿಷೇಧ ಕಾರ್ಯಕ್ರಮವನ್ನು ಜಾರಿಗೆ ತಂದ ಬಲರಾಮನ ದೂರಾಲೋಚನೆಯನ್ನು ಮೆಚ್ಚಬೇಕು. ಕೊನೆಯಲ್ಲಿ ಮೌಸಲ ಪರ್ವವು ಬಲರಾಮನು ಅವತಾರ ಪುರುಷನೆಂದು ಹೇಳುತ್ತದೆ. ಸಮಾಧಿ ಸ್ಥಿತಿಯಲ್ಲಿ ಕುಳಿತ ಬಲರಾಮನ ಬಾಯಿಯಿಂದ ಶ್ವೇತ ಸರ್ಪವು ಹೊರಬಂದ ಸಂಗತಿ ಅಲ್ಲಿ ವರ್ಣಿತವಾಗಿದೆ.

ಮಹಾಭಾರತದಲ್ಲಿ ವರ್ಣಿತವಾಗಿರುವ ಪ್ರಕಾರ ಬಲರಾಮನು ಕುಡುಕ ಸಿಡುಕ, ದರ್ಪಿಷ್ಠ. ಆದರೆ ತಂದೆ, ತಾಯಿ, ಅಜ್ಜ, ಕೃಷ್ಣ ಮೊದಲಾದವರೊಂದಿಗೆ ಅಪಾರ ಸ್ನೇಹವುಳ್ಳವನು. ಶ್ರೀಕೃಷ್ಣನ ಉಜ್ವಲ ಪ್ರಭೆಯ ಕೆಳಗೆ ನಿಂತ ಈತ ಪ್ರತಿಭೆಯಿದ್ದು ಮುಂದೆ ಬಾರದ ನತದೃಷ್ಟ ಎಂದು ಹೇಳಬಹುದು.

* * * *

ಬೃಹಸ್ಪತಿ

ಹಳೆಯ ಸಂಸ್ಕೃತ ಕಾವ್ಯ ನಾಟಕ ಇತಿಹಾಸ ಪುರಾಣಗಳಲ್ಲೆಲ್ಲ ಪ್ರಕೀರ್ತಿತವಾಗಿರುವ ಒಂದು ಪಾತ್ರ ಎಂದರೆ ಬೃಹಸ್ಪತಿಯದು. ದೇವಗುರುವಾಗಿ ಅವನು ದೇವಗಣಗಳಿಗೆ ಕೊಟ್ಟ ಮಾನಸಿಕ ಸ್ಥೈರ್ಯ ಮತ್ತು ರಾಕ್ಷಸಗುರು ಶುಕ್ರಾಚಾರ್ಯರ ವ್ಯೂಹಗಳಿಗೆ ಪ್ರತಿವ್ಯೂಹಗಳನ್ನು ಒಡ್ಡುತ್ತಿದ್ದ ಬಗೆ ಭಾರತ ರಾಮಾಯಣ ಪುರಾಣಗಳಲ್ಲಿ ವರ್ಣನೆಗೊಂಡಿದೆ. ಬರಿಯ ಮಹಾಭಾರತಕ್ಕೇ ಸೀಮಿತಗೊಳಿಸಿರುವ ಈ ಲೇಖನದಲ್ಲೂ ಬೃಹಸ್ಪತಿಯ ಪಾತ್ರದ ಹರಹು ದೊಡ್ಡದು.

ದೇವಾಚಾರ್ಯ, ದೇವದೇವ, ದೇವಗುರು, ಸುರಾಚಾರ್ಯ, ದೇವಪುರೋಹಿತ, ದೇವರ್ಷ ಎಂದೆಲ್ಲ ಪ್ರಸಿದ್ಧನಾಗಿರುವ ಬೃಹಸ್ಪತಿಯು ಬ್ರಹ್ಮನ ಮೊಮ್ಮಗ ಆಂಗಿರಸನ ಮಗ. ನವಗ್ರಹಗಳಲ್ಲಿ ಒಬ್ಬನೆಂದು ಮಾನ್ಯನಾದವನು. ದೇವರ್ಷಿ ಸಂಕುಲಪ್ರವರ, ವೇದವಿದ್ ವೇದಭಗವಾನ್ ಎಂದು ಮಹಾಭಾರತ ಅವನನ್ನು ಪ್ರಶಂಸಿಸಿದೆ.

ಆಂಗಿರಸ ಮತ್ತು ಸುವಿದಾ ಇವರ ಮಗ ಬೃಹಸ್ಪತಿ. ಸುವಿದಾಳಿಗೆ ಶುಭಾ ಎಂಬ ಹೆಸರೂ ಇತ್ತೆಂದು ವನಪರ್ವ 218ರಿಂದ ತಿಳಿದು ಬರುತ್ತದೆ. ಹಾಗೆಯೇ ಆಂಗಿರಸರನಿಗೆ ಭಾನುಮತಿ ಎಂಬ ಹೆಸರೂ ಇದ್ದಂತೆ ಕಾಣುತ್ತದೆ. ಆಂಗಿರಸನಿಗೆ ಬೃಹಸ್ಪತಿಯೇ ಅಲ್ಲದೆ ಶಮ್ಯು, ಉತಥ್ಯ, ಸಂವೃತ್ತ. ವಯಸ್ಯ, ಶಾಂತಿ, ಘೋರ ವಿರೂಪ ಸುಧನ್ವ ಎಂಬ ಮಕ್ಕಳೂ ಇದ್ದರು. ಇವರುಗಳೆಲ್ಲ ಋಷಿಗಳೆಂದು ಗೌರವ ಪಡೆದಿರುವುದು ಮೆಚ್ಚಬೇಕಾದ ಅಂಶವಾಗಿದೆ.

ಬೃಹಸ್ಪತಿಯು ಸ್ಕಂದನಿಗೆ ಜಾತಕರ್ಮ ಮಾಡಿಸಿದ ಸಂಗತಿಯನ್ನು ಉಪರಿಚರವಸುವು ಮಾಡಿದ ಯಜ್ಞದಲ್ಲಿ ಹೋತೃವಾಗಿದ್ದನೆಂಬ ಸಂಗತಿಯನ್ನು ಮಹಾಭಾರತ ಹೇಳುತ್ತದೆ. ಇವನು ದಕ್ಷ ಆಚಾರ್ಯ, ಬುದ್ಧಿಯಲ್ಲಿ ನಿಸ್ಸೀಮ, ನೀತಿಯಲ್ಲಿ ಅಗ್ರಮಾನ್ಯ, ದೇವಗಣಗಳನ್ನು ಅನೇಕ ಬಾರಿ ವಿಪತ್ತಿನಿಂದ ಪಾರುಮಾಡಿ ಅವರ ಮಧ್ಯೆ ಒಗ್ಗಟ್ಟನ್ನು ಉಂಟುಮಾಡಿದವನು. ಮಹಾಭಾರತದ ಪ್ರಮುಖ ಪಾತ್ರಗಳೆಲ್ಲ ಈತನ ಆದರ್ಶವನ್ನು ಅನುಸರಿಸಲು ಪ್ರಯತ್ನ ಮಾಡಿವೆ. ದ್ರೋಣನನ್ನು ಬೃಹಸ್ಪತಿಯ ಅಂಶಾವತಾರವೆಂದು ಹೇಳಲಾಗಿದೆ. ಬೃಹಸ್ಪತಿಯ ತಂಗಿಯು ಬ್ರಹ್ಮವಾದಿನಿಯೂ ಯೋಗಪರಾಯಣೆಯೂ ಆಗಿದ್ದಳು. ಅನಾಸಕ್ತಭಾವದಿಂದ ಅವಳು ಜಗತ್ತಿನಲ್ಲೆಲ್ಲ ಸಂಚರಿಸುತ್ತಿದ್ದಳಂತೆ. ಇವಳು ಪ್ರಭಾಸನೆಂಬ ವಸುವನ್ನು ಮದುವೆಯಾದಳು. ಇವಳ ಅಂಶದಿಂದ ದ್ರೋಣರು ಹುಟ್ಟಿದರೆಂದು ಆದಿಪರ್ವದಲ್ಲಿ ಹೇಳಲಾಗಿದೆ. ದ್ರೋಣರ ತಂದೆ ಭರದ್ವಾಜರಿಗೆ ಬೃಹಸ್ಪತಿಯು ಆಗ್ನೇಯಾಸ್ತ್ರವನ್ನು ಕೊಟಿದ್ದರೆಂದೂ ಅದು ತಂದೆಯಿಂದ ಮಗ ದ್ರೋಣರ ಕೈಗೆ ಬಂದಿತೆಂದೂ ಹೇಳಲಾಗಿದೆ. ಅಲ್ಲದೆ ನೀತಿ ಪ್ರತಿಪಾದಕರಾಗಿದ್ದ ದ್ರೋಣಾಚಾರ್ಯರನ್ನು ಮಹಾಭಾರತದಲ್ಲಿ 'ಬೃಹಸ್ಪತಿಸಮೋ ನಯೇ' ಎಂದು ಕೀರ್ತಿಸಲಾಗಿದೆ. ಮಹಾಭಾರತದ ಇನ್ನೊಬ್ಬ ಪ್ರಬುದ್ಧಚೇತನವಾದ ಭೀಷ್ಮಾಚಾರ್ಯರನ್ನು 'ಬೃಹಸ್ಪತಿ

ಸಮೋ ಬುಧ್ಯಾ' ಎಂದು ಮಹಾಭಾರತವು ಕೀರ್ತಿಸುತ್ತದೆ. ಬೃಹಸ್ಪತಿಯ ಮಗ ಕಚನೆಂಬ ಪ್ರಸಿದ್ಧ ಪುರಾಣ ಪುರುಷ. ಅಸುರಾಚಾರ್ಯರ ಬಳಿ ಶಿಷ್ಯವೃತ್ತಿಯನ್ನು ಕೈಗೊಂಡು ಶುಕ್ರಾಚಾರ್ಯರ ಮಗಳು ದೇವಯಾನಿಯನ್ನು ಮದುವೆಯಾದದ್ದು ಇತಿಹಾಸ ಪ್ರಸಿದ್ಧವಾದ ಸಂಗತಿ. ಇಷ್ಟಾದರೂ ದೇವ-ದಾನವ ಕುಲಗಳ ಸಂಬಂಧ ಒಲಿಯಲಿಲ್ಲ ಎಂಬುದು ಕಟುವಾಸ್ತವದ ಸಂಗತಿಯಾಗಿದೆ.

ಬೃಹಸ್ಪತಿಯ ಪತ್ನಿ ತಾರೆ. ಇವಳೇ ಅಲ್ಲದೆ ಬೃಹಸ್ಪತಿಯು ಚಾಂದ್ರಮಸೀ ಎಂಬ ಪತ್ನಿಯಿಂದ ಅಗ್ನಿಸ್ವರೂಪದ ಆರು ಮಕ್ಕಳಿದ್ದರು. ಶಮ್ಯು ಇವರಲ್ಲಿ ದೊಡ್ಡವನು. ಒಬ್ಬಳು ಮಗಳೂ ಇದ್ದಳೆಂದು ವನಪರ್ವದಲ್ಲಿ ಹೇಳಲಾಗಿದೆ.

* * * *

ಲೋಪಾಮುದ್ರೆ

ಪ್ರಸಿದ್ಧ ಪುರಾಣ ಮಹಿಳೆಯರಲ್ಲಿ ಒಬ್ಬಳು. ಸತ್ಯವತಿ ಎಂಬ ಹೆಸರೂ ಇವಳಿಗುಂಟು. ವಾಸ್ತವವಾಗಿ ಅಗಸ್ತ್ಯರು ಸಂತಾನ ಪಡೆಯಲು ಯೋಗ್ಯ ಕನ್ಯೆಯ ಕೈ ಹಿಡಿಯುವ ಸಲುವಾಗಿ ಇವಳನ್ನು ತಾವೇ ಸೃಷ್ಟಿಸಿದರು. ಸಕಲ ಜೀವಸಾರವನ್ನು ಸೇರಿಸಿ



ಸೃಷ್ಟಿಸಿ ಮಗುವನ್ನು ಬಹಳ ಕಾಲದಿಂದ ಮಕ್ಕಳಿಲ್ಲವೆಂದು ಪತಪಿಸುತ್ತಿದ್ದ ವಿದರ್ಭ ರಾಜದಂಪತಿಗಳಿಗೆ ಕೊಟ್ಟರು. ಮಹಾರೂಪವತಿಯಾದ ಈಕೆಯ ಕೈಹಿಡಿಯಲು

ಯಾವ ರಾಜಕುಮಾರನೂ ಬರಲಿಲ್ಲ. ಏಕೆಂದರೆ ಎಲ್ಲರಿಗೂ ಅಗಸ್ತ್ಯರ ಭಯವಿತ್ತಲ್ಲ! ಕೊನೆಗೆ ಅಗಸ್ತ್ಯರೇ ರಾಜನ ಬಳಿಗೆ ಬಂದು,

'ರಾಜನ್ ನಿವೇಶೇ ಬುದ್ಧಿರ್ಮೇ ವರ್ತತೇ ಪುತ್ರ ಕಾರಣಾತ್' ಸಂತಾನ ಲಾಭಕ್ಕಾಗಿ ಮದುವೆಯಾಗಲು ನಿಶ್ಚಯಿಸಿದ್ದೇನೆ. ನಿನ್ನ ಮಗಳನ್ನು ಕೊಟ್ಟು ಮದುವೆ ಮಾಡು ಎಂದರು. 100 ದಾಸಿಯರೊಂದಿಗೆ 100 ಸಖಿಯರೊಂದಿಗೆ ಕೋಮಲವಾಗಿ ಬೆಳೆಸಿದ್ದ ಸುಂದರಿಯನ್ನು ಅಗಸ್ತ್ಯರಿಗೆ ಕೊಡುವುದು ರಾಜರಾಣಿಯರಿಗಿಷ್ಟವಿಲ್ಲ. ಅಷ್ಟರಲ್ಲಿ ಮಗಳು ಲೋಪಾಮುದ್ರೆ ತನ್ನ ಅಂಗೀಕಾರ ಸೂಚಿಸಿದ್ದರಿಂದ 'ಮಹಾಸಿಂಧುತೀರ್ಥ' ಎಂಬಲ್ಲಿ ಮದುವೆಯಾಯಿತು. ನಾರುಮಡಿಯುಟ್ಟು ಗಂಡನ ಜೊತೆಗೆ ಗಂಗಾದ್ವಾರ (ಹರಿದ್ವಾರ)ಕ್ಕೆ ಹೊರಟ ಲೋಪಾಮುದ್ರೆ ತಾನೂ ಸನ್ಯಾಸಿನಿಯಂತೆಯೇ ಬದುಕಿ ಪತಿಸೇವೆ ಮಾಡಿದಳು.

ಮುಂದೆ ಅಗಸ್ತ್ಯರು ಇವಳೊಡನೆ ಸಮಾಗಮವನ್ನು ಬಯಸಿದರು. ಆಗ ಅವಳು ತಮ್ಮ ತಂದೆಯವರ ಅರಮನೆಯಂಥ ಮನೆಯಲ್ಲಿ ಸಕಲಾಭರಣ ಭೂಷಿತೆಯಾಗಿ ಕೂಡುವುದು ತನ್ನ ಇಚ್ಛೆ ಎಂದು ಆಸೆಯನ್ನು ವ್ಯಕ್ತಪಡಿಸಿದಳು. ತಪೋ'ಧನ' ಬಿಟ್ಟರೆ ಬೇರೆ ಧನವಿಲ್ಲದ ಅಗಸ್ತ್ಯರು ಕೊನೆಗೆ ಧನವನ್ನು ಇಲ್ವಲನೆಂಬ ರಾಕ್ಷಸ ರಾಜನಿಂದ ಪಡೆದು ವೈಭವದಿಂದ ಆಕೆಯೊಂದಿಗೆ ರಮಿಸಿದರು.

'ಅನ್ಯಥಾ ನೋಪದಿಷ್ಟೇಯಂ ಚೀರಕಾಷಾಯವಾಸಿನೀ' ಎಂದು ತಾನು ಹರಕಲು ಬಟ್ಟೆಯಲ್ಲಿ ಸಮಾಗಮ ಬಯಸುವ ಹೆಣ್ಣಲ್ಲವೆಂದು ಧೈರ್ಯವಾಗಿ ತಿಳಿಸಿ ಗಂಡನ ಮನಸ್ಸನ್ನು ತನ್ನ ಕಡೆಗೆ ತಿರುಗಿಸಿಕೊಂಡ ಕೀರ್ತಿ ಈಕೆಗೆ ಸಲ್ಲುತ್ತದೆ. ಅಲ್ಲದೆ ಪತಿ ಅಗಸ್ತ್ಯರು ಕೂಡ ಹಾರ ಆಭರಣಗಳನ್ನು ಧರಿಸಿಕೊಂಡಿರಬೇಕೆಂಬ ಆಸೆಯನ್ನು ಗಂಡನೆದುರು ವ್ಯಕ್ತಪಡಿಸಿ ಗೆದ್ದಳು. ನೂರು, ಸಾವಿರ ಮಕ್ಕಳನ್ನು ಬೇಕಾದರೂ ಅನುಗ್ರಹಿಸುತ್ತೇನೆ ಎಂದ ಗಂಡನಿಗೆ ತೇಜಸ್ವಿಯಾದ ಒಬ್ಬ ಮಗನೇ ಸಾಕು ಎಂದು ಲೋಪಾಮುದ್ರೆ ತನ್ನ ವಿವೇಚನಾ ಶಕ್ತಿಯನ್ನು ತೋರಿಸಿಕೊಂಡಿದ್ದಾಳೆ. ಅಗಸ್ತ್ಯ-ಲೋಪಾಮುದ್ರೆ ಈ ದಂಪತಿಗಳ ಮಗನೇ ದೃಢಾಸ್ಯ ಎಂಬ ಜ್ಞಾನಿ. ಏಳು ವರ್ಷ ತಾಯಿ ಗರ್ಭದಲ್ಲಿದ್ದ ಈತ ಹುಟ್ಟಿನಿಂದಲೇ ವೇದಪಾರಂಗತನಾಗಿದ್ದ. ತಂದೆತಾಯಿಗಳಿಗೆ ಅಚ್ಚುಮೆಚ್ಚಿನ ಈ ಮಗ ತಂದೆಯ ಯಜ್ಞ ಕಾರ್ಯದಲ್ಲಿ ಇಧ್ಮ (ಕಟ್ಟಿಗೆ) ಸಂಗ್ರಹ ಚತುರನಾದುದರಿಂದ 'ಇಧ್ಮವಾಹ' ಎಂಬ ಹೆಸರನ್ನೂ ಪಡೆದ.

* * * *

ಮಾಯಾಯುದ್ಧ

ರಾಮಾಯಣದಲ್ಲಿ ಮಯಾಯುದ್ಧದ ವಿವರಗಳಿವೆ. ಶ್ರೀಕೃಷ್ಣನು ಸಾಲ್ವನ ಮೇಲೆ ದಂಡೆತ್ತಿ ಹೋದಾಗಲೂ ಸೌಧ ವಿಮಾನದಿಂದಲೇ ಸಾಲ್ವನು ಶ್ರೀಕೃಷ್ಣನ ತಂದೆ ವಸುದೇವನ ಮಾಯಾಶಿರವನ್ನು ತೋರಿಸಿ ಅದನ್ನು ಕಡಿದುಹಾಕಿದ ಮಾಯಾ ಪ್ರಸಂಗವಿದೆ. ದ್ರೋಣಪರ್ವದಲ್ಲಿ ಶಕುನಿ ಕೂಡ ಈ ಬಗೆಯ ಯುದ್ಧ ಮಾಡುತ್ತಾನೆ. ಆದ್ದರಿಂದ ಮಾಯಾ ದುರೋದರ ಕ್ರೀಡಾಪಟು ಎಂದು ಪಗಡೆಯ ಜೂಜಿನ ಸಂದರ್ಭದಲ್ಲಿ ಹೆಸರು ಪಡೆದಿದ್ದ ಶಕುನಿ ತನ್ನ ಮಾಯಾತಂತ್ರವನ್ನು ಕ್ರೀಡೆಯಿಂದ ಯುದ್ಧಭೂಮಿಗೂ ವಿಸ್ತರಿಸಿರುವುದು ಸ್ಪಷ್ಟವಾಗುತ್ತದೆ.

ಸೈಂಧವ ವಧಾನಂತರ ಶಕುನಿಯ ಇಬ್ಬರು ವೀರಸೋದರರಾದ ಅಚಲ, ವೃಕ್ಷಕರು ಅರ್ಜುನನ ಮೇಲೆ ಯುದ್ಧಕ್ಕೆ ಬಂದರು. ಈ ಇಬ್ಬರೂ ಅವಳಿ ಸೋದರರೊ ಎಂಬಂತೆ ಒಂದೇ ರೂಪವಾಗಿ ಕಾಣುತ್ತಿದ್ದರು. ಅರ್ಜುನನು ವೃಷಕನ ರಥ ಅಶ್ವಧನುಸ್ಸು ಸಾರಥಿ ಧ್ವಜಗಳನ್ನು ನಾಶಪಡಿಸಿದ. ಅನಂತರ ವೃಷಕನು ಅಚಲಿನ ಜೊತೆಗೆ ರಥವೇರಿ ಯುದ್ಧಕ್ಕೆ ನಿಂತ. ಘೋರಯುದ್ಧದಲ್ಲಿ ಅರ್ಜುನನು ಅವರಿಬ್ಬರನ್ನೂ 12ನೇ ದಿನ ಸಂಹರಿಸಿದಾಗ ಶಕುನಿ ಕ್ರೋಧಗೊಂಡು ಕೃಷ್ಣಾರ್ಜುನರ ಮೇಲೆ ಮಾಯಾಯುದ್ಧಕ್ಕೆ ನಿಂತ. ಕೃಷ್ಣಾರ್ಜುನರು ಭಯದಿಂದ ತತ್ತರಿಸುವಂತೆ ಮಾಡುವುದು ಮತ್ತು ಮೂರ್ಛೆ ಹೋಗುವಂತೆ ಮಾಡುವುದು ಅವನ ಉದ್ದೇಶವಾಗಿತ್ತು.

ಮಾಯಾ ಯುದ್ಧ ಎಂದರೆ ಕಣ್ಣಿಗೆ ನಿಜವೋ ಎಂಬಂತೆ ದೃಶ್ಯ ವಸ್ತುಗಳನ್ನು ಕಾಣಿಸುವುದು ಮತ್ತು ಚೀತ್ಕಾರ ಮಾಡುವುದು. ಮಾಯಾ ಕಬ್ಬಿಣದ ತುಂಡುಗಳು, ದಂಡಗಳು, ಶತಘ್ನಿ (ಫಿರಂಗಿ)ಗಳು ಶಕ್ತಿಗದೆ ಪರಿಘ, ಖಡ್ಗ, ಕಂಪನ, ನಖರ, ಮುಸಲ, ಗಂಡುಗೊಡಲಿ, ಕ್ಷುರಪ್ರ (ಅರ್ಧಚಂದ್ರಾಕೃತಿಯ ಬಾಣ) ನಾಳೀಕ, ವತ್ಸ, ದಂತ, ಅಸ್ಥಿಸಂಧಿ, ಚಕ್ರ, ಬಾಣ, ಪ್ರಾಸ (ಈಟಿ) ಮೊದಲಾದ ಶಸ್ತ್ರ ಆಯುಧ ವಿಶೇಷಗಳನ್ನು ಅರ್ಜುನನ ಮೇಲೆ ಸುರಿಸಿದ. ಇವೆಲ್ಲ ಎಲ್ಲ ದಿಕ್ಕುಗಳಲ್ಲಿಯೂ ಬಂದು ಬೀಳುತ್ತಿದ್ದುವು.

ಬರಿಯ ಶಸ್ತ್ರಾಸ್ತ್ರಗಳನ್ನೇ ಅಲ್ಲದೆ ಶಕುನಿಯು ಕತ್ತೆ, ಒಂಟೆ, ಕೋಣ, ಸಿಂಹ, ಹುಲಿ, ಚಿರತೆ ಸ್ವಮರ (ದೊಡ್ಡ ಚಮರ ಮೃಗಗಳು) ಕರಡಿಗಳು ಗೃಧ್ರಗಳು ಕೋತಿಗಳು ಹಾವುಗಳನ್ನು ಎಸೆದಾಡಿದ. ಅಲ್ಲದೆ ನಾನಾ ಬಗೆಯ ಹಸಿದ ಮೂಕ ರಾಕ್ಷಸರನ್ನು ವಿಧವಿಧ ಹದ್ದುಗಳನ್ನು ಅರ್ಜುನನ ಮೇಲೆ ಆಕ್ರಮಣಕ್ಕೆ ಇಳಿಸಿದ. ಅವನ ಮಾಯೆಯಿಂದ ಕಗ್ಗತ್ತಲು ಬೇರೆ ಸೃಷ್ಟಿಯಾಗಿತ್ತು. ಅಲ್ಲದೆ ಆ ಪಕ್ಷಿ ಪ್ರಾಣಿ ರಾಕ್ಷಸರೆಲ್ಲ ಕೆಟ್ಟಕೆಟ್ಟ ಮಾತುಗಳಿಂದ ಅರ್ಜುನನನ್ನು ನಿಂದಿಸುತ್ತಿದ್ದರು. ಅರ್ಜುನ ಇವಕ್ಕೆಲ್ಲ

ಭಯಪಡುವವನಲ್ಲ. ತೇಜೋಮಯಾಸ್ತ್ರದಿಂದ ಕತ್ತಲನ್ನು ಹೋಗಲಾಡಿಸಿದನು. ಆಗ ಜಲಪ್ರವಾಹ ನುಗ್ಗಿತು. ಅದನ್ನು ಆದಿತ್ಯಾಸ್ತ್ರದಿಂದ ಒಣಗುವಂತೆ ಮಾಡಿದ. ಕೊನೆಗೆ ಎಲ್ಲ ಮಾಯೆಗಳೂ ನಶಿಸಿದ ನಂತರ ಅರ್ಜುನನ ಬಾಣಗಳಿಂದ ಏಟು ತಿಂದು ಶಕುನಿ ಅಲ್ಲಿಂದ ಪಲಾಯನ ಮಾಡಿದ.

* * * *

ಶುಕಮಹರ್ಷಿ

ಮಹಾಭಾರತ ಭಾಗವತ ಮತ್ತು ಪುರಾಣಗಳಲ್ಲಿ ಕೀರ್ತಿತನಾಗಿರುವ ಶುಕನದು ಅಸಾಧಾರಣ ಚೇತನ. ಬ್ರಹ್ಮಚಾರಿ ವ್ಯಾಸರು ಒಮ್ಮೆ ಶಿವನನ್ನು ಸ್ತುತಿಸಿದಾಗ ನಿನಗೆ ಒಬ್ಬ ಮಗ ಹುಟ್ಟಲಿ ಎಂದು ಶಿವನು ಆಶೀರ್ವದಿಸಿದನು. ಒಮ್ಮೆ ವ್ಯಾಸರು ಯಾಗಕ್ಕೆ ಬೆಂಕಿಗಾಗಿ ಅರಣಿಯನ್ನು ಉಜ್ಜುತ್ತಿದ್ದರು. ಆಗ ಘೃತಾಚಿ ಎಂಬ ಅಪ್ಸರೆಯನ್ನು ಕಂಡರು. ಅವಳು ಗಿಣಿಯ ರೂಪ ಧರಿಸಿದಳು. ಆ ಸಮಯದಲ್ಲಿ ಅವರ ವೀರ್ಯವು ಅರಣಿಯ ಮೇಲೆ ಬಿದ್ದು ಹುಟ್ಟಿದವನೇ ಗಿಣಿಯ ಮೂಗಿನ ಶುಕ. ಅರಣಿಯಿಂದ ಹುಟ್ಟಿದವನಾದುದರಿಂದ ಆರಣೇಯನೆಂದೂ ಅರಣೀಸುತನೆಂದೂ ಹೆಸರು. ವ್ಯಾಸಾತ್ಮಜ ದ್ವೈಪಾಯನ ಸುತ ಎಂಬ ಹೆಸರುಗಳೂ ಈತನಿಗಿವೆ. ಭಾಗವತವನ್ನು ಕಥನಿಸಿದ ಕೀರ್ತಿ ಈತನಿಗೆ ಸಲ್ಲುತ್ತದೆ. ತಂದೆಯ ಇಚ್ಛೆಯಂತೆ ಮೋಕ್ಷಧರ್ಮವನ್ನು ಅಧ್ಯಯನ ಮಾಡಿದ. ಸಕಲ ವೇದಗಳ ಜೊತೆಗೆ ಕಪಿಲ ಪ್ರಣೀತವಾದ ಸಕಲ ಯೋಗಗಳನ್ನೂ ಅಭ್ಯಾಸ ಮಾಡಿದ. ಅನಂತರ ಉನ್ನತ ವಿದ್ಯಾಭ್ಯಾಸಕ್ಕಾಗಿ ವ್ಯಾಸರು ಶುಕನನ್ನು ಜನಕ ಮಹಾರಾಜನ ಬಳಿಗೆ ಕಳಿಸಿದರು. ಜನಕನು ತನ್ನ ಅಂತಃಪುರದಲ್ಲಿ ಶುಕನನ್ನು ಇರಿಸಿ ವಿಲಾಸವತಿಯರಿಂದ ಸೇವೆ ಮಾಡಿಸಿದರೂ ಶುಕನು ವಿಚಲಿತನಾಗಲಿಲ್ಲ. ಜನಕನಿಂದ ಮುಕ್ತಿಮಾರ್ಗದ ಉಪದೇಶ ಪಡೆದ ನಂತರ ಶುಕನು ತಂದೆಯ ಬಳಿಗೆ ಬಂದ.

ಒಂದು ದಿನ ತಂದೆ ಮಕ್ಕಳಿಬ್ಬರೂ ವೇದಾಧ್ಯಯನದಲ್ಲಿದ್ದಾಗ ಶುಕನ ಕಂಠದಿಂದ ಒಂದು ಮಹಾವಾಯು ಹುಟ್ಟಿತು. ಅದರ ವೇಗಕ್ಕೆ ಮೇರುಪರ್ವತ ಕೂಡ ಕಂಪಿಸಿತು. ಏನಿದು ಎಂದು ಪ್ರಶ್ನಿಸಿದ ಶುಕನಿಗೆ ವ್ಯಾಸರು "ಇದು ಪರಾವಹ ಎಂಬ ವಾಯು. ವಿಷ್ಣುವಿನ ನಿಃಶ್ವಾಸವೇ ಈ ರೂಪದಲ್ಲಿ ಬರುತ್ತದೆ" ಎಂದು ಹೇಳಿ ಪ್ರವಹ, ಆವಹ, ಉದ್ವಹ, ಸಂವಹ ಮತ್ತು ಪರಾವಹಗಳ ಪರಿಚಯವನ್ನು ಮಾಡಿಕೊಟ್ಟರು.

ತಮ್ಮ ಯೋಗಸಾಮರ್ಥ್ಯದಿಂದ ಶುಕನಿಗೆ ಶರೀರನಾಗಿ ಭಾಸ್ಕರನ ಬಳಿಗೆ ಹೋಗುವ ಸಾಮರ್ಥ್ಯ ಬಂದಿತ್ತು. ಶಿವನಿಂದ ಛಾಯಾ ರೂಪ ಸಾಮರ್ಥ್ಯವನ್ನು ಪಡೆದ ಶುಕನು ಎಲ್ಲೆಂದರೆ ಅಲ್ಲಿಗೆ ಹೋಗಬಲ್ಲ ಸಾಮರ್ಥ್ಯವನ್ನು ಪಡೆದುಕೊಂಡ. ಎಲ್ಲೆಡೆ ಸೂಕ್ಷ್ಮರೂಪದಿಂದ ಓಡಾಡುವ ಶಕ್ತಿ ಅವನಿಗೆ ಬಂದಿತ್ತು.

ಇಷ್ಟಾದರೂ ವ್ಯಾಸರಿಗೆ ಮಗನನ್ನು ಬಿಟ್ಟಿರಲು ಸಾಧ್ಯವಾಗುತ್ತಿರಲಿಲ್ಲ. ಅವರು ಶಿವನನ್ನು ಕುರಿತು ತಪಸ್ಸು ಮಾಡಿ ಜಲಪವನಾಂಬರ ವಸುಧಾನಲ ಸಮವೀರ್ಯನಾದ ಈ ಪುತ್ರನನ್ನು ಶಿವಕರುಣೆಯಿಂದ ಪಡೆದಿದ್ದರು.

ಶುಕನೇನೋ ತಂದೆಯ ಬಯಕೆಯಂತೆ ವೇದವೇದಾಂಗ ಪಾರಂಗತನೂ ಮಹಾಜ್ಞಾನಿಯೂ ಆಗಿ ಬೆಳೆದ. ಭಾಗವತದಂಥ ಅಭಿಜಾತ ಕಾವ್ಯವನ್ನೂ ರಚಿಸಿದ. ತಂದೆ ಬರೆದ ಮಹಾಭಾರತದ 1 ಲಕ್ಷ 40 ಸಾವಿರ ಶ್ಲೋಕಗಳನ್ನು ಗಂಧರ್ವರಿಗೂ ಯಕ್ಷರಿಗೂ ಹೇಳಿ ವ್ಯಾಖ್ಯಾನಿಸಿದ. ಮಹಾಯೋಗ ಗಮನವನ್ನು ಕೈಕೊಂಡು ಸರ್ವಾಂತರ್ಯಾಮಿತ್ವದ ಶಕ್ತಿಯನ್ನು ಪಡೆದ. ಆದರೆ ಅವನಿಗೆ ಲೌಕಿಕ ಆಸಕ್ತಿಗಳೇ

ಇರಲಿಲ್ಲವಾದುದರಿಂದ ತಂದೆಯನ್ನು ಬಿಟ್ಟು ಸಾಧನೆಯ ಮಾರ್ಗದಲ್ಲಿ ಮುಂದುವರಿದ. ಪ್ರಕೃತಿಯಲ್ಲಿ ಲೀನನಾದ. ಶುಕನು ಬೆಟ್ಟಕಾಡು ಹೊಳೆಗಳನ್ನು ನೋಡಿ ಸಂತೋಷದಿಂದ 'ಭೋ' ಎಂದು ಒಮ್ಮೆ ಕೂಗಿದನಂತೆ. ಪ್ರಕೃತಿಯ ಆ ಅಂಶಗಳೆಲ್ಲ ಇಂದಿಗೂ ಶುಕನ ಆ ಧ್ವನಿಯನ್ನು ಅನುಕರಿಸಿ ಕೂಗುತ್ತಿವೆಯೆಂದು ಮಹಾಭಾರತ ಹೇಳುತ್ತದೆ. ಶಾಂತಿಪರ್ವದ 131ನೆಯ ಅಧ್ಯಾಯದಲ್ಲಿ ಶುಕನ ಸಂಗತಿ ವಿಸ್ತಾರವಾಗಿ ವರ್ಣಿತವಾಗಿದೆ. ಚಿಕ್ಕ ವಯಸ್ಸಿನ ಸಾಧಕಪುತ್ರನನ್ನು ಅಗಲಿ ಆ ಹಿರಿಯ ಜೀವ ಎಷ್ಟು ಶೋಕಿಸಿತೆಂಬ ಸಂಗತಿಯೂ ಭಾರತ, ಪುರಾಣಗಳಲ್ಲಿ ಪ್ರಸ್ತಾವಿತವಾಗಿದೆ.

* * * *

ಕುಂತೀಭೋಜ

ಕುಂತೀಭೋಜ ಒಬ್ಬ ಪ್ರಸಿದ್ಧ ವೊಜವ ದೊರೆ. ಕುಂತಿ-ಭೋಜರಾಜ್ಯಗಳ ಒಡೆಯನೆಂದು ಹೇಳಲಾಗಿದೆ. ಕುಂತೀಭೋಜನಿಗೆ ಪುರುಜಿತ್ ಎಂಬ ತಮ್ಮನೂ ಇದ್ದ. ಯಾದವ ವೀರನಾದ ಶೂರಸೇನನ ತಂಗಿಯ ಮಕ್ಕಳಾದ ಇವರಿಬ್ಬರೂ ಶೂರಸೇನ ವಂಶದವರೊಂದಿಗೆ ಒಳ್ಳೆಯ ಸಂಪರ್ಕವಿರಿಸಿಕೊಂಡಿದ್ದರು.

ಶೂರಸೇನನ ಮಗನಾದ ವಸುದೇವನೂ ಕುಂತೀಭೋಜನೂ ಆಪ್ತ ಸ್ನೇಹಿತರು. ಮಕ್ಕಳಿಲ್ಲವೆಂದು ಕೊರಗುತ್ತಿದ್ದ ಕುಂತಿಭೋಜನಿಗೆ ಶೂರಸೇನನು ತನ್ನ ವೊದಲ ಸಂತಾನವನ್ನು ದತ್ತಕ ಕೊಡುವುದಾಗಿ ಮಾತುಕೊಟ್ಟಿದ್ದನು. ಅದರಂತೆ ಮಗಳಾಗಿ ಹುಟ್ಟಿದ ಪೃಥೆಯನ್ನು ಕುಂತೀಭೋಜನು ದತ್ತು ಮಗಳಾಗಿ ಸ್ವೀಕರಿಸಿ ಅವಳಿಗೆ ಕುಂತಿ ಎಂದು ಹೆಸರಿಸಿದನು. ಕುಂತಿಯು ಬಾಲಕಿಯಾಗಿ ಬೆಳೆದಾಗ ಅವಳ ದೈವಭಕ್ತಿ ಮತ್ತು ಅತಿಥಿ ಸತ್ಕಾರಾಸಕ್ತಿಗಳನ್ನು ಕಂಡು ಮೆಚ್ಚಿಕೊಂಡ ಕುಂತೀ ಭೋಜನು ಅರಮನೆಯ ಅಂತಃ ಪುರದ ಎಲ್ಲ ಪೂಜಾ ವಿಧಿಯ ಜವಾಬ್ದಾರಿಯನ್ನು ಅರಮನೆಗೆ ಬರುವ ಅತಿಥಿ ಅಭ್ಯಾಸದ ಸೇವೆಯ ಜವಾಬ್ದಾರಿಯನ್ನು ಮಗಳಾದ ಕುಂತಿಗೇ ಸಂಪೂರ್ಣವಾಗಿ ವಹಿಸಿದನು. ಅವಳು ತನ್ನ ಜವಾಬ್ದಾರಿಯನ್ನು ಸಮರ್ಪಕವಾಗಿ ಮುಗಿಸಿದ್ದಕ್ಕೆ ದರ್ವಾಸನಂಥ ಉಗ್ರನಾದ ಮುನಿಯನ್ನು ಅರಮನೆಯಲ್ಲಿರಿಸಿಕೊಂಡು ಯಶಸ್ವಿಯಾಗಿ ಉಪಚಾರಮಾಡಿ ಪ್ರಸನ್ನಗೊಳಿಸಿದ್ದೇ ಸಾಕ್ಷಿಯಾಗಿದೆ. ಮುಂದೆ ಕುಂತೀಭೋಜನು ಕುರುವಂಶದ ಪಾಂಡುವಿಗೆ ತನ್ನ ಮಗಳನ್ನು ವೈಭವದಿಂದ ಮದುವೆ ಮಾಡಿಕೊಟ್ಟನು.

ಪಾಂಡುವಿನ ಮೇಲೆ ಕುಂತಿಯ ಮೇಲೆ ಅವನಿಗಿದ್ದ ಅಭಿಮನ ಅವರ ಮಕ್ಕಳಾದ ಪಾಂಡವರ ವಿಚಾರದಲ್ಲಿಯೂ ಮುಂದುವರಿಯಿತು.

ಕುಂತಿಯನ್ನು ದತ್ತು ತೆಗೆದುಕೊಂಡಾಗ ಕುಂತಿ ಭೋಜನಿಗೆ ಮಕ್ಕಳಿರಲಿಲ್ಲ ಎಂಬುದು ನಿಜವಾದರೂ ಅನಂತರ ಅವನಿಗೆ ಅನೇಕ ಪುತ್ರರು ಉದಯಿಸಿದರು. ವೊದಲು ಮಗನಿಗೆ ಅಪ್ಪನ ಹೆಸರೇ ಇದ್ದಿತೆಂದೂ ಹೇಳಲಾಗಿದೆ.

ಮಹಾಭಾರತ ಯುದ್ಧದಲ್ಲಿ ಕುಂತಿಭೋಜ ಪುರುಜಿತ ಇಬ್ಬರೂ ಪಾಂಡವರ ಕಡೆ ನಿಂತು ಹೋರಾಡಿದರು. ಯುದ್ಧದ ವೊದಲ ದಿನವೇ ಶತ್ರುಪಕ್ಷದ ವಿಂದ ಅನುವಿಂದರೊಡನೆ ಹೋರಾಡಿದ ಸಂಗತಿ ಉಲ್ಲೇಖಿತವಾಗಿದೆ ಧೃಷ್ಟದ್ಯುಮ್ನನು ರಚಿಸಿದ ಕ್ರೌಂಚವ್ಯೂಹದಲ್ಲಿ ಕುಂತೀಭೋಜನು ನೇತ್ರಸ್ಥಾನದಲ್ಲಿ ನಿಂತು ಹೋರಾಡಿದನೆಂದು ಭೀಷ್ಮಪರ್ವದಲ್ಲಿ ಹೇಳಲಾಗಿದೆ. ಅಲ್ಲದೆ ಮಕರವ್ಯೂಹದಲ್ಲಿ ಕುಂತೀಭೋಜ ಮತ್ತು ಶತಾನೀಕರು ಪಾದಸ್ಥಾನದಲ್ಲಿ ನಿಂತು ಕಾರ್ಯನಿರ್ವಹಿಸಿದರು. ಆಲಂಬುಷನೊಂದಿಗೆ ಕುಂತೀಭೋಜನು ಉಗ್ರವಾಗಿ ಕಾದಾಡಿದ ಸಂಗತಿಯೂ ಉಕ್ತವಾಗಿದೆ. ಮಹಾಭಾರತದ ದ್ರೋಣ ಪರ್ವದಲ್ಲಿ ಕುಂತೀಭೋಜನ ಕುದುರೆಗಳ ಸೊಗಸಾದ ವರ್ಣನೆ ಬರುತ್ತದೆ. ಇವನ ಹತ್ತು ಮಕ್ಕಳೂ ಅಶ್ವತ್ಥಾಮನೊಂದಿಗೆ ಹೋರಾಡಿ ಸತ್ತರೆಂಬ ಸಂಗತಿ ಕರ್ಣಪರ್ವದಲ್ಲಿ ವರ್ಣಿತವಾಗಿದೆ. ಕೊನೆಗೆ


ದ್ರೋಣರೊಂದಿಗೆ ಹೋರಾಡಿ ಪುರುಜಿತ್ ಮತ್ತು ಕುಂತೀಭೋಜರು ಸಾವನ್ನಪ್ಪಿದರು.

ಕುಂತಿ ಎಂಬುದು ಒಂದು ರಾಜ್ಯದ ಹೆಸರು ಭೋಜ ಎಂಬುದು ಇನ್ನೊಂದು ರಾಜ್ಯದ ಹೆಸರು. ದ್ರುಹ್ಯೋಸ್ಸುತಾಸ್ತು ವೈ ಭೋಜ: ಎಂಬ ಮಾತು ಇದಕ್ಕೆ ಸಾಕ್ಷಿ. ಆದರೆ ಕುಂತೀ ಭೋಜನು ಈ ಭೋಜರಾಜ್ಯಕ್ಕೆ ಒಡೆಯನಾಗಿದ್ದ ವಿಷಯದಲ್ಲಿ ವಿದ್ವಾಂಸ ಸೂರೆನ್ ಸೆನ್ ಅನುಮಾನ ವ್ಯಕ್ತಪಡಿಸಿದ್ದಾರೆ. ಇವನ ಹೆಸರು 'ಕುಂತೀರಾಜ' ಎಂದಿರಬಹುದೆ ? ಏಕೆಂದರೆ ಇವನ ತಮ್ಮ ಪುರುಜಿತ್‌ಗೆ 'ಕುಂತೀವರ್ಧನ' ಎಂಬ ಹೆಸರೂ ಇದೆಯಲ್ಲ.

* * * *

ಹಿರಣ್ಯಕಶಿಪು

ಒಬ್ಬ ಪುರಾಣೋಕ್ತ ರಾಕ್ಷಸ. ಮಹಾಭಾರತದ ಆದಿಪರ್ವ ದ್ರೋಣವಧ ಪರ್ವ, ನಾರಾಯಣಾಸ್ತ್ರ ಮೋಕ್ಷ ಪರ್ವ ಅನುಶಾಸನಿಕ ಪರ್ವಗಳಲ್ಲಿ ಇವನ ಕಥನವಿದೆ.



ಕಶ್ಯಪ ಮತ್ತು ದಿತಿ ಇವರಿಗೆ ಹುಟ್ಟಿದ ಮಕ್ಕಳನ್ನು ದೈತ್ಯರು ಎನ್ನುತ್ತಾರೆ. ಹಿರಣ್ಯಾಕ್ಷ, ಹಿರಣ್ಯಕಶಿಪು ಮತ್ತು ವಜ್ರಾಂಗ ಎಂಬ ಮೂವರು ಗಂಡು ಮಕ್ಕಳನ್ನು

ಸಿಂಹಿಕ ಎಂಬ ಮಗಳನ್ನು ದಿತಿ ಹೆತ್ತಳು. ಹಿರಣ್ಯಾಕ್ಷನನ್ನು ವಿಷ್ಣುವು ವರಾಹ ರೂಪದಲ್ಲಿ ಅವತರಿಸಿ ಕೊಂದ ಕಥೆ ಪ್ರಸಿದ್ಧವಾಗಿದೆ. ಅಂದಿನಿಂದ ಹಿರಣ್ಯಕಶಿಪು ವಿಷ್ಣುದ್ವೇಷಿಯಾದ. ಬ್ರಹ್ಮನನ್ನು ಕುರಿತು ತಪಸ್ಸು ಮಾಡಿ ತನಗೆ ಹಗಲು-ರಾತ್ರಿಗಳಲ್ಲಿ ಸಾವು ಬರಬಾರದು, ಮನೆಯ ಒಳಗೆ ಹೊರಗೆ ಸಾವು ಬರಬಾರದು, ಯಾವ ಆಯುಧದಿಂದಲೂ ಸಾವು ಘಟಿಸಬಾರದು ಎಂದೆಲ್ಲ ವರವನ್ನು ಪಡೆದಿದ್ದ.

ಬ್ರಹ್ಮಾಂಡ ಮತ್ತು ವಾಯು ಪುರಾಣಗಳಲ್ಲಿ 'ಹಿರಣ್ಯಕಶಿಪು' ಎಂಬ ಹೆಸರು ಇವನಿಗೆ ಬಂದ ಬಗೆಗೆ ವಿವರಣೆಯಿದೆ. ಕಶ್ಯಪನು ಅಶ್ವಮೇಧಯಾಗವನ್ನು ಮಾಡುತ್ತಿದ್ದಾಗ ಭಾಗವಹಿಸಲು ಬರುವ ಮಹರ್ಷಿಗಳಿಗೆಂದು ಒಂದು 'ಹಿರಣ್ಯ ಆಸನ' ಇರಿಸಿದ್ದ. ಗರ್ಭಿಣಿಯಾಗಿದ್ದ ದಿತಿ ಆ ಹಿರಣ್ಯಾಸನದ ಮೇಲೆ ಕುಳಿತು ಅಲ್ಲೇ ಮಗುವನ್ನು ಹೆತ್ತುದರಿಂದ ಮಗುವಿಗೆ ಹಿರಣ್ಯಕಶಿಪು ಎಂಬ ಹೆಸರು ಬಂದಿತಂತೆ. ಇವನು ಹಿಂದೆ ನಿಶುಂಭ ಎಂಬ ರಾಕ್ಷಸನಾಗಿದ್ದನೆಂದೂ ಹೇಳಲಾಗಿದೆ.

'ಸರ್ವಾಮರೈಶ್ವರ್ಯ' ಎನ್ನಿಸಿಕೊಂಡ ಹಿರಣ್ಯಕಶಿಪು ತಪಸ್ಸಿನಿಂದ ಶಕ್ತಿಪಡೆದ ಮೇಲೆ ಒಂದು ಶೂಲವನ್ನು ಹಿಡಿದು ವಿಷ್ಣುವನ್ನು ಅಟ್ಟಿಸಿಕೊಂಡು ವೈಕುಂಠಕ್ಕೆ ಬಂದ. ಇವನನ್ನು ಗೆಲ್ಲಲಾರದೆ ವಿಷ್ಣುವು ಕೊನೆಗೆ ಸೂಕ್ಷ್ಮರೂಪದಲ್ಲಿ ಇವನ ಮೂಗಿನ ರಂಧ್ರವನ್ನು ಪ್ರವೇಶಿಸಿ ಹಿರಣ್ಯಕಶಿಪುವಿನ ಹೃದಯದಲ್ಲಿ ಅವಿತುಕೊಂಡ. ಇದು ತಿಳಿಯದೆ ಹಿರಣ್ಯಕಶಿಪು ವಿಷ್ಣು ತಪ್ಪಿಸಿಕೊಂಡನೆಂದು ಭಾವಿಸಿ ಭೂಮಿ ಆಕಾಶ ಪಾತಾಳಗಳಲ್ಲೆಲ್ಲ ಹುಡುಕಿದ. ಕೊನೆಗೆ ವಿಷ್ಣು ಸತ್ತನೆಂದು ತಿಳಿದು ಸುಮ್ಮನಾದ. ಆದರೆ ಅವನ ವಿಷ್ಣುದ್ವೇಷ ಮಾತ್ರ ನಿಲ್ಲಲಿಲ್ಲ. ತನ್ನ ಸಾಮ್ರಾಜ್ಯದಲ್ಲಿ ಯಾರೂ ವಿಷ್ಣುವಿನ ಹೆಸರನ್ನು ಎತ್ತಬಾರದೆಂದೂ, ದೇವಾಲಯಗಳಲ್ಲಿ 'ಹಿರಣ್ಯಾಯ ನಮಃ' ಎಂಬ ಹೊಸ ಮಂತ್ರವನ್ನು ಹೇಳಬೇಕೆಂದು ಆಜ್ಞೆ ಮಾಡಿದ. ಆದರೆ ಲೋಕವೆಲ್ಲ ಇವನ ಆಜ್ಞೆಗೆ ತಲೆ ಬಾಗಿದಾಗ ಮನೆಯಲ್ಲಿಯೇ ವಿರೋಧ ಬಂದದ್ದು ಒಂದು ಆಶ್ಚರ್ಯದ ಘಟನೆ.

ಹಿರಣ್ಯಕಶಿಪುವಿನ ಪತ್ನಿ ಜಂಭರಾಕ್ಷಸ ಪುತ್ರಿಯಾದ ಕಯಾದು. (ಕೆಲವೆಡೆ ಲೀಲಾವತಿ ಎಂದೂ ಹೇಳಲಾಗಿದೆ.) ಈ ದಂಪತಿಗಳಿಗೆ ಪ್ರಹ್ಲಾದ, ಅನುಹ್ಲಾದ, ಶಿಬಿ, ಭಾಷ್ಕಲ ಎಂಬ ನಾಲ್ವರು ಗಂಡು ಮಕ್ಕಳೂ, ಹರಿಣಿ ಎಂಬ ಮಗಳೂ ಇದ್ದರು. ಪ್ರಹ್ಲಾದನು ಮಹಾವಿಷ್ಣುಭಕ್ತನಾಗಿದ್ದು ತಂದೆಯ ಎಲ್ಲ ಉಪಟಳಗಳನ್ನೂ ಸಹಿಸಿಕೊಂಡ. ಕೊನೆಗೆ ಕಂಭವನ್ನೊಡೆದು ನೃಸಿಂಹ ರೂಪದಲ್ಲಿ ಬಂದ ವಿಷ್ಣು ಹೊಸ್ತಿಲ ಭಾಗದಲ್ಲಿ ಉಗುರುಗಳನ್ನೇ ಆಯುಧ ಮಾಡಿಕೊಂಡು ಹಿರಣ್ಯಕಶಿಪುವನ್ನು ಕೊಂದುಹಾಕಿದ.

* * * *

ಶಾಲ್ಮಲೀ ಮರದ ಬಡಾಯಿ

ಪ್ರಾಣಿ ಪಕ್ಷಿ ವೃಕ್ಷ ಮಾನವರಲ್ಲಿ ಯಾರಿಗೇ ಆಗಲಿ ತನ್ನ ಬಗೆಗೆ ಅಭಿಮಾನ ಇರುವುದು ತಪ್ಪಲ್ಲ. ಆದರೆ ತನ್ನ ಮಿತಿಯನ್ನೇ ತಿಳಿಯದೆ ತಾನೇ ಎಲ್ಲರಿಗಿಂತ ಶ್ರೇಷ್ಠ, ಬಲಶಾಲಿ ಎಂದು ಕೊಚ್ಚಿ ಕೊಳ್ಳುವ ಬೇಜವಾಬ್ದಾರಿ ಇರಬಾರದು. ಭೀಷ್ಮರು ಧರ್ಮರಾಯನಿಗೆ ಶಾಲ್ಮಲೀ-ವಾಯು ಪ್ರಕರಣದ ಕಥಾ ವಿವರಣೆಯ ನೆಪದಲ್ಲಿ ಈ ಎಚ್ಚರಿಕೆಯನ್ನು ನೀಡಿದ್ದಾರೆ.

ಹಿಮಾಲಯ ಪ್ರದೇಶದಲ್ಲಿ ಒಂದು ಭಾರಿಯ ಶಾಲ್ಮಲೀ ವೃಕ್ಷವಿತ್ತು. ಒಂದು ಸಲ ಬಿರುಗಾಳಿ ಬೀಸಿದಾಗ ಅಕ್ಕಪಕ್ಕದ ಮರಗಳೆಲ್ಲ ಉರುಳಿ ಹೋದರೂ ಈ ಮರಕ್ಕೆ ಏನೂ ಆಗಿರಲಿಲ್ಲ. ಅದನ್ನು ನೋಡಿದ ನಾರದನಿಗೆ ತುಂಬ ಸಂತೋಷ. ಮೆಚ್ಚುತ್ತ ಆ ಮರವನ್ನು ಕೇಳಿದ.

"ಎಲೈ ಬೂರುಗವೇ, ಎಲ್ಲ ಮರಗಳನ್ನು ಉರುಳಿಸಿದ್ದರೂ ವಾಯುದೇವನು ನಿನ್ನ ತಂಟೆಬಂದಿಲ್ಲವಲ್ಲ. ಆದ್ದರಿಂದ ನಿನಗೂ ವಾಯುದೇವನಿಗೂ ತುಂಬ ಸ್ನೇಹವಿರಬೇಕು ಅಲ್ಲವೆ ?"

ಶಾಲ್ಮಲಿಗೆ ಹಿಗ್ಗು.

"ಹಾಗೇನಿಲ್ಲ ವಾಯುವಿಗೂ ನನಗೂ ಅಂಥ ಪರಿಚಯವೂ ಇಲ್ಲ ಸ್ನೇಹವೂ ಇಲ್ಲ. ಆದರೆ ನಿಜಹೇಳಬೇಕೆಂದರೆ ನಾನು ತುಂಬ ದೃಢ, ಬಲಶಾಲಿ ಗಟ್ಟಿಗಡುಸಾದವನು. ಆದುದರಿಂದ ಗಾಳಿ ನನ್ನನ್ನು ಏನೂ ಮಾಡಲಾರದು."

"ಹಾಗೆ ಹೇಳಬೇಡ ವೃಕ್ಷವೆ ವಾಯು ಇಂದ್ರನಿಗಿಂತಲೂ ಬಲಶಾಲಿಯಾದವನು ದಾಳಿ ಮಾಡುವಾಗ ಅವನು ತುಂಬ ಅಪಾಯಕಾರಿ"

ಆದರೂ ಮರ ಆ ಮಾತಿಗೆ ಒಪ್ಪಲಿಲ್ಲ. ಆಗ ನಾರದ ವಾಯುವಿನ ಬಳಿಗೇ ಹೋಗಿ ನಿಜಸಂಗತಿ ಏನೆಂದು ಕೇಳಿದಾಗ ವಾಯು ಹೇಳಿದ.

"ಆ ಮರವನ್ನು ನಾನು ಬಲ್ಲೆ ನಾರದ ಅದಕ್ಕೆ ನಿಜವಾಗಿ ನೀನು ಹೇಳುವಂಥ ಶಕ್ತಿ ಇಲ್ಲ. ನಾನು ಆ ಮರವನ್ನು ಏಕೆ ಉಳಿಸಿದೆ ಗೊತ್ತೆ ?"

"ಏಕೆ ?"

ಇದು ತುಂಬ ಹಳೆಯಮರ. ಬ್ರಹ್ಮನು ಒಮ್ಮೆ ಸೃಷ್ಟಿಯ ಸಂದರ್ಭದಲ್ಲಿ ಬೇಸರವಾದಾಗ ಈ ಮರದ ಬುಡದಲ್ಲಿ ಮಲಗಿ ವಿಶ್ರಮಿಸಿಕೊಂಡಿದ್ದ. ಅ ಕಾರಣಕ್ಕೆ ನಾನು ಕೃತಜ್ಞತಾ ಭಾವದಿಂದ ಆ ಮರದ ತಂಟೆಗೆ ಹೋಗಿಲ್ಲವೇ ಹೊರತು ಅದರ ಶಕ್ತಿಯನ್ನು ಕಂಡು ಅಲ್ಲ..."

"ಮತ್ತೆ ಈಗ ಅದು ತಾನೇ ಪರಾಕ್ರಮಶಾಲಿ ಎಂದು ಘೋಷಿಸುತ್ತಿದೆಯಲ್ಲ. ಶಕ್ತಿ ಪರೀಕ್ಷೆಗೂ ಸಿದ್ಧವಿದೆಯಂತೆ... ?"

"ಶಕ್ತಿ ಪ್ರದರ್ಶನವೇ ? ಆಯ್ತು ನಾಳೆ ಅದೂ ಆಗಲಿ..." ಈ ಸುದ್ದಿ ಶಾಲ್ಮಲೀ ವೃಕ್ಷಕ್ಕೆ ಗೊತ್ತಾಯಿತು. ಅದಕ್ಕೆ ತುಂಬ ಭಯ. ತನ್ನ ಮಿತಿಯೂ ಅದಕ್ಕೆ ತಿಳಿದಿತ್ತಲ್ಲ.

ಹಾಗೆಲ್ಲ ಸವಾಲು ಹಾಕಬಾರದಿತ್ತು ಎಂಬ ಯೋಚನೆ ಅದನ್ನು ಕಾಡಿತು. ಪಶ್ಚಾತ್ತಾಪ ಭಾವದಿಂದ ತನ್ನ ಎಲ್ಲ ಎಲೆ-ಕೊಂಬೆಗಳನ್ನು ಕತ್ತರಿಸಿಕೊಂಡು ಬೋಳು ಮರವಾಗಿ ನಿಂತು ಕೊಂಡಿತು.

ಶಕ್ತಿ ಪ್ರದರ್ಶನಕ್ಕೆ ಬಂದ ವಾಯುರಾಜ ನೋಡುತ್ತಾನೆ. ಮರದ ದೀನ ಸ್ಥಿತಿ ಶರಣಾಗತ ಸ್ಥಿತಿ ಅದಕ್ಕೆ ಅರ್ಥವಾಯಿತು. ಬೇರೇನೂ ಮಾಡಲು ತೋಚದೆ ನಗುತ್ತ ಹಿಂದಕ್ಕೆ ಹೋಯಿತು.

ಅದಕ್ಕೇ ಕೈಲಾಸಂ ಹೇಳಿದ್ದು:

“ಎಳೇ ನಾಗರ ಎಷ್ಟೆತ್ತರ ಎಗರ್ಲಾಡಿದ್ರೂವೆ ವಾಸುಕಿ ಹತ್ರ ಬಿಚ್ಚಾರ್ದು ಬಾಲಾನ...!!

* * * *

ಸಂತಾನ ಎಷ್ಟು ಬಗೆ

ಔರಸ ಪುತ್ರ ಎಂಬ ಮಾತು ಕೇಳಿದ್ದೇವೆ. ವಿಧಿ ವಿಹಿತವಾಗಿ ದಂಪತಿಗಳಿಗೆ ಹುಟ್ಟಿದ ಮಗ ಔರಸಪುತ್ರ. ಇದನ್ನು ಬಿಟ್ಟರೆ ದಂಪತಿಗಳಿಗೆ ಬೇರೆ ಬೇರೆ ರೀತಿಯ ಮಕ್ಕಳ ಬಗೆಗೆ ಮಹಾಭಾರತ ವಿವರವಾಗಿ ಹೇಳುತ್ತದೆ. "ಸಂತಾನಾರ್ಥಂ ನಕಾಮತ:" ಎಂದು ಶಾಸ್ತ್ರ ಈ ಬಗೆಯನ್ನು ಒಪ್ಪಿದೆ ಗೌತಮ ಧರ್ಮಸೂತ್ರ ಮತ್ತು ಬೋಧಾಯನ ಸೂತ್ರಗಳು ವಿಶೇಷ ಸಂದರ್ಭಗಳಲ್ಲಿ ನಿಯೋಗ ಪದ್ಧತಿಯಿಂದ ಮಕ್ಕಳನ್ನು ಪಡೆಯಬಹುದೆಂದು ಹೇಳಿವೆ. ಆಪಸ್ತಂಬ ಧರ್ಮಸೂತ್ರ ಮಾತ್ರ ಈ ಪದ್ಧತಿಯನ್ನು ಒಪ್ಪುವುದಿಲ್ಲ. ಮಹಾಭಾರತದಲ್ಲಿ ಎಷ್ಟು ಬಗೆಯ ಮಕ್ಕಳ ಪಟ್ಟಿ ಇದೆ ಎಂಬುದನ್ನು ನೋಡೋಣ.

ಔರಸ ಪುತ್ರನೇ ಅಲ್ಲದೆ ಕೆಳಗಿನ ಬಗೆಯ ಮಕ್ಕಳ

ಅಪವಿದ್ಧ, ಕ್ರೀತ, ಕಾನೀನ, ಕ್ಷೇತ್ರಜ್ಞ, ಕೃತಿಮ, ಜ್ಞಾತಿ ಗೂಢಜ, ಜಾರಜ ಪರಿಕ್ರೀತ, ಪೌನರ್ಭವ, ದತ್ತ, ಸಹೋಢ, ಸ್ವಯಂದತ್ತ, ಔರಸ ಪುತ್ರನಿಗೆ 'ಸ್ವಯಂಜಾತ' ಎಂದೂ ಹೇಳುತ್ತಾರೆ.

ಅಪವಿದ್ಧ: ತಾಯಿ ತಂದೆ ತಿರಸ್ಕರಿಸಿರುವ ಮಗುವನ್ನು ತಂದು ಸಾಕಿಕೊಂಡರೆ ಅಂಥ ಮಗ ಅಪವಿದ್ಧ

ಪರಿಕ್ರೀತ: ಹಣವನ್ನು ನೀಡಿ ಗಂಡಸೊಬ್ಬನನ್ನು ಮನೆಗೆ ಕರೆತಂದು ಮಗುವನ್ನು ಪಡೆಯುವ ಕ್ರಮ.

ಕಾನೀನ: ಮದುವೆಯಾಗುವುದಕ್ಕೆ ಮೊದಲೇ ಕನ್ಯೆಯೊಬ್ಬಳು ಪುರುಷ ಸುಸರ್ಗದಿಂದ ಮಗನನ್ನು ಪಡೆದಿದ್ದರೆ. ಉದಾ:ಕರ್ಣ.

ಕ್ಷೇತ್ರಜ್ಞ: ಗಂಡನಿಂದ ಮಕ್ಕಳಾಗದಿದ್ದಾಗ ಗಂಡನ ಸಲಹೆಯಂತೆ ಪತ್ನಿಯು ಯೋಗ್ಯರನ್ನು ಆಶ್ರಯಿಸಿ ಪಡೆಯುವ ಮಗು 'ಪ್ರಣೀತ' ಎಂದೂ ಸೇಳುತ್ತಾರೆ.

ಕ್ರೀತ: ಕೊಂಡ ತಂದ ಮಗು.

ಜ್ಞಾತಿ: ಹತ್ತಿರದ ಬಂಧುವಿನ ಮೂಲಕ ಪತ್ನಿ ಮಗುವನ್ನು ಪಡೆಯುವಿಕೆ

ಕೃತ್ರಿಮ: ಬೆಳೆದ ಹುಡುಗನ್ನು ಅವನ ತಂದೆ ತಾಯಿಗಳ ಅನುಮತಿ ಪಡೆಯದೆ ದತ್ತಕ ತೆಗೆದುಕೊಳ್ಳುವಿಕೆ.

ಗೂಢಜ: ಪರಭಾರ್ಯೆಯಿಂದ ಹುಟ್ಟಿ ಯಾರಿಂದ ಸಂತಾನವಾಯಿತೆಂಬುದೇ ತಿಳಿಯದಿರುವ ಸಂದರ್ಭದ ಶಿಶು.

ಜಾರಜ: ಜಾರನ ಮೂಲಕವಾಗಿ ಪತ್ನಿ ಸಂತಾನ ಪಡೆಯುವಿಕೆ

ಪೌನರ್ಭವ: ಪರಸ್ತ್ರೀಯ ಮೂಲಕ ಪಡೆದ ಮಗ

ದತ್ತ: ದತ್ತು ಪುತ್ರ

ಸಹೋಢ: ಗರ್ಭಿಣಿಯಾಗಿದ್ದಾಗಲೇ ಮದುವೆ ನಡೆದು ಅನಂತರ ಮಗು ಹುಟ್ಟಿದರೆ...

ಸ್ವಯಂದತ್ತ: ಒಬ್ಬ ಹುಡುಗನು ತಾನಾಗಿ ಪುತ್ರಹೀನ ದಂಪತಿಗಳ ಬಳಿಗೆ ಹೋಗಿ ನನ್ನನ್ನು ಮಗವಾಗಿ ಸ್ವೀಕರಿಸಿ ಎಂದು ಬೇಡಿಕೊಂಡು ಮಗನಾಗಿ ನಿಂತಾಗ

ಈ ಪಟ್ಟಿಗೆ ಇತ್ತೀಚೆಗೆ ವಿಚ್ಛೇದನ ಪಡೆದು ಬೇರೊಬ್ಬನನ್ನು ಮದುವೆಯಾದಾಗ ತನ್ನ ಹಳೆಯ ಮಕ್ಕಳನ್ನು ಗಂಡನ ಸಂಸಾರಕ್ಕೆ ಸೇರಿಸಿರುವ ಸಂದರ್ಭಗಳನ್ನು ಗಮನಿಸಬಹುದು. ಅಲ್ಲದೆ ಬಾಡಿಗೆ ತಾಯಿಯ (ಸರೋಗೇಟ್) ಮಗು ಈ ಗುಂಪಿಗೇ ಸೇರುತ್ತದೆ.

ಮಕ್ಕಳನ್ನು ಪಡೆಯುವುದು ಎಲ್ಲ ಮಾನವ ಜೀವಿಗಳ ನೈಸರ್ಗಿಕ ಬಯಕೆ ಸಹಜವಾಗಿ ಅದು ಸಾಧ್ಯವಾಗದಾದಾಗ ಎಷ್ಟು ಬಗೆಯ ಒಳದಾರಿಗಳಿವೆ ಎಂಬುದನ್ನು ಮಹಾಭಾರತ ತೋರಿಸಿಕೊಟ್ಟಿದೆ.

* * * *

ದಿವೋದಾಸ

ಉದ್ಯೋಗ ಪರ್ವ ಅನುಶಾಸನ ಪರ್ವಗಳಲ್ಲಿ ದಿವೋದಾಸನ ವಿಷಯ ವರ್ಣಿತವಾಗಿದೆ. ಋಗ್ವೇದದಲ್ಲಿ ಕೂಡ ಈ ಕಾಶೀರಾಜನ ವಿಷಯ ಪ್ರಸ್ತಾವಿತವಾಗಿದೆ. ಅತಿಥಿ ಸತ್ಕಾರದಲ್ಲಿ ಒಳ್ಳೆಯ ಹೆಸರು ಗಳಿಸಿದ್ದ ಫಲವಾಗಿ ಇವನಿಗೆ ಅತಿಥಿಗ್ವ ಎಂಬ ಹೆಸರೂ ಇದೆ ಎಂದು ಹೇಳಲಾಗಿದೆ.

ದಿವೋದಾಸನು ಕಾಶಿಯ ರಾಜನಾದ ಭೀಮಸೇನ ಮತ್ತು ಸುಯಾಸ ಎಂಬ ದಂಪತಿಗಳಲ್ಲಿ ಜನಿಸಿದವನು. ಇವನ ತಂದೆ ಭೀಮಸೇನನಿಗೆ ಭೀಮರಥ ಸುದೇವ ಎಂಬ ನಾಮಾಂತರಗಳೂ ಇವೆ. ಭೀಮಸೇನನ ಮಗನಾದ್ದರಿಂದ ದಿವೋದಾಸನಿಗೆ ಭೌಮಸೇನಿ ಎಂಬ ಹೆಸರೂ ಇದೆ.



ಮಹಾವೀರ್ಯೋ ಮಹೀಪಾಲಃ ಕಾಶೀನಾಂ ಈಶ್ವರಃ ಪ್ರಭುಃ
ದಿವೋದಾಸ ಇತಿಖ್ಯಾತೋ ಭೌಮೇನಿರ್ನರಾಧಿಪಃ

ಎಂದು ಮಹಾಭಾರತ ಇವನನ್ನು ಹೊಗಳುತ್ತದೆ. ಧಾರ್ಮಿಕ, ಸಂಯಮಯುಕ್ತ ಸತ್ಯವಂತ ಎನ್ನಿಸಿಕೊಂಡಿರುವ ಈತ ಯಮನ ಸಭೆಗಳಿಗೂ ಆಹ್ವಾನಿತನಾಗುವಷ್ಟು ಮಹತ್ವದ ದೊರೆಯಾಗಿದ್ದ.

ದೇವೇಂದ್ರನ ಕೋರಿಕೆಯಂತೆ ಕಾಶಿನಗರವನ್ನು ಪುನರ್‌ನಿರ್ಮಿಸಿದ ಖ್ಯಾತಿ ಈತನಿಗೆ ಸಲ್ಲುತ್ತದೆ. ಇವನ ಮುತ್ತಜ್ಜನ ಹೆಸರು ಕಾಶ. ಆದುದರಿಂದ ಅವನ, ಮಕ್ಕಳ ಕಾಲಕ್ಕೆ ವಾರಾಣಸಿಯು ಕಾಶಿ ಎನ್ನಿಸಿಕೊಂಡಿತ್ತು. ಇವನು ಅಪಾರ ಸಂಖ್ಯೆಯಲ್ಲಿ ಶತ್ರುಗಳನ್ನು ಓಡಿಸಿದ ನಿಜ. ಆದರೆ ಅವರ ಯಾಗಾಗ್ನಿಯನ್ನು ಕೂಡ ಕಿತ್ತುಕೊಂಡದ್ದರಿಂದ ಇವನ ವಿಜಯಯಾತ್ರೆಗಳು ಮಹಿಮೆಯನ್ನು ಕಳೆದುಕೊಂಡವಂತೆ. ಭದ್ರಶ್ರೇಣ್ಯ (ವೀತಹವ್ಯನ್) ಎಂಬ ಹೈಹಯ ರಾಜನು ಇವನ ಮೇಲೆ ದಂಡೆತ್ತಿ ಬಂದು ತನ್ನ ನೂರು ಮಕ್ಕಳನ್ನು ಕಳೆದುಕೊಂಡರೂ ಕೊನೆಗೆ ಕಾಶಿರಾಜನನ್ನು ಸೋಲಿಸಿದ. ದಿವೋದಾಸನ ಮಗ ಪ್ರತರ್ದನನು ಮುಂದೆ ಶತ್ರುಗಳನ್ನು ಸೋಲಿಸಿ ರಾಜ್ಯವನ್ನು ಹಿಂದಕ್ಕೆ ಪಡೆದ.

ದಿವೋದಾಸನು ಯಯಾತಿಯ ಮಗಳಾದ ಮಾಧವಿಯನ್ನು ತಾತ್ಕಾಲಿಕವಾಗಿ ವಿವಾಹವಾಗಬೇಕಾಗಿ ಬಂದದ್ದು ಒಂದು ವಿಚಿತ್ರ ಘಟನೆ. ವಿಶ್ವಾಮಿತ್ರನ ಶಿಷ್ಯನಾದ ಗಾಲವನು ವಿಶ್ವಾಮಿತ್ರನಿಗೆ ಗುರುದಕ್ಷಿಣೆಯಾಗಿ 800 ಕರಿಕಿವಿಯ ಬಿಳಿಯ ಕುದುರೆಗಳನ್ನು ಕೊಡಬೇಕಾಗಿ ಬಂತು. ಯಯಾತಿಯು ಗಾಲವನಿಗೆ ತನ್ನ ಮಗಳು ಮಾಧವಿಯನ್ನು ಯಾರಿಗಾದರೂ ಪತ್ನಿಯಾಗಿ ವಹಿಸಿಕೊಟ್ಟು ಆ ಅಶ್ವಗಳನ್ನು ಪಡೆಯುವಂತೆ ಸೂಚಿಸಿದ. ಗಾಲವನು ಇಕ್ಷ್ವಾಕುರಾಜ ಹರ್ಯಶ್ವನಿಂದ ಅಂಥ 200 ಕುದುರೆಗಳನ್ನು ತೆಗೆದುಕೊಂಡು ಸ್ವಲ್ಪ ಕಾಲ ಮಾಧವಿಯನ್ನು ಅವನ ಬಳಿ ಬಿಟ್ಟ. ಮಗುವಾದ ಮೇಲೆ ಮತ್ತೆ ಕರೆದುಕೊಂಡು ಹೋಗಿ ದಿವೋದಾಸನ ಬಳಿಗೆ ಬಂದ. ಇನ್ನೂರು ಕುದುರೆಗಳನ್ನು ನೀಡಿ ಮಾಧವಿಯನ್ನು ತಾತ್ಕಾಲಿಕ ಪತ್ನಿಯಾಗಿ ಸ್ವೀಕರಿಸಿದ ದಿವೋದಾಸನು ಅವಳಿಂದ ಪ್ರತರ್ದನ ಎಂಬ ಮಗನನ್ನು ಪಡೆದ. "ಅಹಮಪ್ಯೇಕಮೇವಾಸ್ಯಾಂ ಜನಯಿಷ್ಯಾಮಿ ಪಾರ್ಥಿವಂ" ಎಂದು ಕರಾರು ಮಾಡಿಕೊಂಡು ಮಗ ಹುಟ್ಟಿದ ಮೇಲೆ ದಿವೋದಾಸನು ತಾನು ಕೊಟ್ಟ ವಚನದಂತೆ.

"ಕನ್ಯಾಂ ನಿರ್ಯಾತಯಾಮಾಸ ಸ್ಥಿತಃ ಸತ್ಯೇ ಮಹೀಪತಿಃ

(ಮಾಧವಿಯನ್ನು ಗಾಲವನಿಗೆ ಹಿಂದಿರುಗಿಸಿದ) ಎಂದು ವ್ಯಾಸರು ಹೇಳುತ್ತಾರೆ. ಮಾಧವಿಯು ಒಂದು ಮಗುವನ್ನು ಕೊಟ್ಟನಂತರ ಮತ್ತೆ ಕನ್ಯೆಯಾಗಿ ಉಳಿಯುವ ವರವನ್ನು ಪಡೆದುಕೊಂಡಿದ್ದರಿಂದ ಮುಂದೆ ಉಶೀನರನನ್ನು ಮದುವೆಯಾಗಿ ಶಿಬಿಯನ್ನು ವಿಶ್ವಾಮಿತ್ರನನ್ನು ಮದುವೆಯಾಗಿ ಅಷ್ಟಕನನ್ನೂ ಹಡೆದು ಕೊಟ್ಟದ್ದು ಮಹಾಭಾರತದ ವಿಚಿತ್ರ ಕಥೆಗಳಲ್ಲಿ ಒಂದಾಗಿದೆ. ಹೆಣ್ಣು ಮಕ್ಕಳನ್ನು ಹೀಗೆ ಕುದುರೆಗಳನ್ನು ಕೊಟ್ಟು ಕೊಂಡುಕೊಂಡವರಲ್ಲಿ ದಿವೋದಾಸನೂ ಒಬ್ಬನಾಗಿದ್ದಾನೆ.

* * * *

ಮುದ್ಗಲ

ಈತನ ವಿಷಯ ಅರಣ್ಯಪರ್ವದ ವ್ರೀಹಿ ದ್ರೋಣಾಖ್ಯಾನ ಪರ್ವದಲ್ಲಿ ಬರುತ್ತದೆ. ದೇವರು ಭಕ್ತರನ್ನು ಉಗ್ರೋಗ್ರ ಪರೀಕ್ಷೆಗಳಿಂದ ಶಾಪಿಸಿ ನೋಡುತ್ತಾನೆ ಎಂಬ ಮಾತಿಗೆ ನಿದರ್ಶನವಾಗಿದೆ ಈ ಮುದ್ಗಲನ ಕಥೆ. ಆದರೆ ಭಕ್ತರೂ ಅಷ್ಟೇ ಭಂಡರು ಎಲ್ಲ ಪರೀಕ್ಷಾದಿವ್ಯಗಳನ್ನೂ ಎದುರಿಸ ಬಲ್ಲ ಆತ್ಮ ಸ್ಥೈರ್ಯವುಳ್ಳವರು ಎಂಬುದೂ ಈ ಕಥೆಯಲ್ಲಿ ಸ್ಪಷ್ಟವಾಗುತ್ತದೆ.

ಮುದ್ಗಲನು ಪ್ರತಿ ತಿಂಗಳ ಪಾಡ್ಯದಿಂದ ಚತುರ್ದಶಿಯವರೆಗೆ ಹದಿನಾಲ್ಕು ದಿವಸ ಭಿಕ್ಷಾಟನೆ ಮಾಡುತ್ತಿದ್ದ. ಅವನು ಬೇಡುತ್ತಿದ್ದುದೇನು ? ಒಂದು ಹಿಡಿ ಬತ್ತ ಮಾತ್ರ. ಹದಿನೈದನೆಯ ದಿನ ಹಾಗೆ ಸಂಗ್ರಹಿಸಿದ ಬತ್ತವನ್ನೆಲ್ಲ ಕುಟ್ಟಿ ಅಕ್ಕಿ ತೆಗೆದು ಅನ್ನ ಮಾಡುತ್ತಿದ್ದ. ಆ ಅನ್ನವನ್ನು ದೇವ ಪಿತೃ ಪೂಜೆಗೆ ಬಳಸಿ ಅತಿಥಿಗಳಿಗೂ ಬಡಿಸಿ ಉಳಿದುದನ್ನು ಹೆಂಡತಿ ಮಕ್ಕಳಿಗೆ ಕೊಟ್ಟು ತಾನೂ ತಿನ್ನುತ್ತಿದ್ದ. ಅವನು ತಿನ್ನುತ್ತಿದ್ದುದು ಅಮಾವಾಸ್ಯೆ ಪೂರ್ಣಿಮೆಯ ದಿನಗಳಂದು ಮಾತ್ರ.

ಒಂದು ಅಮಾವಾಸ್ಯೆಯ ದಿನ ದುರ್ವಾಸ ಮಹರ್ಷಿ ಅವನ ಮನೆಗೆ ಬರಬೇಕೆ ! ಮುದ್ಗಲ ಸಂತೋಷದಿಂದ ಬಡಿಸಿದರೆ ಆ ಋಷಿ ಎಲ್ಲ ಅನ್ನವನ್ನು ಒಬ್ಬನೇ ಭಕ್ಷಿಸಿದ ಉಳಿದ ಅನ್ನವನ್ನು ಬಡಿಸುವಂತೆ ಹೇಳಿ ಅದನ್ನು ಮೈಕೈಗಳಿಗೆಲ್ಲ ಹಚ್ಚಿಕೊಂಡ ಹೀಗಾಗಿ ಆ ದಿನ ಮುದ್ಗಲ ಮತ್ತು ಅವನ ಸಂಸಾರವೆಲ್ಲ ಉಪವಾಸ ಇರಬೇಕಾಯಿತು.

ದುರ್ವಾಸನ ಪೀಡೆ ಒಂದು ದಿನಕ್ಕೆ ಮುಗಿಯುವಂಥದಲ್ಲವಲ್ಲ. ಪ್ರತಿ ಅಮಾವಾಸ್ಯೆ, ಪೌರ್ಣಮಿಗೂ ಆತ ಸರಿಯಾಗಿ ಊಟದ ವೇಳೆಗೆ ಬರುತ್ತಿದ್ದ ಹೀಗೆ ಅವನು 648ಸಲ ಬಂದನೆಂದರೆ ಮುದ್ಗಲ ಮತ್ತು ಅವನ ಸಂಸಾರದವರ ಉಪವಾಸದ ಕಾಲ ಪ್ರಮಾಣ ತಿಳಿದೀತು. ಆದರೂ ಮುದ್ಗಲ ಜಗ್ಗಲಿಲ್ಲ. ಆಗ ಇವನ ಸತ್ವ ಪರೀಕ್ಷೆ ಮಾಡಿದ ಮುನಿ ಮುದ್ಗಲನ ಹಿರಿಮೆಯನ್ನು ಹೊಗಳಿ ಅವನಿಗೆ ಸ್ವರ್ಗದ ಸೌಖ್ಯ ದೊರೆಯುವುದೆಂದು ಆಶ್ವಾಸನೆಯಿತ್ತು ಹೊರಟು ಹೋದ.

ದುರ್ವಾಸ ಹೇಳಿದ್ದಂತೆ ಸ್ವರ್ಗದಿಂದ ಒಂದು ವಿಯೋಗವೂ ಬಂದಿತು. ಆದರೆ ಸ್ವರ್ಗದ ಬಗೆಗೆ ಮುದ್ಗಲನಿಗೆ ವಿವರಗಳು ಬೇಕಿದ್ದುವು ಎಲ್ಲ ದೇವ ದೂತನಿಂದ ಕೇಳಿ ತಿಳಿದುಕೊಂಡ ಮೇಲೆ ಮುದ್ಗಲಿನಿಗೆ ಸ್ವರ್ಗದ ಮೇಲೆ ವೋಹ ಉಳಿಯಲಿಲ್ಲ. ಏಕೆ ? ಎಂದು ಕೇಳಿದಾಗ ದೇವದೂತನಿಗೆ ಹೇಳಿದ.

"ಅಯ್ಯ ದೇವಪುರುಷ ನೀನೇ ಸ್ವರ್ಗದ ಬಗೆಗೆ ವಿವರಿಸಿದ್ದೀಯೆ ಮನುಷ್ಯರು ಪುಣ್ಯವನ್ನು ಎಷ್ಟುಗಳಿಸಿದ್ದಾರೆಂಬ ಪ್ರಮಾಣದ ಮೇಲೆ ಅವರಿಗೆ ಸ್ವರ್ಗದಲ್ಲಿ ಜಾಗಕೊಡುತ್ತೀರಿ. ಆದರೆ ಅವನ ಪುಣ್ಯದ ದಾಸ್ತಾನು ಮುಗಿದ ಕೊಡಲೇ ನಿರ್ದಾಕ್ಷಣ್ಯವಾಗಿ ಅವನನ್ನು ಭೂಮಿಗೆ ತಳ್ಳುತ್ತೀರಿ ಅಲ್ಲವೆ... ?

"ಹೌದು..."

"ನಿಮ್ಮ ಸ್ವರ್ಗ ನನಗೆ ಬೇಕಾಗಿಲ್ಲ. ಇನ್ನಷ್ಟು ತಪಸ್ಸು ಮಾಡಿ ವಿಷ್ಣು ಲೋಕ ಸೇರಿಕೊಳ್ಳುತ್ತೇನೆ ಅಲ್ಲಿ ಸ್ಥಾನಪಲ್ಲಟವಿರುವುದಿಲ್ಲವಲ್ಲ!"

ಮುದ್ಗಲನಿಗೆ ವೈಕುಂಠ ಲೋಕ ಪ್ರಾಪ್ತಿಯಾಯಿತು ಎಂದು ಹೇಳಬೇಕಾಗಿಲ್ಲವಷ್ಟೇ.

* * * *

ಮಹಾಭಾರತದ ನದಿಗಳು

ವಿವಿಧ ನಾಗರಿಕತೆಗಳ ಪೋಷಕ ಧಾತುವಾದ ನದಿಯ ಬಗೆಗೆ ವ್ಯಾಸಂಗ ಅಪಾರಕಾಳಜಿಯಿದೆ. ಭರತಖಂಡವನ್ನೆಲ್ಲ ಹಲವಾರು ಬಾರಿ ಸುತ್ತಿರುವುದರಿಂದ ಅವರಿಗೆ ಭಾರತದ ಮುಖ್ಯ ನದಿಗಳ ಪರಿಚಯವೂ ಚೆನ್ನಾ

ಜ್ಯೋತಿರಥಾ, ಜಾಂಬೂನದೀ, ತಾಮ್ರಸೇನಾ, ತ್ರಿದಿವಾ, ತುಂಗವೇಣಾ, ತಾಮ್ರಾ, ತಮಸಾ, ದೃಶದ್ವತೀ, ದೇವಿಕಾ, ದಿಕ್, ದುರ್ಗಾ, ದಾಸೀ, ಧೂತಪಾಪಾ, ಧೃಷದ್ವತೀ, ನರ್ಮದಾ ನಿಚಿತಾ ನೀರವಾರಾ, ನೀಲಾ, ನೀರಾ (ವೀರಾ ?)

ಪಯೋಷ್ಣೀ ಪರೋಷ್ಣೀ (ತಾಮ್ರೀ), ಪುರಾವತೀ, ಪವಿತ್ರಾ ಪಿಂಜಲಾ, ಪುರಮಾಲಿನೀ, ಪಿಚ್ಛಿಲಾ, ಪೂರ್ವಾಭಿರಾಮಾ ಪರ್ಣಾಶಾ, ಪಾಶಾಶನೀ, ಫಲ್ಗುನೀ, ಪಾಪಹರಾ, ಪಾಟಲಾವತೀ, ಪಂಚಮಿ, ಬಾಹುದಾ, ಬಹುಳಾ, ಬ್ರಹ್ಮ ಮೇಧ್ಯಾ, ಬ್ರಹ್ಮವೇಧ್ಯಾ, ಬೃಹದ್ಧನೀ, ಬ್ರಾಹ್ಮಣೀ, ಭೀಮಾ, ಭಾರದ್ವಾಜೀ, ಭೀಮರಥೀ.

ಮಹೇಂದ್ರಾ, ಮಹಾನದೀ, ಮಂದಗಾ, ಮಂದಾಕಿನೀ, ಮಕರೀಪ್ರವರಾ, ಮಾನಾ, ವೊದಿಷಾ, ಮಹಾಶೋಣ, ಮಹಾಪಗತಾ ಮಾನವೀ, ಮಂದವಾಹಿನೀ, ಮಹಾಗೌರೀ, ಮರುದ್ವೃಧಾ

ಯಮುನಾ ಯವಕ್ಷಾ ರಜನೀ, ರಥಚಿತ್ರಾ, ರೋಹೀ, ರಹಸ್ಯಾ, ಲೋಹಿತಾರಣೀ, ಲೋಹಿತ್ಯಾ (ಬ್ರಹ್ಮಪುತ್ರ) ವರುಷ್ಮೀ, ವಿತಸ್ತಾ, ವೃಷಭಾ, ವಸಾ ವಿಪಾಪಾ, ನೇತ್ರವತೀ, ವಿತಸ್ತಾ ವೇದಸ್ಮೃತಾ, ವೇದವತೀ, ವಂದನಾ, ಶರಾವತೀ, ವೇಶವಾಣಿ, ವೀರಮತೀ, ವಸ್ತ್ರಾವರಾ, ವೀರಕರಾ, ವಿಶ್ವಾಮಿತ್ರಾ, ವಿನದೀ ವೀಣಾ, ವಿದಿಶಾ, ವೇದಾಶ್ವಾ, ವಾರಾಣಸಿ, ವಾಹಿನೀ, ವೈತರಣೀ, ವೃಷಾ, ವೃಷಕಾ ಶತದ್ರು, ಶತಕುಂಭಾ, ಶತಬಲಾ, ಶೈಬ್ಯಾ, ಶಿವಾ, ಶೀಘ್ರಾ, ಶೋಣಾ, ಶುಕ್ತಿಮಂತೀ,

ಸರಸ್ವತೀ (ಝೆಂದ್ ಅವೆಸ್ತಾದಲ್ಲಿ ಹರಹ್ ವತಿ) ಸಿಂಧೂ, ಸುಪುಣ್ಯಾ, ಸ್ಥೂಲವಾಲುಕಾ, ಸರಯೂ (ಝೆಂದ್ ಅವೆಸ್ತಾದಲ್ಲಿ ಹರಯೂ) ಸುಪ್ರಯೋಗಾ, ಸದಾ ನೀರಾ, ಸದಾಕಾಂತಾ, ಸುವಸ್ತ್ರಾ, ಸುನಾವೊ, ಸುನಸಾ, ಸದಾವಿರಾಮವೇ ಸರ್ವಾ, ಹಸ್ತಿಸೋಮಾ, ಹರಣ್ವಲೇ, ಹರಿಶ್ರವಾ.

ಇಷ್ಟೊಂದು ಹೆಸರು ಹೇಳಿರುವುದಕ್ಕೆ ಕಾರಣವಿದೆ. ಆಸಕ್ತರು ತಮ್ಮ ತಮ್ಮ ತಾಲ್ಲೂಕು ಜಿಲ್ಲೆಗಳ ಎಲ್ಲಿ ನದಿಗಳ ಪಟ್ಟಿಯನ್ನು ಶಾಲೆಗಳಲ್ಲಿ ಪ್ರಚುರ ಪಡಿಸಿದರೆ ನದಿಗಳ ಬಗೆಗೆ ಆಸಕ್ತಿ ಹೆಚ್ಚಾದೀತು. ಕೊನೆಯ ಪಕ್ಷ ಈ ಪಟ್ಟಿಯಲ್ಲಿರುವ ನದಿಗಳ ಯಾವ ಪ್ರದೇಶದವು ಎಂದು ಪತ್ತೆ ಹಚ್ಚಿದರೂ ಆದೀತು. ಆದಿಪರ್ವದ 130ನೆಯ ಅಧ್ಯಾಯದಲ್ಲಿ ಸಪ್ತಗುಗೆಯ ಪ್ರಸಕ್ತಿಯಿದೆ. ಗಂಗೆ ಏಳುವಿಧವಾಗಿ ಹರಿದು ಬರುವುದನ್ನು ಇದು ಉಲ್ಲೇಖಿಸುತ್ತದೆ. ಈ ಏಳು ಸೀಳುಗಳನ್ನು ಕೆಲವರು ಹಿಮಾಲಯದಲ್ಲಿಯೇ ವಸ್ವೌಕಸಾರ, ನಲಿನಿ, ಪಾವನಿ, ಸೀತ, ಸಿಂಧು, ಅಲಕನಂದ, ಚಕ್ಷು ಎಂದು ಗುರುತಿಸುತ್ತಾರೆ. ಆದರೆ ಮಹಾಭಾರತದ ಬಗೆಗೆ ಸಂಶೋಧನೆ ಮಾಡಿರುವ ಚಿಂತಾಮಣಿ ವೈದ್ಯ ಮಹಾಶಯರು

ಗಂಗಾಂಚಯು ಮುನಾಂ ಚೈವ
ಪ್ಲಕ್ಷಜಾತಾಂ ಸದಸ್ವತೀಂ
ರಥಸ್ತಾಂ ಸರಯೋಂ ಚೈವ
ಗೋಮತೀಂ ಗಂಡಕೀಂಸ್ತಥಾ
ಅಪರುಪಿತ ಪಾಪಾಸ್ತೇ
ನದೀಃ ಸಪ್ತ ವಬಂತಿಯೇ ಎನ್ನುತ್ತಾರೆ.

ಋಗ್ವೇದದ ನದೀಸೂಕ್ತದಲ್ಲಿ (10ನೆಯ ಮಂಡಲ) ಆಕಾಲದ ಕೆಲವು ನದಿಗಳನ್ನು ಹೆಸರಿಸಲಾಗಿದೆ ಸಾಹಿತ್ಯ ಅಕಾಡೆಮಿ ಹೊರತಂದಿರುವ 'ಜೀವನ ಲೀಲೆ' ಎಂಬ ಗ್ರಂಥವು ಪ್ರಪಂಚದ ನದಿಗಳ ಬಗೆಗೆ ಬೆಳಕು ಚೆಲ್ಲುವ ಒಂದು ಸುಂದರ ಪ್ರಸ್ತಕವಾಗಿದೆ.

* * * *

ನರಿ ಮತ್ತು ಹುಲಿ ಸಂವಾದ

ಪುರಿಕ ಎಂಬ ಊರು. ಅಲ್ಲಿನ ರಾಜ ಪೌರಿಕ. ಅವನು ಮಹಾಕ್ರೂರಿ ಪರಹಿಂಸಾ ಪ್ರೇಮಿ. ಈ ಪುರುಷಾಧಮನ ಕ್ರೂರ ಜೀವನಸಾಗಿ ಆಯುಸ್ಸು ಮುಗಿದು ಮುಂದಿನ ಜನ್ಮದಲ್ಲಿ ನರಿಯಾಗಿ ಹುಟ್ಟಿದ. ಆ ನರಿಗೆ ಗತಜನ್ಮದ ನೆನಪುಕಾಡಿ ಅದು ಹಿಂಸೆಯನ್ನು ತ್ಯಜಿಸಿ ಮಂಸವನ್ನು ಮುಟ್ಟದೆ ಉದುರಿಬಿದ್ದ ಹಣ್ಣುಗಳನ್ನು ತಿಂದು ಕಾಲಕಳೆಯುತ್ತಿತ್ತು. ಕೊನೆಗೂ ಇದರ ಪ್ರತಿಭೆ, ಗುಣಗಳನ್ನು ಅಡವಿಯ ಮಹಾ ಮೃಗ ವ್ಯಾಘ್ರರಾಜ ಗುರುತಿಸಿದ. ತನ್ನ ಮಂತ್ರಿಯಾಗುವಂತೆ ಪ್ರಾರ್ಥಿಸಿದ. ಆದರೆ ನರಿಗೆ ಹುಲಿಯ ಸುತ್ತಮುತ್ತ ಇದ್ದವರ ಚರ್ಚೆಯ ಬಗೆಗೆ ಚಾಡಿಮಾತಿನ ಬಗೆಗೆ ಭಯ. ತನ್ನಂಥವರನ್ನು ಕಂಡರೆ ಆಗದವರು ಏನೇನು ಮಾಡುತ್ತಾರೆ ಎಂಬ ಭಯ.

ನ ಯೋಕ್ಷ್ಯಹಿ ಮೇ ಶೀಲಂ ತವ ಭೃತ್ಯೈ: ಪುರಾತನೈ:
ತೇ ತ್ವಾಂ ವಿಭೇದಯಿಷ್ಯಂತಿ ದುಃಶೀಲಾಶ್ಚ ಮದಂತರೇ.

"ನಿನ್ನ ಅಂತರಂಗದ ಭೃತ್ಯರಿಗೆ ನನ್ನ ಸ್ವಭಾವ ಹಿಂಸಿಸುವುದಿಲ್ಲ ಅವರಿಗೆ ತುಂಬ ಕಹಿ ಭಾವನೆಗಳಿವೆ. ನಮ್ಮಿಬ್ಬರ ಮಧ್ಯೆ ಭೇದ ಕಲ್ಪಿಸುತ್ತಾರೆ. ನನಗಾದರೇ ಭವಿಷ್ಯದರ್ಶನ ದೃಷ್ಟಿಯಿದೆ. ಕ್ರೂರಿಗಳನ್ನು ದಯೆಯಿಂದ ನೋಡಲಾರೆ" ಎಂದು ಎಷ್ಟೆಷ್ಟೋ ಹೇಳಿದರೂ ಕೇಳದೆ ವ್ಯಾಘ್ರರಾಜ ನರಿಯನ್ನು ಮಂತ್ರಿಯಾಗಿ ನೇಮಿಸಿಕೊಂಡ.

ಆದರೆ ಸ್ವಲ್ಪ ಕಾಲದಲ್ಲೇ ರಾಜನ ಹತ್ತಿರದ ಅನುಯಾಯಿಗಳಿಗೆಲ್ಲ ಮುಜುಗರವಾಯಿತು. ಅವರ ಆದಾಯದ ಬಾಬುಗಳನ್ನು ನರಿ ಕತ್ತರಿಸಿ ಹಾಕಿದ್ದರಿಂದ ಅಸಮಾಧಾನವೂ ಆಗಿತ್ತು. ಅವರು ಎಷ್ಟು ಚಾಡಿಮಾತು ಹೇಳಿದರೂ ರಾಜ ನಂಬುತ್ತಿರಲಿಲ್ಲ. ಆದರೂ ವ್ಯವಸ್ಥಿತ ಸಂಚು ನಡೆಸಿ ಕಾರಸ್ಥಾನ ಹೂಡಿದರು. ಒಂದು ದಿನ ರಾಜನ ವೊಸಭೋಜನವನ್ನೇ ಎಗರಿಸಿ ನರಿಯ ಮನೆಯಲ್ಲಿಟ್ಟು ರಾಜನಿಗೆ ನಡೆದಿರುವ ಕಳ್ಳತನವನ್ನು ವಿವರಿಸಿದರು. ರಾಜ ನರಿಯ ಮೇಲೆ ಕುಪಿತನಾದ ಆದರೆ ರಾಜಮಾತೆ ವ್ಯಾಘ್ರನಿಗೆ ಬುದ್ಧಿ ಹೇಳಿದಳು. ರಾಜನು ಕೊಟ್ಟಿದ್ದನ್ನೂ ತಿರಸ್ಕರಿಸಿರುವ ಮಂತ್ರಿ ಕಳ್ಳತನ ಮಾಡುವುದಂಟೆ ? ಎಂದು ಎಚ್ಚರಿಸಿದಳು. ರಾಜನಾದವನು ಇಂಥ ಮಾತುಗಳನ್ನು ನಂಬಬಾರದು. ಏಕೆಂದರೆ

ಅಸಭ್ಯಾಃಸಭ್ಯ ಸಂಕಾಶಾಃ ಸಭ್ಯಶ್ಚಾಽಸಭ್ಯದರ್ಶನಾಃ
ದೃಶ್ಯಂತೇ ವಿವಿಧಾ ಭಾವಾಸ್ತೇಷು ಯುಕ್ತಂ ಪರೀಕ್ಷಣಂ

ಅಸಭ್ಯರು ಸಭ್ಯರಂತೆ ಸಭ್ಯರು ಅಸಭ್ಯರಂತೆ ಮೇಲುನೋಟಕ್ಕೆ ಕಂಡುಬರುತ್ತಾರೆ. ಪರೀಕ್ಷೆ ಮಾಡದೆ ಯಾವುದನ್ನೂ ಒಪ್ಪಬಾರದು.

ರಾಜನಿಗೆ ತನ್ನ ತಪ್ಪಿನ ಅರಿವಾಗ ತೊಡಗಿತ್ತು. ಅಷ್ಟರಲ್ಲಿ ಒಬ್ಬ ಪ್ರಾಮಾಣಿಕ ಸೇವಕ ಬಂದು ನಡೆದದ್ದನ್ನೆಲ್ಲ ವಿವರಿಸಿದ. ರಾಜನಿಗೆ ಪಶ್ಚಾತ್ತಾಪವಾಯಿತು. ನರಿಗೆ ಹೇಳಿಕಳುಹಿಸಿದ, ಹಿಂದಿನ ಮಂತ್ರಿಪದವಿಯನ್ನೇ ನೀಡಿದ. ಆದರೆ ನರಿ ಈ ಪದವಿಯನ್ನು ಸ್ವೀಕರಿಸುವ ಮನಃ ಸ್ಥಿತಿಯಲ್ಲಿ ಇರಲಿಲ್ಲ ರಾಜ ಅಂದು ಗೌರವಿಸಿದ,

ಆನಂತರ ಅಪಮಾನಿಸಿದ ಈಗ ಮತ್ತೆ ಗೌರವಿಸುತ್ತಿದ್ದಾನೆ ಇಂಥವನನ್ನು ನಂಬುವುದು ಹೇಗೆ ?

ಪೂಜಿತೋಽಹಂ ತ್ವಯೋ ಪೂರ್ವಂ ಪಶ್ಚಾಚ್ಚೈವ ವಿಮಾನಿತಃ
ಪರೇಷಾಮಾಸ್ಪದಂ ನೀತೋ ವಸ್ತುಂ ನಾರ್ಹಾಮ್ಯಹಂತ್ವಯಿ

ಇಂಥ ವಂಚಕರ ನಡುವೆ ನಿಸ್ವಾರ್ಥ ಪ್ರಿಯರು ಬದುಕಬಾರದೆಂದು ತೀರ್ಮಾನಿಸಿದ ನರಿ ರಾಜನನ್ನು ಒಪ್ಪಿಸಿ ಕಾಡಿಗೆ ಹೋಗಿ ಪ್ರಾಯೋಪ್ರವೇಶ ವ್ರತದಿಂದ ಮರಣವನ್ನಪ್ಪಿತು. ಶಾಂತಿ ಪರ್ವದ ನೂರ ಹನ್ನೊಂದನೆಯ ಅಧ್ಯಾಯದಲ್ಲಿರುವ ಈ ಕಥೆ ದುಷ್ಟಶಕ್ತಿಗಳ ಒಳಸಂಚು ಎಷ್ಟು ಬಲವಾಗಿರುತ್ತದೆಂಬುದನ್ನು ವಿವರಿಸುತ್ತದೆ.

* * * *

ಪೈಲ



ಪಿಲಿ ಋಷಿಯ ಗೋತ್ರದವನಾದುದರಿಂದ ಇವನಿಗೆ ಪೈಲನೆಂಬ ಹೆಸರು ಬಂದಿತು. ಈತನ ಗುರು ವೇದವ್ಯಾಸ. ವೇದವ್ಯಾಸ ಎಂಬುದು ಒಬ್ಬ ವ್ಯಕ್ತಿಯ ಹೆಸರಿದ್ದಂತೆ ಕಾಣುವುದಿಲ್ಲ. 'ವ್ಯಸ್ತವೇದತಯಾ ವ್ಯಾಸ' ಎಂಬ ಮಾತಿದೆ. ಒಟ್ಟು 27 ಜನ ವ್ಯಾಸರಿದ್ದರೆಂದೂ ಇವರೆಲ್ಲ ಭಿನ್ನ ಭಿನ್ನ ಕಾಲ ದೇಶಗಳಲ್ಲಿ ವೇದ, ಪುರಾಣ ಇತಿಹಾಸಗಳನ್ನು ಸಂಗ್ರಹಿಸಿ ಸಂಕಲಿಸಿದರೆಂದೂ ಹೇಳುತ್ತಾರೆ.

ವಸು ಪುತ್ರನಾದ ಪೈಲನು ವೇದವ್ಯಾಸರ ಆಪ್ತಶಿಷ್ಯರುಗಳಲ್ಲಿ ಒಬ್ಬ. ಪೈಲ,

ಸುಮಂತು, ಜೈಮಿನಿ, ವೈಶಂಪಾಯನ ಮತ್ತು ಶುಕ ಈ ಐವರೇ ವ್ಯಾಸರ ಪ್ರಮುಖ ಶಿಷ್ಯರು ಎಂದು ಹೇಳಲಾಗಿದೆ. ಈ ಪಟ್ಟಿಗೆ ಉಗ್ರಶ್ರವನ ತಂದೆಯಾದ ರೋಮಹರ್ಷಣನನ್ನೂ ಕೆಲವರು ಸೇರಿದ್ದಾರೆ. ಇವರೆಲ್ಲ ವೇದವ್ಯಾಸರಿಂದ ಮಹಾಭಾರತ ಕಥೆಯನ್ನು ಕೇಳಿ ಅನಂತರ ಒಬ್ಬೊಬ್ಬರೇ ಭಾರತ ಕಥೆಯನ್ನು ಬರೆದಿಟ್ಟರೆಂದೂ ಅವುಗಳಲ್ಲಿ ವೈಶಂಪಾಯನರ ಭಾರತ ಉಳಿದುಕೊಂಡು ಬಂದಿದೆಯೆಂದೂ, ಜೈಮಿನಿ ಬರೆದ ಭಾರತ ಭಾಗಶಃ ಲಭ್ಯವಾಗಿದೆಯೆಂದು ಉಳಿದವು.

ಮಹಾಭಾರತವನ್ನೇ ಅಲ್ಲದೆ ಈ ಶಿಷ್ಯರು ವೇದಸಾಹಿತ್ಯದ ಸಂಗ್ರಹ ಕಾರ್ಯದಲ್ಲೂ ತೊಡಗಿದ್ದರು. ವೇದ ಆರಂಭಕ್ಕೆ ಒಂದೇ ಇತ್ತು. ಅದರಿಂದ ಹತ್ತು ಯಜ್ಞಗಳು ಹುಟ್ಟಿಕೊಂಡವು. ವೇದವ್ಯಾಸರು ಈ ವೇದವನ್ನು ನಾಲ್ಕು ಭಾಗವಾಗಿ ವಿಂಗಡಿಸಿ ಚತುರ್‌ಹೋತ್ರ ಆಚರಣೆಯನ್ನು ತಂದರು. ಅಧ್ವರ್ಯು (ಯಜುರ್ವೇದ) ಹೋತೃ (ಋಗ್ವೇದ) ಉದ್ಗಾತೃ (ಸಾಮವೇದ) ಬ್ರಹ್ಮ (ಅಥರ್ವವೇದ) ಎಂಬ ವಿಂಗಡಣೆಯಾಯಿತು. ವ್ಯಾಸರು ಪೈಲನಿಗೆ ಋಗ್ವೇದದ ಅಧ್ಯಯನವನ್ನು ವಹಿಸಿಕೊಟ್ಟು ವೈಶಂಪಾಯನ ಸುಮಂತು ಮತ್ತು ಜೈಮಿನಿಗಳಿಗೆ ಕ್ರಮವಾಗಿ ಸಾಮ, ಅಥರ್ವ, ಯಜುರ್ವೇದಗಳ ಶಾಖೆಗಳನ್ನು ಕೊಟ್ಟರಂತೆ.

ಪೈಲನ ಪಾಲಿಗೆ ಬಂದದ್ದು ಋಗ್ವೇದ. ಪೈಲನು ಅಚ್ಚುಕಟ್ಟಾಗಿ ಅದನ್ನು ಎರಡು ಸಂಹಿತೆಗಳಾಗಿ ವಿಂಗಡಿಸಿದ. ಒಂದನ್ನು ತನ್ನ ಶಿಷ್ಯನಾದ ಇಂದ್ರಪ್ರಮಾತಿಗೆ ವಹಿಸಿ ಎರಡನೆಯ ಸಂಹಿತೆಯನ್ನು ಮತ್ತೊಬ್ಬ ಶಿಷ್ಯ ಬಾಷ್ಕಲನಿಗೆ ಒಪ್ಪಿಸಿ ವ್ಯವಸ್ಥಿತವಾಗಿ ಅಧ್ಯಯನ ಸಾಗುವಂತೆ ನೋಡಿಕೊಂಡ. ಅಷ್ಟೇ ಅಲ್ಲದೆ ಬಾಷ್ಕಲನು ಸಂಪಾದಿಸಿದ ಸಂಹಿತೆಯನ್ನು ಮತ್ತೆ ನಾಲ್ಕು ಭಾಗವಾಗಿ ವಿಂಗಡಿಸಿ ಬೋಧಿ, ಆದಿಮಾಧವ, ಯಾಜ್ಞವಲ್ಕ್ಯ ಮತ್ತು ಪರಾಶರ ಎಂಬ ಶಿಷ್ಯರುಗಳಿಗೆ ಹಂಚಲಾಯಿತು.

ಈ ಪೈಲನು ಬರೆದಿರುವನೆಂದು ಊಹಿಸಿರುವ ಮಹಾಭಾರತದ ಪ್ರತಿ ಸಿಕ್ಕಿಲ್ಲ. ಶ್ರೇಷ್ಠಜ್ಞಾನಿಯಾಗಿದ್ದ ಪೈಲನು ಧರ್ಮರಾಯನ ರಾಜಸೂಯ ಯಾಗದಲ್ಲಿ ಧೌಮ್ಯ ಮುನಿಗಳ ಸಂಗಡ ಹೋತಾರನಾಗಿದ್ದನೆಂದೂ ಶರಪಂಜರದಲ್ಲಿದ್ದ ಭೀಷ್ಮರನ್ನು ಸಂದರ್ಶಿಸಿದ ಋಷಿಗಳ ಪೈಕಿ ಒಬ್ಬನಾಗಿದ್ದನೆಂದೂ ಮಹಾಭಾರತದಲ್ಲಿ ಹೇಳಲಾಗಿದೆ. ಇಂಥ ಐವರು ಶಿಷ್ಯರನ್ನು ಸಂಪಾದಿಸಿದ್ದು ವ್ಯಾಸರ ಹೆಗ್ಗಳಿಕೆ ಎಂದು ಹೇಳಬಹುದು.

* * * *

ಶ್ರುತಾಯುಧ

ವರಗಳನ್ನು ಕೋರಿ ಪಡೆಯುವವರಿದ್ದಾರೆ. ಆದರೆ ವರಪ್ರದಾತರು ಕೊಡುವ ಎಚ್ಚರಿಕೆಗಳನ್ನು ಸರಿಯಾಗಿ ಪಾಲಿಸದಿದ್ದರೆ ಎಂಥ ಅನಾಹುತವಾಗುತ್ತದೆ ಎಂಬುದಕ್ಕೆ ಶ್ರುತಾಯುಧನ ಕಥೆ ಒಂದು ಉದಾಹರಣೆ ದ್ರೋಣ ಪರ್ವದ ಸೈಂಧವ ವಧಾ ಪ್ರಕರಣದಲ್ಲಿ ಈತನ ಪ್ರಸಕ್ತಿಯಿದೆ. ಶ್ರುತಾಯುಧನು ವರುಣ ದೇವನ ಮಗ ಪರ್ಣಾಶಾ ಈತನ ತಾಯಿ ಕೌರವರ ಕಡೆ ಸೇರಿ ಅರ್ಜುನ ಕೃಷ್ಣರ ಮೇಲೆ ಯುದ್ಧ ಮಾಡಿದವನು. ಮಗನ ಶ್ರೇಯೋಭಿವೃದ್ಧಿಯನ್ನು ಬಯಸಿದ ತಾಯಿ ಪರ್ಣಾಶಾ ಈ ಮಗನಿಗೆ ಯುದ್ಧದಲ್ಲಿ ಎಂದಿಗೂ ಸೋಲಾಗದಂತೆ ಕಾಪಾಡುವ ಒಂದು ಗದೆಯನ್ನು ದಯಪಾಲಿಸಬೇಕೆಂದೂ ರಹಸ್ಯ ಮಂತ್ರಗಳನ್ನು ಉಪದೇಶಿಸಬೇಕೆಂದೂ ಗಂಡನಾದ ವರುಣನನ್ನು ಬೇಡಿ ಕೊಂಡಳು. ವರುಣನು ಅವಳ ಮಾತಿನಂತೆ ಎರಡನ್ನು ಅನುಗ್ರಹಿಸಿ ಒಂದು ಎಚ್ಚರಿಕೆಯನ್ನು ನೀಡಿದ. ಶ್ರುತಾಯುಧನು ನಿರಾಯುಧನ ಮೇಲೆ ಅಥವಾ ಯುದ್ಧ ಮಾಡದೆ ತಪಸ್ಥನಾಗಿರುವವನ ಮೇಲೆ ಈ ಗದೆಯನ್ನು ಬಳಸಬಾರದೆಂದೂ ಹಾಗೆ ಪ್ರಮ೾ದವಶಗಿದರೆ ಈ ಗದೆಯು ಪ್ರಯೊಗಿಸಿದವನನ್ನೇ ಆಹೂತಿ ತೆಗೆದುಕೊಳ್ಳುತ್ತದೆ ಎಂಬ ಎಚ್ಚರಿಕೆಯ ಮಾತು ಅದು. ಮಂತ್ರೋಪದೇಶ ಪೂರ್ವಕವಾಗಿ ಪಡೆದ ಈ ಗದೆಯಿಂದಾಗಿ ಶ್ರುತಾಯುಧನು ಸಮಸ್ತ ಲೋಕಗಳಲ್ಲಿಯೂ ಅವಧ್ಯನೆಂದು ಪ್ರಖ್ಯಾತಿ ಪಡೆದ.

ಅರ್ಜುನನು ಸೈಂಧವನನ್ನು ಸಂಹರಿಸುವುದಾಗಿ ಪ್ರತಿಜ್ಞೆ ಮಾಡಿ ಕೌರವ ಸೇನೆಯ ಮೇಲೆ ನುಗ್ಗಿದನಷ್ಟೆ. ಅವನನ್ನು ಸ್ವಲ್ಪಕಾಲ ಕೃತವರ್ಮನು ತಡೆದ. ಅವನನ್ನು ದಾಟಿಕೊಂಡು ಮುನ್ನುಗ್ಗಲು ಯತ್ನಿಸಿದ ಅರ್ಜುನನ್ನನ್ನು ಶ್ರುತಾಯುಧನು ತಡೆದು ಯುದ್ಧ ಆರಂಭಿಸಿದ. ಮೂರು ಬಾಣಗಳಿಂದ ಅರ್ಜುನನನ್ನು ಎಪ್ಪತ್ತು ಬಾಣಗಳಿಂದ ಕೃಷ್ಣನನ್ನೂ ಘಾತಿಸಿದ. ಅನಂತರ ಕ್ಷುರಪ್ರ (ಅರ್ಧಚಂದ್ರಬಾಣ)ದಿಂದ ಅರ್ಜುನನ ಧ್ವಜವನ್ನು ಹಾರಿಸಿದ. ಇಬ್ಬರಿಗೂ ಘೋರ ಯುದ್ಧವಾಯಿತು. ಅರ್ಜುನನು ಶ್ರುತಾಯುಧನ ಬಿಲ್ಲನ್ನು ಮುರಿದು ಶರಕೋಶವನ್ನು ಧ್ವಂಸಗೊಳಿಸಿದ್ದೇ ಅಲ್ಲದೆ ಏಳುಬಾಣಗಳಿಂದ ಶ್ರುತಾಯುಧನ ಎದೆಗೆ ಹೊಡೆದ. ಅಷ್ಟಕ್ಕೇ ಬಿಡದೆ ಸಾವಿರಾರು ಬಾಣಗಳಿಂದ ಶ್ರುತಯುಧನನ್ನು ಘಾತಿಸಿ ರಥ ಕುದುರೆಗಳನ್ನೆಲ್ಲ ಧ್ವಂಸಮಾಡಿದ. ಕೆರಳಿದ ಶ್ರುತಾಯುಧನು ರಥದಿಂದ ಧುಮುಕಿ ಗದಾಪಾಣಿಯಾಗಿ ಕೃಷ್ಣಾರ್ಜುನರ ಮೇಲೆ ನುಗ್ಗಿದ ಆಗದೆಯನ್ನು ನಿರಾಯುಧನೂ ತಟಸ್ಥನೂ ಆದ ಕೃಷ್ಣನ ಮೇಲೆ ಪ್ರಯೋಗಿಸಬಾರದು ಎಂಬ ವಿವೇಕ ಅವನಲ್ಲಿ ಉಳಿದಿರಲಿಲ್ಲ. ಹಾಗೆ ಮಾಡಿದರೆ ಆ ಗದೆಯು ಪ್ರಯೋಕ್ತನನ್ನೇ ಕೊಲ್ಲುತ್ತದೆ ಎಂದು ತಾಯಿ ಪರ್ಣಾಶಾ ಹಲವು ಬಾರಿ ಎಚ್ಚರಿಕೆ ನೀಡಿದ್ದಳು. ಎಲ್ಲವನ್ನು ಮರೆತು 'ವೀರಘಾತಿನಿ' ಆಗಿದ್ದ ಆ ಗದೆ ಕೃಷ್ಣನ ಮೇಲೇ ಎರಗಿತು. ಶ್ರೀಕೃಷ್ಣನು ಮಹಾವೀರನೂ ಕಷ್ಟಸಹಿಷ್ಣುವೂ ಆಗಿದ್ದುದರಿಂದ ಆ

ಏಟುಗಳನ್ನು ತಡೆದುಕೊಂಡ ಆದರೆ ದುಷ್ಟವಾದ ಅಭಿಚಾರಿಕ ಕ್ರಿಯೆ ಮಾಡಿದ್ದರಿಂದ 'ಕೃತ್ಯ' ಎಂಬ ಶಕ್ತಿದೇವತೆ ಅಲ್ಲೇ ಹುಟ್ಟಿಕೊಂಡು ಶ್ರುತಾಯುಧನ ಬಳಿಗೇ ಹೋಗಿ ಅವನನ್ನು ಸಂಹರಿಸಿತು. ವಾಯುಭಂಗಿತ ವೃಕ್ಷದಂತೆ ಶ್ರುತಾಯುಧನು ಅಲ್ಲೇ ನೆಲಕ್ಕೆ ಉರುಳಿದ.

* * * *

ಕಂಪಣಕ ಮುನಿ

ಅರಣ್ಯಪರ್ವದ ತೀರ್ಥಯಾತ್ರಾ ಪರ್ವದಲ್ಲಿ ಈ ಮುನಿಯ ಕಥೆ ಇದೆ. ಈತ ಬ್ರಹ್ಮಚಾರಿ ಮಹಾ ಸಾಧನೆ ಮಾಡಿ ಸಿದ್ಧನಾದವನು. ಸಪ್ತಸಾರಸ್ವತ ಕ್ಷೇತ್ರದಲ್ಲಿ ತಪಸ್ಸು ಅಧ್ಯಯನಗಳಲ್ಲಿ ಮುಳುಗಿದ್ದವನು. ಒಮ್ಮೆ ಸರಸ್ವತೀ ನದಿಯಲ್ಲಿ ನಗ್ನಳಾಗಿ ಸ್ನಾನ ಮಾಡುತ್ತಿದ್ದ ಸುಂದರಿಯೊಬ್ಬಳನ್ನು ನೋಡಿ ಮನಸ್ಸು ಚಂಚಲಗೊಂಡು ವೀರ್ಯ ಬಿಂದುಗಳು ನದಿಗೆ ಬಿದ್ದುವು. ಅವನ್ನು ಎತ್ತಿ ಕಂಪಣಕನು ಒಂದು ಕುಂಡದೊಳಗಿರಿಸಿದಾಗ ಆ ಕುಂಡದಿಂದ ವಾಯುವೇಗನೇ ಮೊದಲಾದ ಸಪ್ತ ಋಷಿಗಳು ಉರಿಸಿದರು.

ಒಮ್ಮೆ ಕಂಪಣಕನು ತಪೋಽನುಗುಣ ಕರ್ಮಗಳಲ್ಲಿ ತೊಡಗಿದ್ದಾಗ ಅವನು ಸಂಗ್ರಹಿಸುತ್ತಿದ್ದ ಹುಲ್ಲಿನ ಚೂಪಾದ ತುದಿ ಅವನ ಕೈಗೆ ತಗುಲಿತು. ಆ ಕುಶಾಗ್ರಹತಿಯಿಂದ ಅವನ ಕೈಯಲ್ಲಿ ಏನು ಸುರಿಯಿತು ಗೊತ್ತೆ? ರಕ್ತ? ಅಲ್ಲ ತರಕಾರಿಯ ರಸ ಸುರಿಯಲಾರಂಭಿಸಿತು. ಇದನ್ನು ಕಂಡ ಮಂಕಣನಿಗೆ ಆಶ್ಚರ್ಯವಾಯಿತು. ತನ್ನಿಂದ ಈ ಬಗೆಯ ಪವಾಡ ನಡೆದುದಕ್ಕೆ ಆನಂದವೂ ಆಯಿತು. ಕಂಕಣನು ಒಳ್ಳೆಯ ನರ್ತನಪಟುವೂ ಆಗಿದ್ದುದರಿಂದ ಆನಂದದಿಂದ ಉನ್ಮತ್ತನಂತೆ ಕುಣಿಯಲಾರಂಭಿಸಿದ. ಕುಣಿತ ಒಂದು ಸಂಘ ಕ್ರೀಡೆಯಲ್ಲವೆ ? ಶಿವನ ಲಾಸ್ಯ ತಾಂಡವಗಳಿಗೆ ಜಗತ್ತೇ ಸ್ಪಂದಿಸುತ್ತದೆ. ಕೃಷ್ಣನ ಕೊರಳನಾದ ಮತ್ತು ಕುಣಿತಗಳಿಗೂ ಜಗತ್ತು ಮರುಳಾಗುವುದನ್ನು ಕೇಳಿದ್ದೇವೆ ಕಂಪಣಕನ ಕುಣಿತಕ್ಕೂ ಈ ಅದ್ಭುತ ಶಕ್ತಿಯಿತ್ತು. ಅವನ ಜೊತೆಗೆ ಲೋಕದ ಚರ-ಅಚರ ವಸ್ತುಗಳೆಲ್ಲ ಪುಳಕಿತಗೊಂಡು ಕುಣಿಯಲಾರಂಭಿಸಿದುವು. ಈ ಕುಣಿತ ಬಹಳಕಾಲ ಸಾಗಿದ್ದಾಗ ಬ್ರಹ್ಮನಿಗೆ ಯೋಚನೆಯಾಯಿತು. ಕೂಡಲೇ ದೇವತೆಗಳೊಂದಿಗೆ ಶಿವನ ಬಳಿಗೆ ಹೋದ. ಶಿವನು ಕಂಪಣಕನ ಕಥೆಯನ್ನು ಕೇಳಿ ಅವನ ಬಳಿಗೆ ಹೋದ. ಕಂಪಣಕ ಇದರ ಪರಿವೆಯೇ ಇಲ್ಲದೆ ಕುಣಿಯುತ್ತಿದ್ದಾನೆ. ತನ್ನದು ಮಹಾಸಾಧನೆ ಎಂದು ತಿಳಿದಿದ್ದಾನೆ. ಶಿವ ಮಾತನ್ನೇ ಆಡದೆ ಕಂಪಣಕನ ಎದುರಿಗೆ ನಿಂತ. ತನ್ನ ಕಿರುಬೆರಳಿನಿಂದ ಹೆಬ್ಬೆಟ್ಟನ್ನು ಮತ್ತಗೆ ಅದುಮಿದ. ಏನಾಶ್ಚರ್ಯ! ಮಂಜಿನಂತೆ ಅಚ್ಚ ಬಿಳಿಯ ಭಸ್ಮ ಉದುರಲಾರಂಭಿಸಿತು. ಇಂಥ ಸಣ್ಣ ಪುಟ್ಟ ಸಾಧನೆಗಳಿಗೇ ಯಾರಿಗೂ ತಲೆತಿರುಗಬಾರದೆಂದು ಹೇಳಿಶಿವನು ಕಂಪಣಕನಿಗೆ ಇನ್ನೂ ಉನ್ನತವಾದ ಸಾಧನೆಗಳನ್ನು ಮಾಡಿ ಲೋಕ ಕಲ್ಯಾಣಕ್ಕೆ ನೆರವಾಗಬೇಕೆಂದು ಹಿತೋಪದೇಶಮಾಡಿದ. ಕಂಪಣಕನ ಭಕ್ತಿಗೆ ಮೆಚ್ಚಿ ಆಶ್ರಮಕ್ಕೆ ಹೋಗಿ ತಪಸ್ಸನ್ನು ಮುಂದುವರಿಸಬೇಕೆಂದು ಸೂಚಿಸಿದ. ತಾನು ಸದಾ ಕಂಪಣಕನ ಆಶ್ರಮದಲ್ಲೇ ನೆಲಸಿ ಅವನ ತಪಸ್ಸಿಗೆ ಶೋಭೆ ತರುವುದಾಗಿ ಆಶ್ವಾಸನೆಯನ್ನು ನೀಡಿದ.

ಅರಣ್ಯವಾಸ ಸಂದರ್ಭದಲ್ಲಿ ಎಲ್ಲರಿಗಿಂತ ಹೆಚ್ಚಾಗಿ ಧರ್ಮರಾಯನಿಗೆ ಆದ

ಪ್ರಯೋಜನವೆಂದರೆ ಸಂಚಾರ ಲಾಭ ಮತ್ತು ಅನೇಕ ಬಗೆಯ ಮಹತ್ ಸಾಧನೆಗಳನ್ನು ಮಾಡಿದ್ದ ತಪೋಧನರುಗಳ ಸಂದರ್ಶನ. ಅಂಥ ಮುನಿಗಳ ಬಳಿಯಲ್ಲಿ ಒಬ್ಬರೊಳಗೊಂದು ನುಡಿನಲಿತು ಅಧ್ಯಾತ್ಮ ವಿದ್ಯೆಯ ಪರ್ವತವೇ ಆದ ಧರ್ಮರಾಯನಿಗೆ ನಹುಷ ಪ್ರಶ್ನೆ, ಯಕ್ಷ ಪ್ರಶ್ನೆಗಳಂತಹ ಕಠಿಣ ಸಮಸ್ಯೆಗಳ ಗಿರಿಯನ್ನು ಏರಲು ಸ್ವಲ್ಪವೂ ಕಷ್ಟವಾಗಲಿಲ್ಲ.

* * * *

ಕರ್ಕೋಟಕ

ಒಂದು ವಿಷ ಸರ್ಪ. ಮಹಾಭಾರತದ ಆಸ್ತಿಕಪರ್ವ ಹಾಗೂ ಅರಣ್ಯಪರ್ವದ ನಳ-ದಮಯಂತೀ ಕಥನಗಳಲ್ಲಿ ಈತನ ವಿಚಾರ ವರ್ಣಿತವಾಗಿದೆ. ಸರ್ಪಕುಲಕ್ಕೆ ಸೇರಿದ ಈತ ಕದ್ರು-ಕಶ್ಯಪರ ಮಗ. ವಾಸುಕಿಯ ತಮ್ಮ. ಇವನು ಶತಶೃಂಗಪರ್ವತದಲ್ಲಿ ಅರ್ಜುನನ ಹುಟ್ಟಿದ ಹಬ್ಬಕ್ಕೆ ಬಂದಿದ್ದನೆಂದು ಹೇಳಲಾಗಿದೆ.

ಕದ್ರು-ವಿನತೆಯರಿಗೆ ನಡೆದ ಸಂವಾದ ಸಂದರ್ಭದಲ್ಲಿ ಕರ್ಕೋಟಕನ ಹೆಸರು ಬೆಳಕಿಗೆ ಬರುತ್ತದೆ. ಒಮ್ಮೆ ಕದ್ರುವಿನತೆಯರು ದೇವೇಂದ್ರನ ಉಚ್ಚೈಶ್ರವಸ್ ಕುದುರೆಯನ್ನು ನೋಡಿದರು. ಅದರ ಬಾಲವು ಕಪ್ಪಗಿದೆಯೆಂದು ಕದ್ರು ಸಾಧಿಸಿದಳು. ಆದರೆ ಅದು ಬೆಳ್ಳಗಿದೆ ಎಂದು ವಿನತೆ ಸತ್ಯವನ್ನೇ ಹೇಳಿದಳು. ಅವರಿಬ್ಬರಲ್ಲೂ ಮಾತಿಗೆ ಮಾತು ಬೆಳೆದು ಸೋತವರು ಗೆದ್ದವರಿಗೆ ದಾಸಿಯಾಗಬೇಕೆಂಬ ಪಣವನ್ನೂ ಒಡ್ಡಲಾಯಿತು. ಅನಂತರ ಕದ್ರುವಿಗೆ ತನ್ನ ಹೇಳಿಕೆ ತಪ್ಪೆಂದು ತಿಳಿದರೂ ತನಗೆ ಸಾವಿರ ಮಕ್ಕಳಿದ್ದರಲ್ಲ! ಕಪ್ಪಗಿದ್ದ ಅವರೆಲ್ಲ ಆ ಕುದುರೆಯ ಬಾಲಕ್ಕೆ ಸುತ್ತಿಕೊಳ್ಳಿರಿ ಎಂದು ಆಜ್ಞೆ ಮಾಡಿದಳು. ಆದರೆ ಸರ್ಪಕುಲದಲ್ಲಿ ವಿವೇಕಶಾಲಿಯಾದ ವಾಸುಕಿ ಈ ಮಾತಿಗೆ ಒಪ್ಪಲಿಲ್ಲ. ಇದು ಅನ್ಯಾಯ ಎಂಬುದು ಅವನ ಭಾವನೆ. ಇಷ್ಟಕ್ಕೇ ತಾಯಿಗೆ ಕೋಪ ಬರಬೇಕೆ? "ನೀವೆಲ್ಲ ಜನಮೇಜಯರಾಯನು ಮಾಡಲಿರುವ ಯಜ್ಞದಲ್ಲಿ ಯಜ್ಞಕುಂಡಕ್ಕೆ ಬಿದ್ದು ಸಾಯಿರಿ" ಎಂದು ಶಾಪವಿತ್ತಳು. ತನ್ನ ಮಾತನ್ನು ಮನ್ನಿಸದ ಮಕ್ಕಳು ಯಾಕೆ ಬದುಕಿರಬೇಕು ಎಂಬ ತರ್ಕ ಆಕೆಯದು. ಆದರೆ ಈ ಸಾವಿರ ಮಕ್ಕಳಲ್ಲಿ ಕರ್ಕೋಟಕನೆಂಬ ಮಗ ಮಾತ್ರ ಶಾಪಕ್ಕೆ ಹೆದರಿ ತಾಯಿಯ ಮಾತನ್ನು ನೆರವೇರಿಸುವ ಕಾಯಕದಲ್ಲಿ ತನ್ನನ್ನು ತೊಡಗಿಸಿಕೊಂಡ. ಯಾರಿಗೂ ಕಾಣದಂತೆ ಉಚ್ಚೈಶ್ರವಸ್ ಕುದುರೆಯ ಬಾಲಕ್ಕೆ ಲಂಬವಾಗಿ ನೇತುಬಿದ್ದ. ಕರಿಯ ವರ್ಣದ ಕರ್ಕೋಟಕ ಬಾಲಕ್ಕೆ ಅಂಟಿಕೊಂಡ ಕೂಡಲೇ ಬಾಲವು ಕಪ್ಪಾಗಿ ಕಾಣಿಸಿತು. ಸವತಿ ವಿನತೆ ಇದು ನಿಜವೆಂದು ನಂಬಿ ಕದ್ರುವಿನ ದಾಸಿಯಾದಳು.

ಇದು ಆಸ್ತಿಕಪರ್ವದ ಘಟನೆಯಾದರೆ ಇದೇ ಕರ್ಕೋಟಕನು ಅರಣ್ಯಪರ್ವದಲ್ಲಿ ನಳದಮಯಂತಿಯರ ಕಥೆಯಲ್ಲಿ ಕಾಣಿಸಿಕೊಳ್ಳುತ್ತಾನೆ.

ರಾಜ್ಯವನ್ನು ಜೂಜಿನಲ್ಲಿ ಕಳೆದುಕೊಂಡು ಪತ್ನಿಯಿಂದ ಅಗಲಿ ನಳಮಹಾರಾಜನು ಕಾಡಿನಲ್ಲಿ ಅಲೆಯುತ್ತಿರುತ್ತಾನಷ್ಟೆ. ಹಾಗೆ ಹೋಗುತ್ತಿರುವಾಗ ಅಗ್ನಿಹೋತ್ರದ ಮಧ್ಯೆ ಸಿಕ್ಕಿಕೊಂಡ ಒಂದು ಹಾವು (ಅವನೇ ಕರ್ಕೋಟಕ) - "ನನ್ನನ್ನು ಕಾಪಾಡಿ" ಎಂದು ಕೂಗಿಕೊಳ್ಳುತ್ತದೆ. ಅದು ನಿಜವೆಂದು ತಿಳಿದು ಸಹಾಯಕ್ಕೆ ಧಾವಿಸಿ ನಳನು ಕರ್ಕೋಟಕನನ್ನು ಕಾಪಾಡಿದರೆ ಆ ಹಾವು ನಳನನ್ನೇ ಕಚ್ಚಬೇಕೆ? ಕೂಡಲೇ ವಿಕಾರರೂಪವನ್ನು ಪಡೆದುದೇ ಅಲ್ಲದೆ ವಿಷಪೂರಿತನಾದುದಕ್ಕೆ ದುಃಖಿಸುತ್ತಿದ್ದ ನಳನಿಗೆ ಕರ್ಕೋಟಕ ಹೇಳಿತು. "ನಳ ಹೆದರಬೇಡ, ನಿನ್ನ ದೇಹದಲ್ಲಿ ನನ್ನ ವಿಷ ಇರುವವರೆಗೆ ವಿಷೋರಗ ರಾಕ್ಷಸ ಪಿಶಾಚಾದಿ ಭಯ ನಿನಗಿರುವುದಿಲ್ಲ. ಅಲ್ಲದೆ ನಿನಗೆ ಅನೇಕ ಅನುಕೂಲಗಳೂ ಇವೆ. ಯಾರೂ ನಿನ್ನನ್ನು ಗುರುತಿಸುವುದಿಲ್ಲ. ಅಲ್ಲದೆ ಈ ವಸ್ತ್ರವನ್ನು

ಜೋಪಾನವಾಗಿ ಇಟ್ಟುಕೊಂಡಿರು. ನೀನು ಬಯಸಿದರೆ ಕೂಡಲೇ ಈ ವೇಷವನ್ನು ಉಟ್ಟುಕೊಂಡು ನನ್ನನ್ನು ಆಹ್ವಾನಿಸು. ನಾನು ಎಲ್ಲಿದ್ದರೂ ಖಂಡಿತ ಬರುತ್ತೇನೆ. ನಿನ್ನ ಕಷ್ಟದ ದಿನಗಳು ಕಳೆದು ಹೆಂಡತಿ-ಮಕ್ಕಳು ರಾಜ್ಯ ಎಲ್ಲ ಮತ್ತೆ ಲಬ್ಧವಾಗುತ್ತವೆ" ಎಂದು ಆಶ್ವಾಸನೆ ಕೊಟ್ಟ. ಅಲ್ಲದೆ ಋತುಪರ್ಣನ ಬಳಿ ಹೋಗಿ ಬಾಹುಕ ಎಂಬ ಹೆಸರಿನಿಂದ ಅಡಿಗೆಯವನಾಗಿ ಸೇರಿಕೊಳ್ಳುವಂತೆ ಹೇಳಿದ. 'ಅಶ್ವಹೃದಯ'ವನ್ನು ಉಪದೇಶಿಸಿ ಋತುಪರ್ಣನಿಂದ ಅಕ್ಷಹೃದಯ (ಪಗಡೆಯಾಡುವ ಕಲೆ)ವನ್ನು ಕಲಿಯುವಂತೆ ಸೂಕ್ತಸಲಹೆಯನ್ನು ಕೊಟ್ಟು ತಾನು ಶಾಪಮುಕ್ತನಾಗಿ ಹೊರಟುಹೋದ.

* * * *

ಮುಚುಕುಂದ

ಕಾಲಯವನನನ್ನು ತನ್ನ ದೃಷ್ಟಿಯಿಂದಲೇ ಸುಟ್ಟುಹಾಕಿದ ಮುಚುಕುಂದನ ನಿದ್ರಾಶಕ್ತಿಯನ್ನು, ಬ್ರಹ್ಮವರವನ್ನು ಭಾಗವತ ಹೇಳುತ್ತದೆ. ಮಹಾಭಾರತದಲ್ಲಿ ಬರುವ ಬೇರೆಯ ಮುಚುಕುಂದನ ವಿಷಯ ಇಲ್ಲಿ ಪ್ರಸ್ತಾವಗೊಂಡಿದೆ. ಈತ ವಿಚಿತ್ರ ಧ್ಯೇಯಗಳನ್ನು ಮೈಗೂಡಿಸಿಕೊಂಡು ಅನ್ಯರಿಗೆ ವಿಶಿಷ್ಟನಾಗಿ ಕಾಣಿಸುತ್ತಿದ್ದ ಒಬ್ಬ ಯೋಧ. ತಾನು ಶ್ರಮಪಟ್ಟು ಸಂಪಾದಿಸಿದುದನ್ನು ಬಿಟ್ಟು ದಾನವಾಗಿ ಬಂದುದನ್ನು ಸ್ವೀಕರಿಸಬಾರದು ಎಂಬುದು ಈತನ ನೀತಿಯಾಗಿತ್ತು. ಒಮ್ಮೆ ಮುಚುಕುಂದ ಕುಬೇರನ ಅಲಕಾವತಿಯ ಮೇಲೆಯುದ್ಧ ಸಾರಿದ. ಆದರೆ ಮಹಾವೀರರಾಗಿದ್ದ ಅನುಭವೀ ಹೋರಾಟಗಾರರಾಗಿದ್ದ ಕುಬೇರನ ಸೈನಿಕರು ಇವನ ಸೈನ್ಯವನ್ನು ಪರಾಜಯಗೊಳಿಸಿದರು. ಆಗ ವಿಪತ್ತಿಗೆ ಸಿಲುಕಿದ ಮುಚುಕುಂದನು ತನ್ನ ಕುಲಗುರುಗಳಾದ ವಸಿಷ್ಠ ಮಹರ್ಷಿಗಳ ಸಹಾಯವನ್ನು ಯಾಚಿಸಿದ. ವಸಿಷ್ಠರು ಈತನ ಮಾತಿಗೆ ಒಪ್ಪಿದರು. ತಾವು ಮಾಡಿದ ತಪಸ್ಸು ಮಂತ್ರ ಪೂಜೆ ಹೋಮಗಳ ಫಲವಾಗಿ ತಮಗೆ ಬಂದಿದ್ದ ಶಕ್ತಿಯಿಂದ ಮುಚುಕುಂದನ ಸೇನೆಯಲ್ಲಿ ಅಪಾರವಾದ ಶಕ್ತಿಯನ್ನು ತುಂಬಿ ಗೆಲ್ಲಿಸಿದರು. ಆಗ ಯಮನ ಸಭೆಯಲ್ಲಿ ಮರ್ಯಾದೆ ಪಡೆಯುತ್ತಿದ್ದ ಈ ಮುಚುಕುಂದನಿಗೆ ಏನಾದರೂ ಸಹಾಯ ಮಾಡಬೇಕು ಎಂಬ ಮನಸ್ಸಾಯಿತು ಕುಬೇರನಿಗೆ.

"ನಿನ್ನ ನಡತೆ ಪರಾಕ್ರಮಗಳನ್ನು ಮೆಚ್ಚಿದ್ದೇನೆ. ನಿನಗೆ ಏನು ವರಬೇಕೋ ಕೇಳು. ಇಡೀ ಪೃಥ್ವಿಯನ್ನೇ ನಿನಗೆ, ದಾನವಾಗಿ ಕೊಡುವುದಕ್ಕೂ ನಾನು ಸಿದ್ಧನಾಗಿದ್ದೇನೆ" ಎಂದು ಘೋಷಿಸಿದ. ಆದರೆ ಮುಚುಕುಂದ ಅಂಥ ಪ್ರಲೋಭನೆಗೆ ಒಳಗಾಗುವವನಲ್ಲ. ಯಮನಿಗೆ ಹೇಳಿದ.

"ಕ್ಷಮಿಸಬೇಕು, ನಾನು ನನ್ನ ಬಾಹುಬಲದಿಂದ ಉಪಾರ್ಜಿಸಿದ ರಾಜ್ಯವನ್ನು ಉಪಭೋಗಿಸುತ್ತೇನೆಯೇ ಹೊರತು ದಾನವಾಗಿ ಬಂದ ರಾಜ್ಯವನ್ನಲ್ಲ' ಎಂದು ಧೈರ್ಯವಾಗಿ ಹೇಳಿದ. ಈ ಮಾತು ಕೇಳಿ ಕುಬೇರನಿಗೆ ನಿಜವಾಗಿ ಸಂತೋಷವಾಗಿತ್ತು. ಮುಚುಕುಂದನ ದೃಢಚಿತ್ತವನ್ನು ಕಂಡು ಪ್ರಶಂಸಿಸಿದ. ಮುಚುಕುಂದನು ಮುಂದೆ ಕೂಡ ತಾನು ಬಾಹುಬಲದಿಂದ ಗೆದ್ದುತಂದ ರಾಜ್ಯಗಳನ್ನು ಮಾತ್ರ ಸಮರ್ಪಕವಾಗಿ ಆಳಿದನೆಂದು ಉದ್ಯೋಗಪರ್ವದಲ್ಲಿ ಹೇಳಲಾಗಿದೆ.

ಹೀಗೆ ಎಷ್ಟೋ ವರ್ಷಗಳು ಕಳೆದ ಮೇಲೆ ಮುಚುಕುಂದನಿಗೆ ತನ್ನ ಈಗಿನ ಶಕ್ತಿ ಪರಾಕ್ರಮ ಎಷ್ಟೆಂಬುದನ್ನು ತಿಳಿಯುವ ಆಸೆಯಾಯಿತು. ಕುಬೇರನ ರಾಜ್ಯದ ಮೇಲೆ ದಂಡೆತ್ತಿ ಹೋದ. ಮತ್ತೆ ಯಕ್ಷ ಪಡೆ ಅಡ್ಡಗಟ್ಟಿದಾಗ ಕುಲಪುರೋಹಿತ ವಸಿಷ್ಠರ ಸಹಾಯದಿಂದ ಕುಬೇರ ಸೇನೆಯನ್ನು ಸೋಲಿಸಿದ. ತನ್ನ ಸ್ವಂತ ಬಲದಿಂದ ಕುಬೇರನ ರಾಜ್ಯವನ್ನು ಗೆಲ್ಲಲಿಲ್ಲ ಎಂಬ ಅಳುಕು ಮುಚುಕುಂದನಿಗೆ ಉಳಿದೇ ಉಳಿಯಿತು. ಆದುದರಿಂದ ಮತ್ತೆ ಕುಬೇರನು ಬಲವಂತ ಮಾಡಿದರೂ ಮುಚುಕುಂದನು ಒಂದು

ಮಲ್ಲು ಕಡ್ಡಿಯನ್ನೂ ಮುಟ್ಟುವುದಿಲ್ಲ ಎಂಬ ತನ್ನ ಹಳೆಯ ಸಂಕಲ್ಪವನ್ನೇ ತಿಳಿಸಿದನೆಂದು ಮಹಾಭಾರತದ ಶಾಂತಿಪರ್ವ ಹೇಳುತ್ತದೆ.

ಶರಣಾಗತ ರಕ್ಷಣೆಯ ವಿಷಯದಲ್ಲಿ ಮುಚುಕುಂದನು ಪರಶುರಾಮರೊಡನೆ ನಡೆಸಿದ ಸಂವಾದವು ಅವನ ಬುದ್ಧಿತೀಕ್ಷ್ಣತೆಯನ್ನು ತಿಳಿಸುವ ಪ್ರಸಂಗವಾಗಿದೆ. ರಾಜ ಕಾಂಬೋಜನೊಂದಿಗೆ ಯುದ್ಧ ಮಾಡಿಗಳಿಸಿದ ರಾಜ್ಯವನ್ನು ಮರುತ್ತನಿಗೆ ದಾನಮಾಡಿದ ಪ್ರಸಂಗ ಈತನ ದಾನಗುಣವನ್ನು ವಿವರಿಸುತ್ತದೆ. ಈ ಮುಚುಕುಂದನ ಎರಡು ಪ್ರಮುಖ ಗುಣಗಳೆಂದರೆ ಗೋವುಗಳ ಮಹಿಮೆಯನ್ನು ಎಲ್ಲೆಡೆ ಪ್ರಸಾರ ಮಾಡಿದ್ದು ಹಾಗೂ ಮಾಂಸ ಭಕ್ಷಣೆಯನ್ನು ನಿಷೇಧಿಸಿದ್ದು. ಈ ಕಾರಣಗಳಿಂದಾಗಿ ಪ್ರಾತಃಸ್ಮರಣೀಯರಾದ ಪೂರ್ವರಾಜರುಗಳ ಪ್ರಸಕ್ತಿ ಬಂದಾಗಲೆಲ್ಲ ಮುಚುಕುಂದನ ಹೆಸರು ಅತ್ಯಗತ್ಯವಾಗಿ ಬರುತ್ತದೆ.

* * * *

ಬಕಾಸುರ



ನೆಮ್ಮದಿಯಿಂದ ಬಾಳಲು ಬಯಸುವ ನಾಗರಿಕರನ್ನು ತಮ್ಮ ದುಷ್ಟ ಮುಷ್ಟಿಯಲ್ಲಿ ಇರಿಸಿಕೊಂಡು ಬಾಳು ಘೋರವೆನಿಸುವಂತೆ ಮಾಡುವ ಭಯೋತ್ಪಾದಕರು ಎಲ್ಲ ಕಾಲಗಳಲ್ಲೂ ವಿಜೃಂಭಿಸುತ್ತಾರೆ ಎಂಬುದಕ್ಕೆ ಮಹಾಭಾರತದಲ್ಲಿ ಬರುವ ಬಕಾಸುರನೇ ಸಾಕ್ಷಿ. ಇವನು ಏಕಚಕ್ರನಗರದ ಹೊರವಲಯದ ಪರ್ವತ ಸೀಮೆಯಲ್ಲಿ ವಾಸ ಮಾಡುತ್ತಿದ್ದ. ಅರಗಿನ ಮನೆಯಿಂದ ತಪ್ಪಿಸಿಕೊಂಡು ಪಾಂಡವರು ಏಕಚಕ್ರನಗರಕ್ಕೆ ಬಂದು ಒಬ್ಬ ಬ್ರಾಹ್ಮಣನ ಮನೆಯಲ್ಲಿದ್ದರಷ್ಟೆ. ಒಂದು ದಿನ ಅವಳಿಗೆ ಪಕ್ಕದ ಮನೆಯ

ಯಜಮಾನನ ಆರ್ತರವ ಕೇಳಿಸಿತು. ಏಷ್ಟೆಂದರೂ ಅವಳು ಕ್ಷತ್ರಿಯ ಕನ್ಯೆಯಲ್ಲವೇ? ಬ್ರಾಹ್ಮಣನ ಬಳಿಗೆ ಹೋಗಿ

"ಕುತೋ ಮೂಲಮಿದಂ ದುಃಖಂ ಜ್ಞಾತುಮಿಚ್ಛಾಮಿ ತತ್ತ್ವತಃ" ಎಂದು ಸಂಕಟದ ಮೂಲವನ್ನು ಕೆದಕಿದಳು. ಆಗ ಅವಳಿಗೆ ಬಕರಾಕ್ಷಸನ ಕ್ರೌರ್ಯದ ವಿವರಗಳು ದೊರೆತವು. ಊರಿನವರೆಲ್ಲ ಬಕಾಸುರನೊಂದಿಗೆ ಸಂಧಾನ ಮಾಡಿಕೊಂಡು ಪ್ರತಿನಿತ್ಯವೂ ಒಂದೊಂದು ಮನೆಯಿಂದ ಸರದಿಯ ಪ್ರಕಾರ ಅಪಾರ ಪ್ರಮಾಣದ ಅಡಿಗೆಯನ್ನು ಬಂಡಿಯಲ್ಲಿ ತುಂಬಿ ಆಹಾರದ ಜೊತೆಗೆ ಎತ್ತುಗಳನ್ನೂ, ಬಕನು ಮನುಷ್ಯ ಮಾಂಸಾಪೇಕ್ಷಿಯಾಗಿದ್ದುದರಿಂದ ಒಬ್ಬ ವ್ಯಕ್ತಿಯನ್ನೂ ಕಳಿಸುತ್ತಿದ್ದರಂತೆ. ಈಗಿನ ಸರದಿ ಈ ಬ್ರಾಹ್ಮಣನ ಮನೆಯದು, ಬಾಲಕನನ್ನು ಬಲಿಕೊಡಲು ಇಷ್ಟವಿಲ್ಲದೆ ಆ ಬ್ರಾಹ್ಮಣ ತಾನೇ ಬಲಿಯಾಗಲು ಹೋಗುವುದಾಗಿ ಹೇಳಿದ. ಕುಂತಿಗೆ ಈ ಮಾತು ಕೇಳಿ ಸ್ವಲ್ಪ ಸಂತೋಷವೇ ಆಗಿರಬೇಕು. ದಿನವೂ ಭಿಕ್ಷಾನ್ನದಿಂದ ಬೇಸತ್ತಿರುವ ಭೀಮನಿಗೆ ನಾಳೆಯಾದರೂ ಒಳ್ಳೆಯ ಆಹಾರ ದೊರೆಯುವುದೆಂದು ತಿಳಿದು ಆದ ಸಂತೋಷ ಇದು.

ಅಲ್ಲದೆ ಬಲಶಾಲಿಯಾದ ಭೀಮನು ಆ ರಾಕ್ಷಸನನ್ನು ಕೊಲ್ಲುವ ವಿಷಯದಲ್ಲಿ ಅವಳಿಗೆ ಅನುಮಾನವೇ ಇರಲಿಲ್ಲ. ಈ ಪುಣ್ಯಕಾರ್ಯದಿಂದ ಊರಿನ ಜನಗಳಿಗೂ ನೆಮ್ಮದಿಯಾಗುತ್ತದೆಂಬ ಭಾವನೆಯೂ ಅವಳಲ್ಲಿ ಸುಳಿಯಿತು. ತನ್ನ ಐವರು ಮಕ್ಕಳಲ್ಲಿ ಒಬ್ಬನನ್ನು ಬಕನ ಬಳಿಗೆ ಕಳಿಸುವುದಾಗಿ ಕುಂತಿ ಹೇಳಿದಾಗ ಆ ಬ್ರಾಹ್ಮಣನ ಮನೆಯವರೆಲ್ಲ ಬೆರಗಾದರು. ಕೊನೆಗೆ ಕುಂತಿ ಅವರನ್ನೆಲ್ಲ ಒಪ್ಪಿಸಿದಳು. ಬಕಾಸುರವಧಾ ಪ್ರಕರಣವನ್ನು ವ್ಯಾಸ, ಕುಮಾರವ್ಯಾಸ ಇಬ್ಬರೂ ತುಂಬ ದೀರ್ಘವಾದ ಕಥನದ ಮೂಲಕ ವರ್ಣಿಸಿದ್ದಾರೆ. ಈಗಾಗಲೇ ಹಿಡಿಂಬನನ್ನು ಕೊಂದಿದ್ದ ಭೀಮನಿಗೆ ಇದು ಎರಡನೆಯ ಸಂಘರ್ಷ. ಮಾಡಿಟ್ಟಿದ್ದ ಆಹಾರವನ್ನೆಲ್ಲಾ ತಾನೆ ಉಂಡು ಮುಗಿಸಿ ಬಳಿಕ ಬಕಾಸುರನನ್ನು ಭೀಮನು ಕೊಂದುಹಾಕಿದ ಘಟನೆಯನ್ನು ವ್ಯಾಸ-ಕುಮಾರವ್ಯಾಸರು ರೋಚಕವಾಗಿ ವಿವರಿಸಿದ್ದಾರೆ. ಮರದ ಕೊಂಬೆಗಳಿಂದ ಬಡಿದ ಭೀಮನ ಹೊಡೆತಕ್ಕೆ ಸಿಕ್ಕಿ ಸಾಯುವ ಮುನ್ನ ಬಕಾಸುರನು ಜೋರಾಗಿ ಕಿರುಚಿಕೊಂಡನಷ್ಟೆ. ಈಗ ಅಲ್ಲಿಗೆ ಬಂದ ರಾಕ್ಷಸರನ್ನೆಲ್ಲ ಭೀಮನು 'ಆ ಊರಿನವರ ತಂಟೆಗೆ ಬಂದರೆ ನಿಮಗೂ ಬಕಾಸುರನಿಗಾದ ಗತಿ ಕಾದಿದೆ' ಎಂದು ಹೆದರಿಸಿ ಓಡಿಸಿದ್ದು ಇನ್ನೊಂದು ವಿಶೇಷ. ಭೀಮನು ಬಕಾಸುರನ ಹೆಣವನ್ನು ಊರ ಮಧ್ಯದಲ್ಲಿ ನೇತು ಹಾಕಿ ಸಾರ್ವಜನಿಕರಿಗೆ ಅಭಯವನ್ನು ಕೊಟ್ಟ.

ಮುಂದಿನ ಅಜ್ಞಾತವಾಸಕ್ಕೆ ತರಬೇತಿ ಪಡೆಯುವವರ ಹಾಗೆ ಏಕಚಕ್ರನಗರದಲ್ಲಿ ಕೌರವ ಭಯದಿಂದ ಒಂದು ಬಗೆಯಲ್ಲಿ ಅಜ್ಞಾತರಾಗಿಯೇ ಉಳಿದಿದ್ದ ಪಾಂಡವರು ತಮಗೆ ಭಿಕ್ಷೆಯಿತ್ತು ಕಾಪಾಡಿದ ಊರೊಟ್ಟಿನವರ ಅನ್ನದ ಋಣವನ್ನು ತೀರಿಸಿದ ಬಗೆ ಅನುಕರಣ ಯೋಗ್ಯವಾದದ್ದಲ್ಲವೇ?

* * * *

ಯುವನಾಶ್ವ

ಪ್ರಸೇನಚಿತ್ತನ ಮಗನಾದ ಯುವನಾಶ್ವ ಒಬ್ಬ ಪ್ರಸಿದ್ಧರಾಜ. ಇವನು ಸಾವಿರಾರು ಅಶ್ವಮೇಧಯಾಗಗಳನ್ನು ಮಾಡಿದವನೆಂದು ಕೀರ್ತಿತನಾಗಿದ್ದಾನೆ. ಇವನ ಮಗ ಮಾಂಧಾತನ ಜನನ ಕಥೆಯೂ ವಿಚಿತ್ರವಾಗಿದೆ. ಯುವನಾಶ್ವನಿಗೆ ಬಹಳ ಕಾಲ ಪುತ್ರಸಂತಾನವಿರಲಿಲ್ಲ. ಪುತ್ರಾರ್ಥಿಯಾಗಿ ಭೃಗುಮಹರ್ಷಿಗಳ ಬಳಿಗೆ ಹೋದ. ಭೃಗು ಮಹರ್ಷಿಗಳು ಈತನ ಕಥೆಯನ್ನು ಕೇಳಿ ಪುತ್ರಕಾಮೇಷ್ಟಿಯಾಗವನ್ನು ಇವನಿಂದ ಮಾಡಿಸುತ್ತಿದ್ದರು. ಆ ಸಂದರ್ಭದಲ್ಲಿ ಮಂತ್ರಾಭಿಷೇಕದಿಂದ ಪವಿತ್ರಗೊಳಿಸಿದ್ದ ನೀರಿನ ಪಾತ್ರೆಯನ್ನು ಕೊಟ್ಟು ಅದನ್ನು ಸುರಕ್ಷಿತವಾಗಿ ಒಂದೆಡೆ ಇರಿಸುವಂತೆ ಹೇಳಿದರು. ಮಧ್ಯೆ ಒಂದು ರಾತ್ರಿ ಯುವನಾಶ್ವನಿಗೆ ತುಂಬ ಬಾಯಾರಿಕೆ. ಸುತ್ತ ಯಾರೂ ಇರಲಿಲ್ಲ. ತಾನೇ ಎದ್ದುಹೋಗಿ ಪಾತ್ರೆಯಲ್ಲಿ ಇರಿಸಿದ್ದ ಮಂತ್ರಜಲವನ್ನು ಕುಡಿದು ಬಾಯಾರಿಕೆಯನ್ನು ಹೋಗಲಾಡಿಸಿಕೊಂಡ. ಮರುದಿನ ಬೆಳಗ್ಗೆ ಬಂದ ಋತ್ವಿಜರು ಆ ಪಾತ್ರೆಯನ್ನು ಹುಡುಕಿದರು ನೀರು ಕಾಣಲಿಲ್ಲ. ಆಗ ಯುವನಾಶ್ವನು ನಡೆದ ಘಟನೆಯನ್ನು ವಿವರಿಸಿದ. ಭೃಗು ಮಹರ್ಷಿಗಳಿಗೆ ಆಶ್ಚರ್ಯವಾಯಿತು. ಏಕೆಂದರೆ ಅದು ಯಾಗ ಮುಗಿದ ಮೇಲೆ ಯುವನಾಶ್ವನ ಹೆಂಡತಿಗೆ ಕೊಡಬೇಕಾಗಿದ್ದ ಮಂತ್ರಜಲ. ಆ ನೀರನ್ನು ಕುಡಿದು ಆಕೆ ಗರ್ಭಧರಿಸಬೇಕಿತ್ತು. ಕಾಲಗತಿಯನ್ನು ತಪ್ಪಿಸಲು ಸಾಧ್ಯವೆ? ಈಗ ಯುವನಾಶ್ವನೇ ಮಂತ್ರಜಲದ ಮಹಿಮೆಯಿಂದ ಗರ್ಭಧರಿಸಬೇಕಾಗಿ ಬಂದಿದೆಯೆಂದು ಭೃಗು ಮಹರ್ಷಿ ಹೇಳಿದರು. ಅವರೆಂದಂತೆ ಯುವನಾಶ್ವನೇ ಗರ್ಭಧರಿಸಿದ. ಕಾಲಕ್ರಮದಲ್ಲಿ ಯುವನಾಶ್ವನ ಗರ್ಭವನ್ನು ಭೇದಿಸಿಕೊಂಡು ಒಂದು ಮಗು ಹೊರಬಂದಿತು. ಅದು ಅಳುತ್ತಿದ್ದಾಗ ದೇವೇಂದ್ರನೇ ಬಂದು ಅದರ ಬಾಯಿಗೆ ಬೆಟ್ಟನ್ನು ಇಟ್ಟು ಚೀಪಿಸಿ 'ಕುಡಿ, ಕುಡಿ' ಎಂದು ಸಮಾಧಾನ ಮಾಡಿದ್ದರಿಂದ ಆ ಮಗುವಿಗೆ 'ಮಾಂಧಾತ' ಎಂದೇ ಹೆಸರಾಯಿತು.

ಯುವನಾಶ್ವನು ಪಾಂಡವರ ಯೋಗಕ್ಷೇಮ ಚಿಂತಕನೂ ಆಗಿದ್ದ. ಅರಣ್ಯಪರ್ವದಲ್ಲಿ ಈತ ಭೂರಿದಕ್ಷಿಣೆಯಿತ್ತು ಅನೇಕಾನೇಕ ಯಜ್ಞಗಳನ್ನು ಮಾಡಿದ ಸಂಗತಿಯನ್ನು ವರ್ಣಿಸಲಾಗಿದೆ. ಭೀಷ್ಮರ ಅವಸಾನದ ನಂತರ ಅವರಿಗೆ ಸೂಕ್ತ ಚಿತಾನಿರ್ಮಾಣ ಮಾಡುವ ಕಾರ್ಯದಲ್ಲಿ ಈತ ಪಾಂಡವರಿಗೆ ನೆರವಾಗಿದ್ದನೆಂದು ಅನುಶಾಸನಪರ್ವ ಹೇಳುತ್ತದೆ. ಅಶ್ವಮೇಧಯಾಗ ಮಾಡಲು ಹಣವಿಲ್ಲದೆ ಪಾಂಡವರು ವ್ಯಾಸರ ಸಲಹೆಯಂತೆ ಹಿಮಾಲಯದಲ್ಲಿ ಮರುತ್ತರಾಯನು ಬಿಟ್ಟು ಹೋಗಿದ್ದ ಚಿನ್ನದ ಸಂಪತ್ತನ್ನು ತರಲು ಹೋಗುವಾಗ ಹಸ್ತಿನಾವತೀ ನಗರ ರಕ್ಷಣೆಯ ಭಾರವನ್ನು ಯುವನಾಶ್ವನು ಹೊತ್ತಿದ್ದ ಸಂಗತಿ ಅಶ್ವಮೇಧ ಪರ್ವದಲ್ಲಿ ಉಕ್ತವಾಗಿದೆ. ಮುಂದೆ ಆಶ್ರಮವಾಸಿ ಪರ್ವದಲ್ಲಿ ಪಾಂಡವರು ಕಾಡಿನಲ್ಲಿದ್ದ ಧೃತರಾಷ್ಟ್ರ-ಗಾಂಧಾರಿ-ವಿದುರರನ್ನು ನೋಡಿಕೊಂಡು ಬರಲು ಹೋಗಿದ್ದಾಗ ಕೂಡ ಈತನೇ ನಗರ-ರಾಜ್ಯ ಪಾಲನೆಯ ಜವಾಬ್ದಾರಿಯನ್ನು ವಹಿಸಿದ್ದನೆಂದು ತಿಳಿದುಬರುತ್ತದೆ. ಕೊನೆಗೆ ಪಾಂಡವರೆಲ್ಲ ಸ್ವರ್ಗದ ದಾರಿಯಲ್ಲಿ ಹೋದರೆಂಬುದನ್ನು

ತಿಳಿಸುವ ಮಹಾಪ್ರಸ್ಥಾನ ಪರ್ವದಲ್ಲಿ ಅವರೆಲ್ಲ ಹೊರಡುವ ಮುನ್ನ ನಗರ ರಕ್ಷಣೆಯ ಜವಾಬ್ದಾರಿಯನ್ನು ಈತನಿಗೇ ಹೊರಿಸಿದರೆಂದೂ ಅದನ್ನು ಯುಯುತ್ಸುವಿಗೆ ಅಧಿಕೃತವಾಗಿ ಯುವನಾಶ್ವನು ಒಪ್ಪಿಸಿದನೆಂದೂ ಹೇಳಲಾಗಿದೆ.

ಯಾಗ ಪ್ರಿಯನೂ ಸಾಧುಸಂತರ ಪ್ರಿಯನೂ ಉತ್ತಮ ಆಡಳಿತಗಾರನೂ ಆಗಿದ್ದ ಯುವನಾಶ್ವನು ಪಾಂಡವರ ಹಿತೈಷಿಯಾಗಿ ಲೋಕಸೇವೆ ಮಾಡಿದ ಒಬ್ಬ ಮಹಾವ್ಯಕ್ತಿ. ಗಂಡಸೊಬ್ಬನು ಗರ್ಭಧರಿಸಿ ಮಗುವನ್ನು ಹಡೆದ ಅಪರೂಪ ಘಟನೆಗೂ ಈತನೇ ಕೇಂದ್ರವಾಗಿದ್ದಾನೆ.

* * * *

ಸುದರ್ಶನಾ

ಮಹಾಭಾರತದ ಅನುಶಾಸನ ಪರ್ವದಲ್ಲಿ ಈಕೆಯ ಕಥೆ ಬರುತ್ತದೆ. ಭೀಷ್ಮರು ಇವಳ ಕಥೆಯನ್ನು ಕಥನಿಸಿದ್ದಾರೆ. ಮನುವಿನ ನೂರು ಮಕ್ಕಳಲ್ಲಿ ಹತ್ತನೆಯವನಿಗೆ ದಶಾಶ್ವ ಎಂದು ಹೆಸರು. ಇವನು ಮಾಹಿಷ್ಮತೀ ನಗರದ ಅರಸನಾಗಿದ್ದ. ಇವನ ಸಂತತಿಯಲ್ಲಿ ಕ್ರಮವಾಗಿ ಮದಿರಾಶ್ವ, ದ್ಯುತಿಮತಿ, ಸುವೀರ ಸುದುರ್ಜಯ ಮೊದಲಾದ ಅರಸರಾದರು. ಇವರ ನಂತರ ಬಂದ ಅರಸನೆಂದರೆ ದುರ್ಯೋಧನ. ಈತ ವೇದವೇದಾಂತಗಳಲ್ಲಿ ಪಾರಂಗತನೂ ಆಗಿದ್ದ. ಇವನು ಎಂಥ ದಕ್ಷಪಾಲಕನಾಗಿದ್ದನೆಂದರೆ ಇವನ ರಾಜ್ಯದಲ್ಲಿ ಜಿಪುಣನಾದವನು ಒಬ್ಬನೂ ಇರಲಿಲ್ಲವಂತೆ. ಇವನು ನರ್ಮದೆಯನ್ನು ಮದುವೆಯಾಗಿ ಸುದರ್ಶನಾ ಎಂಬ ಸುಂದರ ಮಗಳನ್ನು ಪಡೆದ. ಅವಳ ಸೌಂದರ್ಯಕ್ಕೆ ಮೆಚ್ಚಿದ ಅಗ್ನಿಯು ಬ್ರಾಹ್ಮಣನ ವೇಷದಲ್ಲಿ ದುರ್ಯೋಧನನ ಬಳಿಗೆ ಬಂದು ಸುದರ್ಶನೆಯನ್ನು ತನಗೆ ಮದುವೆ ಮಾಡಿಕೊಡಬೇಕೆಂಬ ಪ್ರಾರ್ಥನೆ ಸಲ್ಲಿಸಿದ. ಆದರೆ ದುರ್ಯೋಧನನು ಒಪ್ಪಲಿಲ್ಲ. ಕೂಡಲೇ ಅಗ್ನಿ ಅಲ್ಲಿಂದ ಮಾಯವಾದ. ಪರಿಣಾಮವಾಗಿ ದುರ್ಯೋಧನನು ನಡೆಸುತ್ತಿದ್ದ ಯಜ್ಞವು ಅಗ್ನಿ ಇಲ್ಲದ್ದರಿಂದ ನಿಂತುಹೋಯಿತು. ಕೂಡಲೇ ಪುರೋಹಿತರನ್ನು ಕರೆಸಿ ಚರ್ಚೆ ಮಾಡಿದ. ಅವರುಗಳಿಗೆ ಅಗ್ನಿದೇವನಿಂದ ನಡೆದ ಸಂಗತಿಯೆಲ್ಲ ತಿಳಿಯಿತು. ಕೂಡಲೇ ಸುದರ್ಶನೆಯನ್ನು ಅಗ್ನಿಗೆ ಕೊಟ್ಟು ವಿವಾಹ ಮಾಡಿಸಬೇಕೆಂದು ಅವರೆಲ್ಲ ಬೋಧಿಸಿದರು.ದುರ್ಯೋಧನ ಒಪ್ಪಿಕೊಂಡ. ಪಾಣಿಗ್ರಹಣ ಸಂದರ್ಭದಲ್ಲಿ ಅಗ್ನಿಯು ಮಾವನಿಗೆ ತಾನು ಸರ್ವದಾ ಅವನ ರಾಜಧಾನಿಯಲ್ಲೇ ವಾಸಿಸುವುದಾಗಿ ಮಾತುಕೊಟ್ಟ. ಪರಿಣಾಮವಾಗಿ ಈಗಲೂ ಅವನ ಊರಿನಲ್ಲಿ ಅಗ್ನಿ ನೆಲೆಸಿದ್ದಾನೆಂದು ಐತಿಹ್ಯವಿದೆ. ರಾಜಸೂಯಯಾಗದ ದಿಗ್ವಿಜಯ ಸಂದರ್ಭದಲ್ಲಿ ಸಹದೇವನು ಈ ದುರ್ಯೋಧನನನ್ನು ಕಂಡಿದ್ದನು.

ಸುದರ್ಶನೆಯು ಅಗ್ನಿಯನ್ನು ಮದುವೆಯಾಗಿ ಸುದರ್ಶನ ಎಂಬ ಹೆಸರಿನ ಮಗನನ್ನು ಪಡೆದಳು. ಅವನು ಮಹಾ ಮೇಧಾವಿಯಾಗಿ ಬೆಳೆದು ಬಾಲ್ಯದಲ್ಲಿಯೇ ಬ್ರಹ್ಮಜ್ಞಾನವನ್ನು ಪಡೆದಿದ್ದನು.

ಈ ಸುದರ್ಶನ ರಾಜನ ಹೆಂಡತಿ ಓಘವತಿ. ಓಘವತ ಎಂಬ ಅರಸನ ಮಗಳಾದ ಈ ಓಘವತಿ ಓಘರಥ ಎಂಬಾತನ ತಂಗಿಯಾಗಿದ್ದಳು. ದಂಪತಿಗಳು ಕುರುಕ್ಷೇತ್ರದಲ್ಲಿ ವಾಸ ಮಾಡುತ್ತಿದ್ದರು. "ಮನೆಗೆ ಬಂದ ಅತಿಥಿಯನ್ನು ತೃಪ್ತಿಪಡಿಸುವುದು ನಿನ್ನ ಕರ್ತವ್ಯ. ನಿನ್ನನ್ನೇ ಅರ್ಪಿಸಿಕೊಂಡರೂ ತಪ್ಪಿಲ್ಲ" ಎಂದು ಸುದರ್ಶನನು ಹೆಂಡತಿಗೆ ಹೇಳಿ ಕಟ್ಟಿಗೆ ಸಂಗ್ರಹಿಸಲು ಕಾಡಿಗೆ ಹೋಗಿದ್ದ. ಅವನು ಹೇಳಿದ್ದ ಮಾತಿಗೆ ತಕ್ಕಂತೆ ಒಬ್ಬ ಸಜ್ಜನ ಬ್ರಾಹ್ಮಣನು ಇವಳ ಬಳಿಗೆ ಬಂದು ಅವಳನ್ನು ಪಡೆಯುವ ಆಸೆಯನ್ನು ವ್ಯಕ್ತಪಡಿಸಿದ. ಇತ್ತ ಕಬ್ಬಿಣದ ಬಡಿಗೆ ಹಿಡಿದ ಮೃತ್ಯುದೇವನು ಸುದರ್ಶನನು ತಪ್ಪು ಮಾಡುವುದನ್ನೇ ಕಾದಿದ್ದನು. ಸುದರ್ಶನನು ಮನೆಗೆ ಬಂದು ಸಂಗತಿಯನ್ನೆಲ್ಲ ತಿಳಿದರೂ ಕೋಪ ಮಾಡಿಕೊಳ್ಳದೆ ಶಾಂತಸ್ವಭಾವದಿಂದಲೇ ಇದ್ದನು. ಆಗ ಬ್ರಾಹ್ಮಣ

ರೂಪದಲ್ಲಿ ಬಂದಿದ್ದ ಮೃತ್ಯುದೇವನು ಇಬ್ಬರಿಗೂ ಮಂಗಳವಾಗಲೆಂದು ಅನುಗ್ರಹಿಸಿದನು. ಓಘವತಿ ಅರ್ಧ ದೇಹದಲ್ಲಿ ಪತಿಯ ಹಿಂಬಾಲಕಳಾಗಿ ಉಳಿದು ಉಳಿದ ಅರ್ಧದಲ್ಲಿ ಓಘವತೀ ಎಂಬ ನದಿಯಾಗಿ ಹರಿದಳು.

ಬಂದ ಅತಿಥಿಯನ್ನು ತೃಪ್ತಿಪಡಿಸುವುದಕ್ಕೆ ಹೆಂಡತಿಯನ್ನು ಬೇಕಾದರೂ ಅರ್ಪಿಸುವ ಸಂಪ್ರದಾಯವು ಬಹಳ ಹಿಂದಿನಿಂದ ಇದ್ದು ಬಸವಣ್ಣನವರ ಒಂದು ಕಥೆಯಲ್ಲೂ ಸೇರಿಕೊಂಡಿರುವುದನ್ನು ಗಮನಿಸಬೇಕು.

* * * *

ಸಾವಿತ್ರಿ

ಸಂಕಲ್ಪಶಕ್ತಿಯಿಂದ ದೃಢಚಿತ್ತದಿಂದ ನಿರಂತರ ಪರಿಶ್ರಮದಿಂದ ಹೆಣ್ಣು ಎಂಥ ಕಠಿಣ ಪರಿಸ್ಥಿತಿಯನ್ನೂ ಮಾರ್ಪಡಿಸಿಕೊಳ್ಳಬಲ್ಲಳು ಎಂಬುದಕ್ಕೆ ಸಾವಿತ್ರಿ ಸತ್ಯವಾನರ ಹಳೆಯ ಕಥೆ ಸಾಕ್ಷಿಯಾಗುತ್ತದೆ. ತುಂಬ ಪ್ರಾಚೀನವಾದ ಈ ಕಥೆಯನ್ನು ಅರಣ್ಯಪರ್ವದಲ್ಲಿ ತೀರ್ಥಯಾತ್ರೆ ಮಾಡುತ್ತಿದ್ದ ಧರ್ಮರಾಯನಿಗೆ ಮಾರ್ಕಂಡೇಯರು ಹೇಳುತ್ತಾರೆ.

"ಪತಿವ್ರತಾಯಾ ಮಾಹಾತ್ಮ್ಯಂ ಸಾವಿತ್ರ್ಯಾಃ" ಎಂಬ ಮಾತು ಪ್ರಸಿದ್ಧವಾಗಿದೆ. ಅರವಿಂದರು ಈಕೆಯ ಬಗೆಗೆ ಒಂದು ಮಹಾಕಾವ್ಯವನ್ನೇ ರಚಿಸಿದ್ದಾರೆ.

ಮಾದ್ರದೇಶದ ರಾಜನಾದ ಅಶ್ವಪತಿ ಮಾಲವರಾಜಕುಮಾರಿ ಸತ್ಯವತಿಯನ್ನು ಮದುವೆಯಾಗಿದ್ದ. ಈಕೆಗೆ ಮಾಲವಿ ಎಂಬ ಹೆಸರೂ ಇತ್ತು. ಆದರೆ ಈ ದಂಪತಿಗಳಿಗೆ ಬಹಳ ಕಾಲ ಮಕ್ಕಳಿರಲಿಲ್ಲ. ತುಂಬ ಶ್ರದ್ಧೆಯಿಂದ ಹದಿನೆಂಟು ವರ್ಷಗಳಷ್ಟು ದೀರ್ಘಕಾಲ ಸಾವಿತ್ರೀದೇವಿಯ ಆರಾಧನೆ ಮಾಡಿದರು. ರಾಜನು ಒಂದು ಲಕ್ಷ ಆಹುತಿಗಳಿಂದ ಹೋಮಮಾಡಿ ಸಾವಿತ್ರಿದೇವಿಯನ್ನು ಒಲಿಸಿಕೊಂಡ. ಅವಳು ಪ್ರಸನ್ನಳಾಗಿ ಹೇಳಿದಳು: "ರಾಜ! ನಿನಗೆ ತೇಜಸ್ವಿನಿಯಾದ ಒಬ್ಬಳು ಮಗಳು ಹುಟ್ಟಿ ವಂಶಕ್ಕೇ ಹೆಸರು ತರುತ್ತಾಳೆ."

ಹಾಗೆ ಹುಟ್ಟಿದ ಮಗಳಿಗೂ ತಂದೆ ಸಾವಿತ್ರಿ ಎಂದೇ ಹೆಸರಿಟ್ಟ. ಆ ರಾಜಪುತ್ರಿ ಮಹಾಸುಂದರಿಯಾಗಿದ್ದರೂ ಅವಳನ್ನು ಮದುವೆಯಾಗಲು ಯಾವ ರಾಜಪುತ್ರನೂ ಮುಂದೆ ಬರಲಿಲ್ಲ. (ಬಹುಶಃ ಒಂದು ವರ್ಷಕ್ಕೆ ಪತಿವಿಯೋಗ ಎಂದು ಯಾರೋ ಜೋಯಿಸರು ಹೇಳಿದ್ದರೋ ಏನೋ!) ಆಗ ರಾಜನು ಒಬ್ಬ ಮಂತ್ರಿಯನ್ನು ಜೊತೆ ಮಾಡಿಕೊಟ್ಟು, ಒಂದು ಸುವರ್ಣ ರಥದಲ್ಲಿ ಆಕೆಯನ್ನು ಕುಳ್ಳಿರಿಸಿ "ನಿನ್ನ ಪತಿಯನ್ನು ನೀನೇ ಆಯ್ದುಕೊಂಡು ಬಾ" ಎಂದು ಹೇಳಿದ. ಅವಳು ರಥದಲ್ಲಿ ವರಾನ್ವೇಷಣೆ ಮಾಡುತ್ತಾ ಹಲವಾರು ತೀರ್ಥಕ್ಷೇತ್ರಗಳನ್ನು ಸಂದರ್ಶಿಸಿ ಊರಿಗೆ ಹಿಂದಿರುಗಿದಳು. ಸತ್ಯವಾನನನ್ನು ವರನಾಗಿ ಆಯ್ದುಕೊಂಡಿರುವ ವಿಷಯ ತಿಳಿಸಿದಳು. ವಾಸ್ತವವಾಗಿ ಅವನೂ ರಾಜಕುಮಾರ. ಆದರೆ ಅವನ ತಂದೆ ಕುರುಡನಾಗಿದ್ದರಿಂದ ಪಕ್ಕದ ಸೀಮೆಯ ರಾಜನು ರಾಜ್ಯವನ್ನು ಕಿತ್ತುಕೊಂಡು ಇವರನ್ನೆಲ್ಲ ಕಾಡಿಗೆ ಓಡಿಸಿದ್ದನಂತೆ. ಇಂಥವನಿಗೆ ಹೇಗೆ ಮಗಳನ್ನು ಕೊಡುವುದು ಎಂಬ ಚಿಂತೆ ಕಾಡಿದರೂ ಮಗಳ ಸಂಕಲ್ಪವನ್ನು ಕಂಡು ತಂದೆ ಒಪ್ಪಿ ಮದುವೆ ಮಾಡಿಕೊಟ್ಟ. ಸತ್ಯವಾನನ ಆಯುಷ್ಯವು ಇನ್ನು ಒಂದೇ ವರ್ಷ ಎಂದು ನಾರದರು ತಿಳಿಸಿದರೂ ಸಾವಿತ್ರಿ ತನ್ನ ನಿಶ್ಚಯವನ್ನು ಬದಲಿಸಲಿಲ್ಲವಾದ್ದರಿಂದ ಅಶ್ವಪತಿಗೆ ಮಗಳನ್ನು ಸತ್ಯವಾನನಿಗೆ ಮದುವೆ ಮಾಡಿಕೊಡದೆ ಬೇರೆ ದಾರಿ ಇರಲಿಲ್ಲ.

ಸತ್ಯವಾನ ಮೇಧಾವಿ, ಅಶ್ವಪ್ರಿಯ. ಮಣ್ಣಿನಲ್ಲೂ ಕುದುರೆಗಳನ್ನು ಸೃಷ್ಟಿಸುವ ಶಕ್ತಿ ಅವನಿಗಿದ್ದುದರಿಂದ ಅವನನ್ನು ಚಿತ್ರಾಶ್ವ ಎಂದೂ ಕರೆಯುತ್ತಿದ್ದರು.

ಕಾಡಿನಲ್ಲಿ ಅಚ್ಚುಕಟ್ಟಾಗಿ ಅತ್ತೆ ಮಾವಂದಿರ ಸೇವೆ ಮಾಡಿಕೊಂಡಿದ್ದ ಸಾವಿತ್ರಿ

ಸತ್ಯವಾನನ ಸಾವಿನ ದಿನ ಅವನನ್ನು ಕಾಡಿಗೆ ಹಿಂಬಾಲಿಸಿದಳು. ಸೌದೆ ಒಡೆಯುತ್ತ ಆಯಾಸದಿಂದ ಸಾವಿತ್ರಿಯ ತೊಡೆಯ ಮೇಲೆ ಮಲಗಿದ ಸತ್ಯವಾನನ ಪಕ್ಕದಲ್ಲಿ ಯಮರಾಜ ನಿಂತಿದ್ದ. ಸತ್ಯವಾನನು ಮಹಿಮಾವಂತನಾಗಿದ್ದುದರಿಂದ ಜೀವವನ್ನು ಕೊಂಡೊಯ್ಯಲು ಸೇವಕರನ್ನು ಕಳಿಸದೆ ಸ್ವಯಂ ಯಮನೇ ಬಂದಿದ್ದ.

ಸಾವಿತ್ರಿ ಯಮನನ್ನು ಹಿಂಬಾಲಿಸಿದ್ದು, ಯಮನಿಗೂ ಅವಳಿಗೂ ನಡೆದ ಸಂವಾದ ಎಲ್ಲರಿಗೂ ತಿಳಿದ ವಿಷಯವೇ ಆಗಿದೆ. ಯಮನಿಂದ ನಾಲ್ಕು ವರಗಳನ್ನು ಪಡೆದ ಸಾವಿತ್ರಿ ತನ್ನ ಮಾವನಿಗೆ ದೃಷ್ಟಿಶಕ್ತಿ ಹಿಂದಕ್ಕೆ ಬರಲಿ, ರಾಜ್ಯ ಮರಳಿ ಲಭಿಸಲಿ, ತನ್ನ ತಂದೆಗೆ ಮತ್ತೆ ಸಂತಾನವಾಗಲಿ, ನನಗೂ ಒಂದು ಮಗುವಾಗಲಿ ಎಂಬ ನಾಲ್ಕು ಬೇಡಿಕೆಗಳನ್ನು ಮುಂದಿರಿಸಿದಳು. ಸತ್ಯವಾನನ ಪ್ರಾಣವೊಂದನ್ನು ಬಿಟ್ಟು ಏನು ಬೇಕಾದರೂ ಕೇಳು ಕೊಡುತ್ತೇನೆ ಎಂದು ಮಾತುಕೊಟ್ಟಿದ್ದ ಯಮ ಒಂದಲ್ಲ ನಿನಗೆ ನೂರು ಮಕ್ಕಳಾಗಲಿ ಎಂದು ಉತ್ಸಾಹದಲ್ಲಿ ಹೇಳಿ ಕೊನೆಗೆ ತನ್ನ ಮಾತಿಗೇ ತಾನೇ ಸಿಕ್ಕಿಕೊಂಡು ಸತ್ಯವಾನನನ್ನು ಬದುಕಿಸಬೇಕಾಯಿತು. ಯಮಸರ್ಪಕ್ಕೆ ಅವಳು ಜೀರ್ಣಿಸಿಕೊಳ್ಳಲಾಗದ ಕಪ್ಪೆಯಾದಳು.

'ನಂಬು, ನಿನ್ನನೆ ನಂಬು,
ಮಂತ್ರದೀಕ್ಷತೆಗೆ ಗುರಿ ತಪ್ಪದೆಂದೂ'

ಎಂಬ ಕುವೆಂಪು ಮಾತಿಗೆ ಭಾಷ್ಯ ಬರೆದಂತಿದೆ ಸಾವಿತ್ರಿಯ ಜೀವನ.

* * * *

ಚಾರ್ವಾಕ (ಬಾಷ್ಕಲ ?)

ನಾಸ್ತಿಕರ ಆಚಾರ್ಯನಾದ ಚಾರ್ವಾಕನೇ ಅಲ್ಲದೆ ಕೌರವನ ಆಪ್ತ ಸ್ನೇಹಿತನಾಗಿದ್ದ ಒಬ್ಬ ರಾಕ್ಷಸವೀರ ಇವನು. ಕುಮಾರವ್ಯಾಸನು ಮಾತ್ರ ಇವನನ್ನು 'ಬಾಷ್ಕಳ' ಎಂದು ಹೆಸರಿಸಿದ್ದಾನೆ. (ಗದಾಪರ್ವ 13.6) ಕೌರವನ ಮರಣಾನಂತರ ಕೃಷ್ಣಾರ್ಜುನ ಭೀಮಾದಿಗಳು ಮತ್ತು ವ್ಯಾಸರು ತುಂಬ ಸಾಹಸದಿಂದ ಧರ್ಮರಾಯನನ್ನು ಪಟ್ಟಾಭಿಷೇಕಕ್ಕೆ ಒಪ್ಪಿಸುತ್ತಾರೆ. ಬ್ರಾಹ್ಮಣರಿಂದ ಆಶೀರ್ವಾದ ಮಾಡಿಸುತ್ತಾರೆ. ಚಾರ್ವಾಕನು ಅಲ್ಲಿಗೆ ಬ್ರಾಹ್ಮಣ ವೇಷದಲ್ಲಿ ಬಂದು ಕುಳಿತಿದ್ದ. ಪಾಂಡವ ವಿನಾಶವೇ ಅವನ ಗುರಿಯಾಗಿತ್ತು. ಧರ್ಮರಾಯನಿಗೆ ಅವಮಾನ ಮಾಡಲು ಸರಿಯಾದ ಸಮಯವನ್ನು ಕಾದಿದ್ದು ಇದ್ದಕ್ಕಿದ್ದಂತೆ ಎದ್ದು ನಿಂತು ಬಾಷ್ಕಲನು ಧರ್ಮರಾಯನನ್ನು



ಧಿಕ್ಕರಿಸಿ ಮಾತನಾಡುತ್ತಾನೆ. 'ದಾಯಾದಿಗಳನ್ನೆಲ್ಲ ಹೀನಾಯವಾಗಿ ಕೊಂದು ಹಾಕಿದವ ನೀನು' ಎಂದು ಧರ್ಮರಾಯನನ್ನು ಬಗೆಬಗೆಯಾಗಿ ಮೂದಲಿಸುತ್ತಾನೆ. ಇವನ ಮಾತುಗಳನ್ನು ಕೇಳಿ ಧರ್ಮರಾಯನು ಪೆಚ್ಚಾಗಿ ತಲೆ ತಗ್ಗಿಸಿ ನಿಂತುಕೊಳ್ಳುತ್ತಾನೆ. ತುಂಬಿದ ಸಭೆಯಲ್ಲಿ 'ದಿಗ್‌ಭವಂತಂ, ಕು-ನೃಪತಿಂ ಜ್ಞಾತು ಘಾತಿನ ಮಸ್ತು ವೈ' (ಛಿ! ಧಿಕ್ಕಾರ. ಹತ್ತಿರದ ಬಂಧುಗಳನ್ನೆಲ್ಲ ಕೊಂದವನು ಈ ಧರ್ಮರಾಯ) ಎಂದು ಆಕ್ಷೇಪಿಸಿದರೆ ಧರ್ಮರಾಯ ಇನ್ನೇನು ಮಾಡಿಯಾನು ?

ಧರ್ಮರಾಯನ ಸ್ಥಿತಿಯನ್ನು ನೋಡಿ ಬ್ರಾಹ್ಮಣರು ತಲ್ಲಣಿಸುತ್ತಾರೆ. ಮೊದಲ ಆಕ್ಷೇಪವನ್ನು ಮೀರಿಸುವ ಹಾಗೆ ಆ ಚಾರ್ವಾಕ (ಬಾಷ್ಕಲ)ನು.

ಕಿಂತೇನ ಸ್ಯಾದ್ಧಿ ಕೌಂತೇಯ ಕೃತ್ವೇಮಂ ಜ್ಞಾತಿ ಸಂಕ್ಷಯಂ
ಘಾತಯಿತ್ವಾ ಗುರೂಂಶ್ಚೈವ ಮೃತಂ ಶ್ರೇಯೋ ನ ಜೀವಿತಂ

(ನಿನ್ನಂಥವನಿಂದ ಏನಾದೀತು ? ಬಂಧು ಹತ್ಯೆಯ ಜೊತೆಗೆ ಗುರುಹತ್ಯೆ ಮಾಡಿರುವ ನೀನು ಬದುಕುವುದಕ್ಕಿಂತ ಸಾಯುವುದು ಲೇಸು.) ಎನ್ನುತ್ತಾನೆ.

ವಿಪ್ರರೆಲ್ಲರೂ ತನ್ನನ್ನು ಕ್ಷಮಿಸಬೇಕು. ಧರ್ಮರಾಯ ಕೈಜೋಡಿಸಿ ಕೇಳಿಕೊಂಡಾಗ ಅಲ್ಲಿದ್ದ ಬ್ರಾಹ್ಮಣರು ಇದು ತಮ್ಮ ಅಭಿಪ್ರಾಯವಲ್ಲವೆಂದೂ ತಿಳಿಸಿ ಆ ಕಪಟ ಸನ್ಯಾಸಿಯ ಕಡೆ ನೋಡಿ ದಿವ್ಯದೃಷ್ಟಿಯಿಂದ ಅವನಾರೆಂಬುದನ್ನು ತಿಳಿಯುತ್ತಾರೆ. ಕೂಡಲೇ ಕ್ರೋಧಾತುರರಾದ ಆ ಬ್ರಾಹ್ಮಣರು ಹುಂಕಾರ ಮಾತ್ರದಿಂದಲೇ ಆ ಕಪಟ ಪರಿವ್ರಾಜಕನನ್ನು ಸುಟ್ಟರು. ದಹಿಸಲ್ಪಟ್ಟ ಆ ರಾಕ್ಷಸ ಕೆಳಗೆ ಬಿದ್ದ. ಅವನು ಬಿದ್ದ ರೀತಿಯನ್ನು ವೇದವ್ಯಾಸರು ದೇವೇಂದ್ರನ ಸಿಡಿಲಿಗೆ ಸಿಕ್ಕಿ ದಗ್ಧವಾದ ಮರಕ್ಕೆ ಹೋಲಿಸಿದ್ದಾರೆ ('ಮಹೇಂದ್ರಾಶನಿ ನಿರ್ದಗ್ಧಃ ಪಾದಪೋಽಕುರವಾನಿವ !')

ಅಲ್ಲಿದ್ದ ಸಮಸ್ತ ಬ್ರಾಹ್ಮಣ ವರ್ಗದ ವಕ್ತಾರ ತಾನು ಎಂಬ ಭ್ರಮೆಯನ್ನು ಉಂಟು ಮಾಡಿ ಧರ್ಮರಾಯನ ತೇಜೋವಧೆ ಮಾಡುವುದೇ ಚಾರ್ವಾಕನ ಉದ್ದೇಶವಾಗಿತ್ತು. ಆದರೆ ಅಲ್ಲಿದ್ದ ಬ್ರಾಹ್ಮಣ ವರ್ಗದವರೇ ತನ್ನ ಮೇಲೆ ತಿರುಗಿ ಬೀಳುತ್ತಾರೆಂಬುದಾಗಲಿ ಅವರು ತನ್ನ ನಿಜರೂಪವನ್ನು ಕಂಡು ಹಿಡಿಯಬಲ್ಲರೆಂಬುದಾಗಲಿ ಆ ಕಪಟಿಗೆ ಗೊತ್ತಿರಲಿಲ್ಲ. ವೃಥಾಪವಾದ ಹೊರಿಸಲು ಬಂದ ಚಾರ್ವಾಕ ತಾನೇ ದಗ್ಧನಾದ! ಮುಂದೆ ಶ್ರೀಕೃಷ್ಣನು ಈ ಚಾರ್ವಾಕನ ಬಗೆಗೆ ವಿವರ ಕೊಡುತ್ತಾನೆ. ಚಾರ್ವಾಕನು ತನಗೆ ಯಾರಿಂದಲೂ ಸಾವು ಬರಬಾರದೆಂದು ಬ್ರಹ್ಮನಿಂದ ವರವನ್ನು ಪಡೆದಿದ್ದನಂತೆ. ಆದರೆ "ಆ ಬ್ರಾಹ್ಮಣರನ್ನು ಅವಮಾನಿಸಿದರೆ ಮಾತ್ರ ನಿನಗೆ ವಿನಾಶ ತಪ್ಪಿದ್ದಲ್ಲ. ಉಳಿದಂತೆ ನಿನಗೆ ಸಾವಿಲ್ಲ" ಎಂದು ಬ್ರಹ್ಮ ವರವನ್ನು ಕರುಣಿಸಿದ್ದನಂತೆ!

* * * *

ಅಂಬುವೀಚ

ಅರಗಿನ ಮನೆಯಿಂದ ತಪ್ಪಿಸಿಕೊಂಡು ಹೋದ ಪಾಂಡವರು ಬದುಕಿರುವುದಷ್ಟೇ ಅಲ್ಲದೆ ದ್ರೌಪದಿಯನ್ನು ಮದುವೆಯಾಗಿ ಬಲಿಷ್ಠರಾಗಿದ್ದಾರೆಂದು ತಿಳಿದಾಗ ಧೃತರಾಷ್ಟ್ರನು ಮುಂದಿನದನ್ನು ಚಿಂತಿಸಲು ಒಂದು ಸಭೆ ಕರೆಯುತ್ತಾನೆ. ಪಾಂಡವರನ್ನು ಗೌರವದಿಂದ ಹಿಂದಕ್ಕೆ ಕರೆಸುವ ಸಲಹೆ ಭೀಷ್ಮ ದ್ರೋಣ ವಿದುರರದು. ಆದರೆ ಕರ್ಣನು ವಿಧಿವಾದವನ್ನು ಮುಂದೊಡ್ಡಿ ಅಂಬುವೀಚ ಎಂಬ ಅರಸನ ಕಥೆ ಹೇಳುತ್ತಾನೆ. ಅವನು ಹೇಳುವ ಮಾತಿದು.

'ವಿಧಿಪೂರ್ವಂ ಹಿ ಸರ್ವಸ್ಯ
ದುಃಖಂ ವಾ ಯದಿ ವಾ ಸುಖಂ'

ಅಂದರೆ ಕಷ್ಟದ ಸಮಯದಲ್ಲಿ ಒಳ್ಳೆಯದಾಗುವುದಕ್ಕಾಗಲಿ ಕೆಟ್ಟದಾಗುವುದಕ್ಕಾಗಲಿ ಬೇರಾರೂ ಕಾರಣರಲ್ಲ. ಎಲ್ಲರ ಸುಖ ದುಃಖಗಳಿಗೆ ವಿಧಿಯೇ ಮೂಲ ಎಂಬುದು ಕರ್ಣನ ವಾದ. ಆದರೆ ಈ ಕಥೆಯಿಂದ ಕರ್ಣನ ವಾದವು ಕೌರವನಿಗೆ ಸಹಾಯಕವಾಗಿದೆಯೋ ಎಂಬ ಪ್ರಶ್ನೆ ಮಾತ್ರ ಹಾಗೇ ಉಳಿಯುತ್ತದೆ.

ಅಂಬುವೀಚ ಮಗಧ ವಂಶದ ಒಬ್ಬ ಸಾಮ್ರಾಟ. ರಾಜಧಾನಿಯಾದ ರಾಜಗೃಹದಲ್ಲಿ ಅವನು ಸುಖವಾಗಿದ್ದ. ಅವನು ತುಂಬ ದುರ್ಬಲನಾದ ಒಬ್ಬ ದೊರೆ. ಎಲ್ಲ ಇಂದ್ರಿಯಗಳ ಸತ್ವವನ್ನೂ ಕಳೆದುಕೊಂಡು ಬರಿಯ ಉಸಿರಾಡುವ ಯಂತ್ರವಾಗಿದ್ದ ಎಂದು ವ್ಯಾಸರು ಹೇಳುತ್ತಾರೆ. ಅಂಬುವೀಚನು 'ಅಮಾತ್ಯ ಸಂಸ್ಥ'ನಾಗಿದ್ದನಂತೆ! ಅಂದರೆ ಎಲ್ಲಕ್ಕೂ ತನ್ನ ಪ್ರಧಾನ ಅಮಾತ್ಯನಾಗಿದ್ದ ಮಹಾಕರ್ಣಿಯನ್ನೇ ಅವಲಂಬಿಸಿಕೊಂಡಿದ್ದ. ಮಹಾಕರ್ಣಿ ತನಗೆ ಪ್ರಾಪ್ತವಾದ ಮಹಾಬಲದಿಂದ ಉಬ್ಬಿದ. ಕ್ರಮ ಕ್ರಮವಾಗಿ ರಾಜನ ಅಂತಃಪುರದ ಸುಂದರಿಯರು, ಭೋಗಭಾಗ್ಯಗಳು ಎಲ್ಲವೂ ಅವನ ಕೈವಶವಾದವು. ಅಧಿಕೃತವಾಗಿ ಸಾಮ್ರಾಟನಾಗದಿದ್ದರೂ ಸಕಲ ಅಧಿಕಾರವೂ ಅವನಲ್ಲೇ ಕೇಂದ್ರೀಕೃತವಾಗಿತ್ತು. ಆದರೆ ಮಹಾಕರ್ಣಿಗೆ ತನಗಾಗುತ್ತಿರುವ ಲಾಭದಿಂದ ಇನ್ನಷ್ಟು ಲೋಭ ಹೆಚ್ಚಿತಂತೆ! ಕೊನೆಗೆ

'ತಥಾ ಹಿ ಸರ್ವಮಾದಾಯ
ರಾಜ್ಯಮಸ್ಯ ಜಿಹೀರ್ಷತಿ'

ಎನ್ನುತ್ತಾರೆ ವ್ಯಾಸರು. ಅಂದರೆ ಒಂದೊಂದಾಗಿ ಎಲ್ಲ ಸಂಪದಗಳನ್ನೂ ವಶಪಡಿಸಿಕೊಂಡ ಮೇಲೆ ಆ ಮಂತ್ರಿ ಸಾಮ್ರಾಜ್ಯವನ್ನೇ ಅಪಹರಿಸಲು ಯೋಚನೆ ಹಾಕಿದ. ಆದರೆ? ವಿಧಿ ಮೂಲೆಯಲ್ಲಿ ಅವನನ್ನು ಅಣಕಿಸಿ ರಾಜನ ಪರವಾಗಿಯೇ ಸಂಕಲ್ಪ ಮಾಡಿದ್ದಂತೆ ಕಾಣುತ್ತದೆ. ಆದುದರಿಂದ ರಾಜನಿಗೆ ಅಧಿಕಾರ ಉಳಿಯಿತು.

"ಯತಮಾನೋಽಪಿ ತದ್ ರಾಜ್ಯಂ ನ ಶಶಾಕೇತಿ ನಃ ಶ್ರುತಮ್" (ಆದಿಪರ್ವ ಅಧ್ಯಾಯ 196)

ಎಷ್ಟೇ ಪ್ರಯತ್ನ ಮಾಡಿದರೂ ರಾಜ್ಯದ ಪಟ್ಟ ಮಾತ್ರ ಮಹಾಕರ್ಣಿಗೆ ದಕ್ಕಲಿಲ್ಲ! ಅಂದರೆ ಕೆಳಗಿನ ಅಧಿಕಾರದ ವ್ಯವಸ್ಥೆಯಿಂದ ಮೇಲಕ್ಕೆ ಜಿಗಿಯುವುದು ಮಂತ್ರಿಗೆ ಸಾಧ್ಯವಾಗಲಿಲ್ಲ.

ಕರ್ಣನು ವಿಧಿ ವಾದವನ್ನು ಹೇಳುತ್ತ "ನಮ್ಮ ಪ್ರಯತ್ನ ನಾವು ಮಾಡೋಣ. ಈಗ ಸಾಮ್ರಾಜ್ಯ ನಿನ್ನದಾಗಿದೆ. ಒಂದು ವೇಳೆ ಅದು ವಿಧಿ ವಿಹಿತವಾಗಿದ್ದರೆ ಅದು ನಿನಗೇ ದಕ್ಕುತ್ತದೆ" ಎಂದು ಕೌರವನಿಗೆ ಸಲಹೆ ಕೊಡುತ್ತಾನೆ. ಇದು ತುಂಬ ದುರ್ಬಲವಾದ ವಾದ ಎನ್ನಬಹುದಷ್ಟೆ!

*   *   *   *

ಶುನಕ-ಶರಭ-ಒಂದು ಕಥೆ

ಮನುಷ್ಯ ಸಂಚಾರವಿಲ್ಲದ ಅಡವಿಯಲ್ಲಿ ಒಬ್ಬ ನಿಷ್ಠಾವಂತ ಋಷಿ ಇದ್ದ. ಆತ ಸದಾ ಸತ್ತ್ವಗುಣ ಸಂಪನ್ನನಾಗಿರುತ್ತಿದ್ದ. ಅವನ ಗುಣಕ್ಕೆ ಮಾರುಹೋಗಿ ಕಾಡುಪ್ರಾಣಿಗಳೆಲ್ಲ ಸಹಜವಾಗಿ ಹತ್ತಿರ ನಿಲ್ಲುತ್ತಿದ್ದವು. ಅವನ ಯೋಗಕ್ಷೇಮವನ್ನು ವಿಚಾರಿಸುತ್ತಿದ್ದವು. ಆದರೆ ಒಂದು ನಾಯಿ ಮಾತ್ರ ಅವನನ್ನು ಬಿಟ್ಟು ಇರುತ್ತಿರಲಿಲ್ಲ. ಅಲ್ಲಿಗೆ ಒಂದು ಚಿರತೆ ಬಂದಿತು. ಅದರ ಗರ್ಜನೆಗೆ ಹೆದರಿದ ನಾಯಿ ಆ ಋಷಿಯ ಮೊರೆಹೊಕ್ಕಿತು. ಭಾವಜ್ಞನಾದ ಆ ಮುನಿ ಅದರ ಭಯ ಕಾರಣವನ್ನು ತಿಳಿದು ಅದನ್ನೂ ಒಂದು ಚಿರತೆಯಾಗಿ ರೂಪಾಂತರಿಸಿದ. ಮುಂದೆ ಒಂದು ಹುಲಿ ಆ ಚಿರತೆಯ ಬಳಿ ಬಂದು ಗರ್ಜಿಸಿತು. ಆಗ ಚಿರತೆ ಮತ್ತೆ ಪ್ರಾಣ ರಕ್ಷಣೆಗೆ ಮುನಿಯ ಬಳಿಗೋಡಿತು. ಅದರ ಮೇಲಣ ಮಮತೆಯಿಂದ ಆ ಋಷಿ ಚಿರತೆಯನ್ನು ಹೆಬ್ಬುಲಿಯಾಗಿ ಮಾರ್ಪಡಿಸಿದ. ಆ ಹೆಬ್ಬುಲಿ ಕ್ರೂರ ಮಾಂಸಾಹಾರಿಯಾಗಿ ಬೆಳೆಯಿತು. ನಿಜವಾದ ಹುಲಿಯಂತೆಯೇ ಗರ್ಜನೆ ಮಾಡಲಾರಂಭಿಸಿತು. ಹೀಗಿರುವಾಗ ಒಂದು ದಿನ ಎಗರಾಡುತ್ತಿರುವ ಮೋಡದಂತೆ ಭಾರಿಯಾದ ಆನೆಯೊಂದು ಅಲ್ಲಿಗೆ ಬಂದಿತು. ಹುಲಿ ಹೆದರಿಕೊಂಡಿತು. ಈಗ ಋಷಿ ಕರುಣೆ ತೋರಿ ಆ ಹುಲಿಯನ್ನು ಒಂದು ಆನೆಯಾಗಿ ಮಾರ್ಪಡಿಸಿದ. ಆನೆಯು ಮತ್ತೆ ಸಸ್ಯಾಹಾರಿಯಾಗಿ ಪದ್ಮರೇಣು ವಿಭೂಷಿತವಾಗಿ ತಾವರೆಯ ಕೊಳದಲ್ಲಿ ಆನಂದವಾಗಿ ಆಟವಾಡಿಕೊಂಡಿತ್ತು. ಋಷಿಯ ಕಣ್ಣೆದುರಿಗೇ ಈ ದೃಶ್ಯಾವಳಿಗಳೆಲ್ಲ ಮಿಂಚಿದವು. ತನ್ನೆದುರಿಗೇ ಲೀಲೆಯಿಂದ ವಿಹರಿಸುತ್ತಿದ್ದ ಆ ಭೀಮಾಕಾರದ ಆನೆಯ ಎದುರಿಗೆ ಒಂದು ದಿನ ಒಂದು ಸಿಂಹ ಬರಬೇಕೆ ? ಸರಿ ಮತ್ತೆ ಋಷಿಗೆ ಆನೆಯ ಮೊರೆ. ಸಿಂಹಕ್ಕೆ ಹೆದರದಿರಲೆಂದು ಮುನಿ ಆ ಗಜರಾಜನನ್ನು ಒಂದು ಸಿಂಹವನ್ನಾಗಿ ಮಾಡಿದ. ಈಗಲೂ ಆ ಸಿಂಹವು ಆಶ್ರಮ ಪ್ರದೇಶದಲ್ಲೇ ಓಡಾಡಿಕೊಂಡಿತ್ತು. ಈ ಸಿಂಹಕ್ಕೆ ಹೆದರಿ ಇತರ ಪಶು ಜಿಂಕೆಗಳೆಲ್ಲ ತಪೋವನದ ಆಚೆಗೆ ಓಡಿದವು. ಇದನ್ನು ಹೆದರಿಸಲು ಎಂಟು ಕಾಲಿನ ಶರಭ ಬರಬೇಕೆ ? ಸರಿ. ಮತ್ತೆ ಈ ಸಿಂಹವನ್ನು ಒಂದು ಶರಭವಾಗಿ ಪರಿವರ್ತಿಸುವ ಕೆಲಸ ಮುನಿಗೆ. ಈ ಶರಭವನ್ನು ಕಂಡು ಹೆದರಿ ಆಶ್ರಮದ ಬಳಿ ಇದ್ದ ಅಳಿದುಳಿದ ಪ್ರಾಣಿಗಳು ಕೂಡ ಓಡಿಹೋದವು.

ಈ ಶರಭವನ್ನು ವ್ಯಾಸರು 'ಅಕೃತಜ್ಞ.' 'ರುಧಿರ ತರ್ಷಿ' ಎಂದು ಕರೆದಿದ್ದಾರೆ. ಏಕೆಂದರೆ ಅದು ಈಗ ತನಗೆ ಯಾರೂ ಎದುರಿಲ್ಲವೆಂದು ಬೀಗಿ ಆಶ್ರಮದ ಮುನಿಯನ್ನೇ ಕೊಂದು ತಿನ್ನಲು ಮನಸ್ಸು ಮಾಡಿತು. ಋಷಿಗೆ ಗೊತ್ತಾಗುವುದಿಲ್ಲವೆ ? ಅವನು ತನ್ನ ಜ್ಞಾನ ನೇತ್ರದಿಂದ ಎಲ್ಲವನ್ನೂ ತಿಳಿದುಕೊಂಡು (ತತಸ್ತೇನ ತಪಃಶಕ್ತ್ಯಾವಿದಿತೋ ಜ್ಞಾನ ಚಕ್ಷುಷಾ) "ಎಲೈ ನಾಯಿಯೇ! ನಿನ್ನ ಮೇಲಿನ ಕರುಣೆಯಿಂದ ನಾನು ನಿನಗೆ ಎಷ್ಟೆಷ್ಟು ರೂಪಗಳನ್ನು ಕೊಟ್ಟೆ. ಆದರೆ ಏನೂ ಪಾಪ

ಮಾಡಿಲ್ಲದ ನನ್ನನ್ನೇ ಮುಗಿಸಲು ನೋಡುತ್ತಿದ್ದೀಯಲ್ಲ. ಆದುದರಿಂದ ಮತ್ತೆ ನಿನ್ನನ್ನು ಸಾಧು ನಾಯಿಯನ್ನಾಗಿಯೇ ಮಾಡುತ್ತೇನೆ" ಎಂದು ಹೇಳಿದ. ಹೀಗೆ ಆ ಶರಭವು ಮುನಿಜನ ದ್ವೇಷಿಯಾಗಿ, ದುಷ್ಟ ಬುದ್ಧಿ ಹೊಂದಿ, ವಿವೇಕವನ್ನು ಕಳೆದುಕೊಂಡು ತನ್ನ ಅಕಾರ್ಯದಿಂದಾಗಿ ಮತ್ತೆ ಮೊದಲಿನ ರೂಪವನ್ನೇ ಪಡೆಯಿತಂತೆ.

ನಾವು ಪಡೆಯುವ ಹೊಸ ಹೊಸ ಅಧಿಕಾರಗಳ ಜತೆಯಲ್ಲೇ ಆ ಅಧಿಕಾರಕ್ಕೆ ಅಂಟಿದ ದುಷ್ಟಭಾವಗಳನ್ನೂ ನಾವು ಪಡೆಯುತ್ತ ಹೋಗುತ್ತೇವೆ ಎಂಬ ವಿಷಾದದ ಧ್ವನಿ ಈ ಕಥೆಯಲ್ಲಿ ಇರುವಂತಿದೆ.

* * * *

ಜಮದಗ್ನಿ

ಋಷಿಕುಮಾರರಾಗಿದ್ದರೂ ಕ್ಷಾತ್ರ ತಾಮಸದಿಂದ ಮೆರೆಯುವ ಜನರಿದ್ದಾರೆ. ಅಂಥವರಲ್ಲಿ ಜಮದಗ್ನಿ ಒಬ್ಬ. ಎಲ್ಲ ಪುರಾಣಗಳಲ್ಲೂ ಈತನ ವಿಚಾರ ಬರುತ್ತದಾದರೂ ಮಹಾಭಾರತದ ಶಾಂತಿಪರ್ವದ ನಲವತ್ತೊಂಬತ್ತನೆಯ ಅಧ್ಯಾಯದಲ್ಲಿ ಈತನ ಬಗೆಗೆ ಇರುವ ವಿಷಯಗಳನ್ನು ಗಮನಿಸಿದರೆ ಸಾಕು.

ಸುಕನ್ಯೆಯನ್ನು ಮದುವೆಯಾದ ಚ್ಯವನ ಮಹರ್ಷಿಗಳ ಬಗೆಗೆ ಕೇಳಿದ್ದೇವೆ. ಚ್ಯವನನ ಮರಿಮಗ ಈ ಜಮದಗ್ನಿ, ಔರ್ವನ ಮೊಮ್ಮಗ, ಋಚೀಕ-ಸತ್ಯವತಿಯರ ನೂರು ಮಕ್ಕಳಲ್ಲಿ ಹಿರಿಯವನು. ಋಚೀಕನು ಕನ್ಯಾಕುಬ್ಜರ ರಾಜ ಗಾಧಿಯ ಬಳಿ ಹೋಗಿ ಅವನ ಮಗಳಾದ ಸತ್ಯವತಿಯನ್ನು ಕಲ್ಯಾಣವಾಗಲು ಬಯಸಿದ. ಗಾಧಿಯು ಶ್ಯಾಮಕರ್ಣದ ಒಂದು ಸಾವಿರ ಕುದುರೆಗಳನ್ನು ಕೇಳಿದಾಗ ಋಚೀಕನು ವರುಣದೇವನನ್ನು ಬೇಡಿ ಅವುಗಳನ್ನು ತಂದು ಸತ್ಯವತಿಯನ್ನು ವಿವಾಹವಾದ.

ಒಮ್ಮೆ ಋಚೀಕನನ್ನು ನೋಡಲು ಭೃಗು ಮಹರ್ಷಿಗಳು ಅವನ ಆಶ್ರಮಕ್ಕೆ ಬಂದರು. ಋಚೀಕಪತ್ನಿ ಸತ್ಯವತಿಯ ಸೇವಾಬುದ್ಧಿಯನ್ನು ಕಂಡು ಪ್ರಸನ್ನರಾಗಿ ಪುತ್ರ ವರವನ್ನು ದಯಪಾಲಿಸಿದರು. ಆದರೆ ಸತ್ಯವತಿಯ ತಾಯಿ (ಗಾಧಿರಾಜನ ಹೆಂಡತಿ) ತನಗೂ ಪುತ್ರನಾಗುವ ವರವನ್ನು ಕೊಡಿಸೆಂದು ಮಗಳಿಗೆ ದುಂಬಾಲು ಬಿದ್ದಳು. ಭೃಗು ಎರಡು ವರಗಳನ್ನು ನೀಡಲು ಸಿದ್ಧನಾದನು. ವೃಕ್ಷಾಲಿಂಗನ ಮತ್ತು ಚರುಭಕ್ಷಣ ಮಾಡಿ ಎಂದು ಬೇರೆ ಬೇರ ಮರ, ಚರುಗಳನ್ನು ಸಿದ್ಧಪಡಿಸಿದರು. ಆದರೆ ಸತ್ಯವತಿ ಮತ್ತು ಅವಳ ತಾಯ ಕ್ರಮಲೋಪ ಮಾಡಿಕೊಂಡರು. ಇದರ ಪರಿಣಾಮವಾಗಿ ಸತ್ಯವತಿಯ ಮಗ ಜಮದಗ್ನಿ ಬ್ರಹರ್ಷಿಯಾದರೂ ಕ್ಷಾತ್ರಗುಣಗಳಿಂದ ಮೆರೆದ. ಸತ್ಯವತಿಯ ತಾಯಿ ಹೆತ್ತಮಗ ವಿಶ್ವಾಮಿತ್ರನು ರಾಜಪುತ್ರನಾದರೂ ಬ್ರಹ್ಮರ್ಷಿಯಾದ.

ಜಮದಗ್ನಿ ಚಿಕ್ಕಂದಿನಿಂದಲೂ ಮಹಾಸಾಧಕ. “ಯಜಮಾನಸ್ಯ ವೈ ದೇವಾನ್ ಜಮದಗ್ನೇರ್ಮಹಾತ್ಮನಃ” ಎನ್ನಿಸಿಕೊಂಡ. ತನ್ನ ತಪಸ್ಸಿನಿಂದ ದೇವತೆಗಳ ಪ್ರೀತಿಗೆ ಪಾತ್ರನಾದ. ಮುಂದೆ ಪ್ರಸೇನಜಿತನ ಮಗಳಾದ ರೇಣುಕೆಯನ್ನು ಮದುವೆಯಾದ. ಕ್ರಮವಾಗಿ ರುಮಣ್ವಾನ್, ಸುಷೇಣ, ವಸು, ವಿಶ್ವಾವಸು ಮತ್ತು ಪರಶುರಾಮರೆಂಬ ಐವರು ಮಕ್ಕಳಾದರು.

ಜಮದಗ್ನಿ ಮಹಾಸಿಡುಕ. ಒಮ್ಮೆ ತಮ್ಮ ಹೆಂಡತಿ ರೇಣುಕೆಯ ಕಾಲುಗಳಿಗೆ ಬಿಸಿಲತಾಪವಾದುದನ್ನು ಕಂಡು ಸೂರ್ಯನಿಗೇ ಶಾಪಕೊಡಲು ಸಿದ್ಧನಾದ. ಸೂರ್ಯ ಬಂದು ಕ್ಷಮೆ ಕೋರಬೇಕಾಯಿತು. ಒಮ್ಮೆ ಹೆಂಡತಿ ರೇಣುಕೆ ಸ್ನಾನ ಮಾಡಿ ಬರುವಾಗ ಮಾರ್ತಿಕಾವತದ ಚಿತ್ರಭಾನು ರಾಜನು ತನ್ನ ಪತ್ನಿಯರೊಂದಿಗೆ ಜಲಕ್ರೀಡೆಯಾಡುತ್ತಿದ್ದುದನ್ನು ನೋಡಿದಳೆಂಬ ಕಾರಣಕ್ಕಾಗಿ ಮಕ್ಕಳನ್ನು ಕರೆದು ಅವಳನ್ನು ಕೊಲ್ಲುವಂತೆ ಆಜ್ಞೆ ಮಾಡಿದ. ಆದರೆ ಮಾತೃವಧೆಗೆ ಮೊದಲಿನ ನಾಲ್ವರು ಮಕ್ಕಳೂ ಒಪ್ಪಲಿಲ್ಲ. ಕೊನೆಯ ಮಗನಾಗಿದ್ದ ಪರಶುರಾಮನ ದೃಷ್ಟಿಯೇ ಬೇರೆಯದಾಗಿತ್ತು. ಅವನು ಮೊದಲಿಗೆ ಪಿತೃವಾಕ್ಯ ಪಾಲಕ. ತಂದೆಯ ಆಜ್ಞೆಯಂತೆ

ಅಮ್ಮನನ್ನು ಕೊಂದುಹಾಕಿದ. ಸಂತೃಪ್ತನಾದ ಜಮದಗ್ನಿ ಮಗನಿಗೆ ಕೇಳಿದ ವರವನ್ನು ಪೂರೈಸಲು ಸಿದ್ಧನಾದ. ಆಗ ಮಗ ತಾಯಿಯನ್ನು ಬದುಕಿಸಿಕೊಡು ಎಂದು ಕೇಳಿದ. ಜಮದಗ್ನಿಯ ಮನೋಧರ್ಮ ಎಂಥದೆಂಬುದನ್ನು ತಿಳಿದಿದ್ದ ಪರಶುರಾಮನ ಜಾಣ್ಮೆ ಇಲ್ಲಿ ವ್ಯಕ್ತವಾಗುತ್ತದೆ.

ಕಾರ್ತವೀರ್ಯಾರ್ಜುನನಿಗೂ ಜಮದಗ್ನಿಗೂ ಸತತ ವೈರವಿತ್ತು. ಜಮದಗ್ನಿಯ ಬಳಿ ಇದ್ದ ಕಾಮಧೇನುವಿನಂತಹ ದಿವ್ಯ ಹಸು ಮತ್ತು ಅದರ ಕರುವಿನ ಮೇಲೂ ಕಾರ್ತವೀರ್ಯಾರ್ಜುನನಿಗೆ ಕಣ್ಣಿತ್ತು. ಕೊನೆಗೆ ಕಾರ್ತವೀರ್ಯಾರ್ಜುನನ ಮಗನು ಜಮದಗ್ನಿಯನ್ನು ಕೊಂದದ್ದು, ತಾಯಿ 21 ಸಲ ಎದೆ ಬಡಿದುಕೊಂಡು ಅತ್ತುದನ್ನು ಕಂಡ ಪರಶುರಾಮನು 21 ಬಾರಿ ಭೂಪ್ರದಕ್ಷಿಣೆ ಮಾಡಿ ಕ್ಷತ್ರಿಯ ರಾಜರುಗಳನ್ನು ಕೊಂದದ್ದು ಎಲ್ಲರಿಗೂ ತಿಳಿದಿರುವ ಸಂಗತಿಯೇ ಆಗಿದೆ.

* * * *

ಸಗರ

ಭಾರತೀಯ ಪುರಾಣ ಮತ್ತು ಇತಿಹಾಸಗಳಲ್ಲೇ ಅಲ್ಲದೆ ಜೈನಕಾವ್ಯ - ಪುರಾಣಗಳಲ್ಲೂ ಈತನ ಹೆಸರು ಪ್ರಸಿದ್ಧವಾಗಿದೆ. ಸಗರನ ಮಕ್ಕಳು ಭೂಶೋಧನೆ ಮಾಡಿ ಸಾಗರವನ್ನು ನಿರ್ಮಿಸಿದ್ದರಿಂದ ಸಮುದ್ರಕ್ಕೆ ಸಾಗರ ಎಂಬ ಹೆಸರು ಬಂದಿದೆಯಂತೆ.

ಸಗರನು ಇಕ್ಷ್ವಾಕುವಂಶದ ಒಬ್ಬ ಪ್ರಸಿದ್ಧರಾಜ. ಈ ವಂಶದ ಹರಿಶ್ಚಂದ್ರ ಒಬ್ಬ ದೊರೆ. ಅವನ ಮಗ ರೋಹಿತಾಶ್ವ. ರೋಹಿತಾಶ್ವನ ಮಗ ಹಾರಿತ. ಅವರ ವಂಶದಲ್ಲಿ ಕ್ರಮವಾಗಿ ಬಂದವರು ಚುಂಚು, ಸುದೇವ, ಭರುಕ, ಬಾಹುಕ ಮತ್ತು ಸಗರ.

ಸಗರ ಚಕ್ರವರ್ತಿಯು ಯಜ್ಞಯಾಗಾದಿಗಳಲ್ಲಿ ಸಿದ್ಧಹಸ್ತನೆಂದೂ ಮಹಾದಾನಿಯಾಗಿದ್ದನೆಂದೂ ಶ್ರೀಕೃಷ್ಣನಿಂದ ಹೊಗಳಿಕೆಗೆ ಪಾತ್ರನಾಗಿದ್ದಾನೆ (ಶಾಂತಿಪರ್ವದ 29ನೇ ಅಧ್ಯಾಯ). ಅವನು ಶುದ್ಧ ಶಾಖಾಹಾರಿಯಾಗಿದ್ದನೆಂದು ಅನುಶಾಸನಿಕ ಪರ್ವದಿಂದ ತಿಳಿದು ಬರುತ್ತದೆ. ವಿರಾಟಪರ್ವದಲ್ಲಿ ಕೃಪ-ಅರ್ಜುನರ ಯುದ್ಧವನ್ನು ನೋಡಲು ಸಗರನು ಇಂದ್ರನೊಂದಿಗೆ ಬಂದನೆಂದು ಹೇಳಲಾಗಿದೆ. ಸಗರನು ಮಾಡಬೇಕಾಗಿದ್ದ ಅಶ್ವಮೇಧಯಾಗದ ಅಶ್ವವು ಕಪಿಲನ ಆಶ್ರಮದಲ್ಲಿ ಸಿಕ್ಕಿಕೊಂಡಾಗ ಸಗರನ 60000 ಮಕ್ಕಳು ಆ ನೆಲವನ್ನು ಅಗೆದು ಒಂದು ದೊಡ್ಡ ಸಾಗರವೇ ಎದ್ದಿತೆಂದೂ ಆದ್ದರಿಂದಲೇ ಸಮುದ್ರಕ್ಕೂ ಸಗರನ ಮಕ್ಕಳ ಹೆಸರೇ ನಿಂತಿತೆಂದೂ ಹೇಳುತ್ತಾರೆ. ಇವನ ಮಗನಾದ ದಿಲೀಪನೂ ಮೊಮ್ಮಗನಾದ ಭಗೀರಥನೂ ನಮ್ಮ ಇತಿಹಾಸ ಪುರಾಣಗಳಲ್ಲಿ ಪ್ರಸಿದ್ಧರಾಗಿದ್ದಾರೆ.

ಅರಣ್ಯಪರ್ವದಲ್ಲಿ ಲೋಮಶರು ಧರ್ಮರಾಯನಿಗೆ ಷೋಡಶ ಚಕ್ರವರ್ತಿಗಳ ಕಥೆಗಳನ್ನು ಹೇಳುವ ಸಂದರ್ಭದಲ್ಲಿ ಸಗರನ ಕಥೆಯೂ ಬಂದಿದೆ. ಧೈರ್ಯಸಂಪನ್ನನೂ ಮಹಾದಾನಿಯೂ ಆದ ಈತನಿಗೆ ಇಬ್ಬರು ಪತ್ನಿಯರಿಂದಲೂ ಸಂತಾನ ಭಾಗ್ಯ ದೊರೆಯಲಿಲ್ಲ. ಆಗ ಪತ್ನಿಯರೊಂದಿಗೆ ಹಿಮಾಲಯದಲ್ಲಿ ತೀವ್ರ ತಪಸ್ಸು ಮಾಡುತ್ತಾನೆ. ಪರಿಣಾಮವಾಗಿ ಇವರಿಗೆ ಶಿವದರ್ಶನ ಪ್ರಾಪ್ತಿಯಾಗುತ್ತದೆ. ಸಗರನು ಪುತ್ರಭಾಗ್ಯವನ್ನು ಬೇಡಿದಾಗ ಶಿವನು "ನಿನ್ನ ಒಬ್ಬಳು ಹೆಂಡತಿಯ ಗರ್ಭದಲ್ಲಿ 60000 ಶೂರರೂ ವಿವೇಕಿಗಳೂ ಆದ ಮಕ್ಕಳು ಹುಟ್ಟುತ್ತಾರೆ. ಆದರೆ ಒಮ್ಮಿಂದೊಮ್ಮೆಗೆ ಎಲ್ಲರೂ ಸತ್ತುಹೋಗುತ್ತಾರೆ. ನಿನ್ನ ಎರಡನೆಯ ಹೆಂಡತಿಯ ಗರ್ಭದಲ್ಲಿ ಒಬ್ಬ ಮಗ ಹುಟ್ಟುತ್ತಾನೆ" ಎನ್ನುತ್ತಾರೆ.

ಆದರೆ ಸಗರ ಪತ್ನಿಗೆ ಜನಿಸಿದುದು ಒಂದು ದೊಡ್ಡ ನಿರ್ಜೀವ ಪಿಂಡ. ಅದನ್ನು ರಾಜನು ಎಸೆಯಬೇಕೆಂದಿದ್ದವನು ಆಕಾಶವಾಣಿಯನ್ನು ಕೇಳಿ ಆ ಪಿಂಡವನ್ನು ಕಾಪಾಡಿದ. ಅದರ ಬೀಜಗಳನ್ನು ಒಂದೊಂದಾಗಿ ಬೇರೆ ಬೇರೆ ಭಾಂಡಗಳಲ್ಲಿಟ್ಟು ಬೆಳೆಸಿದ. ಹೀಗೆ 60000 ಮಕ್ಕಳು ಹುಟ್ಟಿದರು.

ಈ ಮಕ್ಕಳೆಲ್ಲ ರಾಜನು ಮಾಡುತ್ತಿದ್ದ ಅಶ್ವಮೇಧದ ಕುದುರೆಯ ಬೆಂಗಾವಲಿಗೆ ಹೋಗಿ ಮಹರ್ಷಿ ಕಪಿಲನ ಆಶ್ರಮಕ್ಕೆ ನುಗ್ಗಿ ಶಾಪಗ್ರಸ್ತರಾಗಿ ಭಸ್ಮೀಭೂತರಾದರು.

ಇನ್ನೊಬ್ಬಳು ಪತ್ನಿಯಲ್ಲಿ ಹುಟ್ಟಿದ ಅಸಮಂಜಸು ಬಾಲ್ಯದಿಂದಲೂ ಕಿಡಿಗೇಡಿಯಾಗಿ ಬೆಳೆದ. ಸಾಧುಗಳ ಅಮಾಯಕ ಮಕ್ಕಳನ್ನೂ ಊರ ಬಾಲಕರನ್ನೂ ನದಿಗೆ ಎಸೆದು ಮೋಜು ನೋಡುವುದು ಅವನ ಹವ್ಯಾಸಗಳಲ್ಲಿ ಒಂದಾಗಿತ್ತು. ಇದರಿಂದ ಬೇಸತ್ತ ಸಗರನು ಆ ಮಗನನ್ನು ಊರಿನಿಂದ ಓಡಿಸಬೇಕಾಯಿತು.

ಒಂದುಕಡೆ ವಿಧೇಯರೂ ವೀರರೂ ಆದ ಮಕ್ಕಳನ್ನು ಕಳೆದುಕೊಂಡು ಇನ್ನೊಂದು ಕಡೆ ದುಷ್ಟ ಚೇಷ್ಟೆಯ ಮಗನನ್ನು ಓಡಿಸಿದ ಸಗರ ಸಪುತ್ರಕನಾಗಿದ್ದೂ ಅಪುತ್ರಕನಾಗಬೇಕಾದ ದೌರ್ಭಾಗ್ಯಕ್ಕೆ ಒಳಗಾಗಿದ್ದ. ಆದರೆ ಮೊಮ್ಮಗ ಭಗೀರಥನು 60000 ಸಗರಪುತ್ರರ ಚಿತಾಭಸ್ಮದ ಮೇಲೆ ಗಂಗೆ ಹರಿಯುವಂತೆ ಮಾಡಿದ್ದೇ ಅಲ್ಲದೆ ಋಷಿಗಳನ್ನು ಒಲಿಸಿಕೊಂಡು ಯಜ್ಞಾಶ್ವವನ್ನೂ ಮನೆತನದ ಕೀರ್ತಿಯನ್ನೂ ಉಳಿಸಿದ್ದು ವಿಶೇಷ ಸಂಗತಿ.

*   *   *   *

ಯಾದವರು

ಭರತಖಂಡದಲ್ಲಿ ಪ್ರಸಿದ್ಧವಾದ ವಂಶಗಳೆಂದರೆ ಸೂರ್ಯವಂಶ ಮತ್ತು ಚಂದ್ರವಂಶ. ಸೂರ್ಯವಂಶದಲ್ಲಿ ರಘು, ಇಕ್ಷ್ವಾಕುಗಳಂತೆ ಚಂದ್ರವಂಶದಲ್ಲಿ ಕುರುಭರತ ಮೊದಲಾದವರು ಬೆಳಗಿದ್ದಾರೆ. ಹೀಗೆ ಬೆಳಗಿದವರಲ್ಲಿ ಒಬ್ಬನೆಂದರೆ ಯಯಾತಿ. ಇವನಿಗೆ ದೇವಯಾನಿಯಲ್ಲಿ ಹುಟ್ಟಿದವರೆಂದರೆ ಯದು ಮತ್ತು ತುರ್ವಸು. ಯದುವಿನ ನಂತರ ಮುಂದೆ ಯದುವಂಶವು ಬೇರೆ ಕವಲಾಗಿ ಒಡೆದು ಈ ಕವಲಿನವರೆಲ್ಲ ಯಾದವರು ಎನ್ನಿಸಿಕೊಂಡರು. ಮೊದಲಿಗೆ ಪಶುಪಾಲಕರಾಗಿದ್ದ ಇವರು ಕ್ರಮೇಣ ನಾನಾ ರಾಜ್ಯಗಳನ್ನು ಆಳಿದರು. ಮಹಾವೀರರೂ ಅಭಿಮಾನಶಾಲಿಗಳೂ ಸಾಗರೋತ್ತರ ವ್ಯವಹಾರಕುಶಲರೂ ಆಗಿದ್ದರು. ಈ ಯಾದವ ವಂಶ ಹಲವಾರು ಶಾಖೆ ಉಪಶಾಖೆಗಳಿಂದ ಕೂಡಿದೆ. ಮುಖ್ಯವಾಗಿ ವೃಷ್ಣಿಗಳು, ಹೇಹಯರು, ತಾಳಜಂಘರು, ಚೇದಿಗಳು, ಸಾತ್ವತರು ಅಥವಾ ಭೋಜರು, ಅಂಧಕರು, ಮಹಾಭೋಜರು. ಉತ್ತರ ಭಾರತದ ಉದ್ದಗಲಗಳಲ್ಲಿ ಈಗಲೂ ವ್ಯಾಪಿಸಿರುವ ಯಾದವ ಜನಾಂಗ ಒಂದು ಬಲಿಷ್ಠ ಸಮಾಜವಾಗಿ ಬೆಳೆಯುತ್ತ ಬಂದಿದೆ. ಮಧುರಾನಗರವನ್ನು ಆಳುತ್ತಿದ್ದ ಕಂಸ ಒಬ್ಬ ಬಲಿಷ್ಠ ಯಾದವ ದೊರೆ. ಶ್ರೀಕೃಷ್ಣ, ಬಲರಾಮ, ಉಗ್ರಸೇನ, ವಸುದೇವ ಇವರೆಲ್ಲ ಅಂಧಕ ವಂಶದ ಪ್ರಸಿದ್ಧ ಪುರುಷರು. ಧಾರಾಪುರದ ಅರಸನಾದ ಭೋಜನಿಂದ ಭೋಜವಂಶ ಆರಂಭವಾದರೆ ಸಾತ್ವತ ವಂಶವು ಸಾತ್ವತನಿಂದ ಆರಂಭವಾಯಿತು. ಕೃತವರ್ಮ ಈ ವಂಶದ ಒಬ್ಬ ವೀರ. ಸತ್ರಾಜಿತ ಸಾತ್ಯಕಿ ಇವರೆಲ್ಲ ವೃಷ್ಣಿವಂಶದವರು. ಮಹಾರಾಜಕೀಯ ಪರಿಣತರೂ, ಬುದ್ಧಿವಂತರೂ, ಯುದ್ಧವೀರರೂ ಆಗಿ ಮೆರೆದ ಯಾದವರಲ್ಲಿ ಕೃಷ್ಣ ಬಲರಾಮ, ಸಾರಣ ವಜ್ರ, ಸತ್ಯಕ, ಕೃತವರ್ಮ, ಅಕ್ರೂರ, ಉದ್ಧವ, ಸುದೇವ, ಸಾತ್ಯಕಿ, ಉಗ್ರಸೇನ, ದೇವಾಪ, ಉಪದೇವ, ಪೃಶ್ನಿ, ವಿಡೂರಥ ಮೊದಲಾದವರನ್ನು ಹೆಸರಿಸಬಹುದು. ಮಹಾಭಾರತದ ಆದಿಪರ್ವದ 95ನೆಯ ಅಧ್ಯಾಯದಲ್ಲಿ ಯಾದವರ ಬಗೆಗೆ ವಿಶೇಷ ಸಂಗತಿಗಳಿವೆ.

ಕಂಸನ ಮರಣಾನಂತರ ಶ್ರೀಕೃಷ್ಣ ಬಲರಾಮಾದಿಗಳಿಗೆ ಯದುಕುಲದಲ್ಲಿ ಪ್ರಾಶಸ್ತ್ಯ ಬಂದಿತಲ್ಲವೇ? ಕಂಸನ ಮಾವನಾದ ಜರಾಸಂಧನಿಗೆ ಇವರ ಏಳಿಗೆ ಸಹನವಾಗಲಿಲ್ಲ. ಆದುದರಿಂದ ಒಂದು ದೊಡ್ಡ ರಾಜವರ್ಗವನ್ನು ಕಟ್ಟಿಕೊಂಡು (ಇವರಲ್ಲಿ ಯಾದವನೇ ಆದ ಶಿಶುಪಾಲನೂ ಇದ್ದ!) ಯಾದವರ ಮೇಲೆ ಆಕ್ರಮಣಗಳನ್ನು ಮಾಡುತ್ತಲೇ ಇದ್ದ. ಜರಾಸಂಧನಿಂದಾಗಿ ಆರ್ಥಿಕ ಉಪಟಳಕ್ಕೆ ಸಿಕ್ಕಿದ ಶ್ರೀಕೃಷ್ಣ ಕೊನೆಗೆ ಯಾದವ ಪ್ರಮುಖರೊಂದಿಗೆ ಚರ್ಚಿಸಿ ಪಶ್ಚಿಮ ಸಮುದ್ರ ತೀರದ ದ್ವಾರಕೆಗೆ ಬಂದು ನೆಲೆಸಿದ. ಅಲ್ಲಿ ಬಹುಶಃ ಸಾಗರೋತ್ತರ ವ್ಯಾಪಾರಕ್ಕೆ ಕೈಹಾಕಿದ ಯಾದವರು ತಮ್ಮ ಆರ್ಥಿಕ ಪರಿಸ್ಥಿತಿಯನ್ನು ಉಜ್ವಲಗೊಳಿಸಿಕೊಂಡರು.

ಮಹಾಭಾರತ ಯುದ್ಧದ ನಂತರವೂ ಸುಮಾರು 36 ವರ್ಷಗಳವರೆಗೆ ಯಾದವರು ಉಚ್ಛ್ರಾಯ ಸ್ಥಿತಿಯಲ್ಲೇ ಇದ್ದರು. ಆದರೆ ಅರ್ಥಮದ, ಅಸಹನೆ, ಮುಂಗೋಪ ಮತ್ತು ಮದ್ಯ ವ್ಯಸನಗಳಿಗೆ ಪ್ರಸಿದ್ಧರಾಗಿದ್ದ ಇವರು ತಮ್ಮತಮ್ಮಲ್ಲೇ ಉಂಟಾದ ಅಂತರ್ಘರ್ಷಣೆಯ ಪರಿಣಾಮವಾಗಿ ತಾವು ತಾನೇ ಹೊಡೆದಾಡಿ ಸತ್ತ ಸಂಗತಿ ಮೌಸಲ ಪರ್ವದಲ್ಲಿ ವರ್ಣಿತವಾಗಿದೆ. ತಮ್ಮಲ್ಲಿ ಒಬ್ಬನಿಗೆ ಭಾರತದ ಆರಾಧ್ಯದೈವದ ಪಟ್ಟ ದೊರಕಿಸಿಕೊಂಡ ಈ ವಂಶ ಹೀಗೆ ದುರ್ಬಲವಾದದ್ದು ಇತಿಹಾಸದ ದುರಂತಗಳಲ್ಲಿ ಒಂದು.

*   *   *   *

ಧೃಷ್ಟದ್ಯುಮ್ನ

ಮಹಾಭಾರತದ ಪ್ರಧಾನ ಪಾತ್ರಗಳಲ್ಲಿ ಒಬ್ಬ. ದ್ರೋಣರು ದ್ರುಪದನಿಗೆ ಮಾಡಿದ ಅವಮಾನದ ಮುಯ್ಯಿ ತೀರಿಸಲೆಂದು ದ್ರೋಣವಧೆಗಾಗಿಯೇ ಹುಟ್ಟಿದವನು. ಇಂಥ ಧೃಷ್ಟದ್ಯುಮ್ನನು ದ್ರೋಣರಿಂದಲೇ ವಿದ್ಯೆಕಲಿತದ್ದು ಆ ಕಾಲದ ಸೋಜಿಗಗಳಲ್ಲಿ ಒಂದು. ಅಗ್ನಿಯ ತೇಜಸ್ಸಿನಿಂದ ಹುಟ್ಟಿದವನಾದ್ದರಿಂದ ಯಾಜ್ಞಸೇನ ಎಂಬ ಹೆಸರೂ ಇದೆ. ಯಾಜ ಉಪಯಾಜರೆಂಬ ಋಷಿಗಳು ದ್ರುಪದನಿಂದ ಯಾಗವಮಾಡಿಸಿ ದ್ರುಪದನು ದ್ರೌಪದಿ ಧೃಷ್ಟದ್ಯುಮ್ನರನ್ನು ಪಡೆಯುವಂತೆ ಸಹಕರಿಸಿದರು. ಸೇಡಿನ ಬೆಳಕಿನಲ್ಲಿ ಹುಟ್ಟಿದವನಾದುದರಿಂದ ಉದ್ದಕ್ಕೂ ದ್ರೋಣ ದ್ವೇಷವೇ ಇವನ ಮಂತ್ರವಾಗಿತ್ತು ಎಂಬುದು

ರಾಜ್ಞ ಶೋಕಾಪಹೋ ಜಾತ
ಏಷ ದ್ರೋಣ ವಧಾಯ ವೈ (ಆದಿ 155-40)

ಎಂಬ ಮಾತಿನಿಂದ ಸ್ಪಷ್ಟವಾಗುತ್ತದೆ. ಇವನ ಹೆಸರೂ ವಿಶಿಷ್ಟವಾಗಿರುವುದಿರಂದ ವ್ಯಾಸರು ಆ ಶಬ್ದದ ಅರ್ಥಗಳನ್ನು ವ್ಯಾಖ್ಯಾನಿಸಿದ್ದಾರೆ.

ಧೃಷ್ಟತ್ವಾತ್ ಅತಿ ಧೃಷ್ಣುತ್ವಾತ್
ಧರ್ಮಾದುತ್ಸಂಭವಾದಪಿ
ಧೃಷ್ಟದ್ಯುಮ್ನಃ ಕುಮಾರೋಽಯಂ
ದ್ರುಪದಸ್ಯ ಚ ಭವತ್ವಿತಿ (ಆದಿ ಅಧ್ಯಾಯ 155-49)

(ದಿಟ್ಟತನದಿಂದಲೂ ಧೈರ್ಯದಿಂದಲೂ ಧರ್ಮಶೀಲತೆಯಿಂದಲೂ ಮತ್ತು ಅಗ್ನಿಯಲ್ಲಿ ಹುಟ್ಟಿದ್ದರಿಂದಲೂ ಈತ ಧೃಷ್ಟದ್ಯುಮ್ನನೆಂದು ಹೆಸರು ಪಡೆಯಲಿ)

ದ್ರೌಪದೀ ಸ್ವಯಂವರದಲ್ಲಿ ಬಂದ ರಾಜರನ್ನೆಲ್ಲ ಸ್ವಾಗತಿಸುವ ಮತ್ತು ದ್ರೌಪದಿಗೆ ರಾಜರನ್ನು ಪರಿಚಯ ಮಾಡಿಕೊಡುವ ಜವಾಬ್ದಾರಿಗಳನ್ನು ಅವಲೀಲೆಯಿಂದ ನಿರ್ವಹಿಸಿ ಎಲ್ಲರ ಮೆಚ್ಚುಗೆ ಪಡೆದ. ದ್ರೌಪದಿಯನ್ನು ಮದುವೆಯಾಗುವ ಅರ್ಜುನನು ನಿಜವಾಗಿ ಯಾರೆಂದು ತಿಳಿಯಲು ಗುಪ್ತವಾಗಿ ಅವರ ಬಿಡಾರಕ್ಕೆ ಹೋಗಿಬಂದದ್ದು ಅವನ ಕಾಳಜಿಯನ್ನು ಚಿತ್ರಿಸುತ್ತದೆ.

ಮುಂದ ಪಾಂಡವರು ಕಾಡಿಗೆ ಹೋದಾಗ ಧೃಷ್ಟದ್ಯುಮ್ನನು ಹೋಗಿ ತಂಗಿಗೆ ಸಮಾಧಾನ ಹೇಳಿ ಉಪಪಾಂಡವರನ್ನೆಲ್ಲ ಉಪಪ್ಲಾವ್ಯ ನಗರಕ್ಕೆ ಕರೆತಂದ. ಪಾಂಡವರನ್ನು ಆಗಾಗ ಹೋಗಿ ನೋಡುತ್ತಲೂ ಇದ್ದ. ಮುಂದೆ ಧೃಷ್ಟದ್ಯುಮ್ನನೇ ಪಾಂಡವ ದಳದ ಸೇನಾನಿಯಾಗಿ ಹೋರಾಡಿದ. ಅಗ್ನಿಸಂಭವ ಎಂದು ಹೇಳಲು ತಕ್ಕ ಸಿಟ್ಟು ಅಸಹನೆ ಪೌರುಷಗಳೆಲ್ಲ ಅವನಿಗಿದ್ದವು. ಯುದ್ಧಭೂಮಿಯಲ್ಲಿ ತುಂಬ ಚುರುಕಾಗಿ ಓಡಾಡಿ ನಾಯಕನಾಮಕ್ಕೆ ಅರ್ಹನೂ ಆಗಿದ್ದ. ದ್ರೋಣರಿಂದ ಧರ್ಮರಾಯನನ್ನು ರಕ್ಷಿಸುವ ಹೊಣೆಯನ್ನು ಹೊತ್ತಿದ್ದ. ಹಲವಾರು ಬಾರಿ ದ್ರೋಣರೊಡನೆ ನೇರಯುದ್ಧ ಮಾಡಿ ಮಿಶ್ರ ಫಲವನ್ನು ಪಡೆದಿದ್ದ. ಕೊನೆಗೆ ಯುದ್ಧದ ಹದಿನೈದನೆಯ ದಿನ ದ್ರೋಣರು ಶಸ್ತ್ರಸನ್ಯಾಸಮಾಡಿ ರಥದಲ್ಲಿ ಧ್ಯಾನ ಮಾಡುತ್ತ

ಕುಳಿತಿದ್ದಾಗ ದೃಷ್ಟದ್ಯುಮ್ನನು ರಥವೇರಿ ದ್ರೋಣರ ಕೊರಳನ್ನು ಕೊಯ್ದುದ್ದು ದೊಡ್ಡ ಚರ್ಚೆಗೆ ಆಸ್ಪದ ಕೊಟ್ಟಿದೆ. ಪಾಂಡವ ಪಕ್ಷದ ವೀರರೂ ಈ ಕೃತ್ಯವನ್ನು ಆಕ್ಷೇಪಿಸಿದ್ದರು. ಆದರೂ ಧೃಷ್ಟದ್ಯುಮ್ನನು ತಾನು ಮಾಡಿದ್ದು ಸರಿ ಎಂದು ಉದ್ದಕ್ಕೂ ಸಮರ್ಥಿಸಿಕೊಂಡೇ ಬಂದನೆಂಬುದನ್ನು ಮರೆಯಬಾರದು. ಸಾತ್ಯಕಿಯೊಂದಿಗಿನ ಆತನ ಕಟುಸಂಭಾಷಣೆಯಿಂದ ಈ ಅಂಶ ಸ್ಪಷ್ಟವಾಗುತ್ತದೆ.

ಗುರುಹತ್ಯೆ, ನಿರಾಯುಧನ ಮೇಲಣ ಆಕ್ರಮಣ ಮತ್ತು ಪಾಪಪ್ರಜ್ಞೆಯೇ ಕಾಡದ ಮನೋಭಾವಗಳ ಘೋರಫಲವನ್ನು ಅವನು ಅನುಭವಿಸಬೇಕಾಯಿತು. ಸೌಪ್ತಿಕ ಪರ್ವದಲ್ಲಿ ಇದರ ಬಗೆಗೆ ವಿವರಗಳಿವೆ. ಅರ್ಧರಾತ್ರಿಯಲ್ಲಿ ಪಾಳೆಯಕ್ಕೆ ನುಗ್ಗಿದ ಅಶ್ವತ್ಥಾಮನು ಬರ್ಬರ ರೀತಿಯಲ್ಲಿ ಧೃಷ್ಟದ್ಯುಮ್ನನ ಕೊಲೆಮಾಡಿದ.

* * * *

ಕಣಿಕ ನೀತಿ

ಮಹಾಭಾರತದ ಆದಿಪರ್ವದ 130-140ನೇ ಅಧ್ಯಾಯಗಳಲ್ಲಿ ಕಣಿಕನ ಮತ್ತು ಕಣಿಕ ನೀತಿಯ ವಿಚಾರಗಳು ಬರುತ್ತವೆ. ಕಣಿಕ ಧೃತರಾಷ್ಟ್ರನ ಒಬ್ಬ ಮಂತ್ರಿ. ಕೂಟ ನೀತಿ ತಂತ್ರಜ್ಞ. ದುಷ್ಟ ಪದ್ಧತಿಯ ವಿಚಾರಧಾರ ಇವನದು. ಇವನಿಂದಾಗಿ 'ಕಣಿಕ ವಾಕ್ಯ' ಎಂಬ ಹೇಳಿಕೆ ಹುಟ್ಟಿಕೊಂಡಿದೆ. ಇದೇ ರೀತಿ ಸಾವಿರ ದೊರೆ ಶತ್ರುಂಜಯನು ಧನ ಸಂಪಾದನೆಯ ವಿಷಯದಲ್ಲಿ ಕಣಿಕನೊಬ್ಬನ ಸಲಹೆ ಕೇಳಿದಾಗ ಆ ಕಣಿಕನು ಹೀಗೆ ಹೇಳಿದನಂತೆ. "ರಾಜನಾದವನು ಸರ್ವಥಾ ಬಡಿಗೋಲನ್ನು ಎತ್ತಿ ಹಿಡಿದುಕೊಂಡಿರಬೇಕು." ಇವನ ನೀತಿಯನ್ನನುಸರಿಸಿ ರಾಜನು ಹೇರಳ ದ್ರವ್ಯ



ಸಂಪಾದನೆ ಮಾಡಿದನೆಂದು ಅನುಶಾಸನಿಕ ಪರ್ವವು ಹೇಳುತ್ತದೆ. ನೈತಿಕ ನೆಲೆಗಟ್ಟೇ ಇಲ್ಲದೆ, ಧೂರ್ತರಿಗೆ ಮಾತ್ರ ಸಹಾಯಕವಾದ ದುರುಪದೇಶವೇ ಕಣಿಕ ನೀತಿ.

ಕಣಿಕನು ಧೃತರಾಷ್ಟ್ರನಿಗೆ ರಾಜನೀತಿಯನ್ನು ಬೋಧಿಸುವ ನೆವದಲ್ಲಿ 'ಪಾಂಡವರನ್ನು ಸಂಪೂರ್ಣವಾಗಿ ನಾಶ ಮಾಡಬೇಕು' ಎಂದು ಬೋಧಿಸುತ್ತಾನೆ. ಅರಗಿನ ಮನೆಯಲ್ಲಿ ಅವರನ್ನೆಲ್ಲ ಉಪಾಯವಾಗಿ ಗುಟ್ಟಾಗಿ ಸುಡುವ ಸಂಚು ನಡೆದದ್ದು ಈ ಕಣಿಕ ವಾಕ್ಯದಿಂದಲೇ.

ನಮ್ಮ ಕಾರ್ಯ ಸಾಧನೆ ಮುಖ್ಯ. ಅದಕ್ಕೆ ಯಾವ ದಾರಿ ಹಿಡಿದರೂ ತಪ್ಪಲ್ಲ ಎಂಬುದು ಕಣಿಕ ನೀತಿ. 'ದುರ್ಬಲರನ್ನು ಹೆದರಿಸು. ಧೀರರಿದ್ದರೆ ಗೌರವ ತೋರಿದಂತೆ ಮಾಡಿ ಸಮಯ ಸಿಕ್ಕಾಗ ಅವರನ್ನು ಮುಗಿಸಿಬಿಡು. ಕೆಲವರನ್ನು ಲಂಚ ಕೊಟ್ಟು ಒಲಿಸಿಕೊ. ಶತ್ರು ಎಂದು ನೀನು ಯಾರನ್ನು ಭಾವಿಸುತ್ತೀಯೋ ಅವರು ತಂದೆಯಾಗಿರಲಿ, ಅಣ್ಣನಾಗಿರಲಿ, ಬಂಧುವಾಗಿರಲಿ ಯೋಚನೆ ಮಾಡದೆ ಕೊಂದು ಹಾಕು. ಯಾರೆದುರಿಗೂ ನಿನ್ನ ಕೋಪ ಪ್ರದರ್ಶನ ಮಾಡಬೇಡ. ನಂಬಿಕಸ್ಥರನ್ನು ಕೂಡ ನಂಬಬೇಡ,

ಈ ನೀತಿಯನ್ನು ವಿಶದಪಡಿಸಲು ಕಣಿಕನು ಕಟ್ಟಿದ ಪ್ರಸಿದ್ಧ ಕಥೆಯೊಂದಿದೆ. ಅದನ್ನ ತಿಳಿದರೆ ಕಣಿಕ ನೀತಿ ಏನೆಂಬುದು ಸ್ಪಷ್ಟವಾದೀತು.

ಕಾಡಿನಲ್ಲಿ ಒಂದು ನರಿ ಇತ್ತು. ಅದಕ್ಕೆ ಸಿಂಹದ ಮಾಂಸ ತಿನ್ನಬೇಕೆಂಬ ಮಲಗಿದ್ದಾಗ ಸಿಂಹದ ಪಂಜಗಳನ್ನು ಕಡಿದು ತಿನ್ನುವಂತೆ ಇಲಿಗೆ ಹೇಳಿತು. ಪಂಜಕ್ಕೆ ಏಟು ಬಿದ್ದು ಸಿಂಹ ಕುಂಟಲಾರಂಭಿಸಿದಾಗ ಅದನ್ನು ಕೊಲ್ಲುವಂತೆ ಹುಲಿಗೆ ಹೇಳಿತು. ಹಾಗೆ ಹುಲಿ ಕೊಂದ ಮೇಲೆ ಮೂವರೂ ತಿನ್ನಲು ಸಿದ್ಧರಾದರು. ಆಗ ನರಿಯು ನೀವೆಲ್ಲ ಸ್ನಾನ ಮಾಡಿ ಬನ್ನಿ. ನಾನು ಕಾವಲಿರುತ್ತೇನೆ ಎಂದಿತು. ಸ್ನಾನ ಮಾಡಿ ಮೊದಲು ಬಂದದ್ದು ಹುಲಿ. ಅದಕ್ಕೆ ನರಿ "ನೋಡು ನನಗೆ ಈ ಮಾಂಸ ಬೇಡ. ತಾನೇ ಸಿಂಹದ ಸಾವಿಗೆ ಕಾರಣ ಎಂದು ಆ ದರಿದ್ರ ಇಲಿ ಕೊಚ್ಚಿಕೊಳ್ಳುತ್ತಿದೆ" ಈ ಮಾತು ಕೇಳಿ ಆತ್ಮಗೌರವವುಳ್ಳ ಹುಲಿ ತಾನೇ ಸ್ವತಂತ್ರವಾಗಿ ಬೇಟೆ ಮಾಡುತ್ತೇನೆಂದು ಹೇಳುತ್ತ ಹೊರಟುಹೋಯಿತು. ಅನಂತರ ಇಲಿ ಬಂದಿತು. ಅದಕ್ಕೆ ನರಿ ಹೇಳಿತು. "ನೋಡು ಮುಂಗುಸಿ ಹೇಳಿತು. ಈ ಸಿಂಹದ ಮಾಂಸ ವಿಷಪೂರಿತವಾದುದಂತೆ ನಾವಿಬ್ಬರೂ ಮುಟ್ಟುವುದು ಬೇಡ. ಆ ಇಲಿ ತಿಂದು ಸಾಯಲಿ". ಈ ಮಾತು ಕೇಳಿ ಇಲಿ ಹೆದರಿ ತನಗೂ ಅದು ಬೇಡ·ವೆಂದು ಓಡಿ ಹೋಯಿತು. ಅನಂತರ ಮುಂಗುಸಿ ಬಂದಾಗ ನರಿ ಅದನ್ನು ಬೆದರಿಸಿ ಓಡಿಸಿತು. ಮುಂದೆ ತಾನೇ ಆನಂದವಾಗಿ ಮಾಂಸವನ್ನೆಲ್ಲ ಭಕ್ಷಿಸಿತು. ಇಂಥ ಆಕರ್ಷಕ ಕತೆಗಳನ್ನು ಹೇಳಿ ಕೌರವರ ಮನಸ್ಸಿಗೆ ಪಾಪ ಕಾರ್ಯದ ವೇದನೆ ತಟ್ಟದಂತೆ ಮಾಡುವ ಉದ್ದೇಶ ಕಣಿಕನದು. ದುಷ್ಟ ಮನಸ್ಸುಗಳು ಬಲು ಬೇಗ ಇವರುಗಳ ಬಲೆಗೆ ಬೀಳುವುದರಲ್ಲಿ ಆಶ್ಚರ್ಯವೇನಿಲ್ಲ. ಕುಮಾರವ್ಯಾಸನಲ್ಲಿ ಶಕುನಿಯೇ ಕಣಿಕನಾಗಿರುವುದು ಗಮನಿಸಬೇಕಾದ ಸಂಗತಿ.

* * * *

ಗಾಲವ

ಗಾಲವನ ಕಥೆಯಲ್ಲಿ ವಿಚಿತ್ರವೂ ಲೋಕ ವಿರೋಧಿಯೂ ನೀತಿವಿಮುಖವೂ ಆದ ಘಟನೆಗಳಿವೆ. ಹೆಚ್ಚಿನ ವಿವರ ಬಯಸುವವರು ಅನುಪಮಾ ನಿರಂಜನರ 'ಮಾಧವಿ' ಕಾದಂಬರಿಯನ್ನು ಓದಿ ಮತ್ತು 'ಮಾಧವಿ' ಶೀರ್ಷಿಕೆ ನೋಡಿ. ಇವನ ಕಥೆ ಉದ್ಯೋಗ ಪರ್ವದ 15ನೇ ಅಧ್ಯಾಯದಲ್ಲಿದೆ.

ಗಾಲವ ಒಬ್ಬ ಪ್ರಸಿದ್ಧ ಋಷಿ. ಧರ್ಮರಾಯನ ಸಭೆಯಲ್ಲಿ ಇಂದ್ರನ ಸಭೆಯಲ್ಲಿ ಇರುತ್ತಿದ್ದ ಜ್ಞಾನಿ. ಈತ ವಿಶ್ವಾಮಿತ್ರನಂಥ ಬ್ರಹ್ಮರ್ಷಿಯ ಬಳಿ ಶಿಷ್ಯನಾಗಿದ್ದ. ವಿದ್ಯಾಭ್ಯಾಸ ಮುಗಿದ ಮೇಲೆ ಗುರುವಿಗೆ ಏನು ದಕ್ಷಿಣೆ ಕೊಡಬೇಕು ಎಂದು ಕೇಳಿದ. ಅಲ್ಲದೆ ಗುರುದಕ್ಷಿಣೆಯನ್ನು ತೆಗೆದುಕೊಳ್ಳಲೇ ಬೇಕೆಂದು ಪಟ್ಟುಹಿಡಿದ. ಗುರು ಕೇಳಿದ್ದು ಎಂಟುನೂರು ಕುದುರೆಗಳು. ಅವೂ ಅಂಥಿಂಥವಲ್ಲ. ಅವು ಬಿಳಿಯ ಬಣ್ಣದವಾಗಿರಬೇಕು. ಒಂದು ಕಿವಿ ನೀಲಿ ಇರುವ ಉತ್ತಮಾಶ್ವಗಳಾಗಿರಬೇಕು. ಗುರು ಕೇಳಿದ ಮೇಲೆ ತರುವುದು ಶಿಷ್ಯನ ಕೆಲಸವಲ್ಲವೆ ? ತನ್ನ ಆಪ್ತ ಸ್ನೇಹಿತ ಗರುಡನನ್ನು ನೆನೆದ. 'ಅಶ್ವಸಹಾಯ' ಮಾಡಲೆಂದು ಗರುಡ ಗಾಲವನನ್ನು ಮೊದಲು ಕರೆದುಕೊಂಡು ಹೋದದ್ದು ಪ್ರಸಿದ್ಧನಾದ ಯಯಾತಿಯ ಬಳಿಗೆ. ಆದರೆ ಯಯಾತಿಯ ಬಳಿ ಅಂಥ ಕುದುರೆಗಳಿರಲಿಲ್ಲ. ಗಾಲವನ ಬೇಡಿಕೆಯನ್ನು ನಿರಾಕರಿಸುವುದಕ್ಕೂ ಯಯಾತಿಗೆ ಮನಸ್ಸಿಲ್ಲ. ಆದುದರಿಂದ ಕುದುರೆಗಳಿಗೆ ಬದಲಾಗಿ ತನ್ನ ಮಗಳು ಮಾಧವಿಯನ್ನು ಗಾಲವನಿಗೆ ಕೊಟ್ಟು ಆಕೆಯನ್ನು ಒಂದು ಅವಧಿಯವರೆಗೆ ಒತ್ತೆಯಿರಿಸಿ 200 ಕುದುರೆಗಳಂತೆ ನಾಲ್ಕು ರಾಜರ ಬಳಿ ಸಂಪಾದಿಸಿಕೋ ಎಂದು ಹೇಳಿದ. ಅವಳಿಗೆ ಒಂದು ಮಗುವಾಗುವ ತನಕ ಆಕೆ ಆಯಾ ರಾಜನ ಬಳಿ ಇರಬಹುದೆಂಬ ನಿಬಂಧನೆಯನ್ನು ಹೇಳಿದ. ಗಾಲವ ದಾನಿಗಳನ್ನು ಹುಡುಕಿಕೊಂಡು ಹೊರಟ. ಆದರೆ ಸಿಕ್ಕವರು ಮೂವರೇ. ಮೊದಲು ಸಿಕ್ಕವನು ಹರ್ಯಶ್ವ. (ಈ ಮೂರು ಹೆಸರುಗಳಲ್ಲಿ ಭಿನ್ನ ನಾಮಗಳೂ ಕೆಲವು ಪ್ರತಿಗಳಲ್ಲುಂಟು) ಅವನು 200 ಕುದುರೆಗಳನ್ನಿತ್ತು ಮಾಧವಿಯನ್ನು ಇರಿಸಿಕೊಂಡ. ಅವಳಿಗೆ ಒಂದು ಮಗುವಾದ ನಂತರ ಬಿಟ್ಟುಕೊಟ್ಟ. ಮುಂದೆ ದಿವೋದಾಸನ ಸರದಿ. ಅಲ್ಲೂ ಇದೇ ಪ್ರಯೋಗ. ಅನಂತರ ಉಶೀನರನ ಸರದಿ. ಮೂವರಿಗೂ ಒಂದೊಂದು ಗಂಡನ್ನು ಹೆತ್ತುಕೊಟ್ಟು ಮುಕ್ತಳಾದ ಮಾಧವಿಯನ್ನು ಗಾಲವ ವಿಶ್ವಾಮಿತ್ರನ ಬಳಿಗೆ ಕರೆದುಕೊಂಡು ಹೋಗುತ್ತಾನೆ. ಗರುಡನ ಸಹಾಯದಿಂದ, ರಾಜರುಗಳ ಸಹಾಯದಿಂದ ಪಡೆದದ್ದು 600 ಕುದುರೆಗಳು ಮಾತ್ರ. ಇನ್ನು ಇನ್ನೂರು ಕುದುರೆಗಳನ್ನು ಹೊಂದಿಸಬೇಕಲ್ಲ. ಅದಕ್ಕೆ ಬದಲಾಗಿ ಮಾಧವಿಯನ್ನೇ ಗುರುವಿಗೆ ಒಪ್ಪಿಸಿ ಋಣಭಾರದಿಂದ ಮುಕ್ತನಾಗುವುದು ಗಾಲವನ ಹಂಚಿಕೆಯಾಗಿತ್ತು. ವಿಶ್ವಾಮಿತ್ರನು 600 ಕುದುರೆಗಳನ್ನು ಸ್ವೀಕರಿಸಿ 200 ಕುದುರೆಗಳ ಬದಲಿಗೆ ಮಾಧವಿಯನ್ನು ಸ್ವೀಕರಿಸಿದ. ಅವಳೊಡನೆ ಸಂಸಾರ ಮಾಡಿ ಅಷ್ಟಕ ಎಂಬ ಪುತ್ರನನ್ನೂ ಪಡೆದ. ಅನಂತರ ಗಾಲವನನ್ನು ಕರೆದು ಗುರುದಕ್ಷಿಣೆ ಬಂದಿತೆಂದು ಹೇಳಿ

ಮಾಧವಿಯನ್ನು ಗಾಲವನಿಗೆ ಒಪ್ಪಿಸಿದ. ತನ್ನ ಕೆಲಸ ಮುಗಿದದ್ದರಿಂದ ಪ್ರಸನ್ನಚಿತ್ತದಿಂದ ಗಾಲವನು ಆಪ್ತಸ್ನೇಹಿತನಾದ ಗರುಡನನ್ನು ಕರೆದು ತನ್ನನ್ನು ಮತ್ತೆ ಮಾಧವಿಯ ತಂದೆ ಯಯಾತಿಯ ಬಳಿಯಲ್ಲಿ ಬಿಡುವಂತೆ ಕೋರಿದ. ಯಯಾತಿಯ ಆಶ್ರಮಕ್ಕೆ ಬಂದು ಮಗಳಾದ ಮಾಧವೀರಾಣಿಯನ್ನು ಅಪ್ಪನ ಬಳಿ ಬಿಟ್ಟು ಮುಕ್ತನಾಗಿ ತಪಸ್ಸು ಮಾಡಲು ವನಪ್ರದೇಶಕ್ಕೆ ಪ್ರಯಾಣ ಮಾಡಿದ.

ಈ ಕಥೆಯಲ್ಲಿ ಬರುವ ಹೆಣ್ಣಿನ ಮಾರಾಟದ ಸಂಗತಿಯು ಬೌದ್ಧಿಕ ಜಿಜ್ಞಾಸೆಗೆ ಒಳಗಾಗಿದೆ. ಹೆಣ್ಣನ್ನು ಮಾರಾಟದ ವಸ್ತುವಾಗಿ ಕಂಡಿರುವ ಬಗೆಯನ್ನು ಹಲವಾರು ವಿದ್ವಾಂಸರು ಟೀಕಿಸಿದ್ದಾರೆ. ಇನ್ನೂರು ಕುದುರೆಗಳ ಬೆಲೆಯನ್ನು ಹೆಣ್ಣಿಗೆ ಕಟ್ಟಿರುವುದಂತೂ ತೀರ ನಾಚಿಕೆಗೇಡಿನ ವಿನಿಮಯ ಎಂದು ಸ್ತ್ರೀವಾದಿಗಳು ಆಕ್ಷೇಪಿಸಿರುವುದನ್ನು ಅಲ್ಲಗಳೆಯುವಂತಿಲ್ಲ. ಯಯಾತಿಯಂಥವನ ಕಾಲದಲ್ಲೂ ಇಂಥ ಬರ್ಬರ ಸ್ಥಿತಿಯಿತ್ತು ಎಂದರೆ ಆಶ್ಚರ್ಯವಲ್ಲವೆ ?

* * * *

ಪೌಷ್ಯ

ಮಹಾಭಾರತದ ಆದಿಪರ್ವದ ಪೌಷ್ಯಪರ್ವದಲ್ಲಿ ಇವನ ವಿಚಾರ ವರ್ಣಿತವಾಗಿದೆ. ಈತ ಒಬ್ಬ ಪ್ರಸಿದ್ಧ ಮಹಾರಾಜ. ಈತನ ಹೆಂಡತಿ ಪತಿವ್ರತೆಯೂ ಪರಮಸಾಧ್ವಿಯೂ ಆಗಿದ್ದ ಪೌಷ್ಯಮಹಾದೇವಿ. ಈಕೆಯ ಇನ್ನೊಂದು ವೈಶಿಷ್ಟ್ಯವೆಂದರೆ ಆಕೆ ಅಶುಚಿಯಾಗಿದ್ದವರ ಕಣ್ಣಿಗೆ ಬೀಳುತ್ತಿರಲಿಲ್ಲ. ಅಂಥ ದೃಢಪತಿವ್ರತೆ ಅವಳು. ಉತ್ತಂಕ (ಉದಂಕ)ನಂಥ ಮಹಾಸಾಧಕನ ಕಣ್ಣಿಗೇ ಬೀಳಲಿಲ್ಲವಂತೆ! ಉತ್ತಂಕನು ವೇದ ಎಂಬ ಋಷಿಯ ಶಿಷ್ಯ. ಸಾಂಗವಾಗಿ ವಿದ್ಯಾಭ್ಯಾಸ ಮುಗಿಸಿದ ಮೇಲೆ ಉತ್ತಂಕನು ಗುರುಗಳಿಗೆ ಗುರುದಕ್ಷಿಣೆಯಾಗಿ ಏನು ಕೊಡಬೇಕು ಎಂದು ಕೇಳಿದ. ಗುರುಗಳು ತನ್ನ ಪತ್ನಿ ಯಾವುದನ್ನು ಬಯಸುತ್ತಾಳೋ ಅದನ್ನು ತಂದುಕೊಟ್ಟರೆ ತನಗೆ ಗುರುದಕ್ಷಿಣೆ ಸಂದಂತೆ ಆಗುತ್ತದೆ ಎಂದು ಹೇಳಿದರು. ಗುರು ಪತ್ನಿಗೆ ಪೌಷ್ಯ ಮಹಾರಾಜನ ಹೆಂಡತಿಯ ಕಿವಿಯಲ್ಲಿದ್ದ ಅಮೂಲ್ಯವಾದ ಕರ್ಣಕುಂಡಲಗಳ ಮೇಲೆ ಆಸೆಯಿತ್ತು. ಆದ್ದರಿಂದ ಆ ಕುಂಡಲಗಳನ್ನು ನಾಲ್ಕು ದಿನಗಳಲ್ಲಿ ತಂದುಕೊಡಬೇಕೆಂದು ಕೇಳಿದಳು.

ಉತ್ತಂಕನು ಪೌಷ್ಯ ಮಹಾರಾಜನ ಬಳಿಗೆ ಹೊರಟ. ಆದರೆ ದಾರಿಯಲ್ಲಿ ಐರಾವತವನ್ನೇರಿದ ಒಬ್ಬ ವ್ಯಕ್ತಿ (ಇಂದ್ರ) ಈತನನ್ನು ತಡೆದು ಆ ಆನೆಯ ಸಗಣಿಯನ್ನೂ ಗಂಜಲವನ್ನೂ ಸ್ವೀಕರಿಸುವಂತೆ ಒತ್ತಾಯಿಸಿದ. ಅದಾದ ಮೇಲೆ ಪೌಷ್ಯನ ಬಳಿಗೆ ಗುರುದಕ್ಷಿಣೆಗಾಗಿ ಬಂದಾಗ ಪೌಷ್ಯನು ಸಂತೋಷದಿಂದ ಒಪ್ಪಿದ. ಆದರೆ ತನ್ನ ರಾಣಿಯನ್ನೇ ನೇರವಾಗಿ ಕಂಡು ಬೇಡಿಕೆಯನ್ನು ಮುಂದಿಡುವಂತೆ ಸೂಚಿಸಿದ. ಸಗಣಿ, ಗಂಜಲದಿಂದ ಶುಚಿತ್ವವನ್ನು ಕಳೆದುಕೊಂಡಿದ್ದುದರಿಂದ ಉತ್ತಂಕನು ಅರಮನೆಯಲ್ಲಿ ಎಲ್ಲ ಕಡೆ ಹುಡುಕಿದರೂ ರಾಣಿ ಕಣ್ಣಿಗೆ ಬೀಳಲಿಲ್ಲ. ಮತ್ತೆ ರಾಜನ ಬಳಿಗೆ ಹೋದರೆ ರಾಜನು "ನೀನು ಬ್ರಹ್ಮಚಾರಿ. ಅಶುದ್ಧನೆಂದು ಹೇಳಲು ನನಗೆ ಬಾಯಿಲ್ಲ. ಆದರೆ ಅಶುದ್ಧರಾದವರ ಕಣ್ಣಿಗೆ ನನ್ನ ರಾಣಿ ಕಾಣಿಸುವುದಿಲ್ಲ. ಅಂದ ಮೇಲೆ ಏನೋ ಇರಬೇಕು ಎಂದ. ಗಂಜಲದ ವಿಷಯ ಉತ್ತಂಕನಿಗೆ ನೆನಪಾಯಿತು. ಕೂಡಲೇ ಕೈಕಾಲು ತೊಳೆದುಕೊಂಡು ಆಚಮನ ಮಾಡಿ ರಾಣಿಯ ಬಳಿಗೆ ಬಂದ. ಈ ಬಾರಿ ರಾಣಿ ಕಣ್ಣಿಗೆ ಬಿದ್ದಳು. ಇವನ ಪ್ರಾರ್ಥನೆಯನ್ನು ಕೇಳಿ ಪೌಷ್ಯರಾಣಿ ಸಂತೋಷದಿಂದ ಕರ್ಣಕುಂಡಲವನ್ನು ಕೊಡುವುದಾಗಿ ಹೇಳಿದಳು. ಬ್ರಹ್ಮಚಾರಿಗೆ ನಮಸ್ಕರಿಸಿ ಒಡವೆಯನ್ನು ಕೊಡುವಾಗ ಒಂದು ಎಚ್ಚರಿಕೆಯ ಮಾತನ್ನು ಹೇಳಿದಳು.

"ಉತ್ತಂಕ ಮಹಾಶಯ! ಒಂದು ಎಚ್ಚರಿಕೆ. ತಕ್ಷಕನು ಈ ಒಡವೆಯ ಮೇಲೆ ಕಣ್ಣಿಟ್ಟಿದ್ದಾನೆ, ಬೇಕೆಂದು ಕೇಳುತ್ತಿದ್ದಾನೆ.

ಕಥೆ ಇಲ್ಲಿಗೆ ಮುಗಿಯುವುದಿಲ್ಲ ಇದಕ್ಕೆ ಎರಡು ಉಪಘಟನೆಗಳು ಸೇರಿಕೊಂಡಿವೆ. ಎರಡನೆಯದೆಂದರೆ ಕ್ಷಪಣಕನ ರೂಪದಲ್ಲಿ ತಕ್ಷಕನು ಉತ್ತಂಕನನ್ನು ಹಿಂಬಾಲಿಸಿ ಅವನು ಸರೋವರದಲ್ಲಿ ಸ್ನಾನಕ್ಕೆ ಇಳಿದಾಗ ಒಡವೆಯನ್ನು ಕದ್ದು ನಾಗಲೋಕಕ್ಕೆ ಹೋಗಿದ್ದು, ಇಂದ್ರನು ವಜ್ರಾಯುಧದಿಂದ ನಾಗಲೋಕಕ್ಕೆ ಬಿಲ

ತೋಡಿದಾಗ ಉತ್ತಂಕನು ಒಳನುಗ್ಗಿದ್ದು, ನಾಗಲೋಕದಲ್ಲಿ ಕ್ಷೋಭೆ ಉಂಟಾಗಿ ಕೊನೆಗೆ ತಕ್ಷಕನು ಒಡವೆಯನ್ನು ಹಿಂದಿರುಗಿಸಿದ್ದು, ಅನಂತರ ಉತ್ತಂಕನು ಆ ಒಡವೆಯನ್ನು ಅವಧಿಯ ಒಳಗೇ ಗುರುಪತ್ನಿಗೆ ತಲುಪಿಸಿದ್ದು.

ಇದಕ್ಕಿಂತ ಮುಖ್ಯವಾದ ಒಂದನೆಯ ಉಪಘಟನೆಯೆಂದರೆ ಪೌಷ್ಯರಾಣಿಯು ಒಡವೆ ಕೊಟ್ಟನಂತರ ಪೌಷ್ಯನು ಉತ್ತಂಕನನ್ನು ಊಟಕ್ಕೆ ಆಹ್ವಾನಿಸಿದ್ದು. ಮಧ್ಯ ಅನ್ನದಲ್ಲಿ ಕೂದಲು ಸಿಕ್ಕಿದ್ದರಿಂದ ಉತ್ತಂಕನು ಕ್ರೋಧದಿಂದ ರಾಜನಿಗೆ ಕುರುಡನಾಗು ಎಂದು ಶಾಪವಿತ್ತ. ಬಡಿಸಿದ ಅನ್ನವು ತಣ್ಣಗಿದ್ದುದು, ಕೇಶದುಷ್ಟವಾಗಿದ್ದುದು, ಆ ಕೇಶವು ಹೆಂಗಸಿನದಾದ್ದರಿಂದ ಅನ್ನ ಅಶುಚಿಯಾಗಿತ್ತು ಎಂಬುದು ಉತ್ತಂಕನ ಅಸಮಾಧಾನಕ್ಕೆ ಕಾರಣ. ರಾಜನಿಗೆ ಬೇಸರವಾಯಿತು. "ಇಷ್ಟು ಸಣ್ಣ ತಪ್ಪಿಗೆ ಇಂಥ ಶಿಕ್ಷೆ ಕೊಟ್ಟಿದ್ದೀಯೆ. ನಿನಗೆ ಸಂತಾನವೇ ಆಗದಿರಲಿ" ಎಂದು ಪ್ರತಿಶಾಪವಿತ್ತ. ಉತ್ತಂಕನು ತನ್ನ ಶಾಪವನ್ನು ಹಿಂದಕ್ಕೆ ತೆಗೆದುಕೊಂಡ. ಸ್ವಲ್ಪದಿನಗಳಲ್ಲೇ ಅಂಧತ್ವ ಹೋಗಿ ದೃಷ್ಟಿ ಬರುವಂತೆ ಕರುಣಿಸಿದ. ಆದರೆ ರಾಜನಿಗೆ ಶಾಪವನ್ನು ಹಿಂದಕ್ಕೆ ಪಡೆಯುವ ಶಕ್ತಿಯಿರಲಿಲ್ಲ.

ತಪಶ್ಶಕ್ತಿ ಇದೆಯೆಂದುಕೊಂಡು ತನಗೆ ಉಪಕಾರ ಮಾಡಿದವ ಮೇಲೆ, ಒಂದು ಕ್ಷುಲ್ಲಕ ಕಾರಣಕ್ಕಾಗಿ ಶಾಪ ಕೊಡಲು ಹೋದವನಿಗೆ ಏನು ಗತಿಯಾಯಿತೆಂಬುದು ಈ ಕಥೆಯಲ್ಲಿ ಧ್ವನಿತವಾಗಿದೆ. ಅಲ್ಲದೆ ಶಾಪವನ್ನು ಕೊಡುವ, ಹಿಂದೆಗೆದುಕೊಳ್ಳುವ ಶಕ್ತಿ ಯಾರಿಗಿರುತ್ತದೆಂಬ ಬಗೆಗೆ ಇಲ್ಲಿ ಆರೋಗ್ಯಕರವಾದ ಚರ್ಚೆಯಿದೆ. ಆದಿಪರ್ವದ ಈ ಶ್ಲೋಕವನ್ನು ನೋಡಿ:

ನವನೀತಂ ಹೃದಯಂ ಬ್ರಾಹ್ಮಣಸ್ಯ
ವಾಚಿ ಕ್ಷುರೋ ನಿಶಿತಸ್ತೀವ್ರಧಾರಃ
ತದುಭಯ ಮೇತದ್ವಿಪರೀತಂ ಕ್ಷತ್ರಿಯಸ್ಯ
ವಾಙ್ನವನೀತಂ ಹೃದಯಂ ತೀಕ್ಷ್ಣಧಾರಮಿತಿ


ಉತ್ತಂಕ ಬ್ರಾಹ್ಮಣನಾದುದರಿಂದ ಅವನ ಹೃದಯುವು ಬೆಣ್ಣೆಯಂತೆ ಕರಗುತ್ತದೆ. ಆದ್ದರಿಂದ ಶಾಪದ ಉಪಸಂಹಾರಶಕ್ತಿ ಅವನಿಗಿದೆ. ಆದರೆ ಪೌಷ್ಯನು ಕ್ಷತ್ರಿಯ. ತೀಕ್ಷ್ಣಹೃದಯುದವನಾದ್ದರಿಂದ ಕೊಟ್ಟ ಶಾಪವನ್ನು ಹಿಂದಕ್ಕೆ ಪಡೆಯಲಾರೆ.

(ವಿಶೇಷ ಸಂಗತಿ: ಉದಂಕ, ಉತ್ತಂಕ ಈ ಎರಡು ಹೆಸರುಗಳಲ್ಲಿ ಸ್ವಲ್ಪ ಗೊಂದಲವಿರುವಂತಿದೆ. ಉದಂಕನು ಭೃಗುವಂಶದವನೆಂದು ಒಂದು ಕಡೆ ಹೇಳಲಾಗಿದೆ. ಕುಂಡಲದ ಕಥೆ ಇಲ್ಲೂ ಬರುತ್ತದೆ. ಉತ್ತಂಕನು ಧೌಮ್ಯನ ಶಿಷ್ಯನೆಂದು ಕೆಲವು ಪಾಠಗಳಲ್ಲಿದೆ. ಪೈಲನ ಮಗನೆಂದೂ ಹೇಳಲಾಗಿದೆ. ಹೆಸರು ಯಾವುದೇ ಆದರೂ ಕಥೆ ಮಾತ್ರ ಒಂದೇ ಬಗೆಯದು. ಆದ್ದರಿಂದ ಈ ಗೊಂದಲ.)

* * * *

ಈಶ್ವರ

ಮಹಾಭಾರತವು ಶಿವಪ್ರಧಾನವೋ ವಿಷ್ಣುಪ್ರಧಾನ ಕಾವ್ಯವೋ ಎಂಬ ಬಗ್ಗೆ ಹಲವಾರು ವಿದ್ವಾಂಸರು ಚರ್ಚೆ ನಡೆಸುವಷ್ಟರ ಮಟ್ಟಿಗೆ ಶಿವ-ಕೃಷ್ಣ ಇಬ್ಬರ ವಿಚಾರವೂ



ಚರ್ಚಿತವಾಗಿದೆ. ಸ್ವಯಂ ಶ್ರೀಕೃಷ್ಣನೇ ಶತರುದ್ರೀಯವನ್ನು ಹೇಳಿಕೊಂಡು ಶಿವನ ಕೃಪೆಗೆ ಪಾತ್ರನಾಗುತ್ತಾನೆ. 'ಸರ್ವದೇವೈರಭಿಷ್ಟುತಂ' ಎಂಬ ಹೆಗ್ಗಳಿಕೆಗೆ ಶಿವ

ಪಾತ್ರನಾಗಿದ್ದಾನೆ. ಶಿವನು ಬರೆದ 10000 ಶ್ಲೋಕಗಳ ವೈಶಾಲಾಕ್ಷ ಎಂಬ ಗ್ರಂಥದ ಬಗೆಗೂ ಮಹಾಭಾರತದಲ್ಲಿ ಉಲ್ಲೇಖವಿದೆ. ಈ ಗ್ರಂಥದಲ್ಲಿ ಶಿವನ ಸಹಸ್ರನಾಮಾವಳಿ ಇರುವುದರ ಜೊತೆಗೆ ಅವುಗಳ ಬಗೆಗೆ ಸಾಂಸ್ಕೃತಿಕ ವಿವರಗಳೂ ಸಾಕಷ್ಟಿವೆ. 'ರುದ್ರಾಣಾಂ ಶಂಕರಶ್ಚಾಸ್ಮಿ' ಎಂದು ಕೃಷ್ಣನೇ ಹೇಳಿಲ್ಲವೇ ?

ಈಶ್ವರನು ಗಾಂಧಾರಿಗೆ ನೂರು ಮಕ್ಕಳಾಗುವಂತೆ ವರವನ್ನಿತ್ತವನು. ಅಶ್ವತ್ಥಾಮ ಸೈಂಧವರಿಗೆ ಸಹಾಯಹಸ್ತ ಚಾಚಿದವನು. ಕರ್ಣಾರ್ಜುನರ ಘೋರ ಸಂಗ್ರಾಮವನ್ನು ನೋಡಲು ಖುದ್ದಾಗಿ ಬಂದವನು. ಅಶ್ವತ್ಥಾಮನಿಗೆ ಶಕ್ತಿ ಇತ್ತವನೂ ಶಿವನೇ! ಬ್ರಹ್ಮಚಾರಿಯಾದ ವ್ಯಾಸರಿಗೆ ಒಂದು ಮಗುವನ್ನು ವರವಾಗಿ ನೀಡಿದ್ದೂ ಮಹಾಭಾರತದಲ್ಲಿ ಉಕ್ತವಾಗಿದೆ. ಇಡೀ ಮಹಾಭಾರತದಲ್ಲಿ ಎಲ್ಲ ಪರ್ವಗಳಲ್ಲೂ ಈಶ್ವರನ ಪ್ರಸಕ್ತಿಯಿದೆ. ಶಿವನು ಗಂಗೆಯನ್ನು ಜಟೆಯಲ್ಲಿ ಧರಿಸಿದ ಪ್ರಸಂಗವು ವಿಸ್ತಾರವಾಗಿ ವರ್ಣಿತವಾಗಿದೆ. ಅನಂಗಾಂಗಹರ, ಅನಂತ, ಅಥರ್ವ, ಬಭ್ರು, ಬಹುರೂಪ, ಸ್ಥಾಣು, ಅಂಧಕಘಾತಿ, ಭಗಘ್ನ, ಭಾರ್ಗವ, ಭೀಮ, ಭೂತಪತಿ, ಚಕ್ರ, ಚರ್ಮವಾಸ, ಚೇಕಿತಾನ, ಶಿರವಾಸ, ಶಂಭು ಮೊದಲಾದ ಹೆಸರುಗಳೆಲ್ಲ ಭಾರತ ಗ್ರಂಥದಲ್ಲಿ ಪ್ರಸ್ತಾವಿತವಾಗಿವೆ. ಹದಿಮೂರನೆಯ ಪರ್ವದಲ್ಲಂತೂ 'ಶಂಕರಾದ್ ಊರ್ಧ್ವಂ ನಾನ್ಯಂ ಪಶ್ಯಾಮಿ ದೈವತಂ' ಎಂಬ ಹೇಳಿಕೆಯಿದ್ದು ಶಿವನ ಮಹತಿಯನ್ನು ಸೂಚಿಸುತ್ತದೆ. ಶಿವನಿಗೆ ಎರಡು ರೂಪಗಳಿವೆ ಎಂದು ಶ್ರೀಕೃಷ್ಣನೇ ಹೇಳಿದ್ದಾನೆ. ಭಯಂಕರ ಅಗ್ನಿರೂಪ. ಅಗ್ನಿ, ಸಿಡಿಲು ಮತ್ತು ಸೂರ್ಯರುಗಳ ತೇಜಸ್ಸು ಅವನಲ್ಲಿದೆ. ಅವನ ಬಾಯಿಂದ ಅಗ್ನಿದೇವನು ಪ್ರತ್ಯಕ್ಷವಾದುದನ್ನು ಈ ಸಮಯದಲ್ಲಿ ನೆನಪು ಮಾಡಿಕೊಳ್ಳಬಹುದು. ಇನ್ನೊಂದು ಶಿವರೂಪ, ಶಾಂತರೂಪ, ನೀರು ಮತ್ತು ಚಂದ್ರರು ಇವನ ದೇಹದ ಭಾಗಗಳೇ ಅಲ್ಲವೆ ? ಶಿವನ ಶಕ್ತಿಯು ಜ್ವರದ ರೂಪದಲ್ಲಿ ವೃತ್ರಾಸುರನ ದೇಹಕ್ಕೆ ನುಗ್ಗಿದ ಪ್ರಸಂಗ, ವೃತ್ರನ ಮೇಲೆ ದಂಡೆತ್ತಿ ಹೋಗುವ ಇಂದ್ರನಿಗೆ ಒಂದು ಭಲ್ಲೆಯನ್ನು ಕರುಣಿಸಿದ ಪ್ರಸಂಗ ಇವೆಲ್ಲ ಮಹಾಭಾರತದಲ್ಲಿ ಸೊಗಸಾಗಿ ವರ್ಣಿತವಾಗಿವೆ. ಶಿವಪುರಾಣದಲ್ಲಿ ಬರುವ ಅನೇಕ ಶಿವ ಸಂಬಂಧಿಯಾದ ಕಥೆಗಳು ಮಹಾಭಾರತದಲ್ಲಿವೆ. ಸಮುದ್ರದ ಘೋಷವನ್ನು ಶಿವನ ಅಟ್ಟಹಾಸಕ್ಕೆ ಸಮೀಕರಿಸಿರುವುದು ಎಂತಹ ಸುಂದರ ಪ್ರತಿಮೆ! ಕಿರಾತಾರ್ಜುನೀಯ ಪ್ರಸಂಗವಂತೂ ಅರ್ಜುನ ಶಿವರನ್ನು ಎದುರು ಬದುರು ನಿಲ್ಲಿಸಿ ಮಹಾಭಾರತವನ್ನು ದೇವ-ಮಾನವ ಕಾವ್ಯವಾಗಿಸಿದೆ. ಹರಿಹರರ ಅಭೇದವನ್ನು ಸಾರುವುದೂ ವ್ಯಾಸರ ಉದ್ದೇಶವಾಗಿರುವಂತಿದೆ.

* * * *

ವೈವಸ್ವತ ಮನು

ವೈವಸ್ವತ ಮನುವಿನ ಕಥೆ ಪುರಾಣಗಳಿಂದ ಮಹಾಭಾರತಕ್ಕೆ ಇಳಿದು ಬಂದಿದೆ. ನಮ್ಮ ದೇಶದ್ದೇ ಅಲ್ಲದೆ ಹಳೆಯ ಒಡಂಬಡಿಕೆಯ ಬೈಬಲ್ ಪ್ರಳಯದ ಕಥೆಯನ್ನು ತನ್ನ ಗರ್ಭದಲ್ಲಿ ಸೇರಿಸಿಕೊಂಡಿದೆ. Noah's Arc ಎಂಬ ಮಾತು ಬೈಬಲ್‌ನಲ್ಲಿ ಬರುತ್ತದೆ. ಇದು ಜಗತ್ತಿನಲ್ಲಿ ಪ್ರಳಯವಾದಾಗ ನೋಹ ಎಂಬ ವ್ಯಕ್ತಿಯನ್ನು ಕರೆಸಿ ದೇವರು ನೋಹನು ದೊಡ್ಡ ಹಡಗನ್ನು ಕಟ್ಟಿ ತನ್ನ ಸಂಸಾರವನ್ನೂ ಜೀವಜಂತುಗಳಲ್ಲಿ ಒಂದೊಂದು ಮಾದರಿಯನ್ನೂ ಉಳಿಸಬೇಕೆಂದು ಆಜ್ಞಾಪಿಸಿದನೆಂಬ ಸಂಗತಿ Genesis 5-9ನಲ್ಲಿ ಬರುತ್ತದೆ. ಈ ಕಥೆಯ ಸಮಾನಾಂತರ ಕಥೆ ಇಲ್ಲಿದೆ.

ಅರಣ್ಯಪರ್ವದಲ್ಲಿ ಮಾರ್ಕಂಡೇಯ ಮುನಿಗಳು ಈ ಕಥೆಯನ್ನು ಧರ್ಮರಾಯನಿಗೆ ಹೇಳುತ್ತಾರೆ.

ವೈವಸ್ವತಮನುವು ವಿವಸ್ವತಂ (ಸೂರ್ಯ)ನ ಮಗ. ಅವನು ಪ್ರಜಾಪತಿಗೆ ಸಮಾನ ತೇಜಸ್ಸುಳ್ಳ ಮಹರ್ಷಿ. ಬದರಿಕಾ ವನದಲ್ಲಿ ಒಂಟಿಕಾಲಮೇಲೆ ನಿಂತು ಘೋರತಪಸ್ಸು ಮಾಡಿದವನು. ಅನಿಮಿಷನಾಗಿ ಹತ್ತುಸಾವಿರ ವರ್ಷ ಹಾಗೆ ತಪಸ್ಸು ಮಾಡಿದ್ದ. ನೆನೆದ ಬಟ್ಟೆ ಬಿಟ್ಟಜಡೆಗಳಿಂದ ಆತ ಚೀರಿಣೀ ನದೀ ತೀರದಲ್ಲಿ ತಪಸ್ಸು ಮಾಡುತ್ತಿದ್ದಾಗ ಒಂದು ಮೀನು ಅವನ ಬಳಿಗೆ ಬಂದು ಬಲಿಷ್ಠ ಮೀನುಗಳಿಂದ ತನಗೆ ತೊಂದರೆಯಾಗುತ್ತಿದೆಯೆಂದು ದೂರುಕೊಟ್ಟಿತು. ಇದನ್ನು ತಪ್ಪಿಸಿದರೆ ತಾನು ಮುಂದೆ ವೈವಸ್ವತನಿಗೆ ಪ್ರತ್ಯುಪಕಾರ ಮಾಡುವುದಾಗಿಯೂ ಹೇಳಿತು. ವೈವಸ್ವತನು ಅದನ್ನು ಒಂದು ಕೊಡದೊಳಗಿರಿಸಿ ಪುತ್ರಪ್ರೇಮದಿಂದ ಸಾಕುತ್ತಿದ್ದ. ಆದರೆ ಸ್ವಲ್ಪಕಾಲದಲ್ಲೇ ಅದು ಬೆಳೆದದ್ದರಿಂದ ಕೊಡವು ಅದರ ಓಡಾಟಕ್ಕೆ ತುಂಬ ಇಕ್ಕಟ್ಟಾಯಿತು. ಆಗ ಅದರ ಕೋರಿಕೆಯಂತೆ ದೊಡ್ಡಬಾವಿಯಲ್ಲಿರಿಸಿದರೆ ಅದು ಬೆಳೆದು ಬಾವಿಯೂ ಸಣ್ಣದಾಯಿತು. ಅದನ್ನು ಗಂಗಾನದಿಯಲ್ಲಿ ಬಿಟ್ಟ. ಹೀಗೆ ತಾನು ಬೆಳೆದಂತೆಲ್ಲ ಸ್ಥಾನಾಂತರ ಮಾಡುತ್ತಿರು ಎಂದು ಬೇಡಿತು ಅದರಂತೆ ಕೊನೆಗೆ ವೈವಸ್ವತ ಮನುವು ಅದನ್ನು ಸಮುದ್ರದಲ್ಲಿ ಬಿಟ್ಟನು. ಮಹಾಕಾಯದ ಆ ಮತ್ಸ್ಯವನ್ನು ಎತ್ತಿಕೊಂಡು ಹೋಗುವಾಗ ಅದು ತನ್ನ ಭಾರವನ್ನು ಕಡಮೆ ಮಾಡಿಕೊಂಡು ಉಪಕರಿಸಿತು. ಆಗ ಅದು ವೈವಸ್ವತನ ಗುಣವನ್ನು ಕೊಂಡಾಡಿ ಒಂದು ಎಚ್ಚರಿಕೆ ನೀಡಿತು. ಅದು ಭವಿಷ್ಯವಾಣಿ ಕೂಡ.

"ಮಹಾತ್ಮ ಬಹಳ ಬೇಗ ಈ ಸ್ಥಾವರಜಂಗಮಾತ್ಮಕವಾದ ಸರ್ವಪ್ರಪಂಚವೂ ಪ್ರಳಯದ ನೀರಿನಲ್ಲಿ ಮುಳುಗುತ್ತದೆ. ಜಗತ್ತೆಲ್ಲ ಬರೀ ಸಮುದ್ರಮಯವಾಗುತ್ತದೆ. ಅದಕ್ಕೆ ನೀನು ಒಂದು ದೃಢವಾದ ನೌಕೆಯನ್ನು ಕಟ್ಟಿಕೋ. ಒಂದು ದೊಡ್ಡಹಗ್ಗವನ್ನು ಅದಕ್ಕೆ ಕಟ್ಟಿರು. ಅದರಲ್ಲಿ ನೀನು ಸಪ್ತರ್ಷಿಗಳನ್ನು ಸೇರಿಸಿಕೋ. ಪ್ರಪಂಚದ ಎಲ್ಲ ಸಸ್ಯಬೀಜಗಳನ್ನು ಸಂಗ್ರಹಿಸಿ ನಾವೆಯಲ್ಲಿ ದಾಸ್ತಾನು ಮಾಡಿರು. ಪ್ರಳಯಕ್ಕೆ ಮುನ್ನ ನಾನು ಬರುತ್ತೇನೆ. ನನಗೆ ಒಂದು ದೊಡ್ಡ ಕೊಂಬು ಇರುತ್ತದೆ. ಅದೇ ನನ್ನ ಗುರುತು. ಆಗ ನಾನು ನಿನಗೆ ಸಹಾಯಮಾಡಿ ದಡಕ್ಕೆ ಸೇರಿಸುತ್ತೇನೆ." ವೈವಸ್ವತ ಮನು ಅದಕ್ಕೆ

ಒಪ್ಪಿ ಸಕಲ ಸಿದ್ಧತೆಗಳನ್ನು ಮಾಡಿಕೊಂಡು. ಆ ಮೀನಿಗಾಗಿ ಕಾಯುತ್ತಿದ್ದ. ಬೃಹತ್‌ಮತ್ಸ್ಯ ಬಂದಾಗ ನಾವೆಯನ್ನು ಹಗ್ಗದ ಮೂಲಕ ಅದರ ಕೊಂಬಿಗೆ ಸಿಕ್ಕಿಸಿದ. ಪ್ರಳಯದ ಅವಧಿ ಮುಗಿದ ಮೇಲೆ ಮೀನಿನ ಕೋರಿಕೆಯಂತೆ ನಾವೆಯು ಹಗ್ಗವನ್ನು ಹಿಮವತ್ ಪರ್ವತದ ಶೃಂಗಕ್ಕೆ ಕಟ್ಟಿದ.

ಅದಕ್ಕೇ ಹಿಮವತ್ ಪರ್ವತದ ಶೃಂಗಕ್ಕೆ 'ನೌಬಂಧ' ಎಂಬ ಹೆಸರಿದೆ. ಮುಂದೆ ವೈವಸ್ವತನು ಪ್ರಾಣಿ ಸಸ್ಯ ಜೀವ ಜಗತ್ತನ್ನು ಕಾಪಾಡಿ ಬೆಳೆಸಿದನೆಂದು ಹೇಳಬೇಕಾಗಿಲ್ಲವಷ್ಟೆ!

* * * *

ಚ್ಯವನ

ದೇವಗಣದಲ್ಲಿ ಅಶ್ವಿನೀದೇವತೆಗಳಿಗೆ ಸಮಾನಸ್ಥಾನವಿಲ್ಲ. ಹವಿಸ್ಸಿನಲ್ಲಿ ಅವರಿಗೆ ಭಾಗವೂ ಇಲ್ಲ. ಏಕೆ ಗೊತ್ತೆ? ಅವರು ಮಾಡುವುದು ವೈದ್ಯ 'ವೃತ್ತಿ'! ಇವರಿಂದಾಗಿ ಇವರ ಅಂಶದಿಂದ ಹುಟ್ಟಿದ ನಕುಲ ಸಹದೇವರಿಗೂ ಇದೇ ಗತಿ ಬಂತೇನೋ ಎನ್ನಿಸುತ್ತದೆ. ಅಶ್ವಿನೀದೇವತೆಗಳ ಈ ಪಾಡನ್ನು, ಸ್ಥಾನಹೀನತೆಯನ್ನು ತಪ್ಪಿಸಿದವನೆಂದರೆ ಚ್ಯವನ ಮಹರ್ಷಿ!

ಚ್ಯವನನು ಭೃಗುಮಹರ್ಷಿಯ ಮಗ. ಈತ ಒಂದು ಸಲ ಸರೋವರ ತೀರದಲ್ಲಿ ತಪಸ್ಸಮಾಧಿಯಲ್ಲಿ ವೀರಾಸನ ಹಾಕಿಕೊಂಡು ಕುಳಿತು ನಿಶ್ಚಲನಾಗಿದ್ದ. ಎಷ್ಟು ಜಡವಾಗಿದ್ದನೆಂದರೆ ಸುತ್ತ ಬಳ್ಳಿಗಳು ಹರಡಿ ಹುತ್ತಕಟ್ಟಿ ಮೈಯೆಲ್ಲ ಮುಚ್ಚಿಹೋಗಿತ್ತು. ಆ ಪ್ರದೇಶಕ್ಕೆ ವಿಹಾರಕ್ಕೆಂದು ಬಂದಿದ್ದ ಶರ್ಯಾತಿ ರಾಜನ ಮಗಳಾದ ಸುಕನ್ಯೆ ಅಲ್ಲಿಗೆ ಬಂದಳು. ಹುತ್ತದ ಸಂದಿಯಿಂದ ಅವಳನ್ನು ನೋಡಿ ಚ್ಯವನ ಆನಂದಗೊಂಡು ಕೂಗಿದ. ಆದರೆ ಅವನ ದುರ್ಬಲ ಸ್ವರ ಅವಳಿಗೆ ಕೇಳಲಿಲ್ಲ. ಏನೋ ಸದ್ದೆಂದು ತಿಳಿದು ಸಂದಿಯಲ್ಲಿ ನೋಡಿ ಒಂದು ಕಡ್ಡಿಯಿಂದ ಅವನ ಕಣ್ಣನ್ನು ಚುಚ್ಚಿದಳು. ಕಣ್ಣು ಕಳೆದುಕೊಂಡ ಚ್ಯವನ ಸಿಟ್ಟಿನಿಂದ ಕೊಟ್ಟ ಶಾಪವಾದರೂ ಎಂಥದು?

"ಈ ಶರ್ಯಾತಿಯ ಸೈನಿಕರಿಗೆ ಮಲಮೂತ್ರಾದಿಗಳು ಸ್ತಂಭಿಸಲಿ"

ಪಾಪ! ಸುಕನ್ಯೆಯ ತಪ್ಪಿಗೆ ಸೈನಿಕರಿಗೆ ಮಹಾ ಸಂಕಟ. ಕೊನೆಗೆ ಶರ್ಯಾತಿ ಚ್ಯವನನೊಂದಿಗೆ ಸಂಧಾನ ಮಾಡಿಕೊಂಡ. ಅವನ ಅಪೇಕ್ಷೆಯಂತೆ ಮಗಳನ್ನು ಚ್ಯವನನಿಗೆ ಕೊಟ್ಟು ಮದುವೆಮಾಡಿ ಸೈನಿಕರ ಸಂಕಟವನ್ನು ಹೋಗಲಾಡಿಸಿದ.

ಇತ್ತ ಸುಕನ್ಯೆ ಕೂಡ ಶ್ರದ್ಧೆಯಿಂದ ಗಂಡನ ಸೇವೆ ಮಾಡಿಕೊಂಡಿದ್ದಳು. ಈ ರೂಪವತಿ ಒಮ್ಮೆ ಅಲ್ಲಿಗೆ ಬಂದ ಅಶ್ವಿನೀ-ದೇವತೆಗಳ ಕಣ್ಣಿಗೆ ಬೀಳಬೇಕೆ? "ನಮ್ಮಲ್ಲಿ ಒಬ್ಬನನ್ನು ವರಿಸಿ ಆನಂದವಾಗಿರು, ಬೇಕಾದರೆ ನಿನ್ನ ಗಂಡನನ್ನು ಕೇಳಿ ತೀರ್ಮಾನಿಸು" ಎಂದು ಹೇಳಿದರು. ಸುಕನ್ಯೆ ಈ ಸಂಗತಿಯನ್ನು ಗಂಡನಿಗೆ ತಿಳಿಸಿದಾಗ ಅವನು ಒಪ್ಪಿಕೊಂಡ. ಅಶ್ವಿನೀ ದೇವತೆಗಳು ಅವನಿಗೆ ಸುಂದರ ರೂಪಕೊಡುವುದಾಗಿ ಹೇಳಿ ಕೊಳದಲ್ಲಿ ಮುಳುಗಿಸಿ ತಾವೂ ಮುಳುಗಿದರು. ಏನಾಶ್ಚರ್ಯ! ಮೂವರೂ ಒಂದೇ ರೂಪದಲ್ಲಿ ಮೇಲೆದ್ದು ಬಂದರು. ಆ ಮೂವರಲ್ಲಿ ತನ್ನ ಪತಿಯನ್ನು ಹುಡುಕಿದ್ದು ಸುಕನ್ಯೆಯ ತಪೋ ಪರಿಶ್ರಮವನ್ನೂ ದೃಢಶಕ್ತಿಯನ್ನೂ ಸೂಚಿಸುತ್ತದೆ. ಹೊಸ ರೂಪವಂತ ಚ್ಯವನ-ಸುನಂದೆಯರಿಗೆ ಹೀಗೆ ಹೊಸ ಬಾಳು ಬಂದಿತು. ಸಂತೋಷದಿಂದ ಕೃತಜ್ಞತೆ ಸೂಚಿಸುತ್ತ ತಪಸ್ವಿ ಚ್ಯವನನು ಅವರಿಗೆ ದೇವಸಭೆಯಲ್ಲಿ ಇತರ ದೇವತೆಗಳೊಂದಿಗೆ ಸಮಾನ ಸ್ಥಾನ ಸಿಗಲಿ, ಹವಿಸ್ಸು ದೊರೆಯಲಿ ಎಂದು ಹರಸಿದ.

ಆದರೆ ದೇವೇಂದ್ರ ಇದಕ್ಕೆ ಒಪ್ಪಲಿಲ್ಲ. ಚ್ಯವನನು ಶರ್ಯಾತಿ ಮಹಾರಾಜನಿಂದ ಯಜ್ಞ ಮಾಡಿಸಿದ ಸಂದರ್ಭದಲ್ಲಿ ಅಶ್ವಿನೀ ದೇವತೆಗಳಿಗೆ ಹವಿಸ್ಸುಕೊಡಬಾರದೆಂದು ಇಂದ್ರನು ವಾದಿಸಿದ. ಈ ವಿಚಾರದಲ್ಲಿ ಇಂದ್ರ-ಚ್ಯವನರ ನಡುವೆ ನಡೆದ ಸಂವಾದ

ಅಧ್ಯಯನ ಯೋಗ್ಯವಾಗಿದೆ. ವೈದ್ಯವೃತ್ತಿ ಮಾಡುವ ಮತ್ತು ಭೂಮಿಯಲ್ಲಿ ಎಲ್ಲೆಂದರಲ್ಲಿ ತಿರುಗುವ ಇವರಿಗೆ ಸೋಮಪಾನದ ಅರ್ಹತೆಯಿಲ್ಲ ಎಂದು ವಾದಿಸಿದ. ಪ್ರತಿಯಾಗಿ ವಾದಿಸಿದ ಚ್ಯವನನು ಹವಿಸ್ಸನ್ನು ಅಶ್ವಿನೀ ದೇವತೆಗಳಿಗೆ ಕೊಡಲು ಹೋದಾಗ ಇಂದ್ರನು ವಿರೋಧಿಸಿದ. ಆಗ ಚ್ಯವನನು ಮಂತ್ರಬಲದಿಂದ 'ಮದ' ಎಂಬ ರಾಕ್ಷಸನನ್ನು ಕಾವಲಿಗೆ ಹಾಕಿದ. ಕೊನೆಗೆ ಸಿಟ್ಟಿನಿಂದ ಇಂದ್ರನು ವಜ್ರಾಯುಧದಿಂದ ಘಾತಿಸಲು ಕೈ ಎತ್ತಿದ. ಆದರೆ ಚ್ಯವನನ ಮಂತ್ರಶಕ್ತಿಯಿಂದ ಅವನ ಕೈ ಹಾಗೇ ನಿಂತುಹೋಯಿತು. ಕೊನೆಗೆ ಇಂದ್ರನು ಚ್ಯವನನ ಷರತ್ತುಗಳನ್ನೆಲ್ಲ ಒಪ್ಪಿಕೊಂಡ. ದೇವ ಮಹಿಮೆಯನ್ನು ಮೀರಿದ ಋಷಿ ಮಹಿಮೆಗೆ ಈ ಕಥೆ ಒಂದು ನಿದರ್ಶನ.

* * * *

ಯಕ್ಷಪ್ರಶ್ನೆ

ಬಾಯಾರಿ ಕೊಳಕ್ಕೆ ಬಂದು ಯಕ್ಷನ ಎಚ್ಚರಿಕೆಯ ಮಾತನ್ನು ಕೇಳದೆ ನೀರು ಕುಡಿಯಲು ಹೋದ ಸಹದೇವ ನಕುಲ ಅರ್ಜುನ ಭೀಮರಿಗೆ ಏನಾಯಿತೆಂಬುದು ಎಲ್ಲರಿಗೂ ಗೊತ್ತಿದೆ. ಯಮಧರ್ಮರಾಯನೇ ಇವರನ್ನೆಲ್ಲ ಪರೀಕ್ಷಿಸಲು ಮಾಡಿದ ತಂತ್ರ ಅದು. ಉಳಿದ ತಮ್ಮಂದಿರಂತೆ ಮಾಡದೆ ಧರ್ಮರಾಯನು ಯಕ್ಷನ ಪ್ರಶ್ನೆಗಳಿಗೆ ಮೊದಲು ಉತ್ತರ ನೀಡಿ ಆನಂತರ ನೀರನ್ನು ಕುಡಿಯುವುದು ಲೇಸೆಂದು ಭಾವಿಸುತ್ತಾನೆ. ಯಕ್ಷನ ಪ್ರಶ್ನೆಗಳು ಸಾಕಷ್ಟು ಹ್ರಸ್ವವಾಗಿದ್ದು ಬಹುಮಟ್ಟಿಗೆ ಚುಟುಕಿನ ಉತ್ತರಗಳನ್ನು ಅಪೇಕ್ಷಿಸುತ್ತವೆ. ಈ ಪ್ರಸಿದ್ಧ ಯಕ್ಷ ಪ್ರಶ್ನೆಗಳ ಸಂಖ್ಯೆ ಭಿನ್ನ ಪಾಠಗಳಲ್ಲಿ ಮೂವತ್ತರಿಂದ ಅರವತ್ತನಾಲ್ಕರವರೆಗೆ ಬೆಳೆದುಬಂದಿದೆ. ಮುಖ್ಯವಾದ ಕೆಲವನ್ನೂ ಧರ್ಮರಾಯನ ಉತ್ತರಗಳನ್ನೂ ಒಟ್ಟಿಗೆ ನೋಡೋಣ. ಸಂಗ್ರಹವಾಗಿ 6 ಪ್ರಶ್ನೆಗಳ ಉತ್ತರಗಳು ಮಾತ್ರ ಇಲ್ಲಿವೆ.

1. ಸೂರ್ಯನನ್ನು ಹುಟ್ಟಿಸುವವರು ಯಾರು ? ಅವನ ಸುತ್ತ ತಿರುಗುವವರು ಯಾರು ? ಅವನು ಅಸ್ತಂಗತನಾಗುವಂತೆ ಮಾಡುವವರು ಯಾರು ? ಅವನು ಯಾವುದರ ಆಧಾರದಿಂದ ನಿಂತಿದ್ದಾನೆ ?

ಉತ್ತರ: ಸೂರ್ಯನ ಸೃಷ್ಟಿಕರ್ತ ಪರಬ್ರಹ್ಮ. ಅವನ ಸುತ್ತ ತಿರುಗುವವರು ದೇವತೆಗಳು. ಧರ್ಮವು ಅವನು ಅಸ್ತಂಗತನಾಗುವಂತೆ ಮಾಡುತ್ತದೆ. ಸೂರ್ಯನು ಸತ್ಯದ ಆಧಾರದ ಮೇಲೆ ಸ್ಥಾಪಿತನಾಗಿದ್ದಾನೆ.

2. ಕ್ಷತ್ರಿಯನಿಗೆ ಯಾವುದರಿಂದ ದೇವತ್ವ ಬರುತ್ತದೆ ? ಯಾವುದರಿಂದ ಸತ್ಪುರುಷ ಧರ್ಮಾಚರಣೆ ಮಾಡುತ್ತಾನೆ ? ಯಾವುದರಿಂದ ಅವನಿಗೆ ಮನುಷ್ಯತ್ವ ಬರುತ್ತದೆ ? ಯಾವುದರಿಂದ ಕ್ಷತ್ರಿಯನು ಅಸತ್-ಪುರುಷನಾಗುತ್ತಾನೆ ?

ಧನುರ್ವಿದ್ಯಾಧ್ಯಯನದಿಂದ ಕ್ಷತ್ರಿಯತ್ವ. ಯಜ್ಞದಿಂದ ಸತ್ಪುರುಷ ಧರ್ಮಾಚರಣೆ. ಭಯದಿಂದ ಮನುಷ್ಯಭಾವ. ಶರಣಾಗತನಾದವನನ್ನು ಬಿಟ್ಟುಬಿಡುವುದರಿಂದ ಅಸತ್-ಪುರುಷಾಚರಣ.

3. ಉಳುವ ರೈತನಿಗೆ ಶ್ರೇಷ್ಠವಾದದ್ದು ಯಾವುದು ? ಬಿತ್ತನೆ ಮಾಡುವವರಿಗೆ ಶ್ರೇಷ್ಠವಾವುದು ? ಪ್ರತಿಷ್ಠಾವಂತ ಧನಿಕರಿಗೆ ಶ್ರೇಷ್ಠವಾದದ್ದು ಯಾವುದು ? ಸಂತಾನೋತ್ಪತ್ತಿ ಮಾಡುವವರಿಗೆ ಶ್ರೇಷ್ಠ ಯಾವುದು ?

ರೈತರಿಗೆ ಮಳೆ ಶ್ರೇಷ್ಠ. ಬಿತ್ತನೆಗಾರರಿಗೆ ಬೀಜ. ಧನಿಕರಿಗೆ ಗೋರಕ್ಷಣೆಶ್ರೇಷ್ಠ ಸಂತಾನೋತ್ಪತ್ತಿಗೆ ಪುತ್ರಶ್ರೇಷ್ಠ.

4. ಭೂಮಿಗಿಂತ ಭಾರವಾದದ್ದು ಯಾವುದು ? ಆಕಾಶಕ್ಕಿಂತ ಎತ್ತರವಾದದ್ದು ಯಾವುದು ? ಗಾಳಿಗಿಂತ ಶೀಘ್ರಗಾಮಿಯಾದದ್ದು ಯಾವುದು ? ಹುಲ್ಲಿಗಿಂತ ಹೆಚ್ಚು ಬೆಳೆಯುವಂಥದ್ದು ಯಾವುದು ?

ಭೂಮಿಗಿಂತ ಭಾರವಾದವಳೆಂದರೆ ತಾಯಿ. ಆಕಾಶಕ್ಕಿಂತ ಎತ್ತರನಾದವನು

ತಂದೆ. ಗಾಳಿಗಿಂತ ವೇಗವಾಗಿ ಹೋಗುವಂಥದು ಮನಸ್ಸು. ಹುಲ್ಲಿಗಿಂತ ಅಸಂಖ್ಯಾತವಾದದ್ದೆಂದರೆ ಚಿಂತೆ.

5. ತಪಸ್ಸಿನ ಲಕ್ಷಣವೇನು ? ದಮ ಎಂದರೇನು ? ಉತ್ತಮವಾದ ಕ್ಷಮೆ ಯಾವುದು ? ಕೀರ್ತಿ ಎಂಬುದು ಏನು ? ಲಜ್ಜೆ ಎಂಬುದು ಏನು ?

ಸ್ವಧರ್ಮವನ್ನು ನಿಷ್ಠೆಯಿಂದ ಆಚರಿಸುವುದೇ ತಪಸ್ಸು. ಮನಸ್ಸನ್ನು ನಿಗ್ರಹಿಸಿಕೊಳ್ಳುವುದೇ ದಮ, ಶೀತ-ಉಷ್ಣ, ಸುಖ, ದುಃಖ ಮುಂತಾದ ದ್ವಂದ್ವಗಳನ್ನು ಸಹಿಸಿಕೊಳ್ಳುವುದೇ ಕ್ಷಮೆ. ಅಯೋಗ್ಯಕಾರ್ಯಗಳಿಂದ ದೂರ ಉಳಿಯುವುದೇ ಲಜ್ಜೆ.

6. a) ಆನಂದದಿಂದ ಇರುವವರು ಯಾರು ? b) ಆಶ್ಚರ್ಯಕರ ವಿಷಯ ಎಂದರೆ ಯಾವುದು ? c) ಒಳ್ಳೆಯ ಮಾರ್ಗ ಎಂದರೆ ಯಾವುದು ? d) ಒಳ್ಳೆಯ ವಾರ್ತೆ ಎಂದರೆ ಯಾವುದು ?

a) ಸಿಕ್ಕಿದಾಗ ಸೊಪ್ಪುಸಾರುಗಳನ್ನು ಬೇಯಿಸಿಕೊಂಡು ತಿನ್ನುವವನು, ಸಾಲವಿಲ್ಲದೆ ಬದುಕುವವನು.... ಇತ್ಯಾದಿ.

b) ತುಂಬ ಆಶ್ಚರ್ಯದ ಸಂಗತಿ ಒಂದಿದೆ. ಅದೇನೆಂದರೆ ನಿತ್ಯವೂ ನಮ್ಮ ಎದುರಿಗೇ ಜನ ಯಮಲೋಕಕ್ಕೆ ಹೋಗುತ್ತಿರುತ್ತಾರೆ. ಆದರೂ ಬದುಕುವವರಿಗೆ ಈ ಲೋಕದಲ್ಲಿ ಶಾಶ್ವತವಾಗಿರಬೇಕೆಂಬ ಆಸೆ ಇದ್ದೇ ಇರುತ್ತದೆ ಇದಕ್ಕಿಂತ ಆಶ್ಚರ್ಯಕರವಾದದ್ದು ಯಾವುದಿದೆ ?

c) ಮಹಾಜನಗಳು ಸಜ್ಜನರು ನಡೆದದ್ದೇ ಮಾರ್ಗ.

d) ಸಂಸಾರ ಎಂಬುದು ಒಂದು ದೊಡ್ಡ ಬಾಣಲೆ. ಯಮನೆಂಬವನು ಜೀವಗಳನ್ನು ಇದರಲ್ಲಿ ಹಾಕಿ, ಸೂರ್ಯನೆಂಬುವನು ಕಾಯಿಸಿ ಹಗಲು ರಾತ್ರಿಗಳೆಂಬುವುಗಳು ಸೌದೆ ಹಾಕಿ ಗರಟೆಯಿಂದ ತೊಳಸುತ್ತಿವೆಯಲ್ಲ. ಇದೇ ವಾರ್ತೆ.... ಇತ್ಯಾದಿ.

*   *   *   *

ಸಮಂತಪಂಚಕ (ಕುರುಕ್ಷೇತ್ರ)

ಅತ್ಯಂತ ಪ್ರಾಚೀನ ಐತಿಹಾಸಿಕ ಪ್ರದೇಶಗಳಲ್ಲಿ ಒಂದು. ಪುರಾಣ ಕಾವ್ಯಗಳಲ್ಲಿ ಹಲವಾರು ಬಾರಿ ಈ ಹೆಸರು ಬರುತ್ತದೆ. ಸಮಂತಪಂಚಕ, ಕುರುಕ್ಷೇತ್ರ, ಬ್ರಹ್ಮಕ್ಷೇತ್ರ ಎಂದು ಇದಕ್ಕೆ ಮೂರು ಹೆಸರುಗಳಿವೆ.

1) ಸಮಂತ ಪಂಚಕೇ ಯಾ ವೈ
ತ್ರಿಷು ಲೋಕೇಷು ವಿಶ್ರುತ''

2) ಸಮೇತಾನಾಂ ಅಂತೋ
ಯಸ್ಮಿನ್ ತತ್ ಸಮಂತಂ

ಎಂದು ಸಮಂತ ಪಂಚಕದ ನಿಷ್ಪತ್ತಿಯನ್ನು ಹೇಳಲಾಗಿದೆ.

ಚಂದ್ರವಂಶದ ಪ್ರಖ್ಯಾತ ದೊರೆ ಕುರು ತಪಸ್ಸು ಮಾಡಿದ ಕ್ಷೇತ್ರವಾದುದರಿಂದ ಕುರುಕ್ಷೇತ್ರ ಎಂಬ ಹೆಸರು ಬಂದಿದೆ. ಮಹಾಭಾರತ ಯುದ್ಧದ ಜಾಗ ಭೀಮ-ಕೌರವರ ಗದಾಯುದ್ಧದ ಪ್ರದೇಶ, ವಿಚಿತ್ರವೀರ್ಯನ ಅಣ್ಣ ಚಿತ್ರಾಂಗದನು ಗಂಧರ್ವ ಚಿತ್ರಾಂಗದನೊಂದಿಗೆ ಹೋರಾಡಿದ ಜಾಗ, ಭೀಷ್ಮರು ತಮ್ಮ ಗುರು ಪರಶುರಾಮರೊಂದಿಗೆ ಕಾದಾಡಿದ ಕ್ಷೇತ್ರ, ಸುಂದೋಪಸುಂದರು ವಾಸ ಮಾಡುತ್ತಿದ್ದ ಜಾಗ, ಸರ್ಪನಾಯಕ ನಾಗರಾಜನು ವಾಸ ಮಾಡುತ್ತಿದ್ದ ಜಾಗ, ಮಾಂಧಾತನು ಯಜ್ಞ ಮಾಡಿದ ಜಾಗ - ಹೀಗೆ ಮಹಾಭಾರತದ ಉದ್ದಕ್ಕೂ ಈ ಕ್ಷೇತ್ರದ ನೆನಪುಗಳು ಮಾಲೆಮಾಲೆಯಾಗಿ ಬರುತ್ತವೆ. ಶಲ್ಯಪರ್ವದಲ್ಲಿ ಈ ಕ್ಷೇತ್ರದ ಮಹಿಮೆ ಚರ್ಚಿತವಾಗಿದೆ.

ಕುರುಕ್ಷೇತ್ರ ಅಥವಾ ಸಮಂತ ಪಂಚಕ ಒಂದು ವಿಸ್ತಾರವಾದ ಭೂಭಾಗ. ಸರಸ್ವತೀ ಮತ್ತು ದೃಷದ್ವತೀ ನದಿಗಳ ಮಧ್ಯವರ್ತಿ ಕ್ಷೇತ್ರ. ತಪಸೀ ಪುಣ್ಯಂ ಚಕ್ರೇ ಮಹಾತಪಾಃ" ಎನ್ನಿಸಿಕೊಂಡ ಈ ಕ್ಷೇತ್ರದಲ್ಲಿ ಕಾಲಿಡುವ ಒಬ್ಬ ಸಾಮಾನ್ಯ ಮನುಷ್ಯ ಕೂಡ ಪರಮಗತಿಯನ್ನು ಹೊಂದುತ್ತಾನೆ ಎಂದು ಮಹಾಭಾರತ ಹೇಳುತ್ತದೆ.

ಪರಶುರಾಮರ ಕಥೆಯೊಂದಿಗೆ ಈ ಕ್ಷೇತ್ರ ಅವಿನಾಸಂಬಂಧವನ್ನು ಹೊಂದಿದೆ. ಪರಶುರಾಮರ ತಂದೆಯನ್ನು ಹೈಹಯರು ಕೊಂದರಷ್ಟೆ. ಆಗ ಪರಶುರಾಮ ಅಲ್ಲಿರಲಿಲ್ಲ. ಅವರು ಬಂದಾಗ ತಾಯಿ ರೇಣುಕೆ ಇಪ್ಪತ್ತೊಂದು ಸಲ ಎದೆಯನ್ನು ಬಡಿದುಕೊಂಡು ಗಂಡನ ಸಾವಿನ ವಾರ್ತೆಯನ್ನು ತಿಳಿಸಿದಳಂತೆ, ಕುಪಿತನಾದ ಪರಶುರಾಮರು ಕೈಯಲ್ಲಿ ಕೊಡಲಿಹಿಡಿದು ನಮಗೆ ಕೇಡುಬಗೆದ ಈ ಕಾರ್ತವೀರ್ಯನ ವಂಶಸ್ಥರನ್ನು ಕೊಲ್ಲುತ್ತೇನೆ. ಭೂಮಂಡಲದಲ್ಲಿ ಕ್ಷತ್ರಿಯರೇ ಉಳಿಯದಂತೆ ಎಲ್ಲ ರಾಜರುಗಳ ಹುಟ್ಟಡಗಿಸುತ್ತೇನೆ. ಇಪ್ಪತ್ತೊಂದು ಬಾರಿ ಭಾರತ ಪ್ರದಕ್ಷಿಣೆ ಮಾಡಿ ಕ್ಷತ್ರಿಯ ವಂಶವನ್ನು ಸವರಿ ಹಾಕುತ್ತೇನೆ ಎಂದು ಪ್ರತಿಜ್ಞೆ ಮಾಡಿದರು. ಹಾಗೆ ಮಾಡಿ ಕ್ಷತ್ರಿಯರಾಜರನ್ನು ಕೊಂದು ಅವರ ರಕ್ತದಿಂದ ತನ್ನ ಪಿತೃದೇವತೆಗಳಿಗೆಲ್ಲ ತರ್ಪಣವನ್ನು ರಕ್ತಜಲದಿಂದಲೇ ಕೊಟ್ಟರನಂತೆ. ಈಪ್ರದೇಶದಲ್ಲಿ ಪರಶುರಾಮರು ತಮ್ಮ ಕೊಡಲಿಯಿಂದಲೇ ಐದು ದೊಡ್ಡ ಸರೋವರಗಳನ್ನು

ತೋಡಿದನೆಂದೂ ಹೇಳುತ್ತಾರೆ. ಕಾಲಾಂತರದಲ್ಲಿ ಈ ಐದೂ ಸರೋವರಗಳು ಅತ್ಯಂತ ಪವಿತ್ರವಾದ ತೀರ್ಥಕ್ಷೇತ್ರಗಳೆನ್ನಿಸಿಕೊಂಡ ಮೇಲೆ ಯಾತ್ರಾರ್ಥಿಗಳ ಸಂಖ್ಯೆ ಹೆಚ್ಚಾಯಿತು. ಶ್ರೀಕೃಷ್ಣನು ಅರ್ಜುನನಿಗೆ ಭಗವದ್ಗೀತೆಯನ್ನು ಉಪದೇಶಿಸಿದ ಸ್ಥಳವಿದಾದ್ದರಿಂದ ಇದರ ಮಹಿಮೆ ಇನ್ನಷ್ಟು ಹೆಚ್ಚಿದೆ. ಕೌರವ-ಪಾಂಡವರ ಹದಿನೆಂಟು ಅಕ್ಷೋಹಿಣೀ ಸೇನೆಯು ಹದಿನೆಂಟು ದಿನಗಳವರೆಗೆ ಇಲ್ಲಿ ಕಾದಾಡಿತು ಎಂದ ಮೇಲೆ ಇದರ ವಿಸ್ತಾರ ಎಷ್ಟೆಂದು ಊಹಿಸಬಹುದು. ಇತ್ತೀಚೆ ಪಾಣಿಪಟ್ ಕದನಗಳೂ ಇಲ್ಲೇ ನಡೆದವು.

ಕುರುಕ್ಷೇತ್ರದ ಬಗೆಗೆ ಚಿಂತಿಸಿದಾಗ ನಮಗೆ ಸಂಕೀರ್ಣವಾದ ಒಂದು ಮಿಶ್ರಾನುಭವ ಕಾಡುತ್ತದೆ. ಮಹಾಪುರುಷರು ತಪಸ್ಸು ಮಾಡಿದ ಯಾಗ ಮಾಡಿದ ಪವಿತ್ರ ಜಾಗ ಅದು. ಅನೇಕ ಮಹಾಮಹಿಮರು ವಾಸಮಾಡಿದ ಪುಣ್ಯಭೂಮಿ ಅದು. ಮಹಾಯುದ್ಧಗಳಿಂದ ಹಿಂಸೆಯಿಂದ ರಕ್ತಾಭಿಷೇಕದಿಂದ ತತ್ತರಿಸಿದ ಜಾಗವೂ ಅದೇ. ಅಲ್ಲಿ ಈಗಲೂ ನೆಲವನ್ನು ಅಗೆದರೆ ತಲೆ ಬುರುಡೆಗಳು ಕಾಣಬರುತ್ತವೆಂದು ಕಾಳಿದಾಸ ಹೇಳುತ್ತಾನೆ.

* * * *

ಪೃಥು ಚಕ್ರವರ್ತಿ

ಒಬ್ಬ ಪೌರಾಣಿಕ ರಾಜನಾದ ಪೃಥುವು ವೇನರಾಜನ ಮಗ. ಈತನೇ ಭೂಮಿಯನ್ನು ಹದಗೊಳಿಸಿದ್ದರಿಂದ ಇವನ ಮಗಳೆನಿಸಿಕೊಂಡು ಭೂಮಿ 'ಪೃಥ್ವಿ' ಆದಳು. ಎಲ್ಲರಿಗಿಂತ ದೊಡ್ಡವನಾದ್ದರಿಂದ ಋಷಿಗಳು ಇವನನ್ನು ಪೃಥು ಎಂದು ಕರೆದರು. ಜನರ ಬದುಕಿಗೆ ರಂಜನೆ ಅಂದರೆ ಶೋಭೆ ತಂದದ್ದರಿಂದ 'ರಾಜ' ಎಂದು ಕರೆದರು. ದಂಡನೀತಿ ನಿಪುಣನೂ ಸಮಸ್ತ ಜೀವಜಾಲವನ್ನು ಸಮಾನ ದೃಷ್ಟಿಯಿಂದ



ನೋಡುವ ಉದಾರಿಯೂ ಆದ ಈ ದೊರೆ ಮನುಷ್ಯ ಧರ್ಮವನ್ನು ತಿರಸ್ಕರಿಸಿದವರನ್ನು ತನ್ನ ಬಾಹುಬಲದಿಂದ ದಂಡಿಸಿದ. ಪುರಾಣವನ್ನು ನಂಬಬಹುದಾದರೆ ಜಗತ್ತಿನ ಮೊದಲ ಧನುಸ್ಸನ್ನು ಸೃಷ್ಟಿಸಿದವನು ಇವನೇ. ಅದರ ಹೆಸರು 'ಅಜಗವ'. ಇವನು ಸಮುದ್ರ ಯಾನಕ್ಕೆ ಹೊರಟರೆ ಸಮುದ್ರದ ನೀರು ತಟಸ್ಥವಾಗುತ್ತಿತ್ತು. ಕಾಡಿನ ಮಾರ್ಗದಲ್ಲಿ ಹೊರಟರೆ ಪರ್ವತಗಳು ದಾರಿ ಮಾಡಿಕೊಡುತ್ತಿದ್ದವು. ಪ್ರಪಂಚದ ಎಲ್ಲ ಜೀವ ಜಡವಸ್ತುಗಳು ಇವನ ಬಳಿಗೆ ಬಂದು ಬೇಡಿದ್ದರಿಂದ ಪೃಥುವು ಭೂಮಿಯನ್ನು "ಎಲ್ಲರಿಗೂ ದುಗ್ಧಧಾರೆಯನ್ನು ಹರಿಸು' ಎಂದು ಕೇಳಿಕೊಂಡ. ಸಮಸ್ತರಿಗೂ ಭೂಮಿಯಿಂದ ಪ್ರಯೋಜನವಾಗುವಂತೆ ಮಾಡಿದ. ಉಳದೆ ಬಿತ್ತದೆ ಭೂಮಿಯೇ ಜನರಿಗೆ ಫಲವನ್ನು ನೀಡುವಂತೆ ಮಾಡಿದ. ಆ ಕಾಲದ ಹಸುಗಳೆಲ್ಲ ಕಾಮಧೇನುಗಳೇ. ಎಲೆ ಎಲೆಯಲ್ಲೂ ಜೇನು. ಮರದ ಹಣ್ಣುಗಳೋ ಮಧುರಾತಿ ಮಧುರ. ಜನರೆಲ್ಲ ನೆಮ್ಮದಿವಂತರು ನಿರ್ಭಯ ಜೀವಿಗಳು, ನಿರೋಗಿಗಳು! ದೇಶ-ನಗರ ಎಂಬ ಭೇದಗಳಿರದಿದ್ದ ರಾಷ್ಟ್ರದಲ್ಲಿ ಅವನ್ನೆಲ್ಲ ಒಪ್ಪಗೊಳಿಸಿದ ಕೀರ್ತಿ ಈತನದು. ಹಳ್ಳತಿಟ್ಟುಗಳಿಂದ ಕೂಡಿದ್ದ ಭೂಮಿಯನ್ನು ಸಮತಟ್ಟಾಗಿ ಮಾಡಿ ಅನೇಕ ಕಡೆ ಉಳಲು ಯೋಗ್ಯವಾಗುವಂತೆ ಮಾಡಿದ ಕೀರ್ತಿ ಈತನದೇ.

ರಾಮ ರಾಜ್ಯ ಎಂದು ಕೇಳಿದ್ದೇವೆ. ಆದರೆ ಅದಕ್ಕಿಂತ ಸೊಗಸಾದ ಕಲ್ಪನಾ ರಾಜ್ಯವನ್ನು ವ್ಯಾಸರು ಪೃಥುವಿನ ಮೂಲಕ ಸೃಷ್ಟಿಸಿದ್ದಾರೆ.

ಹದಿನೇಳು ಬಗೆಯ ಬೆಳೆಗಳನ್ನು ಸೃಷ್ಟಿಸಿದ ಕೀರ್ತಿ ಪೃಥ್ವಿಗೆ ಸಲ್ಲುತ್ತದೆ. ಇವನ ಆಡಳಿತ ವೈಭವಯುತವಾಗಿತ್ತು. ಶುಕ್ರಾಚಾರ್ಯರು ಪುರೋಹಿತರು! ವಾಲಖಿಲ್ಯರು ಮತ್ತು ಸರಸ್ವತೀ ನದಿಯ ತೀರದ ಋಷಿಗಳು ಮಂತ್ರಿಗಳು, ಗರ್ಗ ಮಹರ್ಷಿ ರಾಜಜ್ಯೋತಿಷಿ. ಪೃಥುವಿನ ಭಕ್ತಿಗೆ ಮೆಚ್ಚಿ ಸ್ವಯಂ ವಿಷ್ಣುವೇ ಇವನ ಶರೀರವನ್ನು ಪ್ರವೇಶಿಸಿದ್ದನಂತೆ! ಇವನ ಕಾಲದಲ್ಲಿ ವಿಷ್ಣುವಿನ ಹಣೆಯಿಂದ ಹೊರಟ ಚಿನ್ನದ ಕಮಲವೇ ಶ್ರೀದೇವಿಯನ್ನು ಸೃಷ್ಟಿಸಿ ನಮ್ಮ ಅರ್ಥವ್ಯವಸ್ಥೆಗೆ ನಾಂದಿ ಹಾಡಿತು. ಇಷ್ಟು ಸಾಲದೆ! ಇನ್ನೂ ಬೇಕೆ? ಬ್ರಹ್ಮನು ಎಂಟು ದಿಕ್ಕುಗಳಿಗೆ ಇಂದ್ರಾದಿ ದಿಗ್ದೇವತೆಗಳನ್ನು ಅಧಿಪತಿಗಳಾಗಿ ನೇಮಿಸಿದ್ದು ಈ ಪೃಥುವಿನ ಕಾಲದಲ್ಲೇ.

ಎಂಥೆಂಥವರೂ ಸಾಯಲೇಬೇಕು ಎನ್ನುವುದಕ್ಕೆ ಸಾಕ್ಷಿಯಾಗಿದೆ, ಈ ದ್ರೋಣಪರ್ವದ 69ನೇ ಅಧ್ಯಾಯದ ಕಥೆ, ಷೋಡಶ ರಾಜರಲ್ಲಿ ಈತ ಮೊದಲನೆಯವ.

* * * *

ನಾಡೀಜಂಘ

ಮಹಾಭಾರತದಲ್ಲಿ ಬರುವ ಉಪಕಥೆಗಳಲ್ಲಿ ಅತ್ಯಂತ ಪ್ರಭಾವಶಾಲಿಯಾದದ್ದೆಂದರೆ ಪುಣ್ಯಾತ್ಮ ನಾಡೀಜಂಘ ಹಾಗೂ ಕ್ರೂರಿ ಗೌತಮರ ಕಥೆ. ಪ್ರೀತಿ ಮತ್ತು ಕ್ರೌರ್ಯ ಇವೆರಡನ್ನೂ ಒಂದೇ ಅಚ್ಚಿನಲ್ಲಿ ಎರಕ ಹೊಯ್ದಿರುವ ಕಥೆ ಇದು.

ನಾಡೀಜಂಘನೆಂಬ ಬಕಪಕ್ಷಿ ಕಶ್ಯಪನ ಮಗ. ನಿತ್ಯವೂ ಬ್ರಹ್ಮಲೋಕ ವಿಹಾರ ಮಾಡಿಬರುತ್ತಿದ್ದ ಧರ್ಮಿಷ್ಠ. ಒಂದು ದಿನ ಇವನು ತನ್ನ ನೆಲೆಯಾದ ವಟವೃಕ್ಷದ ಕೆಳಗೆ ಮಲಗಿದ್ದ ಬ್ರಾಹ್ಮಣ ಗೌತಮನೆಂಬುವವನನ್ನು ನೋಡಿದ. ಈ ಗೌತಮ ಜನ್ಮತಃ ಬ್ರಾಹ್ಮಣನಾದರೂ ಮುಂದೆ ಭಿಲ್ಲರ ಕೇರಿಯಲ್ಲಿ ಬೆಳೆದು ಬೇಟೆಗಾರನಾಗಿ ಬೆಳೆದು ತನ್ನ ಹಳೆಯ ಬ್ರಾಹ್ಮಣ ಸ್ನೇಹಿತನ ಹಿತವಾದದಂತೆ ಹೊಸ ಜೀವನ ಹಂಬಲಿಸಿ ಒಂದು ವರ್ತಕ ಪಡೆಯೊಂದಿಗೆ ಸೇರಿ ಆ ಪಡೆಯ ಮೇಲೆ ಆನೆ ನುಗ್ಗಿದಾಗ ತಪ್ಪಿಸಿಕೊಂಡು ಈ ವಟವೃಕ್ಷದ ಕೆಳಗೆ ಮಲಗಿದ್ದವನು. ಆ ಹಕ್ಕಿಯನ್ನು ನೋಡಿದ ಕೂಡಲೇ ಈ ಬೇಟೆಗಾರನಿಗೆ ಅದನ್ನು ಕೊಂದು ತಿನ್ನುವ ಮನಸ್ಸಾಯಿತಂತೆ! ಆದರೆ ಕಪಟವರಿಯದ ಆ ಹಕ್ಕಿ ಈತನಿಗೆ ಆಹಾರವಿತ್ತು ಶಾಲ್ಯ ಪುಷ್ಪಗಳ ಹಾಸಿಗೆ ಮಾಡಿಕೊಟ್ಟಿತು. ಈ ಬ್ರಾಹ್ಮಣನ ಧನದ ಆಸೆಯನ್ನು ತಿಳಿದು ತನ್ನ ರಾಕ್ಷಸ ಸ್ನೇಹಿತ ವಿರೂಪಾಕ್ಷನ ಬಳಿಗೆ ಕಳಿಸಿತು. ಅವನು ಕೊಟ್ಟ ಹೇರಳ ಸಂಪತ್ತನ್ನು ಪಡೆದು ಮತ್ತೆ ವಟವೃಕ್ಷದ ಬಳಿಗೆ ಬಂದ ಗೌತಮನಿಗೆ ಆ ನಾಡೀಜಂಘನನ್ನು ನೋಡಿ ಅನ್ನಿಸಿದ್ದೇನು ?

“ಅಹಂ ಬಕಪತಿಃ ಪಾರ್ಶ್ವೇ ಮಾಂಸರಾಶೀ ಸ್ಥಿತೋ ಮಹಾನ್
ಇಮಂ ಹತ್ವಾ ಗೃಹೀತಾಚ ಯಾಸ್ಯೇಹಂ ಸಮಭಿದ್ರುತಂ.”

(ಹಕ್ಕಿ ಇಲ್ಲೇ ಇದೆ. ದಷ್ಟಪುಷ್ಟವಾಗಿದೆ. ಇದನ್ನು ಕೊಂದು ಮಾಂಸವನ್ನು ತೆಗೆದುಕೊಂಡು ಹೋಗುತ್ತೇನೆ) ಇದು ಆ ಬ್ರಾಹ್ಮಣನ ಉಪಕಾರ ಸ್ಮರಣೆಯ ವೈಖರಿ-

ಇತ್ತ ದಿನವೂ ತನ್ನ ಮನೆಗೆ ಬರುತ್ತಿದ್ದ ನಾಡೀಜಂಘನು ತನ್ನ ಬ್ರಹ್ಮಲೋಕ ವಿಹಾರವನ್ನು ಮುಗಿಸಿಕೊಂಡು ಇಂದು ಏಕೆ ಬರಲಿಲ್ಲ ಎಂದು ವಿರೂಪಾಕ್ಷ ಚಿಂತಿಸಿ ನೋಡಿಕೊಂಡು ಬರಲು ಮಗನನ್ನು ಕಳಿಸಿದ. ಆ ಮಗನು ಮರದ ಬುಡದಲ್ಲಿದ್ದ ಕತ್ತರಿಸಿದ ರೆಕ್ಕೆ ಪುಕ್ಕಗಳನ್ನು ಕಂಡು ಕೊಲೆಯನ್ನು ಶಂಕಿಸಿ ಆ ಗೌತಮನನ್ನು ಹುಡುಕಿ ಅಪ್ಪನ ಬಳಿಗೆ ಕರೆತಂದ. ಸಿಟ್ಟಿನಿಂದ ವಿರೂಪಾಕ್ಷನು ಆ ಗೌತಮನನ್ನು ತುಂಡು ತುಂಡಾಗಿ ಕತ್ತರಿಸಿ ತನ್ನ ಅನುಚರರಿಗೆ ತಿನ್ನಲು ಹೇಳಿದರೆ ಆ ನರಭಕ್ಷಕರು ಈತನ ಮಾಂಸವನ್ನು ತಿನ್ನಲು ಹೇಸಿದರು. ಕೊನೆಗೆ ಕಾಗೆಗಳಿಗೆ ಎರಚಿದರೆ ಅವು ಕೂಡ ಹೇಸಿ ದೂರ ಹೋದುವಂತೆ! ಕೊನೆಗೆ ವಿರೂಪಾಕ್ಷನು ಶ್ರದ್ಧೆಯಿಂದ ನಾಡೀಜಂಘನಿಗೆ ಅಂತ್ಯಸಂಸ್ಕಾರ ನೆರವೇರಿಸಲು ಹೋದರೆ ದಕ್ಷಪುತ್ರಿಯಾದ ಸುರಭಿಯು ಬಂದು ಬ್ರಹ್ಮ ಇಂದ್ರರ ಆಜ್ಞೆಯಂತೆ ಆ ಹಕ್ಕಿಯನ್ನು ಬದುಕಿಸಿದಳು. ಎಚ್ಚೆತ್ತ ನಾಡೀಜಂಘ ನಡೆದ ಘಟನಾವಳಿಯನ್ನೆಲ್ಲ ತಿಳಿದ ಮೇಲೂ ಬೇಡಿದ್ದೇನು ? “ದಯವಿಟ್ಟು ಈ ಬ್ರಾಹ್ಮಣ ಮಿತ್ರನನ್ನೂ ಬದುಕಿಸಿ ಕೊಡಿ.”

ನಾರದರು ಭೀಷ್ಮನಿಗೆ ಈ ಕಥೆ ಹೇಳಿದರಂತೆ. ಅದನ್ನು ಭೀಷ್ಮರು ಧರ್ಮರಾಯನಿಗೆ ಶಾಂತಿಪರ್ವದ 168ನೇ ಅಧ್ಯಾಯದಲ್ಲಿ ವಿಸ್ತಾರವಾಗಿ ವಿವರಿಸಿದ್ದಾರೆ. ಮನುಷ್ಯರಿಗಿಂತ ರಾಕ್ಷಸರು ಪ್ರಾಣಿಗಳೇ ಎಷ್ಟೋ ಉತ್ತಮ ಅಲ್ಲವೆ ?

ಪಾಂಡವ ಪತ್ನಿಯರು-ಪುತ್ರರು

ಉಪ ಪಾಂಡವರು ಅಭಿಮನ್ಯು, ಘಟೋತ್ಕಚ, ಬಭ್ರುವಾಹನ ಈ ಮಕ್ಕಳ ವಿಷಯ ಕೇಳಿದ್ದೇವೆ. ಉಳಿದವರ ವಿಷಯವನ್ನು ಇಲ್ಲಿ ಹೇಳಲಾಗಿದೆ. ಪಾಂಡವರೈವರೂ ದ್ರೌಪದಿಯನ್ನು ಮದುವೆಯಾದರಷ್ಟೆ. ಆದರೆ ಅವರವರಲ್ಲಿ ಅಂತಃಕಲಹವಾಗದಂತೆ ದ್ರೌಪದಿ ಸರದಿಯ ಪ್ರಕಾರ ಒಬ್ಬೊಬ್ಬ ಪತಿಯೊಂದಿಗೆ ವಾಸಿಸುವಂತೆ ನಾರದನು ವ್ಯವಸ್ಥೆ ಮಾಡಿದ. ಈ ಅವಧಿಗಳಲ್ಲಿ ದ್ರೌಪದಿಯು ಧರ್ಮರಾಯನಿಂದ ಪ್ರತಿವಿಂಧ್ಯ ಎಂಬ ಮಗನನ್ನು ಪಡೆದಳು. ಹಾಗೆಯೇ ಕ್ರಮವಾಗಿ ಭೀಮನಿಂದ ಸೋಮಕನನ್ನು, ಅರ್ಜುನನಿಂದ ಶ್ರುತಕೀರ್ತಿಯನ್ನು, ನಕುಲನಿಂದ ಶತಾನೀಕನನ್ನು ಸಹದೇವನಿಂದ ಶ್ರುತಕರ್ಮನನ್ನು ಪಡೆದಳು ಎಂದು ಆದಿಪರ್ವದ ಸಂಭವ ಪರ್ವಭಾಗದ 95ನೇ ಅಧ್ಯಾಯದಲ್ಲಿ ಹೇಳಲಾಗಿದೆ. ಆಂಧ್ರ ವಿದ್ವಾಂಸರು ಪ್ರತಿವಿಂಧ್ಯ, ಶ್ರುತಸೋಮ, ಶ್ರುತಕೀರ್ತಿ, ಶತಾನೀಕ ಮತ್ತು ಶ್ರುತಸೇನ ಎಂದು ಹೇಳುತ್ತಾರೆ. ಶ್ರುತಸೋಮನನ್ನು ಸುತಸೋಮಕ ಎಂದೂ ಕರೆಯಲಾಗಿದೆ.

ಪಂಚಪಾಂಡವರಿಗೆ ಒಟ್ಟು ಹದಿಮೂರು ಮಕ್ಕಳಿದ್ದರೆಂದೂ ಅವರಲ್ಲಿ ಕೊನೆಗೆ ಅಭಿಮನ್ಯುವಿನ ಸಂತಾನ ಮಾತ್ರ ಉಳಿದುಕೊಂಡಿತೆಂದೂ ಮಹಾಭಾರತ ಹೇಳುತ್ತದೆ. ಮಹಾಭಾರತದ ಆದಿಪರ್ವದ ಸಂಭವಪರ್ವ ಅಧ್ಯಾಯ 95 ಈ ವಿವರ ನೀಡುತ್ತದೆ.

ಧರ್ಮರಾಯನು ಶಿಬಿಯ ದೊರೆ ಗೋವಾಸನನ ಮಗಳಾದ ದೇವಿಕಾ ಎಂಬುವಳನ್ನು ಕನ್ಯಾ ಸ್ವಯಂವರದಲ್ಲಿ ಮದುವೆಯಾಗಿದ್ದ. ಇವರ ಮಗ ಯೌಧೇಯ.

ಭೀಮನು ಹಿಡಿಂಬೆಯಿಂದ ಘಟೋತ್ಕಚನೆಂಬ ಮಗನನ್ನು ಪಡೆದಿದ್ದ. ಅಲ್ಲದೆ ಕಾಶಿರಾಜನ ಮಗಳಾದ ಬಲಂಧರೆಯನ್ನು ಮದುವೆಯಾದ. ಅವಳನ್ನು ಪಡೆಯಲು ಬಲ ಮತ್ತು ಪರಾಕ್ರಮಗಳ ಶುಲ್ಕ ಇಡಲಾಗಿತ್ತು. ಈ ದಂಪತಿಗಳ ಮಗ ಸರ್ವಗ.

ಅರ್ಜುನನು ಸುಭದ್ರೆಯಲ್ಲಿ ಅಭಿಮನ್ಯುವನ್ನು ಉಲೂಪಿ ಎಂಬ ಕೌರವ್ಯ ನಾಗನ ಮಗಳಲ್ಲಿ ಇರಾವಂತನೆಂಬ ಮಗನನ್ನೂ ಮಣಿಪುರದ ಚಿತ್ರಾಂಗಿ (ಚಿತ್ರಾಂಗದೆ)ಯಲ್ಲಿ ಬಭ್ರುವಾಹನ ಎಂಬ ಮಗನನ್ನೂ ಪಡೆದಿದ್ದ.

ನಕುಲನು ಚೇದಿರಾಜ (ಶಿಶುಪಾಲ ?) ಮಗಳಾದ ಕರೇಣುಮತಿ ಎಂಬುವಳ ಸ್ವಯಂವರದಲ್ಲಿ ಭಾಗವಹಿಸಿ ಮದುವೆಯಾಗಿ ನಿರಮಿತ್ರ ಎಂಬ ಮಗನನ್ನು ಪಡೆದ.

ಸಹದೇವನು ಮದ್ರರಾಜನಾದ ದ್ಯುತಿಮಾನ್ ಎಂಬುವನ ಮಗಳಾದ ವಿಜಯಾ ಎಂಬಾಕೆಯ ಸ್ವಯಂವರದಲ್ಲಿ ಭಾಗವಹಿಸಿ ಆವಳನ್ನು ಮದುವೆಯಾಗಿ ಸುಹೋತ್ರ ಎಂಬ ಮಗನನ್ನು ಪಡೆದ.

ಇವರಲ್ಲಿ ಉಲೂಪಿಯ ಗಂಡನನ್ನು ಗರುಡ ಕೊಂದಿದ್ದ. ಸಂತಾನಾರ್ಥನಾಗಿ ಉಲೂಪಿಯ ತಂದೆ ಐರಾವತನು ಮಗಳನ್ನು ಅರ್ಜುನನಿಗೆ ಮದುವೆ ಮಾಡಿಕೊಟ್ಟಿದ್ದನೆಂದು ಭಾರತ ಹೇಳುತ್ತದೆ. ಇರಾವಂತನು ತಂದೆಯ ಪಕ್ಷದಲ್ಲಿ ಹೋರಾಡಿದಾಗ ಅಲಂಬುಷ ಅವನನ್ನು ಕೊಂದನಂತೆ. ಇವನಿಗೆ ಆರ್ಜುನಿ ಎಂಬ ಹೆಸರೂ ಇತ್ತು. ಬಭ್ರುವಾಹನನ ಕಥೆ ಅಶ್ವಮೇಧಯಾಗದ ಪ್ರಕರಣದಲ್ಲಿ ಬರುತ್ತದೆ.

ದಾರುಕ

ಶ್ರೀಕೃಷ್ಣನು 'ಪಾರ್ಥಸಾರಥಿ'ಯಾದರೆ ದಾರುಕನು ಶ್ರೀಕೃಷ್ಣನ ಸಾರಥಿ. ಸಾರಥಿತನ ಎನ್ನುವುದು ಇವರ ಕುಟುಂಬದ ರಕ್ತದಲ್ಲಿದ್ದಂತೆ ಕಾಣುತ್ತದೆ. ಈತ ಕೃಷ್ಣನಿಗೆ ಸಾರಥಿಯಾಗಿದ್ದರೆ, ಇವನ ತಮ್ಮನು ಸಾತ್ಯಕಿಗೆ ಸಾರಥಿಯಾಗಿದ್ದ. ದಾರುಕನ ಮಗನಿಗೆ ದಾರುಕಿ ಎಂದು ಹೆಸರು. ದಾರುಕಿಯು ಶ್ರೀಕೃಷ್ಣನ ಮಗನಾದ ಪ್ರದ್ಯುಮ್ನನಿಗೆ ಸಾರಥಿಯಾಗಿದ್ದನೆಂದು ಹೇಳಲಾಗಿದೆ.

ದಾರುಕನ ರಥಚೋದನ ಪ್ರೌಢಿ ಮತ್ತು ಪ್ರಯಾಣೋತ್ಸಾಹ ಅನೇಕ ಕಡೆ ಶ್ಲಾಘಿಸಲ್ಪಟ್ಟಿವೆ. ವಿರಾಟ ಪರ್ವದಲ್ಲಿ ಬೃಹನ್ನಳೆಯ ರೂಪದಲ್ಲಿದ್ದ ಅರ್ಜುನನು ಶ್ರೀಕೃಷ್ಣನಿಗೆ ದಾರುಕನು ಸಾರಥಿಯಾದಂತೆ ತಾನು ಉತ್ತರನಿಗೆ ಸಾರಥಿಯಾಗುತ್ತೇನೆ ಎಂದು ಹೇಳುವುದರ ಮೂಲಕ ದಾರುಕನಿಗೆ ಗೌರವ ಸಲ್ಲಿಸಿದ್ದಾನೆ. ಸಾಮಾನ್ಯವಾಗಿ ಶ್ರೀಕೃಷ್ಣ ಬಹುಸಂಚಾರಿ. ತುಂಬ ದೀರ್ಘಪ್ರಯಾಣ ಅವನಿಗೆ ರೂಢಿಯಾಗಿತ್ತು. ಆಗೆಲ್ಲ ಅವರ ರಥವನ್ನು ನಡೆಸುತ್ತಿದ್ದವನೆಂದರೆ ದಾರುಕನೇ. ಕೃಷ್ಣನಿಗೆ ಆಯಾಸವೇ ಆಗದಂತೆ ಚಾಕಚಕ್ಯದಿಂದ ರಥ ನಡೆಸುವುದರಲ್ಲಿ ದಾರುಕನು ಸಿದ್ಧಹಸ್ತನಾಗಿದ್ದ.

ಶ್ರೀಕೃಷ್ಣನು ಸೌಭನಗರದ ಸಾಲ್ವರಾಜನ ಮೇಲೆ ದಂಡೆತ್ತಿ ಹೋದದ್ದು ಸರಿಯಷ್ಟೆ. ಆಗ ಅವನ ಸಾರಥಿಯಾಗಿದ್ದ ದಾರುಕನು ಬರಿಯ ರಥಚಾಲಕನಾಗಿ ಉಳಿಯದೆ ಕಳೆಗುಂದಿದಾಗೆಲ್ಲ ಕೃಷ್ಣನನ್ನು ಹುರಿದುಂಬಿಸಿ ಸಾಲ್ವನನ್ನು ಕೊಲ್ಲುವಂತೆ ಪ್ರೇರಿಸುತ್ತಿದ್ದನೆಂಬ ಸಂಗತಿ ಉದ್ಯೋಗಪರ್ವದ 22ನೆಯ ಅಧ್ಯಾಯದಲ್ಲಿ ತಿಳಿದು ಬರುತ್ತದೆ. ಈ ಸಂದರ್ಭದಲ್ಲಿ ಸಾಲ್ವನ ಬಾಣಗಳು ದಾರುಕನ ಮೇಲೂ ಬಿದ್ದು ತುಂಬ ಗಾಯವಾಗಿದ್ದರೂ ಲೆಕ್ಕಿಸದೆ ಕೃಷ್ಣನನ್ನು ಉತ್ಸಾಹಗೊಳಿಸುತ್ತಿದ್ದನೆಂದು ವನಪರ್ವದಲ್ಲಿ ಹೇಳಲಾಗಿದೆ.

ಮಹಾಭಾರತ ಯುದ್ಧದಲ್ಲಿ ಶ್ರೀಕೃಷ್ಣನೇ ಅರ್ಜುನನಿಗೆ ಸಾರಥಿಯಾಗಿದ್ದರೂ ಅವನ ರಥಮಾತ್ರ ಸದಾ ಯುದ್ಧಭೂಮಿಯಲ್ಲೇ ಇರುತ್ತಿತ್ತು. ದಾರುಕನು ಶ್ರೀಕೃಷ್ಣನ ಆಜ್ಞೆಗಾಗಿ ಕಾಯುತ್ತ ಯುದ್ಧರಂಗದಲ್ಲೇ ಸದಾ ಇರುತ್ತಿದ್ದ. ದ್ರೋಣಪರ್ವದಲ್ಲಿ ಒಮ್ಮೆ ಶ್ರೀಕೃಷ್ಣನು ಶಂಖವನ್ನು ಊದಿದ ಕೂಡಲೇ ಸಂಕೇತವನ್ನು ಅರಿತ ದಾರುಕನು ತನ್ನ ಸಜ್ಜುಗೊಳಿಸಿದ ರಥವನ್ನು ಯುದ್ಧಭೂಮಿಯಲ್ಲಿ ಶ್ರೀಕೃಷ್ಣನ ಮುಂದೆ ತಂದು ನಿಲ್ಲಿಸಿದ ಘಟನೆಯೇ ಇದಕ್ಕೆ ಸಾಕ್ಷಿಯಾಗಿದೆ. ಸಾತ್ಯಕಿಯು ಈ ರಥವನ್ನು ಬಳಸಿದಾಗ ದಾರುಕನೇ ಸಾರಥಿಯಾಗಿರುತ್ತಿದ್ದ. ಸಾತ್ಯಕಿ ಕರ್ಣರಿಗೆ ಘೋರಯುದ್ಧವಾಗುತ್ತಿದ್ದಾಗ ಸಾತ್ಯಕಿಯ ರಥವನ್ನು ದಾರುಕನು ಚಾಕಚಕ್ಯದಿಂದ ನಡೆಸುತ್ತಿದ್ದನೆಂದು ಮಹಾಭಾರತ ಹೇಳುತ್ತದೆ. ದಾರುಕನು ಕೇವಲ ಸಾರಥಿಯಾಗಿರಲಿಲ್ಲ. ಯಾದವ ಕುಟುಂಬದ ಆಪ್ತಮಿತ್ರನೂ ಆಗಿದ್ದ. ದ್ವಾರಕಿಯಲ್ಲಿ ಯಾದವೀ ಕಲಹ ಆರಂಭವಾಗಿ ಯಾದವರು ತಮ್ಮತಮ್ಮಲ್ಲೇ ಹೊಡೆದಾಡಿಕೊಂಡು ಸತ್ತರಷ್ಟೆ. ಅದಕ್ಕೂ ಮುನ್ನ ಕೃಷ್ಣಬಲರಾಮರು ದೇಹವನ್ನು ತ್ಯಜಿಸಿದ್ದರು. ರಾಜ್ಯವು ಅನಾಯಕವಾಯಿತು. ಆಗ ದಾರುಕನು ಹಸ್ತಿನಾವತಿಗೆ ರಥಸಮೇತನಾಗಿ ಬಂದು ಧರ್ಮರಾಯನಿಗೆ ನಡೆದ ಘಟನೆಗಳನ್ನೆಲ್ಲ

ವಿವರಿಸಿದ. ಅಷ್ಟೇ ಅಲ್ಲದೆ ಆಗಲಿರುವ ಅನಾಹುತಗಳನ್ನು ತಪ್ಪಿಸಲು ಅರ್ಜುನನನ್ನು ತನ್ನ ರಥದಲ್ಲಿ ಕುಳ್ಳಿರಿಸಿಕೊಂಡು ಹೋದನೆಂದು ಮಹಾಭಾರತ ಹೇಳುತ್ತದೆ. ಶ್ರೀಕೃಷ್ಣನ ಮರಣಾನಂತರವೂ ಅವನ ಕುಟುಂಬ ಮತ್ತು ರಾಜ್ಯದ ಬಗೆಗೆ ಈತನಿಗೆ ಎಂಥ ಕಳಕಳಿ ಇತ್ತೆಂಬುದು ಸ್ಪಷ್ಟವಾಗುತ್ತದೆ.

ವೃತ್ತಿಪರ ಸಾರಥಿಗಳಿಗೆ ಯುದ್ಧಭೂಮಿಯಾಚೆಗೆ ಅಂಥ ಹೆಸರಿರುವುದಿಲ್ಲ. ಆದರೆ ಶ್ರೀಕೃಷ್ಣ ಸಾರಥಿಯಾದ ದಾರುಕನ ಹೆಸರು ಇಂದಿಗೂ ಲೋಕಪ್ರಿಯವಾಗಿದೆ.

* * * *

ಹಂಸ ಕಾಗೆಗಳ ಕಥೆ

ಶಲ್ಯನು ಕರ್ಣನಿಗೆ ಹೇಳಿದ ಕಥೆಯಿದು.

ಸಮುದ್ರತೀರದಲ್ಲಿ ಶ್ರೀಮಂತ ವೈಶ್ಯನ ಮನೆಯಲ್ಲಿ ಅವರೆಲ್ಲ ತಿಂದು ಉಳಿದ ಆಹಾರ ಪದಾರ್ಥಗಳನ್ನು ತಿಂದು ಕೊಬ್ಬಿ ಆ ವೈಶ್ಯನ ಮಕ್ಕಳೊಂದಿಗೆ ಸರಸವಾಡುತ್ತಿದ್ದ ಒಂದು ಕಾಗೆ ಇತ್ತು. ಅವರೆಲ್ಲ ಉದಾರಿಗಳೂ ಸ್ನೇಹಿತರೂ ಆಗಿದ್ದುದರಿಂದ ಈ ಕೊಬ್ಬಿದ ಕಾಗೆಗೆ ದುರಹಂಕಾರ ಮೊಳೆಯಿತು. ಉಳಿದೆಲ್ಲ ಹಕ್ಕಿಗಳನ್ನೂ ಅದು ತುಚ್ಛವಾಗಿ ಕಾಣಲಾರಂಭಿಸಿತು. ಅವುಗಳಿರಲಿ ಸಮುದ್ರದ ಮೇಲೆ ಹಾರಿ ಮಾನಸಸರೋವರದ ಕಡೆಗೆ ಹೋಗುವ ಹಂಸಗಳನ್ನೂ ಈ ಕಾಗೆ ತಿರಸ್ಕಾರದಿಂದ ಕಾಣತೊಡಗಿತು. ಈ ಕಾಗೆ ಸುಮ್ಮನಿರದೆ ಆ ಹಂಸಗಳ ಮುಖಂಡನನ್ನು ಕರೆದು ತನ್ನ ಪ್ರತಾಪವನ್ನು ಕೊಚ್ಚಿಕೊಂಡಿತು. ವಿಹಗಜಾತಿಯಲ್ಲೇ ತನಗೆ ಸಮಾನರಾದ ಹಾರುಪಕ್ಷಿಗಳಿಲ್ಲ ಎಂದಿತು "ನನಗೆ ನೂರು ಗತಿ-ಭಂಗಿಗಳಲ್ಲಿ ಹಾರಲು ಬರುತ್ತದೆ ಗೊತ್ತೆ ?"

"ಹೌದೆ ? ನಮಗೆಲ್ಲ ಗೊತ್ತಿರುವುದು ಒಂದೇ ಬಗೆ. ಸುಮ್ಮನೆ ಹಾರುವುದು ಅಷ್ಟೇ! ಅಷ್ಟೊಂದು ಹಾರುಗತಿಗಳನ್ನು ನಾವು ಕೇಳಿಯೇ ಇಲ್ಲ"

"ಹಿ ಹ್ಹೀ. ಕೇಳಿ ಎಷ್ಟು ಗತಿಗಳಿವೆ ಅಂತೀರಿ! ಉಡ್ಡೀನ, ಅವಡೀನ, ಡೀನ, ನಿಡೀನ, ತಿರ್ಯಕ್‌ಡೀನ, ಪರಾಡೀನ, ಅಭಿಡೀನ, ಡೀನ ಡೀ...."

ಹಂಸಗಳಿಗೆ ಆಶ್ಚರ್ಯ. ನಕ್ಕು ಸುಮ್ಮನಾಗುತ್ತಿದ್ದುವೋ ಏನೋ. ಆದರೆ ಕಾಗೆಯು, "ನಾನು ಚಿತ್ರವಿಚಿತ್ರಗತಿಗಳಿಂದ ಸಮುದ್ರವನ್ನು ಹಾರುತ್ತೇನೆ. ನನ್ನೊಂದಿಗೆ ಸ್ಪರ್ಧಿಸುವ ಸಾಹಸಿ ನಿಮ್ಮಲ್ಲಿದ್ದಾನೆಯೆ ?" – ಎಂದು ಕೇಳಿತು.

ಕಾಲ್ಕೆರೆದುಕೊಂಡು ಬರುತ್ತಿರುವ ಕಾಕದರ್ಪವನ್ನು ಕಂಡು ಹಂಸವು ತಾನು ಸ್ಪರ್ಧೆಗೆ ಸಿದ್ಧ ಎಂದಿತು. ಆ ಕಾಗೆಯ ಜತೆ ಇದ್ದ ಕಾಕಬಳಗ ಮತ್ತು ಚಿಕ್ಕಪುಟ್ಟ ಹುಡುಗರು ಹಂಸಗಳನ್ನು ಲೇವಡಿ ಮಾಡಿ ತಮ್ಮ ಕಾಕ ಪೈಲವಾನನನ್ನು ಉತ್ತೇಜಿಸಿದುವು. ಒಂದೇ ಪಾತವನ್ನು ಅರಿತ ಹಂಸಗಳು ಶತಪಾತ ಚತುರನಾದ ಕಾಕರಾಜನೊಂದಿಗೆ ಸ್ಪರ್ಧಿಸಬಲ್ಲುವೆ ? ಎಂದು ಉಳಿದ ಕಾಗೆಗಳೂ ಹುಡುಗರೂ ಕಿರುಚಾಡಿದ್ದೂ ಉಂಟು.

ಸ್ಪರ್ಧೆ ಆರಂಭವಾಯಿತು. ಹಂಸವು ನೇರಗತಿಯಲ್ಲಿ ಒಂದೇ ಸಮನೆ ಯಾವ ಬಿಂಕವೂ ಇಲ್ಲದೆ ಹಾರಾಡಿತು. ಅದಕ್ಕೆ ದಿನವೂ ಹಾರಿ ಅಭ್ಯಾಸವಿತ್ತಲ್ಲ ? ಆದರೆ ಕಾಗೆ ಮೊದಮೊದಲು ಚಿತ್ರವಿಚಿತ್ರ ಗತಿಗಳಲ್ಲಿ ಹಾರಾಡಿ ಗೆಳೆಯ ಕಾಗೆಗಳಿಂದ ಚಪ್ಪಾಳೆಯನ್ನೂ ಗಿಟ್ಟಿಸಿಕೊಂಡು ಹಂಸಕ್ಕಿಂತಲೂ ಮುಂದೆ ಹಾರಿತು.

ಉಳಿದ ಹಂಸಗಳೂ ಕಾಗೆಯನ್ನು ನೋಡುತ್ತ ಅಣಕಿಸುವಂತೆ ನಗುತ್ತಿದ್ದವು. ಹಂಸವು ಸಮುದ್ರದಲ್ಲಿ ಪಶ್ಚಿಮದಿಕ್ಕಿಗೆ ತಿರುಗಿ ಹಾರಾಟ ಮುಂದುವರಿಸಿತು. ಕಾಗೆ ನೋಡುತ್ತದೆ, ಮುಂದೆ ಬರಿಯ ಸಮುದ್ರ! ಮಧ್ಯೆ ವಿಶ್ರಮಿಸಲು ದ್ವೀಪಗಳಿಲ್ಲ, ಮರಗಳಿಲ್ಲ. ಉಸಿರು ಸ್ವಾಧೀನ ತಪ್ಪಿದಂತಾಗಿ ಬಳಲಿ ಬಳಲಿ ಕೆಳಗೆ ಬೀಳುತ್ತ ನೀರನ್ನೇ

ಮುಟ್ಟುವಷ್ಟು ತಗ್ಗಿಗೆ ಬರುತ್ತಾ ಹಾರಾಡುತ್ತಿತ್ತು. ಆಗ ಹಂಸ ಕೇಳಿತು. "ಈಗ ನೀನು ಯಾವ 'ಗತಿ'ಯಲ್ಲಿ ಹಾರುತ್ತಿದ್ದೀ? ನಿನ್ನ ಕೊಕ್ಕು ರೆಕ್ಕೆ ಎರಡೂ ನೀರಲ್ಲಿ ನೆನೆಯುತ್ತಿದೆಯಲ್ಲ!" ಕಾಗೆಗೆ ಮುಂದೆ ಹಾರುವ ಶಕ್ತಿ ಉಡುಗಿ ಹೋಗಿತ್ತು. ದೀನಸ್ವರದಲ್ಲಿ ಅದು ತನ್ನ ಅಸಾಮರ್ಥ್ಯವನ್ನು ಹೇಳಿಕೊಂಡು ಬೆನ್ನಮೇಲೆ ಕೂರಿಸಿಕೊಂಡು ದಡಸೇರಿಸು ಎಂದು ಹಂಸವನ್ನು ಬೇಡಿಕೊಂಡಿತು. ಆ ಹಂಸಕ್ಕೆ ತುಂಬ ಉದಾರ ಮನಸ್ಸು ಇದ್ದುದರಿಂದ ಅದು ಕಾಗೆಯನ್ನು ತನ್ನ ಬೆನ್ನ ಮೇಲೆ ಕೂರಿಸಿಕೊಂಡು ದಡ ಸೇರಿಸಿತು.

ಶಲ್ಯನು ಈ ಕಾಕ ಕಥೆ ಹೇಳುತ್ತಿರುವುದು ಕರ್ಣನನ್ನು ಕಾಗೆಗೆ ಹೋಲಿಸುವ ಉದ್ದೇಶದಿಂದಲೇ. ಅರ್ಜುನ ಹಂಸವಾದರೆ ಕರ್ಣ ಕಾಗೆ. ಕೈಲಾಗದಿದ್ದರೂ ಕಾಕಪೌರುಷವನ್ನು ಮಾತ್ರ ಬಿಡುತ್ತಿಲ್ಲ. ಹಂಸವು ಕನಿಕರಿಸಿದಂತೆ ಅರ್ಜುನ ಮಧ್ಯದಲ್ಲಿ ಸುಮ್ಮನೆ ಕನಿಕರಿಸಿ ಬಿಡುವವನಲ್ಲವಾದ್ದರಿಂದ ಕರ್ಣನಿಗೆ ಅಪಾಯ ಕಾದಿದೆ ಎಂಬ ಧ್ವನಿ ಶಲ್ಯನ ಈ ಕಥೆಯಲ್ಲಿದೆ. ಇದು ಒಂದು ಪ್ರಾಚೀನ ನೀತಿ ಕಥೆ. ಮಹಾಭಾರತದಲ್ಲಿ ಶಲ್ಯನು ಇದನ್ನು ಅರ್ಥಪೂರ್ಣವಾಗಿ ಬಳಸಿಕೊಂಡಿದ್ದಾನೆ. ಇಂಥ ಉಪಾಖ್ಯಾನಗಳು ಮಹಾಭಾರತದಲ್ಲಿ ಲೆಕ್ಕವಿಲ್ಲದಷ್ಟಿವೆ.

* * * *

ಮೃತ್ಯು ದೇವತೆ



ಲೋಕದ ಸಕಲ ಜೀವಿಗಳಿಗೂ ಕೊನೆ ಎಂಬುದು ಇದ್ದೇ ಇದೆಯಲ್ಲ. ಹಾಗೆ ಮರಣವಿರುವುದರಿಂದಲೇ ನಾವು 'ಮರ್ತ್ಯ'ರು ಎನಿಸಿಕೊಂಡಿದ್ದೇವೆ. ಏಕೆಂದರೆ ನಮ್ಮ ಉಸಿರನ್ನು ನಿಯಂತ್ರಿಸುವ ಪ್ರಾಣವಾಯು ಮಹಾ ಬಲಶಾಲಿಯಾದದ್ದು. ಅದು ಶರೀರವನ್ನು ಭೇದಿಸಿಕೊಂಡು ಹೋಗುವಂಥದ್ದು. ಏಕೆಂದರೆ ಅದಕ್ಕೆ ನಿಲುಗಡೆ

ಎಂಬುದೆ ಇಲ್ಲ ಎಂದು ವ್ಯಾಸರು ಹೇಳುತ್ತಾರೆ. ಅಂಥ ಮೃತ್ಯುವಿನ ಚಿಂತನ ಮಹಾಭಾರತದ ದ್ರೋಣ ಪರ್ವದ 53-54ನೇ ಪರ್ವಗಳಲ್ಲಿ ಬರುತ್ತದೆ.

ಅಭಿಮನ್ಯು ಸತ್ತಾಗ ಧರ್ಮರಾಯನು ವ್ಯಾಸರ ಬಳಿ ಈ ಮೃತ್ಯುವಿನ ಪ್ರಶ್ನೆ ಎತ್ತುತ್ತಾನೆ. ಆಗ ವ್ಯಾಸರು ಹಿಂದೆ ಅಕಂಪನ ಮಹಾರಾಜನು ಮಗನನ್ನು ಕಳೆದುಕೊಂಡು ನರಳುತ್ತಿದ್ದಾಗ ನಾರದರು ಹೇಳಿದ ಸಮಾಧಾನೋಕ್ತಿಗಳನ್ನು ವಿವರಿಸುತ್ತಾರೆ.

ಹಿಂದೆ ಬ್ರಹ್ಮನು ಲೋಕ ಸೃಷ್ಟಿ ಮಾಡಿದ. ಆದರೆ ಪ್ರಜಾ ಸಂಹಾರಕ್ಕೆ ಏನೆಂದೂ ವ್ಯವಸ್ಥೆಯಿಲ್ಲದೆ ಪ್ರಾಣಿಗಳ ಸಂಖ್ಯೆ ಬೆಳೆಯುತ್ತಾ ಹೋಯಿತು. ಈ ಬಗೆಗೆ ಏನು ಮಾಡಬೇಕೆಂಬುದನ್ನು ಚಿಂತಿಸಿ, ಚಿಂತಿಸಿ ಉಪಾಯ ಹೊಳೆಯದೆ ಬ್ರಹ್ಮನ ಕಣ್ಣು, ಕಿವಿ ಮೊದಲಾದ ಇಂದ್ರಿಯಗಳಿಂದ ಕ್ರೋಧಾಗ್ನಿ ಹೊರಹೊಮ್ಮಿತು. ಆ ಬೆಂಕಿಯ ಕಾವಿಗೆ ಜಗತ್ತು ತಲ್ಲಣಿಸಿತು. ಆಗ 'ರಾಕ್ಷಸ ಪ್ರಭು' (ಈಶ್ವರ) ಬ್ರಹ್ಮನ ಬಳಿಗೆ ಬಂದ. ಈ ಈಶ್ವರ, ಬ್ರಹ್ಮನ ಮಗ, ಜಗತ್ತಿನ ಹಿತಕ್ಕಾಗಿ ಚಿಂತಿಸಿ ಹೀಗೆ ಕ್ರೋಧ ತಂದುಕೊಳ್ಳಬಾರದೆಂದು ಹೇಳಿದ. ಶಿವನ ಮಾತಿಗೆ ಒಪ್ಪಿಕೊಂಡು ಬ್ರಹ್ಮನು ಕ್ರೋಧವನ್ನು ಉಪಸಂಹರಿಸಿದಾಗ ಒಂದು ಸ್ತ್ರೀ ಮೂರ್ತಿ ಹುಟ್ಟಿಕೊಂಡು ದಕ್ಷಿಣದಲ್ಲಿ ನಿಂತು ಶಿವ-ಬ್ರಹ್ಮರನ್ನು ನೋಡಿ ನಕ್ಕಿತು. ಬ್ರಹ್ಮನು ಅವಳಿಗೆ ಮೃತ್ಯುದೇವತೆ ಎಂದು ಹೆಸರಿಟ್ಟು 'ಪ್ರಜಾ ಸಂಹಾರ ಮಾಡು' ಎಂದು ಹೇಳಿದ.

ಮೃತ್ಯು ದೇವತೆ ಧೇನುಕಾಶ್ರಮದಲ್ಲಿ 17ಪದ್ಮಸಂವತ್ಸರ, ನಂದಾನದೀ ತೀರದಲ್ಲಿ 8ಸಾವಿರ ವರ್ಷ, ಮಹಾಮೇರು ಶಿಖರಗಳಲ್ಲಿ ಒಂದು ನಿಖರ್ವ ವರ್ಷ (10ಕೋಟಿ ವರ್ಷ 1ನಿಖರ್ವ) ಬ್ರಹ್ಮಧ್ಯಾನ ಮಾಡಿ ಆತ ಪ್ರತ್ಯಕ್ಷನಾದಾಗ ಕೊಲೆಯ ಕಾರ್ಯವು ಅಧರ್ಮವಲ್ಲವೆ? ಎಂದು ಕೇಳಿದಳು. ಅಲ್ಲದೆ ಮನುಷ್ಯರ ಲೋಭ, ಕ್ರೋಧ, ಅಸೂಯೆ, ಈರ್ಷ್ಯೆ, ದ್ರೋಹ, ಮೋಹ ನಿರ್ಲಜ್ಜತೆ ವಾಕ್ ಪಾರುಷ್ಯ ಮೊದಲಾದ ದೋಷಗಳೇ ಅವರನ್ನು ಕೊಲ್ಲುವಂತಾಗಬಾರದೇಕೆ ಎಂದು ಪ್ರಶ್ನಿಸಿದಳು. ಆಗ ಬ್ರಹ್ಮನು ಮೃತ್ಯು ಎಂಬುದು ತಾನೇ ರಚಿಸಿಕೊಟ್ಟ ಒಂದು ನಿಶ್ಚಿತ ವಿಧಾನವೆಂದು ಹೇಳಿ "ನೀನು ಯಾರ ಮೇಲೆ ಕೂಡ ದ್ವೇಷ ಉಳ್ಳವಳಲ್ಲ, ಪ್ರೇಮವುಳ್ಳವಳೂ ಅಲ್ಲ. ಆದ್ದರಿಂದ ಅನಾಸಕ್ತೆಯಾಗಿ ಕಾರ್ಯ ನಿರ್ವಹಿಸು. ಇದು ನಿನ್ನ ಧರ್ಮ, ಧರ್ಮಾಚರಣೆಯಿಂದ ನೀನು ಪವಿತ್ರಳಾಗಿದ್ದೀಯೆ. ನಿನಗೆ ಯಾವ ಪಾಪವೂ ಅಂಟುವುದಿಲ್ಲ. ನಾನು ನಿನಗೆ ಅನಿಷ್ಟವನ್ನು ಮಾಡುವುದಿಲ್ಲ. ಆಯುಃ ಪ್ರಮಾಣವನ್ನು ನಾನು ನಿರ್ಧರಿಸಿರುತ್ತೇನೆ. ಆಯುಸ್ಸು ತೀರಿದವರ ಜೀವಹರಣ ಮಾಡುವುದಷ್ಟೇ ನಿನ್ನ ಕೆಲಸ" ಎಂದು ಸಮಾಧಾನಪಡಿಸಿದ. ಈ ಮೃತ್ಯುವಿನಿಂದಾಗಿ ಜಗತ್ತಿನಲ್ಲಿ ಭೂತ, ಭವಿಷ್ಯ, ವರ್ತಮಾನ ಮೂರು ಕಾಲಗಳಿಗೆ ನೆಲೆ ಸಿಕ್ಕಿದಂತಾಯಿತು. ಸಾವನ್ನು ನಮ್ಮ ಪ್ರಾಚೀನರು ಹೀಗೆ ಪುರಾಣೀಕರಿಸಿದ್ದಾರೆ.

* * * *

ಮಾದ್ರಿ

ಮಹಾರೂಪವತಿಯೂ ಭೋಗವಿಲಾಸ ಸಂಮುಗ್ನಳೂ ಆದ ಕ್ಷತ್ರಿಯ ಕನ್ಯೆಯೊಬ್ಬಳು ಚಿಕ್ಕ ವಯಸ್ಸಿನಲ್ಲೇ ಅರಣ್ಯದಲ್ಲಿ ಲೈಂಗಿಕ ಸುಖವನ್ನು ಚೆಲ್ಲಿಕೊಟ್ಟು ಗಂಡನಿದ್ದೂ ಅವನ ಜೊತೆಯಲ್ಲಿ ಸಂಯಮದ ಜೀವನವನ್ನು ನಡೆಸಬೇಕಾಗಿ ಬಂದ ಕಥೆ ಮಾದ್ರಿಯದು. ಕಡೆಂಗೋಡ್ಲು ಶಂಕರಭಟ್ಟ, ಬಿ.ಸಿ. ರಾಮಚಂದ್ರಶರ್ಮ ಮೊದಲಾದ ಕವಿಗಳು ಈಕೆಯ ಅಂತರಂಗ ಶೋಧನೆ ಮಾಡಿ ಉತ್ತಮ ಪದ್ಯಗಳನ್ನು ಬರೆದಿದ್ದಾರೆ.

ಮಾದ್ರಿ ಮದ್ರರಾಜನಾದ ಶತಾಯನನ ಮಗಳು. ಶಲ್ಯನ ತಂಗಿ. ಇವಳು ಧೃತಿದೇವಿಯ ಅವತಾರ ಎಂದು ಆದಿಪರ್ವ ಹೇಳುತ್ತದೆ.

ಪಾಂಡುರಾಜನು ಸ್ವಯಂವರದಲ್ಲಿ ಕುಂತಿಯನ್ನು ವರಿಸಿದ ನಂತರದ ಸಂಗತಿಯದು. ಮದ್ರರಾಜ ಋತಾಯನನ ಮಗಳಾದ ಮಾದ್ರಿಯ ರೂಪಸಂಪತ್ತಿನ ವಿಷಯ ಭೀಷ್ಮನ ಕಿವಿಗೆ ಬಿತ್ತು. ಕೂಡಲೇ ಭೀಷ್ಮನು ಮದ್ರಪುರಿಗೆ ಹೋಗಿ ಮಾದ್ರಕುಲಧರ್ಮಾನುಸಾರ ಋತಾಯನ, ಶಲ್ಯ ಮೊದಲಾದವರಿಗೆ ಹೇರಳವಾದ ಕನ್ಯಾಶುಲ್ಕವನ್ನು ಕೊಟ್ಟ. ಅವರು ಮಾದ್ರಿಯನ್ನು ಭೀಷ್ಮನ ಕೈಯಲ್ಲೇ ಕಳಿಸಿಕೊಟ್ಟರು. ಹಸ್ತಿನಾವತಿಯಲ್ಲಿ ವೈಭವದಿಂದ ಮದುವೆ ನೆರವೇರಿತು.

ಮಾದ್ರಿ ನಿಜವಾಗಿ ಲೈಂಗಿಕ ಸುಖವನ್ನು ಅನುಭವಿಸಿದ್ದು ಸ್ವಲ್ಪ ಕಾಲ ಮಾತ್ರ. ಕಿಂದಮಋಷಿಯನ್ನು ಕೊಂದ ತಪ್ಪಿಗೆ ಪಾಂಡು 'ನಿನ್ನ ಪತ್ನಿಯನ್ನು ಕೂಡಿದೊಡನೆ ನಿನಗೆ ಸಾವು' ಎಂಬ ಭಯಂಕರ ಶಾಪಕ್ಕೆ ಗುರಿಯಾಗಬೇಕಾಯಿತು. ಈ ಶಾಪದಿಂದಾಗಿ ಕುಮಾರವ್ಯಾಸ ಹೇಳುವಂತೆ ತಮ್ಮ 'ಬೇರು ಕೊಲೆ'ಯಾಯಿತಲ್ಲ ಎಂದು ಕುಂತಿ ಮಾದ್ರಿಯರು ಮರುಗಿದರು. ಆದರೆ ಗಂಡನನ್ನು ಆತ್ಮಹತ್ಯೆ ಮಾಡಿಕೊಳ್ಳಲು ಬಿಡದೆ ಶತಶೃಂಗ ಪರ್ವತಕ್ಕೆ ಅವನು ಹೊರಟು ನಿಂತಾಗ ತಾವೂ ಹಿಂಬಾಲಿಸಿದರು. ಅಲ್ಲಿ ಅವನ ತಪೋಽನುಷ್ಠಾನಗಳಿಗೆ ಸ್ವಲ್ಪವೂ ತೊಂದರೆಯಾಗದಂತೆ ನೋಡಿಕೊಂಡ ಅಕ್ಕನೊಂದಿಗೆ ಮಾದ್ರಿಯೂ ಸಹಕರಿಸಿದಳು.

ಕುಂತಿಗೇನೋ ಋಷಿಪ್ರಣೀತವಾದ ವರಗಳಿದ್ದುದರಿಂದ ಅವಳು ಪತಿಯ ಅಪ್ಪಣೆ ಪಡೆದು, ಯಮ, ವಾಯು, ಇಂದ್ರ, ದೇವರುಗಳನ್ನು ಒಲಿಸಿಕೊಂಡು ಧರ್ಮರಾಯ, ಭೀಮ, ಅರ್ಜುನರನ್ನು ಪಡೆದಳು. ಈಗ ಮಾದ್ರಿಯ ಆಸೆಯೂ ಗರಿಗೆದರಿತು. ತನಗೂ ಒಂದು ಮಂತ್ರವನ್ನು ಕುಂತಿಯು ಅನುಗ್ರಹಿಸುವಂತೆ ಹೇಳಿ ಎಂದು ಪತಿಗೆ ದುಂಬಾಲುಬಿದ್ದಳು. ಮೂರು ಮಕ್ಕಳು ಸಾಕು ಎಂದುಕೊಂಡ ಕುಂತಿ ಪ್ರೀತಿಯಿಂದಲೇ ಮಾದ್ರಿಗೆ ಒಂದು ಸಂತಾನಮಂತ್ರವನ್ನು ಕೊಟ್ಟಳು. ಮಾದ್ರಿ ಬುದ್ಧಿವಂತೆ. ಒಂದೇ ಮಂತ್ರಕ್ಕೆ ಇಬ್ಬರು ಪುತ್ರರನ್ನು ಪಡೆಯುವ ಹಂಚಿಕೆ ಹಾಕಿ ಅವಿನಾಯೋಗರೂ ಏಕನಾಮರೂ ಆವಳಿಗಳೂ ಆದ ಅಶ್ವಿನೀದೇವತೆಗಳನ್ನು ಪ್ರಾರ್ಥಿಸಿ ಇಬ್ಬರು ಮಕ್ಕಳನ್ನು ಪಡೆದಳು. ನಕುಲ ಸಹದೇವರನ್ನು ಹೆತ್ತನಂತರ

ವಾಸ್ತವವಾಗಿ ಅವಳಿಗೆ ಇನ್ನೊಂದು ಮಂತ್ರವನ್ನು ಕೇಳಿ ಪಡೆಯುವ ಆಸೆ. ಆದರೆ ಕುಂತಿ ನಿರಾಕರಿಸಿದ್ದರಿಂದ ಸುಮ್ಮನಾದಳು.

ಮಕ್ಕಳೆಲ್ಲ ಚೆನ್ನಾಗಿ ಬೆಳೆದು ವಿದ್ಯಾವಂತರಾಗುತ್ತಿದ್ದರೂ ಮಾದ್ರಿಗೆ ಯೌವನ ಸಹಜವಾದ ಅಲಂಕಾರ ವಿಲಾಸಗಳು ಮಾಯವಾಗಿರಲಿಲ್ಲ. ಇಂಥ ಒಂದು ದಿನ ಅವಳು ಕಾಡಿನ ತೋಟದಲ್ಲಿ ಆನಂದವಾಗಿ ತಿರುಗುತ್ತಿದ್ದಾಗ ಪಾಂಡುವಿನ ಕಣ್ಣನ್ನು ಅವಳ ರೂಪ ಹಾವಭಾವಗಳು ಕುಕ್ಕಿದುವು. ಅವಳ ಎಚ್ಚರಿಕೆಯನ್ನೂ ಕಿಂದಮ ಶಾಪವನ್ನೂ ತನ್ನ ಸಂಯಮವ್ರತವನ್ನೂ ಸಂಪೂರ್ಣವಾಗಿ ಮರೆತ ಪಾಂಡು ಅವಳ ಸಹವಾಸ ಮಾಡಿ ಶಾಪದ ಫಲವಾಗಿ ವ್ಯೆಮರೆತು ಒರಗಿದ.

ಗಂಡ ಸತ್ತಮೇಲೆ ಮಾದ್ರಿ ತನ್ನ ವಯಸ್ಸಿಗೆ ಮೀರಿದ ಚಾರಿತ್ರ್ಯವನ್ನು ಪ್ರಕಟಿಸುತ್ತಾಳೆ. ಮಕ್ಕಳನ್ನು ನೋಡಿಕೊಳ್ಳುವ ಜವಾಬ್ದಾರಿಯನ್ನು ಆಕ್ಕನಿಗೆ ವಹಿಸಿ ತಾನು ಯಾರೆಷ್ಟು ನಿವಾರಿಸಿದರೂ ಕೇಳದೆ ಪತಿಯೊಂದಿಗೆ ಸಹಗಮನ ಮಾಡುತ್ತಾಳೆ. ಸುಖಾಪೇಕ್ಷಿಗಳಾದವರು ತ್ಯಾಗಕ್ಕೂ ಸಿದ್ಧರಾಗಬೇಕು ಎಂಬ ಮಾತನ್ನು ಮಾದ್ರಿ ಸತ್ಯಗೊಳಿಸಿ ಸ್ಮರಣೀಯಳಾಗಿ ಉಳಿದಿದ್ದಾಳೆ. ಅವಳ ಬದುಕು ಅಲ್ಪಾವಧಿಯದಾಗಿದ್ದರೂ ಸಾರ್ಥಕವಾದದ್ದೆಂದು ಹೇಳಬಹುದು.

* * * *

ಸೌಗಂಧಿಕ ಕಮಲಪುಷ್ಪ

ಇದು ಒಂದು ಕವಿ ನಿರ್ಮಿತ ಊಹಾ ಕಮಲ. ಇದಕ್ಕೆ ಸಾವಿರ ದಳಗಳು. ಈಶಾನ್ಯದ ಕುಬೇರ ಸರೋವರದಲ್ಲಿ ಇವು ಸಾವಿರಾರು. ಹೂವಿನ ಕಂಪಿಗೆ ಮರುಳಾದ ಸ್ತ್ರೀ ಅದನ್ನು ಬಯಸದೆ ಇರುತ್ತಾಳೆಯೆ ?

ಪಾಂಡವರು ಅರಣ್ಯವಾಸದ ಕಾಲದಲ್ಲಿ ನರನಾರಾಯಣ ಪ್ರದೇಶ ಎನ್ನಿಸಿದ ಬದರಿಕಾಶ್ರಮದಲ್ಲಿದ್ದರು. ಒಮ್ಮೆ ಅವರೆಲ್ಲ ಇದ್ದಲ್ಲಿಗೆ ಗಾಳಿಗೆ ಹಾರಿಕೊಂಡು ಬಂದ ಒಂದು ಸೌಗಂಧಿಕ ಪುಷ್ಪ ದ್ರೌಪದಿಯ ಹರ್ಷಕ್ಕೆ ಕಾರಣವಾಯಿತು. ಅವಳಿಗೆ ಇಂಥದೊಂದು ಹೊಸ ಹೂವನ್ನು ಧರ್ಮರಾಯನಿಗೆ ಅರ್ಪಿಸುವ ಆಶೆ. ಜೊತೆಗೆ ಇನ್ನು ಕೆಲವನ್ನು ತಂದರೆ ಕಾಮ್ಯಕವನಕ್ಕೆ ಕೊಂಡೊಯ್ಯುವ ಆಸೆ! ಅದರ ಸುಕುಮಾರತೆ ಸುವಾಸನೆ ಮತ್ತು ಬಣ್ಣಗಳನ್ನು ಹೊಗಳಿ ಆ ಹೂಗಳನ್ನು ತಂದುಕೊಡುವಂತೆ ಭೀಮನನ್ನು ಪ್ರಾರ್ಥಿಸಿಕೊಂಡಳು. ಮೊದಲೇ ಸಾಹಸಪ್ರಿಯನಾದ ಭೀಮನು ವ್ಯಾಸರು ಹೇಳುವಂತೆ 'ದ್ರೌಪದೀ ವಾಕ್ಯಪಾಥೇಯ' (ದ್ರೌಪದಿಯ ಮಾತುಗಳೇ ಅವನಿಗೆ ದಾರಿಯ ಬುತ್ತಿಯಂತೆ ಹಿತ!). ಕೇಳಬೇಕೆ ? ಅವನು ಈಶಾನ್ಯದಿಕ್ಕಿಗೆ ಧಾವಿಸಿದ. ಬಾಣಖಡ್ಗಗದೆಗಳಿಂದ ಸಂಭ್ರಮಿಸಿ ಪೌಂಡ್ರಶಂಖವನ್ನು ಊದಿ ಗರ್ಜನೆ ಮಾಡುತ್ತ ಹೊರಟ. ಪಕ್ಷಿ ಪ್ರಾಣಿಗಳೆಲ್ಲ ಹೆದರಿ ಕಿರುಚಿಕೊಂಡವು. ರೂಪ, ವೇಷಭೂಷಣಗಳನ್ನು ಕಂಡು ಕಿನ್ನರಕಾಂತೆಯರು ಅವನ ಚಾರುಸುಂದರ ಸರ್ವಾಂಗವನ್ನು ಮೆಚ್ಚಿಕೊಂಡರು.

ಮುಂದೆ ಸರೋವರದ ದಾರಿಯಲ್ಲಿ ಅವನಿಗೆ ರಾಮಾಯಣ ಕಾಲದ ಹನುಮಂತನ ದರ್ಶನವೂ ಆಗುತ್ತದೆ. ಇದು ಸೌಗಂಧಿಕಾ ಪ್ರಸಂಗಕ್ಕೆ ಉಪಪ್ರಸಂಗ ಎಂದು ಹೇಳಬಹುದು. ಭೀಮ-ಹನುಮ ಇಬ್ಬರೂ ವಾಯುಪುತ್ರರೇ! ಮಹಾಬಲಶಾಲಿಗಳೇ! ಆದರೆ ಮಹಾಬಲಶಾಲಿಯೆಂದು ಭಾವಿಸಿಕೊಂಡಿದ್ದ ಭೀಮನಿಗೆ ಹಳೆಯ ಯುಗದ ವೃದ್ಧನೊಬ್ಬನ ಬಾಲವನ್ನು ಅಲುಗಾಡಿಸಲು ಆಗಲಿಲ್ಲ. ಆದ್ದರಿಂದ ಇದು ಭೀಮಗರ್ವಬಂಧದ ಉಪಪ್ರಸಂಗವೂ ಆಗಿದೆ. ಶರಣಾಗತನಾದ ಭೀಮನಿಗೆ ಹನುಮಂತನು ಭೀಮನ ಕೋರಿಕೆಯಂತೆ ತಾನು ಲಂಕೆಯ ಸಮುದ್ರವನ್ನು ಹಾರುವಾಗ ಧರಿಸಿದ್ದ ದೈತ್ಯಗಾತ್ರವನ್ನು ತೋರಿಸುತ್ತಾನೆ. ಭೀಮ ನಡುಗುತ್ತಾನೆ. ಕೊನೆಗೆ ಹನುಮನು ಅರ್ಜುನನ ರಥದಲ್ಲಿ ವಾಸಿಸುವುದಾಗಿಯೂ ಭೀಮನು ಯುದ್ಧಭೂಮಿಯಲ್ಲಿ ಗರ್ಜಿಸಿದಾಗೆಲ್ಲ ತನ್ನ ಗರ್ಜನೆಯನ್ನು ಸೇರಿಸುವುದಾಗಿಯೂ ಹೇಳುತ್ತಾನೆ.

ಕದಳೀವನವನ್ನು ಬಿಟ್ಟು ಭೀಮನು ಕುಬೇರನ ಸೌಗಂಧಿಕವನಕ್ಕೆ ಬರುತ್ತಾನೆ. ಆ ಕುಬೇರನ ಕೊಳವನ್ನು ಕಾಯುತ್ತಿದ್ದವನು ಕ್ರೋಧವಶ ಎಂಬ ರಾಕ್ಷಸ. ಅವನಿಗೆ ಒಂದು ಲಕ್ಷ ಸಹಾಯಕರಿದ್ದರು. ಯುದ್ಧದಲ್ಲಿ ಭೀಮನು ಅವರನ್ನೆಲ್ಲ ಸೋಲಿಸಿ ನೀರಿಗಿಳಿದನು.

ಈ ಕಥೆಗೆ ಇನ್ನೊಂದು ಮರಿ ಪ್ರಸಂಗವೂ ಸೇರಿದೆ. ಇತ್ತ ಧರ್ಮರಾಯಾದಿಗಳು

ಭೀಮ ಬರಲಿಲ್ಲವೆಂದು ಚಿಂತಾಕ್ರಾಂತರಾಗಿ ಕೊನೆಗೆ ಘಟೋತ್ಕಚನ ಸಹಾಯದಿಂದ ಕೊಳದ ಬಳಿಗೇ ಬರುತ್ತಾರೆ. ಅಲ್ಲಿಂದ ಯಕ್ಷ ಕುಬೇರನ ಊರಿಗೆ ಹೋಗುವ ಬಯಕೆ ಧರ್ಮರಾಯನಿಗಿತ್ತು. ಆಕಾಶವಾಣಿಯ ನಿರ್ದೇಶನದಂತೆ ನರನಾರಾಯಣಾಶ್ರಮವೆನಿಸಿದ್ದ ಬದರಿಕಾಶ್ರಮಕ್ಕೇ ಎಲ್ಲರೂ ಹಿಂದಿರುಗುತ್ತಾರೆ.

ವಯಸ್ಸಾದವರು ಮಲಗಿರುವಾಗ ಗಟ್ಟಿಯಾಗಿ ಕಿರುಚಿ ಅವರ ನಿದ್ರಾಹರಣ ಮಾಡಬಾರದು ಎಂಬ ಪ್ರಾಥಮಿಕ ವಿವೇಕವೂ ಭೀಮನಿಗೆ ಇರಲಿಲ್ಲ ಎಂದು ಹನುಮಂತನು ಭೀಮನನ್ನು ಟೀಕಿಸಿರುವುದು ಪರಿಸರವಾದಿಗಳಿಗೆ ತುಂಬ ಹಿತವೆನ್ನಿಸುವ ಒಂದು ಪ್ರಸಂಗವಾಗಿದೆ. ಪಂಪನ ಆದಿಪುರಾಣದಲ್ಲಿ ಭರತನಿಗೆ ಸೋರ್ದುದು ಕೊಳಗೊಂಡ ಗರ್ವರಸಂ (ಮಡುಗಟ್ಟಿ ನಿಂತಿದ್ದ ಗರ್ವರಸವೆಲ್ಲ ಸೋರಿ ಹೋಯಿತು) ಎನ್ನಿಸಿದ ಹಾಗೆ ಭೀಮನಿಗೆ ಹನುಮದರ್ಶನದಿಂದ ಅಹಂಕಾರ ತಗ್ಗಿತು.

*   *   *   *

ಸಾರಣ

ಮಹಾಭಾರತ ಭಾಗವತ ಹಾಗೂ ಪುರಾಣಗಳಲ್ಲಿ ಈತನ ವ್ಯಕ್ತಿತ್ವ ಹಂಚಿಹೋಗಿದೆ. ಸಾರಣನು ವಸುದೇವನ ಮಗ. ವಸುದೇವನ ತಂದೆ ಶೂರಸೇನ, ಶೂರಸೇನನ ತಂದೆ ತಾಯಿಯರು ದೇವಮೀಢ ಮತ್ತು ಮಾರಿಷ. ಹೀಗೆ ಈ ಯದುವಂಶದ ಚರಿತ್ರೆಯನ್ನು ಗುರುತಿಸಬಹುದು.

ವಸುದೇವನು ಶ್ರೀಕೃಷ್ಣನ ತಂದೆ ಎಂಬುದು ಲೋಕವಿದಿತವಾದ ಸಂಗತಿಯಾಗಿದೆ. ವಸುದೇವ-ದೇವಕಿಯರ ಮಗ ಶ್ರೀಕೃಷ್ಣ. ವಸುದೇವನಿಗೆ ದೇವಕಿಯಲ್ಲದೇ ದೇವಕನ ಆರು ಹೆಣ್ಣು ಮಕ್ಕಳೂ ಪತ್ನಿಯರಾಗಿದ್ದರು. ಈ ಪತ್ನಿಯರೇ ಅಲ್ಲದೆ ಮದಿರೆ, ಪೌರವಿ ರೋಹಿಣಿ ಕೌಸಲ್ಯ ಮೊದಲಾದ ಪತ್ನಿಯರೂ ಇದ್ದರು. ಕುಂತಿ ಇವನ ಸೋದರಿ. ರೋಹಿಣಿಯಿಂದ ಬಲರಾಮ, ಗದ, ದುರ್ಮದ, ವಿಪುಲ ಧ್ರುವ ಮೊದಲಾದ ಮಕ್ಕಳಲ್ಲದೆ ದೇವಕಿಯಿಂದ ಸಾರಣ ಎಂಬ ಮಗನೂ ಇದ್ದ. ಪೌರವಿಯಿಂದ ಸುಭದ್ರೆ ಹುಟ್ಟಿದಳು. ಮದಿರೆಯಿಂದ ನಂದ, ಉಪನಂದರು. ಹೀಗೆ ವಸುದೇವ ಅಸಂಖ್ಯ ಪತ್ನಿಯರನ್ನು ಹೊಂದಿದ್ದ. ಅವನ ಅಸಂಖ್ಯಪುತ್ರರಲ್ಲಿ ಸಾರಣನೂ ಒಬ್ಬ.

ಈ ಸಾರಣನು ಸುಭದ್ರೆ ಅರ್ಜುನರ ಮದುವೆಯಲ್ಲಿ ಪ್ರಮುಖ ಪಾತ್ರ ವಹಿಸಿದ್ದ. ಯದುಗಳು ಕೊಟ್ಟ ವಧು ಕಾಣಿಕೆಯನ್ನು ಹಸ್ತಿನಾಪುರಕ್ಕೆ ತೆಗೆದುಕೊಂಡುಹೋಗಿ ಒಪ್ಪಿಸಿ ಬಂದವನು ಸಾರಣ (ಆದಿಪರ್ವ 220-32) ಧರ್ಮರಾಯನು ನಡೆಸಿದ ರಾಜಸೂಯಯಾಗದಲ್ಲಿ ಭಾಗಿಯಾಗಿದ್ದ. ಗೆಳೆಯರೊಂದಿಗೆ ವಿಶ್ವಾಮಿತ್ರನನ್ನು ವಂಚಿಸಲು ಹೋಗಿ ಶಾಪಕ್ಕೆ ಗುರಿಯಾದನೆಂದೂ ಮಹಾಭಾರತದ ಹದಿನಾರನೆಯ ಪರ್ವದಲ್ಲಿ ಹೇಳಲಾಗಿದೆ. ಸಾಂಬನಿಗೆ ಗರ್ಭಿಣಿ ಹೆಣ್ಣಿನ ವೇಷ ತೊಡಿಸಿ ಎಂಥ ಮಗು ಹುಟ್ಟುತ್ತದೆಂದು ಕೀಟಲೆಗೆ ಕೇಳಿ ಶಾಪಕ್ಕೆ ಗುರಿಯಾಗುವಂತೆ ಮಾಡಿದನೆಂದು ಮೌಸಲಪರ್ವದ ಮೊದಲ ಅಧ್ಯಾಯದಲ್ಲಿ ಹೇಳಲಾಗಿದೆ. ರಾಜಸೂಯಯಾಗದಿಂದ ಹಿಂದಿರುಗಿ ಬಂದ ಮೇಲೆ ಶ್ರೀಕೃಷ್ಣ ಸೌಭರಾಜನಾದ ಸಾಲ್ವನ ಮೇಲೆ ದಂಡೆತ್ತಿಹೋದಾಗ ಸಾರಣನು ಶ್ರೀಕೃಷ್ಣನ ಸಹಾಯಕ್ಕೆ ನಿಂತಿದ್ದನೆಂದು ಹೇಳಲಾಗಿದೆ. ಯುಧಿಷ್ಠಿರನು ನಡೆಸಿದ ಅಶ್ವಮೇಧಯಾಗದಲ್ಲಿ ಈತ ಕೃಷ್ಣನೊಂದಿಗೆ ಭಾಗವಹಿಸಿದ್ದನೆಂದು ಅಶ್ವಮೇಧ ಪರ್ವ ಹೇಳುತ್ತದೆ. ಮಹಾಭಾರತ ಯುದ್ಧದಲ್ಲಿ ಈತನು ಭಾಗವಹಿಸಿದಂತೆ ಕಂಡುಬರುವುದಿಲ್ಲ.

ಇತರ ಯಾದವರಂತೆ ಸಾರಣನ ಸಾವು ಕೂಡ ಶಾಪದಿಂದಲೇ ಘಟಿಸಿದೆ. ದ್ವಾರಕೆಯ ಸಮೀಪದ ಪಿಂಡಾರಕ ಕ್ಷೇತ್ರದಿಂದ ಕಶ್ಯಪ ಕಣ್ವ ದುರ್ವಾಸ ನಾರದ ಮೊದಲಾದ ತಪೋಧನರು ಬಂದರು. ಅಲ್ಲಿ ವಿಹಾರಪರರಾಗಿದ್ದ ಸಾರಣ, ಸಾಂಬ,

ಗದ ಮೊದಲಾದ ಯದುವೀರರು ಚೇಷ್ಟೆ ಮಾಡಿದುದುದನ್ನು ಆಗಲೇ ಹೇಳಲಾಗಿದೆ. ಕುಪಿತರಾದ ಋಷಿಗಳು "ಬಲರಾಮ-ಶ್ರೀಕೃಷ್ಣರನ್ನುಳಿದು ನೀವೆಲ್ಲ ಒನಕೆಯಿಂದಲೇ ಕಡಿದಾಡಿ ಸಾಯುವಿರಿ" ಎಂದು ಶಾಪವಿತ್ತರು. ಹೀಗೆ ಅನವಶ್ಯಕವಾಗಿ ಶಾಪವನ್ನು ತಂದುಕೊಂಡು ಹೊಡೆದಾಡಿ ಸತ್ತವರ ಪೈಕಿ ಸಾರಣನೂ ಒಬ್ಬನೆಂದು ಹೇಳಬೇಕಾಗಿದೆ. ವಸುದೇವನ ಮಕ್ಕಳಾದ ಶ್ರೀಕೃಷ್ಣ ಮತ್ತು ಬಲರಾಮರು ಯದುವಂಶದ ಕೀರ್ತಿಯನ್ನು ಎತ್ತಿಹಿಡಿದರೆ ಅವರ ತಮ್ಮಂದಿರು ಮತ್ತು ಮಕ್ಕಳು ಆ ಕೀರ್ತಿಗೆ ಮಸಿ ಬಳಿಯುವ ಕಾರ್ಯವನ್ನು ಮಾಡಿರುವುದು ದುರಂತದ ಸಂಗತಿಯಾಗಿದೆ.

* * * *

ಮರುತ್ತರಾಯ

ಮಹಾಭಾರತದ ದ್ರೋಣ ಪರ್ವದ ಅಭಿಮನ್ಯು ವಧಪರ್ವದಲ್ಲಿ ಹಾಗೂ ಅಶ್ವಮೇಧ ಪರ್ವದಲ್ಲಿ ಮರುತ್ತರಾಯನ ಯಜ್ಞದ ಪ್ರಸ್ತಾವವಿದೆ. ಮರುತ್ತರಾಯನು



ಪ್ರಸಿದ್ಧ ದೊರೆ ಕರಂಧಮನ ಮೊಮ್ಮಗ, ಅವಿಕ್ಷಿತನ ಮಗ. ಈತ ವೇದಾಧ್ಯಯನ ಮಾಡಿದವ. ಸತ್ಕರ್ಮಾಚರಣೆಯುವ, ದಯಾಪರ, ದಂಡನೀತಿ ವಿಶ್ರುತಮತಿ ಹಾಗೂ

ದಾನಶೀಲ ಎಂದು ವ್ಯಾಸರು ಹೊಗಳಿದ್ದಾರೆ. ಮರುತ್ತರಾಯನು ಒಂದು ಯಾಗಕ್ಕೆ ಇಂದ್ರನನ್ನು ಕರೆಸದೆ ಬೃಹಸ್ಪತಿಯನ್ನು ಉಪದ್ರಷ್ಟನಾಗುವಂತೆ ಆಹ್ವಾನಿಸಿದ. ಮನುಷ್ಯರ ಯಾಗಕ್ಕೆ ತಾನು ಬರಲಾರೆ ಎಂದು ಬೃಹಸ್ಪತಿ ತಿರಸ್ಕರಿಸಿದಾಗ ಮರುತ್ತನು ಬೃಹಸ್ಪತಿಯ ತಮ್ಮ ಸಂವರ್ತನ ಬಳಿಗೆ ಓಡಿದ. ಅಣ್ಣನಿಂದ ಭಂಗಿತನಾಗಿ ಮನೆ ಬಿಟ್ಟು ಬಂದಿದ್ದ ಸಂವರ್ತನನ್ನು ಒಲಿಸಿಕೊಳ್ಳಲು ಕಾಶಿಗೆ ಹೋಗಿ ತುಂಬ ಪಟ್ಟು ಹಿಡಿದು ಒಪ್ಪಿಸಿದ. ಸಂವರ್ತನು ಮಹಾಯಜ್ಞಕ್ಕೆ ಬೇಕಾದ ಧನಸಂಪತ್ತಿಗಾಗಿ ಮರುತ್ತರಾಯನನ್ನು ಹಿಮಾಲಯದ ಉತ್ತರದಲ್ಲಿದ್ದ 'ಮಂಜುವಂತ' ಎಂಬ ಶಿವನ ಪರ್ವತ ನಿವಾಸಕ್ಕೆ ಕರೆದೊಯ್ದು. ಮರುತ್ತನು ಶಿವನನ್ನು ಪೂಜಿಸಿ ನಾನಾ ಬಗೆಯ ಯಜ್ಞಗಳನ್ನು ಮಾಡಲು ಸಹಾಯ ಮಾಡಬೇಕೆಂದು ಬೇಡಿದ. ಶಿವನು ಹಿಮಾಲಯದಲ್ಲಿನ ಒಂದು ಹಿರಣ್ಮಯ ಶಿಖರವನ್ನು ದಾನವಾಗಿ ಕೊಟ್ಟ. ಆ ಸ್ವರ್ಣ ಸಂಪತ್ತಿನ ಸಹಾಯದಿಂದ ಮರುತ್ತರಾಯನು ಯಾಗ ಕಾರ್ಯಕ್ಕೆ ಮೊದಲಿಟ್ಟ. ಇದು ಬೃಹಸ್ಪತಿಯನ್ನು ಕೆರಳಿಸಿತು. ಅವನು ಇಂದ್ರನ ಬಳಿಗೋಡಿದ. ಇಂದ್ರನು ಅಗ್ನಿಯನ್ನೊಮ್ಮೆ ಗಂಧರ್ವರ ಧೃತರಾಷ್ಟ್ರನನ್ನೊಮ್ಮೆ ಸಂಧಾನಕ್ಕೆ ಕಳಿಸಿದ. ಆದರೆ ಈ ಘಟ್ಟದಲ್ಲಿ ಮರುತ್ತರಾಯನು ಸಂವರ್ತನನ್ನು ಬಿಟ್ಟು ಬೃಹಸ್ಪತಿಯನ್ನು ಯಾಜಕನನ್ನಾಗಿ ಮಾಡಲು ಒಪ್ಪಲಿಲ್ಲ. ಆಗ ಕೆರಳಿದ ಇಂದ್ರನೇ ವಜ್ರಾಯುಧವನ್ನು ಪ್ರಯೋಗಿಸಿ ಇವರನ್ನು ಮಣಿಸಲು ಪ್ರಯತ್ನಿಸಿದ.

ಆದರೆ ಮಹಾ ತಪಸ್ವಿಯಾಗಿದ್ದ ಸಂವರ್ತನು 'ಸಂಸ್ತಂಭವಿದ್ಯೆ'ಯಿಂದ ಇಂದ್ರನನ್ನು ಸೋಲಿಸಿ ಗೌರವದಿಂದ ಇಂದ್ರಾದಿಗಳನ್ನೆಲ್ಲ ಹವಿಸ್ಸಿನ ಸ್ವೀಕಾರಕ್ಕೆ ಆಹ್ವಾನಿಸಿದ. ದೇವತೆಗಳೆಲ್ಲ ತಣಿದರು. ಸ್ವರ್ಣಮಯವಾದ ಯಜ್ಞ ಶಾಲೆಯಲ್ಲಿ ವೈಭವದಿಂದ ಯಾಗ ಮಾಡಿದ ಸಂವರ್ತನು ಬ್ರಾಹ್ಮಣರಿಗೆ ಅಪಾರ ಕನಕರಾಶಿಯನ್ನು ದಾನವಾಗಿ ನೀಡಿದ. ಬ್ರಾಹ್ಮಣರು ತಾವು ಹೊರುವಷ್ಟು ಹೊತ್ತು, ಹೊರಿಸಿಕೊಂಡು ಹೋಗುವಷ್ಟು ಹೊರಿಸಿಕೊಂಡು ಹೋದರೂ ಇನ್ನೂ ಅಗಾಧ ಕನಕರಾಶಿ ಮಿಕ್ಕಿತ್ತು. ಅವುಗಳನ್ನೆಲ್ಲ ಪರ್ವತ ಪ್ರದೇಶದಲ್ಲೇ ಬಿಟ್ಟು ಇದು ಸಿಕ್ಕಿದವರಿಗೇ ಸೇರತಕ್ಕದ್ದು ಎಂದು ಹೇಳಿ ತಮ್ಮ ತಮ್ಮ ಊರುಗಳಿಗೆ ಹೊರಟು ಹೋದರು. ತನ್ನ ಕೌರವ ಸೋದರರನ್ನೂ ಗುರುಗಳನ್ನೂ ಬಾಂಧವರನ್ನು ಕೊಂದುದಕ್ಕಾಗಿ ಧರ್ಮರಾಯ ಚಿಂತಿಸುತ್ತಿದ್ದಾಗ ವೇದವ್ಯಾಸರು ಬಂದು ಅಶ್ವಮೇಧ ಯಾಗ ಮಾಡಿದರೆ ಪಾಪ ನಿವಾರಣೆಯಾಗುತ್ತದೆ ಎನ್ನುತ್ತಾರೆ. ಆದರೆ ಯುದ್ಧಾನಂತರ ದೇಶದ ಆರ್ಥಿಕ ಸ್ಥಿತಿ ಹದಗೆಟ್ಟಿರುವುದರಿಂದ ಹೆಚ್ಚಿನ ತೆರಿಗೆ ಹಾಕುವಂತಿಲ್ಲ. ಹೀಗಿರುವಾಗ ಅಶ್ವಮೇಧ ಯಾಗಕ್ಕೆ ಹಣವೆಲ್ಲಿಂದ ತರಲಿ ಎಂದು ಧರ್ಮರಾಯ ಚಿಂತಿಸುತ್ತಿದ್ದಾಗ ವೇದವ್ಯಾಸರು ಈ ಮರುತ್ತನ ಕಥೆ ಹೇಳಿ ಬ್ರಾಹ್ಮಣರು ಪರ್ವತ ಪ್ರಾಂತದಲ್ಲಿ ಬಿಟ್ಟು ಹೋಗಿರುವ ಚಿನ್ನವನ್ನು ತರಿಸುವಂತೆ ಸಲಹೆ ನೀಡುತ್ತಾರೆ.

* * * *

ಸಾರಸ್ವತ

ಬ್ರಹ್ಮಪುರಾಣದಲ್ಲಿ ಮತ್ತು ಮಹಾಭಾರತದ ಶಲ್ಯಪರ್ವದಲ್ಲಿ ಸಾರಸ್ವತನ ಸಂಗತಿ ಉಲ್ಲೇಖಗೊಂಡಿದೆ. ಈತನ ಹೆಸರಿನಲ್ಲಿ ಒಂದು ತೀರ್ಥವೂ ಇದ್ದು ಅದು ಸಾರಸ್ವತೀತೀರ್ಥ ಎಂದು ಪ್ರಸಿದ್ಧವಾಗಿದೆ.

ಸಾರಸ್ವತನು ಧಧೀಚ-ಸರಸ್ವತಿಯರ ಪುತ್ರನೆಂದು ಹೇಳಲಾಗಿದೆ. (ತೀರ್ಥಯಾತ್ರಾ ಪರ್ವ). ಈತನ ಜನನಕ್ಕೆ ಕಾರಣವಾದ ಒಂದು ವಿಶೇಷ ಘಟನೆಯಿದೆ. ದೇವೇಂದ್ರನಿಗೆ ಸದಾ ಮಹಾಸಾಧಕರಾದ ಮುನಿಗಳ ಮೇಲೆ ಕಣ್ಣು. ಏಕೆಂದರೆ ಅವರು ನೂರು ಯಾಗಗಳನ್ನು ಮಾಡಿ ತಮ್ಮ ಸ್ಥಾನವನ್ನು ಕಿತ್ತುಕೊಳ್ಳುವರೆಂಬ ಹೆದರಿಕೆ. ಅದಕ್ಕೆ ಅವನು ಅಂಥ ಪ್ರತಿಭಾವಂತರನ್ನು ಬಗ್ಗುಬಡಿಯುವ ಷಡ್ಯಂತ್ರವನ್ನು ರೂಪಿಸುತ್ತಾನೆ. ಇಲ್ಲಿ ದೇವೇಂದ್ರನು ದಧೀಚನ ಶಕ್ತಿಗುಂದಿಸಲು ಎಷ್ಟೆಷ್ಟೋ ಪ್ರಲೋಭನೆಗಳನ್ನು ಒಡ್ಡಿದ. ಆದರೆ ದಧೀಚ ಯಾವುದರಿಂದಲೂ ವಿಚಲಿತನಾಗಲಿಲ್ಲ. ಕೊನೆಯ ಮಹಾಸ್ತ್ರವಾಗಿ 'ಅಲಂಬುಷ' ಎಂಬ ಸುಂದರ ಅಪ್ಸರೆಯನ್ನು ಅವನೆಡೆಗೆ ಕಳಿಸಿಕೊಟ್ಟ. ಈ ತಂತ್ರ ಫಲಿಸಿತು. ಸರಸ್ವತೀ ನದಿಯ ತೀರದಲ್ಲಿದ್ದ ದಧೀಚನು ಅಲಂಬುಷೆಯನ್ನು ನೋಡಿದ ಕೂಡಲೇ ಮನಸ್ಸಿನ ನಿಗ್ರಹಶಕ್ತಿಯನ್ನು ಕಳೆದುಕೊಂಡ. ಕೂಡಲೇ ಅವನ ವೀರ್ಯಪತನವಾಗಿ ಸರಸ್ವತೀ ನದಿಯಲ್ಲಿ ಬಿದ್ದಿತು. ಆಗ ಸರಸ್ವತೀನದಿಯು ಆ ವೀರ್ಯಜಲವನ್ನು ಪಾನಮಾಡಿ ತನ್ನ ಗರ್ಭದಲ್ಲಿ ಧರಿಸಿದಳು. ಕಾಲಕ್ರಮದಲ್ಲಿ ಒಂದು ಮಗುವನ್ನು ಹೆತ್ತು ಎಲ್ಲರ ಗಮನಕ್ಕೆ ತರುವ ಉದ್ದೇಶದಿಂದ ಋಷಿಗಳ ಬಳಿಗೆ ಬಂದಳು. ಅಲ್ಲಿದ್ದ ಎಲ್ಲ ವಿಶ್ವೇದೇವರುಗಳೂ ಗಂಧರ್ವರೂ ಅಪ್ಸರೆಯರೂ ಈ ಮಗುವನ್ನು ನೋಡಿ ಸಂತೋಷಗೊಂಡರು. ಅದಕ್ಕೆ ಸಾರಸ್ವತ ಎಂದು ಹೆಸರಿಟ್ಟರು. ಇಂಥ ತೇಜೋವಂತ ಪ್ರತಿಭಾಶಾಲಿ ಮಗುವನ್ನು ಹೆತ್ತ ತಾಯಿ ಸರಸ್ವತಿಯನ್ನು ಕೊಂಡಾಡಿದರು. ಸರಸ್ವತೀ ನದಿಯು ಉಳಿದೆಲ್ಲ ನದಿಗಳನ್ನು ಮೀರಿಸುವ ಮಹಾಪವಿತ್ರ ನದಿಯಾಗಲಿ ಎಂದು ಆಶೀರ್ವದಿಸಿದರು. ಮುಂದೆ ಭರತಖಂಡಕ್ಕೆ ಈತನಿಂದ ಆಗಲಿರುವ ಮಹದುಪಕಾರವನ್ನು ಮುಕ್ತಕಂಠದಿಂದ ಹೊಗಳಿದರು.

ತಂದೆ ದಧೀಚ ಮತ್ತು ಮಗ ಸಾರಸ್ವತ ಇಬ್ಬರೂ ಜನರು ಕೃತಜ್ಞತೆಯಿಂದ ನೆನೆಯುವಂಥ ಸೇವೆ ಮಾಡಿದರು. ದಧೀಚನು ತನ್ನ ದೇಹವನ್ನೇ ದೇವತೆಗಳಿಗೆ ಅರ್ಪಿಸಿ ಅದರ ಮೂಳೆಗಳಿಂದ ಖಡ್ಗ, ಈಟಿ, ಭಲ್ಲೆ, ಗದೆ ಮೊದಲಾದ ಬಲಿಷ್ಠ ಆಯುಧಗಳನ್ನು ಮಾಡಿಕೊಳ್ಳಲು ಸೂಚಿಸಿದನು. ಈ ಆಯುಧಗಳಿಂದಾಗಿ ದೇವತೆಗಳಿಗೆ ರಾಕ್ಷಸಸಮೂಹವನ್ನು ಯುದ್ಧರಂಗದಲ್ಲಿ ಗೆಲ್ಲಲು ಸಾಧ್ಯವಾಯಿತು. ಇಂದ್ರನೊಬ್ಬನೇ ಇಪ್ಪತ್ತೊಂಬತ್ತು ಬಲಿಷ್ಠ ರಾಕ್ಷಸರನ್ನು ಕೊಂದನೆಂದು ಭಾರತ ಹೇಳುತ್ತದೆ.

ತಂದೆ ದಧೀಚನಿಂದ ಈ ಉಪಕಾರವಾದರೆ ಮಗನಿಂದ ಭಾರತೀಯ ಸಂಸ್ಕೃತಿ ಪರಂಪರೆಯನ್ನು ಉಳಿಸಿದ ಘಟನೆ ನಡೆಯಿತು. ಒಮ್ಮೆ ಹನ್ನೆರಡು ವರ್ಷಗಳ

ಮಹಾಕ್ಷಾಮ ತಲೆದೋರಿತು. ಜನ ಕಂಗಾಲಾದರು. ಋಷಿಗಳೆಲ್ಲ ಜಪತಪಾದಿಗಳನ್ನು ಬಿಟ್ಟು ಓಡಿಹೋದರು. ವೇದಮಂತ್ರಗಳನ್ನಂತೂ ಕೇಳುವವರೇ ಇರಲಿಲ್ಲ. ಇಂಥ ವಿಷಮಸ್ಥಿತಿಯಲ್ಲಿ ಸಾರಸ್ವತನು ವಿಪ್ರರನ್ನು ಅಲ್ಲೇ ಉಳಿಸಿಕೊಂಡು ಅವರಿಗೆ ಆಹಾರ ವ್ಯವಸ್ಥೆಯನ್ನು ಮಾಡುವುದರ ಜೊತೆಗೆ ಅವರೆಲ್ಲ ಮರೆತಿದ್ದ ವೇದಮಂತ್ರಾಭ್ಯಾಸವನ್ನು ಮತ್ತೆ ಆರಂಭ ಮಾಡಿಸಿ ವೈದಿಕ ಸಂಸ್ಕೃತಿಯ ಪುನರುಜ್ಜೀವನಕ್ಕೆ ಕಾರಣನಾದ. ಆಗ ಸಾರಸ್ವತ ಇನ್ನೂ ಬಾಲಕ. ಅವನೂ ಅವನ ತಾಯಿಯೂ ಸೇರಿ ಆಹಾರವನ್ನು ಒದಗಿಸಿದಾಗ ಅದರಿಂದ ಪ್ರಯೋಜನ ಹೊಂದಿದ ಅರವತ್ತು ಸಾವಿರ ಜನರು ಮತ್ತೆ ವೈದಿಕ ಧರ್ಮಪ್ರಸಾರಕ್ಕೆ ನೆರವಾದರು.

* * * *

ಸೈಂಧವ (ಜಯದ್ರಥ)

ಭಾರಿಯ ಆಕಾರವುಳ್ಳ ಶಕ್ತಿಶಾಲಿಯನ್ನು ಕುರಿತು ಹೇಳುವಾಗ ಸೈಂಧವ ಎಂಬ ಹೆಸರನ್ನು ಈಗಲೂ ಬಳಸುತ್ತಾರೆ. ದೈತ್ಯಶಕ್ತಿಯುಳ್ಳ ಈ ಮಹಾವೀರನು ಸಿಂಧುದೇಶದ ದೊರೆ. ಇವನಿಗೆ ಜಯದ್ರಥ ಎಂಬ ಹೆಸರೂ ಇದೆ. ಧೃತರಾಷ್ಟ್ರನ ಮಗಳಾದ ದುಶ್ಶಳೆಯನ್ನು ಮದುವೆಯಾಗಿ ಕೌರವನೊಂದಿಗೆ ನಂಟನ್ನೂ, ದುಷ್ಟಬುದ್ಧಿಯನ್ನೂ ಹಂಚಿಕೊಂಡಿದ್ದವನು. ಕೌರವನ ಹಿತಚಿಂತಕ. ದುಷ್ಟಕೂಟಕ್ಕೆ ಇವನೂ ಒಬ್ಬ ಸದಸ್ಯನಾಗಿದ್ದ.

ವೃದ್ಧಕ್ಷತ್ರನ ಮಗನಾದ ಇಂಥ ಮಹಾವೀರ ತನ್ನ ವ್ಯಕ್ತಿತ್ವಕ್ಕೆ ಮಸಿ ಬಳಿದುಕೊಳ್ಳುವ ಕೆಲಸವನ್ನು ತಾನೇ ಮಾಡಿದ್ದಾನೆ. ತನ್ನ ಅತ್ತಿಗೆಯಾಗಿದ್ದ ದ್ರೌಪದಿಯನ್ನು ಬಯಸಿದ್ದು, ಬಲಾತ್ಕಾರದಿಂದ ಹೊತ್ತುಕೊಂಡು ಹೋದದ್ದು ಇದಕ್ಕೆ ಉದಾಹರಣೆ. ಅರಣ್ಯಪರ್ವದಲ್ಲಿ ಪಾಂಡವರು ಸಿಂಧುಸೀಮೆಯಲ್ಲಿ ಇದ್ದಾಗ ಈ ಘಟನೆ ನಡೆಯುತ್ತದೆ. ಪಾಂಡವರು ಇಲ್ಲದ ಸಮಯ ನೋಡಿಕೊಂಡು ಸೈಂಧವನು ತನ್ನ ಗೆಳೆಯಕೋಟಿಕಾಸ್ಯನನ್ನು ದ್ರೌಪದಿಯ ಬಳಿಗೆ ಭಾರಿಯ ಕಾಣಿಕೆಯ ಸಮೇತ ಕಳಿಸಿ ತನ್ನ ಪ್ರೇಮ ಸಂದೇಶವನ್ನು ಹೇಳಿ ಕಳುಹಿಸುತ್ತಾನೆ. ಒಪ್ಪದ ದ್ರೌಪದಿಯನ್ನು ಈ ಕಾಮುಕನು ಅಪಹರಿಸಿ ರಥದಲ್ಲಿ ಕುಳ್ಳಿರಿಸಿಕೊಂಡು ತನ್ನ ರಾಜ್ಯದ ಕಡೆ ಓಡುತ್ತಾನೆ. ಜನರಿಂದ ಸುದ್ದಿ ತಿಳಿದ ಪಾಂಡವರು ಸೈಂಧವನನ್ನು ಅಟ್ಟಿಸಿಕೊಂಡು ಹೋಗಿ ಸೇನೆಯನ್ನೆಲ್ಲ ಸೋಲಿಸಿ ಜಯದ್ರಥನನ್ನು ಸೆರೆಹಿಡಿಯುತ್ತಾರೆ ಹಿಂಗಟ್ಟು ಮುಂಗಟ್ಟು ಕಟ್ಟಿತಂದ ಸೈಂಧವನಿಗೆ ಏನು ಶಿಕ್ಷೆ ಕೊಡೋಣ ಎಂದು ಧರ್ಮರಾಯನನ್ನು ಕೇಳುತ್ತಾರೆ. ಅವನ ಸಲಹೆಯಂತೆ ಸೈಂಧವನನ್ನು ಕೊಲ್ಲದೆ ಭೀಮನು ಸೈಂಧವನ ತಲೆ ಮೀಸೆಗಳನ್ನು ಬೋಳಿಸಿ ಅವಮಾನಿಸಿ ಐದು ಕೂದಲನ್ನು ಮಾತ್ರ ಉಳಿಸಿ ಕಳಿಸುತ್ತಾನೆ. ಕ್ಷಾತ್ರ ತಾಮಸದ ಸಿಂಧುರಾಜನಿಗೆ ಇದು ನುಂಗಲಾಗದ ತುತ್ತು. ಆದುದರಿಂದ ಅವನು ಶಿವನನ್ನು ಕುರಿತು ಉಗ್ರತಪಸ್ಸು ಮಾಡಿ ಪಾಂಡವರನ್ನು ಒಂದು ದಿನದ ಮಟ್ಟಿಗಾದರೂ ಯುದ್ಧರಂಗದಲ್ಲಿ ಸೋಲಿಸುವ ವರವನ್ನು ಪಡೆಯುತ್ತಾನೆ ಮುಂದೆ ಮಹಾಭಾರತ ಯುದ್ಧದಲ್ಲಿ ಕೌರವರ ಕಡೆಯ ಮಹಾವೀರರಲ್ಲಿ ಒಬ್ಬನಾಗಿ ಮೆರೆಯುತ್ತಾನೆ. ಅಭಿಮನ್ಯುವು ಚಕ್ರವ್ಯೂಹವನ್ನು ಹೊಕ್ಕಾಗ ಪಾಂಡವರು ಯಾರೂ ಒಳಗೆ ನುಗ್ಗದಂತೆ ಅಡ್ಡಗಟ್ಟಿ ಸೋಲಿಸುವ ಶಿವಶಕ್ತಿಯನ್ನು ಮೆರೆಯುತ್ತಾನೆ. ಸಂಶಪ್ತಕರೊಡನೆ ಯುದ್ಧಕ್ಕೆ ಹೋಗಿದ್ದ ಅರ್ಜುನನು ಅಭಿಮನ್ಯುವಿನ ವಧೆಯ ವಿಷಯವನ್ನು ಕೇಳಿ ಈ ವಧೆಗೆ ಮುಖ್ಯ ಸಹಾಯಕನಾದ ಸೈಂಧವನ ತಲೆಯನ್ನು ಮರುದಿವಸ ಸೂರ್ಯಾಸ್ತವಾಗುವುದರೊಳಗೆ ತೆಗೆಯುವುದಾಗಿ ಶಪಥ ಮಾಡುತ್ತಾನೆ. ಅದನ್ನು ಕೇಳಿ ಸೈಂಧವನಿಗೆ ಧೈರ್ಯಕುಸಿದು ಅವನು ತಲೆಮರೆಸಿಕೊಂಡು ಹೋಗಲು ನಿರ್ಧರಿಸುತ್ತಾನೆ ಆಗ ಕೌರವ ದ್ರೋಣರು ಅವನಿಗೆ ಶ್ರೀರಕ್ಷೆಯಾಗುವುದಾಗಿ ಮಾತು ಕೊಡುತ್ತಾರೆ. ಆಚಾರ್ಯ ದ್ರೋಣರೇ ವ್ಯೂಹದ ಮುಂದೆ ಮುಂಗಾವಲಾಗಿ ನಿಲ್ಲುತ್ತಾರೆ. ಅಲ್ಲದೆ ಸೈಂಧವನು ಕಣ್ಣಿಗೆ ಬೀಳದಂತೆ ಕೌರವ ಪಕ್ಷದವರೆಲ್ಲ ಕಾವಲು

ನಿಲ್ಲುತ್ತಾರೆ. ಕೃಷ್ಣನು ತನ್ನ ಚಕ್ರವನ್ನು ಸೂರ್ಯನಿಗೆ ಅಡ್ಡವಾಗಿ ಹಿಡಿದು ಕತ್ತಲಾಯಿತೆಂಬ ಭ್ರಮೆಯನ್ನು ಸೃಷ್ಟಿಸುತ್ತಾನೆ. ಆಗ ಆಚೆಗೆ ಬಂದ ಸೈಂಧವನನ್ನು ಕೊಲ್ಲುವಂತೆ ಅರ್ಜುನನಿಗೆ ಹೇಳಿ ಅನಂತರ ಚಕ್ರವನ್ನು ಹಿಂತೆಗೆದುಕೊಂಡು ಇನ್ನೂ ಸೂರ್ಯಾಸ್ತವಾಗಿಲ್ಲ ಎಂಬುದನ್ನು ತೋರಿಸಿಕೊಡುತ್ತಾನೆ. (ವಾಸ್ತವವಾಗಿ ಅಂದು ಸೂರ್ಯಗ್ರಹಣವಿತ್ತು ಎಂಬ ಪ್ರತೀತಿಯೂ ಇದೆ) ಕೌರವನ ದುಷ್ಟಕೂಟದಲ್ಲಿದ್ದು ಉದ್ದಕ್ಕೂ ಪಾಂಡವ ವೈರವನ್ನು ಬೆಳೆಸಿಕೊಂಡ ಸೈಂಧವನು ಕಾಮುಕನೂ ಆಗಿರುವುದು ಆಶ್ಚರ್ಯದ ಸಂಗತಿ. ಈ ಮಹಾಛಲಗಾರನು ಉಗ್ರವಾಗಿ ತಪಸ್ಸು ಮಾಡಿ ಕೇವಲ ಒಂದುದಿನದ ಮಟ್ಟಿಗೆ ಯುದ್ಧದಲ್ಲಿ ಅರ್ಜುನನ್ನುಳಿದು ಉಳಿದ ಪಾಂಡವರನ್ನು ತಡೆಗಟ್ಟುವ ವರವನ್ನು ಈಶ್ವರನಿಂದ ಪಡೆದನೆಂದರೆ ಅದು ಅವನ ತಪಸ್ಸಿಗೆ ಅನುಪ್ರಮಾಣವಾಗಿಲ್ಲ ಎಂದು ಹೇಳಬೇಕಾಗುತ್ತದೆ.

* * * *

ಅಲಾಯುಧ

ಅಲಾಯುಧ ಒಬ್ಬ ರಾಕ್ಷಸ. ಬಕ, ಅಲಾಯುಧ ಇವರೆಲ್ಲ ಸೋದರರು. ಕಿರ್ಮಿರ ಹಿಡಿಂಬ ರಾಕ್ಷಸ ಇವರೆಲ್ಲರ ಬಂಧುವೂ ಸ್ನೇಹಿತನೂ ಆಗಿದ್ದ. ಏಕಚಕ್ರನಗರದ ಜನಗಳಿಗೆ ಹಿಂಸೆ ಕೊಡುತ್ತಿದ್ದ ಬಕಾಸುರನನ್ನು ಭೀಮನು ಕೊಂದ ಸುದ್ದಿ ತಿಳಿದಂದಿನಿಂದ ಇವರೆಲ್ಲ ಭೀಮನಿಗೆ-ಪಾಂಡವರಿಗೆ ಬದ್ಧವೈರಿಗಳಾದರು. ಅರಣ್ಯವಾಸ ಸಂದರ್ಭದಲ್ಲಿ ಪಾಂಡವರು ಕಾಮ್ಯಕವನದಲ್ಲಿದ್ದಾಗ ಸಮಯ ಸಾಧಿಸಿ ಕಿರ್ಮೀರನು ಪಾಂಡವರನ್ನು ಅಡ್ಡಗಟ್ಟಿ ಭೀಮನೊಂದಿಗೆ ಹೋರಾಡಿ ಸತ್ತನಷ್ಟೆ. ಆಗಿನಿಂದ ಸೇಡಿನ ಸರದಿ ಅಲಾಯುಧನದಾಯಿತು. ಮಹಾಭಾರತ ಯುದ್ಧದಲ್ಲಿ ಇವನು ತಾನಾಗಿ ರಾಕ್ಷಸಸೇನೆಯೊಂದಿಗೆ ಹೋಗಿ ಕೌರವನ ಪಕ್ಷವನ್ನು ಸೇರಿಕೊಂಡು ಪಾಂಡವರ ವಿರುದ್ಧ ಪ್ರಚಂಡವಾಗಿ ಹೋರಾಡಿದ. ಇವನ ಪರಾಕ್ರಮವನ್ನು ಕಂಡು ಕೌರವಸೇನೆ ಹರ್ಷಗೊಂಡಿತು ಎಂದು ದ್ರೋಣಪರ್ವದ ಏಳನೇ ಅಧ್ಯಾಯದಲ್ಲಿ ಹೇಳಲಾಗಿದೆ.

ಒಂದು ರಾತ್ರಿ ದ್ರೋಣರು ರಾತ್ರಿಯುದ್ಧವನ್ನು ಘೋಷಿಸುತ್ತಾರೆ. ಅಂದು ಅಲಾಯುಧ ತುಂಬ ಉತ್ಸಾಹದಿಂದ ಶತ್ರುಸೇನೆಯ ಮೇಲೆ ನುಗ್ಗುತ್ತಾನೆ. ಪಾಂಡವರ ಕಡೆಯಲ್ಲಿದ್ದ ಘಟೋತ್ಕಚನಿಗೂ ಕರ್ಣನಿಗೂ ಘೋರಯುದ್ಧವಾಗುತ್ತದೆ. ಅಂದು ಯುದ್ಧದ ಹದಿನಾಲ್ಕನೆಯ ದಿನ. ಘಟೋತ್ಕಚನೊಂದಿಗೆ ಭೀಕರವಾಗಿ ಹೋರಾಡಿದ ಕರ್ಣನು ಸೋಲಿನ ಅಂಚನ್ನು ತಲಪುತ್ತಾನೆ. ಅದನ್ನು ಕಂಡ ಕೌರವನು ಅಲಾಯುಧವನ್ನು ಕರೆದು 'ಅರ್ಜುನನನ್ನು ಕೊಂದು ಬಾ' ಎಂದು ಆಜ್ಞಾಪಿಸುತ್ತಾನೆ. ವಾಸ್ತವವಾಗಿ ಭಯಂಕರರೂಪದ ಅಸಂಖ್ಯಾತ ರಾಕ್ಷಸರೊಂದಿಗೆ ಬಂದಿದ್ದ ಅಲಾಯುಧನು ಪೂರ್ವವೈರವನ್ನು ನೆನೆದು ಭೀಮನನ್ನು ಕೊಲ್ಲಲು ಸಮಯ ಕಾಯುತ್ತಿದ್ದ. ತಮಗೆಲ್ಲ ಅವಮಾನವಾಗುವಂತೆ ರಾಕ್ಷಸಕನ್ಯೆಯಾದ ಹಿಡಿಂಬೆಯನ್ನು ಮದುವೆಯಾಗಿದ್ದು ಕೂಡ ಅವನ ಆಕ್ರೋಶಕ್ಕೆ ಕಾರಣವಾಗಿತ್ತು. ಕರ್ಣನನ್ನು ಬಿಡಿಸಿಕೊಂಡು ಬಂದ ಅಲಾಯುಧನು ಭೀಮಸೇನನ ಮೇಲೆ ನುಗ್ಗಿದನು. ಭೀಮನು ಭಾರಿಯ ಗದೆಯನ್ನು ಅಲಾಯುಧನ ಮೇಲೆ ಎಸೆದಾಗ ಅವನು ಅದನ್ನು ಭೀಮನ ಕಡೆಗೆ ತಿರುಗಿಸಿದ. ಬಹಳ ಕಾಲ ಇಬ್ಬರಿಗೂ ಯುದ್ಧವಾಯಿತು. ಕೊನೆಗೆ ಅವನ ಕೈಗೆ ಸಿಕ್ಕಿದ ಭೀಮನನ್ನು ಬಿಡಿಸಲು ಕೃಷ್ಣಾರ್ಜುನರೇ ಮಧ್ಯೆ ಪ್ರವೇಶಿಸಬೇಕಾಯಿತು.

ಅಲಾಯುಧನ ರಥವೂ ಭಯಂಕರವೇ. ಅದರ ಮೇಲೆ ಕರಡಿಯ ಚರ್ಮ ಆಚ್ಛಾದಿಸಲಾಗಿತ್ತು. ಭಾರಿ ಅಗಲದ, ಎತ್ತರದ ರಥ ಅದು! ಆನೆಗಳಂತೆ ಮಹಾಕಾಯ ಹೊಂದಿದ್ದ ನೂರು ಕುದುರೆಗಳನ್ನು ರಥಕ್ಕೆ ಕಟ್ಟಲಾಗಿತ್ತು. ಅಗ್ನಿಸೂರ್ಯ ಸಮಾನ ತೇಜಸ್ಸುಳ್ಳ ರಥದ ಧ್ವಜದ ಮೇಲೆ ನರಿಯ ಚಿಹ್ನೆಯ ಬಾವುಟ! ಭಯಂಕರ ಬಿಲ್ಲು-ಬಾಣಗಳೇ ಅಲ್ಲದೆ ಗದೆ, ಭುಶುಂಡಿ (ಒಂದು ಬಗೆಯ ಅಗ್ನಿಶಸ್ತ್ರ), ಮುಸಲ, ಹಲ ಮೊದಲಾದವುಗಳೂ ಇದ್ದುವು. ಪಾಂಡವ ವೀರನಾದ ಘಟೋತ್ಕಚನ ಮೇಲೆ ಅಲಾಯುಧನು ಭಯಂಕರವಾಗಿ ಕಾದಿದನು. ಅವನ ಕೈಗೆ ಸಿಕ್ಕು ಘಟೋತ್ಕಚನು ಸಂಕಟಪಡುತ್ತಿದ್ದುದನ್ನು ನೋಡಿ ಭೀಮನು ಮಗನ ಸಹಾಯಕ್ಕೆ ಬಂದು

ಅಲಾಯುಧನ ಮೇಲೆ ಯುದ್ಧ ಮಾಡತೊಡಗಿದನು. ಭೀಮನಿಗೂ ಘಟೋತ್ಕಚನ ಅವಸ್ಥೆ ಬಂದುದನ್ನು ಕಂಡು ಕೃಷ್ಣನ ಸಲಹೆಯಂತೆ ಅರ್ಜುನ ಇತರರು ಅಲಾಯುಧನ ಸಹಾಯಕ್ಕೆ ಬರುವುದನ್ನು ತಪ್ಪಿಸಿದನು. ಇತ್ತ ಮತ್ತೆ ಭೀಮ-ಅಲಾಯುಧರ ನಡುವೆ ಗದಾಯುದ್ಧ ನಡೆಯಿತು, ಮುಷ್ಟಿಯುದ್ಧವೂ ಆಯಿತು. ಆದರೂ ಅಲಾಯುಧ ಹಿಂದೆ ಸರಿಯಲಿಲ್ಲ. ಭೀಮನೇ ಅಲಾಯುಧನ ಕೈಗೆ ಸಿಕ್ಕಾಗ ಘಟೋತ್ಕಚನು ಬಂದು ಎಲ್ಲ ಬಗೆಯ ಆಯುಧಗಳಿಂದ ಹೋರಾಡಿ ಕೊನೆಗೆ ದುರ್ಯೋಧನನ ಎದುರಿಗೇ ಅಲಾಯುಧನ ತಲೆಯನ್ನು ಕೊಚ್ಚಿಹಾಕಿದನು.

*   *   *   *

ವಸುದೇವ

ನಾವಿಲ್ಲಿ ಮುಖ್ಯವಾಗಿ ವ್ಯಾಸಭಾರತದ ವಸುದೇವನ ವಿಷಯವನ್ನೇ ಹೇಳುತ್ತಿದ್ದೇವಾದರೂ ಈತನ ಕಥೆ ವಿಷ್ಣು ಪುರಾಣ ಭಾಗವತ ಪುರಾಣ ಹರಿವಂಶ ದೇವೀ ಭಾಗವತ ಪದ್ಮಪುರಾಣಗಳಲ್ಲೆಲ್ಲ ಹರಡಿಕೊಂಡಿದೆಯೆಂಬುದನ್ನು



ಮರೆಯುವಂತಿಲ್ಲ. ವಸುದೇವ-ದೇವಕಿಯರು ಶ್ರೀಕೃಷ್ಣನ ತಂದೆತಾಯಿಗಳು. ಇಂಥ ದೇವಪಿತೃವಾಗುತ್ತಾನೆಂಬ ಕಾರಣಕ್ಕೇ ವಸುದೇವನ ಜನನ ಕಾಲದಲ್ಲಿ ದೇವತೆಗಳು

ಆನಕ, ದುಂದುಭಿ, ನಗಾರಿ, ಭೇರಿ ಮೊದಲಾದ ವಾದ್ಯಗಳನ್ನು ಮೊಳಗಿಸಿದ್ದುದರ ಕುರುಹಾಗಿ ಇವನಿಗೆ ಆನಕದುಂದುಭಿ ಎಂಬು ಹೆಸರೂ ಇದೆ.

ದೇವಗರ್ಭ ಎಂಬುವನ ಮಗನಾದ ಶೂರ ಮತ್ತು ಅವನ ಪತ್ನಿ ಮಾರಿಷ ಇವರೇ ವಸುದೇವನ ತಂದೆ ತಾಯಿಗಳು. ಕಂಸನ ತಂಗಿ ದೇವಕಿಯನ್ನು ಮದುವೆಯಾಗಿದ್ದ ಮಂತ್ರಿ ವಸುದೇವನು ದೇವಕಿಯೊಂದಿಗೆ ಸೆರಮನೆಯಲ್ಲಿ ಇರಬೇಕಾಗಿ ಬಂದ ಸಂಗತಿ ಲೋಕವಿದಿತವಾಗಿದೆ. ಈ ದೇವಕಿ ಕಂಸನ ತಂಗಿಯಲ್ಲವೆಂದೂ ಉಗ್ರಸೇನನ ತಮ್ಮನಾದ ದೇವಕನ ಮಗಳೆಂದೂ ಕೆಲವು ಪಾಠಗಳು ಹೇಳುತ್ತವೆ. ವಸುದೇವನ ಪತ್ನಿ ದೇವಕಿಗೆ ಮಾಯಾ ಅಮಾವಾಸೀ ಎಂಬ ಹೆಸರುಗಳೂ ಇವೆ. ದೇವಕಿಯೇ ಅಲ್ಲದೆ ವಸುದೇವನಿಗೆ ರೋಹಿಣಿ (ಬಲರಾಮನ ತಾಯಿ) ಉಪದೇವಿ, ವೃಕದೇವಿ, ಸಪ್ತಮೀದೇವಿ ಮೊದಲಾದ ಹನ್ನೆರಡು ಮಂದಿ ಪತ್ನಿಯರಿದ್ದಂತೆ ತಿಳಿದು ಬರುತ್ತದೆ. ವಿವಿಧ ಪುರಾಣಗಳಲ್ಲಿ ಬೇರೆ ಕೆಲವರ ಹೆಸರುಗಳೇ ಅಲ್ಲದೆ ಶ್ರುತಂಧರಾ, ಶ್ರದ್ಧಾದೇವಿ, ಜನಾದೇವಿ ಮೊದಲಾದ ಉಪ ಪತ್ನಿಯರ ಪ್ರಸ್ತಾವವೂ ಇದೆ. ಅಗಾವಹ, ಮಂದಗ, ಕೃಷ್ಣ, ಬಲರಾಮ, ಸುಭದ್ರೆ, ವಿಜಯ, ರೋಚಮಾನ ಮೊದಲಾದ ಮಕ್ಕಳ ವಿಷಯವೂ ವರ್ಣಿತವಾಗಿದೆ. ಶತಶೃಂಗ ಪರ್ವತ ಪ್ರಾಂತ್ಯದಲ್ಲಿ ಪಾಂಡವರು ಹುಟ್ಟಿದಾಗ ಚೂಡಾಕರ್ಮ ವಿಧಿಯ ಸಂದರ್ಭದಲ್ಲಿ ವಸುದೇವನು ಕಶ್ಯಪನೆಂಬ ಪುರೋಹಿತನನ್ನು ಕಳಿಸಿದ್ದನೆಂದು ವ್ಯಾಸಭಾರತದ ದಾಕ್ಷಿಣಾತ್ಯ ಪಾಠಗಳು ಹೇಳುತ್ತವೆ. ಅಶ್ವಮೇಧ ಪರ್ವದಲ್ಲಿ ಶ್ರೀಕೃಷ್ಣನೇ ವಸುದೇವನಿಗೆ ಮಹಾಭಾರತ ಯುದ್ಧದ ವಿವರಗಳನ್ನು ತಿಳಿಸಿದ ಸಂಗತಿಯಿದೆ. ಕೊನೆಯಲ್ಲಿ ಶ್ರೀಕೃಷ್ಣ-ಬಲರಾಮರು ಇವನ ಪಾದಗಳಿಗೆ ಮಣಿದು ತಪಸ್ಸಿಗೆ ಹೊರಟರೆಂಬ ಸಂಗತಿ ಮೌಸಲ ಪರ್ವತದಲ್ಲಿದೆ. ವೃಷ್ಣಿ ಯಾದವ, ಅಂಧಕ, ಭೋಜ ಎಂಬ ಯಾದವ ಗಣಗಳೆಲ್ಲ ಪರಸ್ಪರ ಹೋರಾಡಿ ಸತ್ತ ವಿಷಯ ಹಾಗೂ ದ್ವಾರಕೆ ಮುಳುಗಿದ ವಿಷಯ ತಿಳಿದು ವಸುದೇವನು ತಪಸ್ಸು ಮಾಡಿ ಅವಸಾನ ಹೊಂದಿದ ವಿಷಯ ಹಾಗೂ ಅರ್ಜುನನು ಬಂದು ಅಗ್ನಿಸಂಸ್ಕಾರ ಮಾಡಿ, ವಸುದೇವನ ನಾಲ್ವರು ಪತ್ನಿಯರ ಸಹಗಮನಕ್ಕೆ ಏರ್ಪಾಡು ಮಾಡಿದ ಸಂಗತಿಯೂ ಮೌಸಲ ಪರ್ವದಲ್ಲಿ ಬರುತ್ತದೆ.

ಇತರರಿಗಿರಲಿ, ಶ್ರೀಕೃಷ್ಣನಿಗೆ ಕೂಡ ವಸುದೇವನ ಮೇಲೆ ತುಂಬ ಗೌರವ ಭಾವವಿತ್ತು ಎಂಬುದು ಸಾಲ್ವವಧಾ ಪ್ರಕರಣದಲ್ಲಿ ಸ್ಪಷ್ಟವಾಗುತ್ತದೆ. ಶ್ರೀಕೃಷ್ಣನು ಸಾಲ್ವನ ಮೇಲೆ ಯುದ್ಧಕ್ಕೆ ಹೋದನಷ್ಟೆ. ಮಾಯಾ ಸಮರ ನಿಪುಣನಾದ ಸಾಲ್ವನು ವಿಮಾನದಲ್ಲಿ ಕೃಷ್ಣನಿಗೆ ಕಾಣುವಂತೆಯೇ ವಸುದೇವನ ಮಾಯಾಶಿರವನ್ನು ರುಂಡಾಡಿದ. ಆ ಬಗೆಗೆ ಕೃಷ್ಣ ಏನು ಹೇಳುತ್ತಾನೆ ಗೊತ್ತೆ: "ತತಃ ಶಾರ್ಙ್ಗಧನು ಶ್ರೇಷ್ಠಂ ಕರಾತ್ ಪ್ರಪತಿತಂ ಮಮ ಮೋಹೋಪಪನ್ನಶ್ಚ ರಥೋಪಸ್ಥ ಉಪವಿಶಂ" (ಅರಣ್ಯ ಪರ್ವ 21).

(ಅಪ್ಪನ ತಲೆ ಉರುಳುವ ದೃಶ್ಯ ನೋಡಿ ನನ್ನ ಧನುಸ್ಸು ಕೆಳಗೆ ಬಿತ್ತು. ನಾನು ಮೋಹಕ್ಕೆ ಸಿಕ್ಕವನಂತೆ ಅಲ್ಲಿಯೇ ಉರುಳಿ ಬಿದ್ದೆ).

* * * *

ಚಿತ್ರಸೇನ

ದುರಹಂಕಾರದಿಂದ ಮೆರೆಯುತ್ತಿದ್ದ ಕೌರವರಿಗೆ ಸರಿಯಾಗಿ ಅವಮಾನ ಮಾಡಿ ಬುದ್ಧಿಕಲಿಸಿದ ಒಬ್ಬ ಗಂಧರ್ವನಾಯಕ ಚಿತ್ರಸೇನ. ನಿಷ್ಕಾರಣವಾಗಿ ಯಾರಿಗಾದರೂ ಮುಖಭಂಗ ಮಾಡಲು ಹೊರಟರೆ ಅಂಥವರೇ ಅವಮಾನದ ಸುಳಿಗೆ ಸಿಕ್ಕಿ ನರಳಬೇಕಾಗುತ್ತದೆ ಎಂಬುದಕ್ಕೆ ಈತನ ಮತ್ತು ಕೌರವನ ಕಥೆ ಒಂದು ಒಳ್ಳೆಯ ನಿದರ್ಶನ.

ಪಾಂಡವರು ಕಾಡಿನಲ್ಲಿ ಪಾಡುಪಡುತ್ತಿರುವ ಸಂಗತಿ ತಿಳಿದು ಕೌರವನು ಒಮ್ಮೆ ಅವರಿದ್ದಲ್ಲಿಗೆ ಹೊರಡಲು ತೀರ್ಮಾನಿಸಿದ. ಘೋಷಯಾತ್ರೆಯ ನೆವವನ್ನು ಒಡ್ಡಿದ. ಘೋಷ ಎಂದರೆ ಗೋವುಗಳು ಇರುವ ಹಳ್ಳಿ ಎಂದರ್ಥ ಗಡಿಯ ಹಳ್ಳಿಗಳಲ್ಲಿ ದನಕರುಗಳನ್ನು ಹೇಗೆ ನೋಡಿಕೊಳ್ಳುತ್ತಿದ್ದಾರೆಂಬುದನ್ನು ಪರೀಕ್ಷಿಸುವ ನೆವದಲ್ಲಿ ಹೋಗಲು ನಿರ್ಧರಿಸಿದ. ಪಾಂಡವರ ಸ್ಥಿತಿಗತಿಗಳನ್ನು ತಿಳಿಯುವುದು, ಸಾಧ್ಯವಾದರೆ ತನ್ನ ವೈಭವವನ್ನು ಅವರ ಮುಂದೆ ಪ್ರದರ್ಶಿಸುವುದು ಅವನ ಉದ್ದೇಶವಾಗಿತ್ತು. ಭೀಷ್ಮ ದ್ರೋಣ, ಕರ್ಣ ಕೃಪ ಮೊದಲಾದ ವೀರರನ್ನೂ ದೊಡ್ಡ ಸೈನ್ಯವನ್ನೂ ಅಂತಃಪುರದವರನ್ನೂ ಅನೇಕ ಸುಂದರಿಯರನ್ನೂ ದಾಸದಾಸಿಯರನ್ನೂ ಕರೆದುಕೊಂಡು ಪಾಂಡವರಿದ್ದ ದ್ವೈತವನದ ಬಳಿಗೆ ಬಂದ. ಅಲ್ಲಿ ಗಂಧರ್ವನಿಗೆ ಸೇರಿದ ಒಂದು ಸೊಗಸಾದ ತೋಟವಿತ್ತು. ಅದು ಗಂಧರ್ವಪತಿ ಚಿತ್ರಸೇನನಿಗೆ ಸೇರಿದ್ದ ತೋಟ. ಕೌರವ ಪತ್ನಿಯರು, ಸುಂದರ ಸ್ತ್ರೀಯರು ಸ್ವಚ್ಛಂದವಾಗಿ ಆ ತೋಟದಲ್ಲಿ ವಿಹರಿಸಿ ಅಲ್ಲಿನ ಪುಷ್ಪ ಫಲಗಳನ್ನು ಸೂರೆಗೊಂಡರು. ಚಿತ್ರಸೇನನ ಸೇನೆಯನ್ನು ಕರ್ಣಾದಿಗಳು ಓಡಿಸಿದರು. ಸೇವಕರು ಈ ಹಾವಳಿಯ ಬಗೆಗೆ ವಿವರಿಸಿದ್ದರಿಂದ ಕೇಳಿ ಕ್ರುದ್ಧನಾದ ಚಿತ್ರಸೇನನು ತಾನೇ ಅಲ್ಲಿಗೆ ಹೋದ. ಬಂದ ಚಿತ್ರಸೇನನಿಗೆ ಸ್ವಲ್ಪವೂ ಗೌರವ ತೋರದೆ ಕೌರವರೆಲ್ಲ ನಿರ್ಲಕ್ಷ್ಯದಿಂದಿದ್ದುದರಿಂದ ಚಿತ್ರಸೇನನು ಅವರ ಮೇಲೆ ಯುದ್ಧ ಮಾಡಬೇಕಾಯಿತು. ಬಡಾಯಿಗಾರನಾದ ಕರ್ಣನು ಹೋರಾಡಿ ಸೋತು ಪಲಾಯನ ಮಾಡಿದ. ಉಳಿದಂತೆ ಕೌರವರ ಕಡೆಯ ಮಹಾವೀರರೆಲ್ಲ ಯುದ್ಧದಲ್ಲಿ ಸೋತರು. ಚಿತ್ರಸೇನನು ಕೌರವನನ್ನೂ ಸೋಲಿಸಿ ಹಿಂಗಟ್ಟು ಮುಂಗಟ್ಟುಕಟ್ಟಿ ತನ್ನ ರಥಕ್ಕೆ ಹಾಕಿಕೊಂಡು ಹೊರಟ.

ಪಕ್ಕದಲ್ಲೇ ಇದ್ದ ಭೀಮಾರ್ಜುನರು ಈ ಸ್ಥಿತಿಯನ್ನೆಲ್ಲ ಮೂಕರಾಗಿ ನೋಡುತ್ತಿದ್ದರು. ಭೀಮನಿಗಂತೂ ಒಳಗೊಳಗೇ ಆನಂದವೂ ಆಗಿತ್ತು. ಆದರೆ ಕೆಲವರು ಸೈನಿಕರು ಅಳುತ್ತ ಬಂದು ಧರ್ಮರಾಯನ ಕಾಲಿಗೆ ಬಿದ್ದು ಕೌರವರನ್ನು ಕಾಪಾಡುವಂತೆ ಕೇಳಿದಾಗ ಧರ್ಮರಾಯನ ಕರುಳು ಕರಗಿತು. "ದುರ್ಯೋಧನನ ತಮ್ಮಂದಿರು ನೂರು ಜನ. ಅವನ ವಿರೋಧಿ ತಾವು ಐದು ಜನ. ಆದರೆ ಹೊರಗಿನವರು ಯಾರಾದರೂ ಯುದ್ಧಕ್ಕೆ ಬಂದರೆ ನಾವೆಲ್ಲ ಸೇರಿ 105 ಜನ" ಇದು ಧರ್ಮರಾಯನ ತರ್ಕ. ಕೊನೆಗೆ ಅರ್ಜುನಾದಿಗಳು ಅಣ್ಣನ ಆಜ್ಞೆಯಂತೆ ಚಿತ್ರಸೇನನನ್ನು ಅಟ್ಟಿಸಿಕೊಂಡು ಹೋಗಿ ಯುದ್ಧ ಮಾಡಿದರು. ಚಿತ್ರಸೇನನಿಗೆ

ಪಾಂಡವರ ಮೇಲೆ ತುಂಬ ವಿಶ್ವಾಸವಿತ್ತಾದರೂ ಅವರು ಹೀಗೆ ತನ್ನ ವಿರುದ್ಧವೇ ಎರಿ ಬರುತ್ತಾರೆ ಎಂದು ಅವನು ಊಹಿಸಿರಲಿಲ್ಲ. ಯುದ್ಧವನ್ನು ಮುಂದುವರಿಸದೆ ಪ್ರಸನ್ನಚಿತ್ತದಿಂದಲೇ ದುರ್ಯೋಧನನನ್ನು ಅರ್ಜುನನಿಗೆ ಒಪ್ಪಿಸಿಕೊಟ್ಟು ಹೊರಟುಹೋದ.

ಹೀಗೆ ಅವಮಾನಿಸಲೆಂದು ಬಂದ ಕೌರವ ತಾನೇ ಎಂಥ ದಯಾಭಿಕ್ಷೆಯ ಅವಮಾನಕ್ಕೆ ಒಳಗಾಗಬೇಕಾಯಿತೆಂದರೆ ಆ ಅವಮಾನವನ್ನು ತಾಳಲಾರದೆ ದುರ್ಯೋಧನನು ಗಂಗಾತೀರದಲ್ಲಿ ಪ್ರಾಯೋಪವೇಶ ಮಾಡಲು ನಿರ್ಧರಿಸಿದನೆಂದು ಅರಣ್ಯಪರ್ವ ಹೇಳುತ್ತದೆ. ಕರ್ಣಾದಿಗಳಿಗೂ ಮುಖಭಂಗವಾದುದನ್ನು ಈ ಪ್ರಕರಣವು ಸ್ಪಷ್ಟಪಡಿಸುತ್ತದೆ. ಧರ್ಮರಾಯನ ಭ್ರಾತೃವಾತ್ಸಲ್ಯ ಹಾಗೂ ಅರ್ಜುನನ ಭ್ರಾತೃವಿಧೇಯಗುಣ ಈ ಪ್ರಕರಣದಲ್ಲಿ ಎದ್ದು ಕಾಣುತ್ತವೆ.

* * * *

ರೈಭ್ಯ

ಪ್ರಸಿದ್ಧ ಪ್ರಾಚೀನ ಮಹರ್ಷಿಗಳಲ್ಲಿ ಒಬ್ಬ. ಉಪರಿಚರ ವಸುವಿನ ಮಹಾಯಜ್ಞದಲ್ಲಿ ಸದಸ್ಯನಾಗಿದ್ದವನು. ಸಂಚಾರಕಾಲದಲ್ಲಿ ಭೀಷ್ಮರನ್ನು ಕಂಡು ಚರ್ಚಿಸಿದವನು. ಯುಧಿಷ್ಠಿರನ ಸಭೆಯಲ್ಲೂ ವಿರಾಜಮಾನನಾಗಿದ್ದವನು. ರೈಭ್ಯನು ಪ್ರಸಿದ್ಧ ಋಷಿ ಅಂಗೀರಸನ ಮಗ. ಮುನಿ ಭರದ್ವಾಜನ ಸ್ನೇಹಿತ. ಅರ್ವಾವಸು ಮತ್ತು ಪರಾವಸು ಎಂಬ ಇಬ್ಬರು ಇವನ ಮಕ್ಕಳು. ತಂದೆ ಮಕ್ಕಳಿಬ್ಬರೂ ಮಹಾಜ್ಞಾನಿಗಳಾಗಿದ್ದರು. ರೈಭ್ಯನು ಬೃಹಸ್ಪತಿಯ ಬಳಿಗೇ ಹೋಗಿ ಮೋಕ್ಷವು ಕರ್ಮದಿಂದ ಸಿದ್ಧಿಸುತ್ತದೋ ಅಥವಾ ಜ್ಞಾನದಿಂದ ಸಿದ್ಧಿಸುತ್ತದೋ ಎಂಬ ಬಗೆಗೆ ಆರೋಗ್ಯಕರವಾದ ಚರ್ಚೆ ನಡೆಸಿದ್ದನ್ನು ನೋಡಿದರೆ ಆತನ ಜ್ಞಾನದ ಮಟ್ಟ ಎಷ್ಟೆಂಬುದು ತಿಳಿಯುತ್ತದೆ.

ರೈಭ್ಯನ ಸ್ನೇಹಿತ ಭರದ್ವಾಜನಿಗೆ ಯವಕ್ರೀತ ಎಂಬ ಹೆಸರಿನ ಮಗನೊಬ್ಬನಿದ್ದ. ಅವನನ್ನು ರೈಭ್ಯನ ಬಳಿಗೆ ವಿದ್ಯೆ ಕಲಿಯಲೆಂದು ಕಳಿಸಿದರೆ ರೈಭ್ಯನ ಮಕ್ಕಳಾದ ಅರ್ವಾವಸು ಪರಾವಸುಗಳ ಸಹವಾಸದಲ್ಲಿ ಬೆಳೆಯಬಹುದೆಂಬ ಆಸೆಯಿಂದ ಹಾಗೆ ಕಳಿಸಿದ್ದ. ಆದರೆ ಯವಕ್ರೀತನಿಗೆ ಆರ್ವಾವಸು ಪರಾವಸುಗಳ ಪ್ರಗತಿಯನ್ನು ಕಂಡು ತುಂಬ ಅಸೂಯೆ. ಅಲ್ಲದೆ ವ್ಯಾಸಂಗ ಕಾಲದಲ್ಲಿ ಅವನು ತನ್ನ ಸಹಪಾಠಿಯಾಗಿದ್ದ ಪರಾವಸುವಿನ ಹೆಂಡತಿ 'ಕೃಷ್ಣೆ'ಯ ಮೇಲೆ ಕಣ್ಣುಹಾಕಿದ. ಈತನ ಬಲಾತ್ಕಾರದ ಪ್ರಯತ್ನವನ್ನು ಆಕೆ ಮಾವನಾದ ರೈಭ್ಯನಿಗೆ ತಿಳಿಸಿದಳು. ಆಗ ರೈಭ್ಯನು ಒಂದು ಹೋಮವನ್ನು ಮಾಡಿ ಒಬ್ಬಳು ಸುಂದರಾಂಗಿಯನ್ನು ಒಬ್ಬ ಘೋರ ರಾಕ್ಷಸಿಯನ್ನು ಸೃಷ್ಟಿಸಿದ. ಯವಕ್ರೀತನ ಕೈಯಲ್ಲಿ ಕಮಂಡಲವಿರುವವರೆಗೆ ಏನೂ ಮಾಡುವಂತಿಲ್ಲವಾದುದರಿಂದ ಸುಂದರಾಂಗಿಯನ್ನು ಕಳಿಸಿದಾಗ ಅವಳು ಕಮಂಡಲವನ್ನು ಅಪಹರಿಸಿದಳು. ಅನಂತರ ರೈಭ್ಯನು ಕಳಿಸಿದ ರಾಕ್ಷಸನು ಬಂದು ಯವಕ್ರೀತನನ್ನು ಸಂಹರಿಸಿದ. ಈ ಸುದ್ದಿಯನ್ನು ತಿಳಿದ ಭರದ್ವಾಜನು ತನ್ನ ಗೆಳೆಯ ರೈಭ್ಯನಿಗೆ "ನನ್ನ ಮಗನನ್ನು ಕೊಂದಿದ್ದೀಯೆ. ಈ ಪಾಪ ಕಾರ್ಯದ ಫಲವಾಗಿ ನಿನ್ನ ಮಗನಿಂದಲೇ ನಿನಗೆ ಸಾವು ಬರಲಿ" ಎಂದು ಶಾಪವನ್ನು ಕೊಟ್ಟ.

ರೈಭ್ಯನ ಮಗ ಪರಾವಸು ಒಮ್ಮೆ ಬೃಹದ್ಯುಮ್ನನೆಂಬ ರಾಜನ ಯಜ್ಞಕ್ಕೆ ಆಹ್ವಾನಿತನಾಗಿ ಹೊರಟಿದ್ದ. ಆಗ ಇನ್ನೂ ಬೆಳಗಿನ ಜಾವ. ಕತ್ತಲಲ್ಲಿ ಎದುರಿಗೆ ಯಾರೋ ಬರುತ್ತಿದ್ದಾರೆಂದು ಭಾಸವಾಗಿ ಮೃಗವೆಂದು ತಿಳಿದು ಕೊಂದುಹಾಕಿದ. ಆದರೆ ಅನಂತರ ಸತ್ತವನು ಬೇರೆ ಯಾರೂ ಅಲ್ಲ. ತನ್ನ ತಂದೆ ರೈಭ್ಯ ಎಂದು ತಿಳಿಯಿತು. ಭರದ್ವಾಜನ ಶಾಪ ಘಟಿಸಿತ್ತು. ಆದರೆ ಅರ್ವಾವಸು ಆಗಿದ್ದ ಪ್ರಮಾದವನ್ನು ತಪ್ಪಿಸುವ ಸಂಕಲ್ಪದಿಂದ ತುಂಬ ಶ್ರದ್ಧೆಯಿಂದ ಒಂದು ಹೋಮಮಾಡಿದ. ದೇವತೆಗಳು ಪ್ರಸನ್ನರಾದರು. ಅವರು ವರವನ್ನು ಕೇಳು ಎಂದಾಗ ತನ್ನ ತಂದೆ ರೈಭ್ಯ ಬದುಕಿ ಬರುವಂತೆ ವರವನ್ನು ಕೋರಿದ. ಹೀಗೆ ಅರ್ವಾವಸುವಿನಿಂದಾಗಿ ರೈಭ್ಯ ಬದುಕಿ ಬಂದ.

ರೈಭ್ಯನು ಮಹಾಜ್ಞಾನಿಯಾಗಿದ್ದ ದಿಕ್ಪಾಲಕನಾಗಿದ್ದ ತನ್ನ ಇನ್ನೊಬ್ಬ ಮಗ ಕುಕ್ಷಿಗೆ ತಾನು ವೀರಣನಿಂದ ಕಲಿತಿದ್ದ ನಾರಾಯಣ ಧರ್ಮವನ್ನು ಬೋಧಿಸಿದನೆಂದು ಮಹಾಭಾರತದ ವನಪರ್ವದಲ್ಲಿ ಹೇಳಲಾಗಿದೆ.

ಮಕ್ಕಳು ಮಹಾವಿದ್ವಾಂಸರಾಗಿದ್ದರೂ ಇಬ್ಬರ ಸ್ವಭಾವ ಬೇರೆಬೇರೆಯಾಗಿತ್ತು. ಪರಾವಸು ಅಪ್ಪನನ್ನೇ ಕೊಂದನಷ್ಟೆ. ಅಣ್ಣ ಮಾಡಿದ ಈ ಪಾಪದ ಪರಿಹಾರಕ್ಕೆ ತಮ್ಮ ಅರ್ವಾವಸು ಹೋಮವನ್ನು ಮಾಡಿ ಅನಂತರ ಬೃಹದ್ಯುಮ್ನನ ಯಾಗಕ್ಕೆ ಬಂದರೆ, ತಂದೆಯ ಕೊಲೆ ಮಾಡಿದ್ದ ಪರಾವಸು ಅಣ್ಣನ ಮೇಲೆಯೇ ಪಿತೃವಧೆಯ ಆರೋಪವನ್ನು ಹೊರಿಸಬೇಕೆ ?

* * * *

ಕಾಶ್ಯಪ ಋಷಿ

ಇವನನ್ನು ಕಶ್ಯಪ ಎಂದೂ ಹೇಳುತ್ತಾರೆ. ಈತ ವೇದಾಧ್ಯಯನ ಸಂಪನ್ನನಾದ ಒಬ್ಬ ಬಡಬ್ರಾಹ್ಮಣ. ಮಹಾಭಾರತದ ಆಸ್ತಿಕಪರ್ವದಲ್ಲಿ ಬರುವ ಅಸಾಧಾರಣ ವ್ಯಕ್ತಿ. ಜ್ಞಾನಿ, ಸರ್ಪವೈದ್ಯ, ಪರೋಪಕಾರಿ. ಇವನ ಸಾಧನೆಯನ್ನು ಮೆಚ್ಚಿ ಸ್ವಯಂ ಬ್ರಹ್ಮನೇ ಈತನಿಗೆ ಸರ್ಪವಿಷ ಚಿಕಿತ್ಸೆಯ ಮಂತ್ರವನ್ನು ಉಪದೇಶಿಸಿದ್ದನಂತೆ! ಎಂಥ ಉಗ್ರವಿಷವನ್ನೂ ನಿರ್ವೀರ್ಯಗೊಳಿಸುವ ಶಕ್ತಿ ಈತನಿಗಿತ್ತು. ಸಂಜೀವನ ವಿದ್ಯಾನಿಪುಣ ಆತ.

ಪರೀಕ್ಷಿತನಿಗೆ ಬಂದೊದಗಿದ ಶಾಪವನ್ನೂ ತಕ್ಷಕನು ಪರೀಕ್ಷಿತನನ್ನು ಕೊಲ್ಲಲು ಸಮಯ ಕಾಯುತ್ತಿರುವನೆಂಬ ವಿಷಯವನ್ನೂ ತಿಳಿದ ಕಾಶ್ಯಪನು ಹಸ್ತಿನಾಪುರದ ಕಡೆಗೆ ಬರುತ್ತಿದ್ದ. ಕೀರ್ತಿ, ಹಣ, ಮತ್ತು ಧರ್ಮವನ್ನು ಗಳಿಸುವುದು ಅವನ ಉದ್ದೇಶವಾಗಿತ್ತು. ಮಹಾರಾಜನನ್ನು ಬದುಕಿಸಿದರೆ ರಾಜನಿಂದ ತುಂಬ ಸಂಪತ್ತು ಸಿಕ್ಕಿ ತನ್ನ ಬಡತನ ನೀಗುತ್ತದೆ, ಒಳ್ಳೆಯ ಹೆಸರೂ ಬರುತ್ತದೆ. ಅಲ್ಲದೆ ಧರ್ಮಾತ್ಮನಾದ ಮಹಾರಾಜನನ್ನು ಬದುಕಿಸುವುದು ಧರ್ಮದ ಗಳಿಕೆಗೂ ಸಹಾಯಕವಾಗುತ್ತದೆ. ಇದು ಅವನ ವಿಚಾರಸರಣಿ.

ಶಾಪ ನೆರವೇರುವಂತೆ ಪರೀಕ್ಷಿತನನ್ನು ಕಚ್ಚಿ ಕೊಲ್ಲಲೆಂದು ತಕ್ಷಕನೂ ಹೊರಟ. ಪರೀಕ್ಷಿತನ ಸುತ್ತ ಇರುವ ಭದ್ರಕಾವಲನ್ನು ಭೇದಿಸಿ ಹೇಗೆ ನುಗ್ಗುವುದು ಎಂಬ ಚಿಂತನೆಯಲ್ಲಿ ಅವನು ಬರುತ್ತಿದ್ದ. ಇವನಿಗೆ ನೇರವಾಗಿ ಆ ಕಾಶ್ಯಪನೇ ಎದುರಿಗೆ ಬರಬೇಕೆ? ಸುಮ್ಮನೆ ಬಾಯಿ ಚಪಲಕ್ಕೆ ಆ ಬ್ರಾಹ್ಮಣನನ್ನು "ಎಲ್ಲಿಗೆ ಹೋಗುತ್ತಿದ್ದೀಯೆ" ಎಂದು ಕೇಳಿದ. ಕಾಶ್ಯಪ ನೇರವಾಗಿ ಸತ್ಯಸಂಗತಿ ಹೇಳಿದ.

"ಆ ತಕ್ಷಕ ನಮ್ಮ ಮಹಾರಾಜ ಪರೀಕ್ಷಿತನನ್ನು ಕೊಲ್ಲುತ್ತಾನಂತೆ. ನಾನು ಮಂತ್ರಪ್ರಭಾವದಿಂದ ಅವನನ್ನು ಬದುಕಿಸಲು ಹೋಗುತ್ತಿದ್ದೇನೆ."

ತಕ್ಷಕ ವಿವರವಾಗಿ ಎಲ್ಲ ತಿಳಿದುಕೊಂಡು ಜೋರಾಗಿ ನಕ್ಕ.

"ಆ ತಕ್ಷಕನು ನಾನೇ. ಬೇರೆ ಸರ್ಪಗಳು ಕಡಿದರೆ ನೀನು ಬದುಕಿಸಬಲ್ಲೆ ಎಂದು ಕಾಣುತ್ತದೆ. ಆದರೆ ನಾನು ಕಚ್ಚಿದರೆ ಯಾರೂ ಬದುಕಿಸಲಾರರು!"

ಕಾಶ್ಯಪನಿಗೂ ನಗು ಬಂತು. ಇಬ್ಬರಿಗೂ ತಮ್ಮ ತಮ್ಮ ಸಾಮರ್ಥ್ಯದ ಬಗೆಗೆ ಅಪಾರ ವಿಶ್ವಾಸವಿದ್ದುದೇ ಇದಕ್ಕೆ ಕಾರಣ. ಅವನಿಗೆ ತನ್ನ ಶಕ್ತಿಯನ್ನು ಪ್ರದರ್ಶಿಸುವ ಹಂಬಲ ತಕ್ಷಕನಿಗೆ. ಕೂಡಲೇ ಇಬ್ಬರೂ ಒಂದು ಒಪ್ಪಂದಕ್ಕೆ ಬಂದರು. ಸ್ಥಳದಲ್ಲೇ ಸತ್ವಪರೀಕ್ಷೆಯ ಸ್ಪರ್ಧೆ ನಡೆಯಿತು. ತಕ್ಷಕನು ಆ ಕಾಡಿನಲ್ಲಿದ್ದ ಒಂದು ದೊಡ್ಡ ಅರಳೀಮರವನ್ನು ಕಚ್ಚಿದ. ಕೂಡಲೇ ಆ ಮರ ಸುಟ್ಟು ಬೂದಿಯಾಯಿತು. ಕಾಶ್ಯಪನಿಗೆ ಇದೇನೂ ದೊಡ್ಡ ಸಾಧನೆ ಎನ್ನಿಸಲಿಲ್ಲ. ಕೂಡಲೇ ಅವನು ತನ್ನ ಅದ್ಭುತ ಸಂಜೀವನ ಮಂತ್ರ ಪ್ರಭಾವವನ್ನು ತೋರಿದ. ಏನಾಶ್ಚರ್ಯ! ಕೂಡಲೇ ಆ ಬೂದಿ ಮತ್ತೆ ಕೂಡಿಕೊಂಡು ಜೀವ ಪಡೆಯಿತು. ಈ ಅದ್ಭುತವನ್ನು ಕಂಡು ತಕ್ಷಕ ಬೆರಗಾದ. ಅವನ ಮನಸ್ಸು ಒಲಿಸಿಕೊಳ್ಳುವ ಯತ್ನ ಮಾಡಿದ.

"ವಿಪ್ರವರ! ಬ್ರಾಹ್ಮಣ ಶಾಪದ ಪರಿಣಾಮವಾಗಿ ಪರೀಕ್ಷಿತನ ಆಯುಸ್ಸು ಮುಗಿಯುತ್ತ ಬಂದಿದೆ. ವಿಧಿಯನ್ನು ಬದಲಾಯಿಸುವ ಪ್ರಯತ್ನ ಮಾಡಬೇಡ. ಅಲ್ಲದೆ ಆ ಪರೀಕ್ಷಿತ ಕೊಡುತ್ತಿದ್ದುದಕ್ಕಿಂತ ಹೆಚ್ಚಿನ ಸಂಪತ್ತನ್ನು ನಾನು ನಿನಗೆ ಕೊಡುತ್ತೇನೆ."

ಕೌಶಿಕ ಈ ಸಂಧಾನದ ಮಾತಿಗೆ ಒಪ್ಪಿಕೊಂಡನೆಂದು ಹೇಳಬೇಕಿಲ್ಲವಷ್ಟೆ.

ಅದಿರಲಿ ಆ ನಿರ್ಜನ ಅರಣ್ಯದಲ್ಲಿ ಅವರಿಬ್ಬರಿಗೆ ನಡೆದ ಸಂಭಾಷಣೆ ಹೇಗೆ ಬಯಲಾಯಿತು ಗೊತ್ತೆ? ಅಲ್ಲೊಬ್ಬ ಬ್ರಾಹ್ಮಣ. ಇವರಿಬ್ಬರ ಸಂಭಾಷಣೆ ಕೇಳಲು ಮರಹತ್ತಿ ಕುಳಿತಿದ್ದ. ತಕ್ಷಕನು ಮರವನ್ನು ಸುಟ್ಟಾಗ ಇವನೂ ಬೂದಿಯಾದ. ಕಾಶ್ಯಪನು ಬದುಕಿಸಿದಾಗ ಇವನೂ ಬದುಕಿ ಬಂದು ಈ ಕಥೆಯನ್ನು ಎಲ್ಲರಿಗೂ ಹೇಳಿದ!

* * * *

ಶಾಲಿಹೋತ್ರ

ಭಾರತದ ಉತ್ತಮ ಶಾಸ್ತ್ರಗ್ರಂಥಗಳಲ್ಲಿ ಶಾಲಿಹೋತ್ರ ಒಂದು. ಇದು ಅಶ್ವಶಾಸ್ತ್ರವನ್ನು ವಿವರಿಸುವ ಒಂದು ಲಕ್ಷಣ ಗ್ರಂಥ. ಶಾಲಿಹೋತ್ರ ಎಂದರೆ ಕುದುರೆ, ಅಶ್ವಶಾಸ್ತ್ರ, ಅಶ್ವಶಾಸ್ತ್ರಗ್ರಂಥ ಬರೆದಾತನ ಹೆಸರು ಎಂದೆಲ್ಲ ಅರ್ಥಗಳಿವೆ. ಬಹುಶಃ ಇದು ಒಂದು ಅಶ್ವಸಂಬಂಧಿಯಾದ ದ್ರಾವಿಡ ಹೆಸರಾಗಿದ್ದು ಅನಂತರ ಸಂಸ್ಕೃತಕ್ಕೆ ಹೋಗಿರುವ ಸಾಧ್ಯತೆಯನ್ನು ವಿದ್ವಾಂಸರು ಊಹಿಸಿದ್ದಾರೆ. ಅರಣ್ಯಪರ್ವದ ಎಪ್ಪತ್ತೊಂದನೆಯ ಅಧ್ಯಾಯವು ಈ ಶಾಲಿಹೋತ್ರ ಎಂಬಾತನ ಬಗೆಗೆ ತಿಳಿಸುತ್ತದೆ.

ಶಾಲಿಹೋತ್ರ ಒಬ್ಬ ಋಷಿ. ಮಹಾಸಾಧಕ. ದೀರ್ಘಕಾಲ ತಪಸ್ಸು ಮಾಡಿ ಅದರ ಫಲವಾಗಿ ಒಂದು ಕೊಳವನ್ನು ಒಂದು ಮರವನ್ನು ತಾವೇ ಸೃಷ್ಟಿಸಿದ್ದರಂತೆ. ಎರಡೂ ವಿಶಿಷ್ಟ ಗುಣದವುಗಳೇ ಆಗಿವೆ.ಆ ಮರದ ಕೆಳಗೆ ನಿಂತರೆ ಬಿಸಿಲು, ಮಳೆಗಳ ಅನುಭವವೇ ಆಗುತ್ತಿರಲಿಲ್ಲ ಎಂಬಷ್ಟು ಮಹಿಮಾ ವೃಕ್ಷ ಅದು. ಹಾಗೆಯೇ ಆ ಸರೋವರದಲ್ಲಿ ಸ್ನಾನ ಮಾಡಿದರೆ ಮಂಗಳಕರ, ನೀರನ್ನು ಕುಡಿದರೆ ಹಸಿವು ಬಾಯಾರಿಕೆಗಳೆರಡೂ ಮಾಯವಾಗುತ್ತಿದ್ದುವು ಎಂದು ಹೇಳಲಾಗಿದೆ. ಶಾಲಿಹೋತ್ರರ ಆಶ್ರಮವೂ ಜನಾದರಣೀಯವಾಗಿತ್ತು. ಅವರಿವರಿರಲಿ ಸ್ವಯಂ ವ್ಯಾಸರೇ ಶಾಲಿಹೋತ್ರರ ಆಶ್ರಮದಲ್ಲಿ ಆಗಾಗ ತಂಗುವ ಅಭ್ಯಾಸವಿರಿಸಿಕೊಂಡಿದ್ದರೆಂಬ ಸಂಗತಿ ಅರಣ್ಯಪರ್ವದಿಂದ ತಿಳಿದುಬರುತ್ತದೆ. ಬಂದವರಿಗೆಲ್ಲ ಅತಿಥಿ ಸತ್ಕಾರ ಮಾಡುವುದರಲ್ಲಿ ಶಾಲಿಹೋತ್ರರು ಪ್ರಸಿದ್ಧರಾಗಿದ್ದರಂತೆ. ಆಗಿನದೆಲ್ಲ ಯುದ್ಧ ಕಾಲವಾದುದರಿಂದ ರಾಜರುಗಳಿಗೆ ರಾಜಕುಮಾರರುಗಳಿಗೆ ಗಜಶಾಸ್ತ್ರ ಅಶ್ವಶಾಸ್ತ್ರಗಳ ಪರಿಚಯ ಅಗತ್ಯವಾಗಿತ್ತು. ಶಾಲಿಹೋತ್ರರು ಆಸಕ್ತರಿಗೆಲ್ಲ ಅಶ್ವಶಾಸ್ತ್ರವನ್ನು ಬೋಧಿಸುತ್ತಿದ್ದರಂತೆ. ಕುದುರೆಗಳ ಜಾತಿ, ವೇಗ, ಚುರುಕುತನ, ಅವುಗಳನ್ನು ಅಶ್ವಾರೋಹಿಗಳು ಮತ್ತು ರಥಿಕರು ಬಳಸಬೇಕಾದ ಬಗೆ ಮೊದಲಾದ ಎಲ್ಲ ತಾತ್ವಿಕ, ಪ್ರಾಯೋಗಿಕ ಅಂಶಗಳನ್ನು ಶಾಲಿಹೋತ್ರನು ಬಲ್ಲವರಾಗಿದ್ದರಂತೆ. ಇವರ ಬಳಿಗೆ ಬಂದ ಅಸಂಖ್ಯಾತ ಯಾತ್ರಿಕರ ಪೈಕಿ ಧರ್ಮರಾಯನ ಹೆಸರು ಮರೆಯುವಂತಿಲ್ಲ. ಧರ್ಮರಾಯನು ತೀರ್ಥಯಾತ್ರೆಯ ಕಾಲದಲ್ಲಿ ವ್ಯಾಪಕವಾದ ಸಂಚಾರವನ್ನು ಕೈಗೊಂಡ ಸಂಗತಿ ಅರಣ್ಯಪರ್ವದಲ್ಲಿ ಚರ್ಚಿತವಾಗಿದೆ. ಧರ್ಮರಾಯ ದ್ರೌಪದಿ ಭೀಮ ಅರ್ಜುನ ನಕುಲ ಸಹದೇವರು ಹಿಡಿಂಬೆಯೊಂದಿಗೆ ಶಾಲಿಹೋತ್ರರ ಆಶ್ರಮಕ್ಕೆ ಬಂದು ಸತ್ಕಾರವನ್ನು ಪಡೆದರಂತೆ. ಅಲ್ಲಿನ ಸರೋವರದ ನೀರು ಕುಡಿದ ಸಂಗತಿಯೂ ವರ್ಣಿತವಾಗಿದೆ. ಅಲ್ಲದೆ ಶಾಲಿಹೋತ್ರರು ತಪಸ್ವಿಗಳಾಗಿ ಸಾಧನೆ ಮಾಡಿದ ಆತ್ಮ ಜಿಜ್ಞಾಸುಗಳಾಗಿದ್ದುದರಿಂದ ಸವಿವರವಾಗಿ ಧರ್ಮರಾಯನಿಗೆ ವೇದಾಂತದ ರಹಸ್ಯಗಳನ್ನು ತಿಳಿಸಿಕೊಟ್ಟರೆಂದು ವನಪರ್ವ ಹೇಳುತ್ತದೆ.

'ಹಯಾನಾಂ ಕುಲ ತತ್ವವಿತ್' ಎನ್ನಿಸಿಕೊಂಡಿದ್ದ ಶಾಲಿಹೋತ್ರರ ಹೆಸರಿನಲ್ಲಿ 'ಶಾಲಿಸೂರ' ಎಂಬ ಒಂದು ಸುಪ್ರಸಿದ್ಧ ತೀರ್ಥಕ್ಷೇತ್ರವಿದೆ ಎಂದು ಮಹಾಭಾರತವು ಹೇಳುತ್ತದೆ. ಹೀಗೆ ಅಶ್ವವಿದ್ಯಾಚಾರ್ಯ, ಆತ್ಮವಿದ್ಯಾಚಾರ್ಯ ಎನ್ನಬಹುದಾದ ಶಾಲಿಹೋತ್ರ ಲೋಕೋಪಕಾರಿಯಾಗಿ ಬಾಳಿದ. ಅಧ್ಯಾತ್ಮಿಕ ಸಾಧನೆಗಳ ಜೊತೆಜೊತೆಗೆ ಅಶ್ವವಿದ್ಯೆ, ಗಜವಿದ್ಯೆ ಔಷಧ ವಿದ್ಯೆ, ಯೋಗವಿದ್ಯೆ ಮತ್ತು ಅತಿಥಿ ಸತ್ಕಾರ ವಿದ್ಯೆಗಳಲ್ಲೂ ಪರಿಣತರಾಗಿದ್ದ ಅಂದಿನ ಕಾಲದ ಸಾಧುಸಂತರು ಸಮಾಜಕಲ್ಯಾಣಕಾರಕವಾದ ಲೌಕಿಕ ಆಸಕ್ತಿಗಳನ್ನೂ ಹೊಂದಿದ್ದರೆಂಬುದು ಗಮನಿಸಬೇಕಾದ ಆರೋಗ್ಯಕರ ಸಂಗತಿಯಾಗಿದೆ.

* * * *

ರುಕ್ಮ (ರುಕ್ಮಿ)

ಮುಂಗೋಪ, ಒರಟು ನಡತೆ ಮತ್ತು ರಾಕ್ಷಸೀ ಪ್ರವೃತ್ತಿಗಳಿಂದ ಕೂಡಿದ ರುಕ್ಮನು ಕುರುವಂಶದ ಭೀಷ್ಮಕ ರಾಜನ ಮಗ. ಇವನು ಶ್ರೀಕೃಷ್ಣನ ಭಾವಮೈದುನನೂ ಹೌದು, ಬೀಗನೂ ಹೌದು. ಏಕೆಂದರೆ ತನ್ನ ಮಗಳು ಶುಭಾಂಗಿಯನ್ನು ಕೃಷ್ಣನ ಮಗನಾದ ಪ್ರದ್ಯುಮ್ನನಿಗೆ ಕೊಟ್ಟು ಮದುವೆ ಮಾಡಿದ್ದ. ಜರಾಸಂಧನಿಗೆ ತನ್ನ ತಂದೆ ಭೀಷ್ಮಕನು ಮಹಾಭಕ್ತನಾಗಿ ಉಳಿದದ್ದರಿಂದ ರುಕ್ಮಿಯಲ್ಲೂ ತಾಮಸ ಪ್ರವೃತ್ತಿ



ಜಾಗೃತವಾಗಿತ್ತು. ಇದು ವ್ಯಕ್ತವಾಗುವುದು ರುಕ್ಮಿಣಿಯ ಸ್ವಯಂವರದ ಸಂದರ್ಭದಲ್ಲಿ. ನಿಜವಾಗಿ ರುಕ್ಮಿಗೆ ತನ್ನ ತಂಗಿಯಾದ ರುಕ್ಮಿಣಿಯನ್ನು ರಾಕ್ಷಸವೀರನೂ ಜರಾಸಂಧನ ಆಪ್ತನೂ ಶ್ರೀಕೃಷ್ಣನ ಪರಮ ವೈರಿಯೂ ಆದ ಶಿಶುಪಾಲನಿಗೆ ಕೊಟ್ಟು ಮದುವೆ ಮಾಡುವ ಮಹತ್ವದ ಉದ್ದೇಶವಿತ್ತು. ಆದರೆ ರುಕ್ಮನ ಸಂಚನ್ನು ತಿಳಿದ ಶ್ರೀಕೃಷ್ಣನು ತನ್ನನ್ನು ಪ್ರೇಮಿಸುತ್ತಿದ್ದ ರುಕ್ಮಿಣಿಯನ್ನು ಅಪಹರಿಸಿಕೊಂಡು ಹೋದ. ತನ್ನ ಪರಾಕ್ರಮವನ್ನು ಪ್ರದರ್ಶಿಸಿ, ಅಡ್ಡ ಬಂದ ರಾಜರುಗಳನ್ನೆಲ್ಲ ಪರಾಜಯಗೊಳಿಸಿದ. ಇಷ್ಟಾದರೂ ರುಕ್ಮಿಗೆ ಬುದ್ಧಿ ಬರಲಿಲ್ಲ. ಅವನು ಸಿಟ್ಟಿನಿಂದ ಶ್ರೀಕೃಷ್ಣನನ್ನು ಅಟ್ಟಿಸಿಕೊಂಡು ಹೋದ. ಇಬ್ಬರಿಗೂ ಭೀಕರ ಕದನವಾಯಿತು. ಶ್ರೀಕೃಷ್ಣನು ಮೈಲುಗೈಯನ್ನು ಸಾಧಿಸಿ ರುಕ್ಮನನ್ನು ಕೊಂದು ಹಾಕಲು ನೋಡಿದ. ಆದರೆ ಕೃಷ್ಣನ ಪಕ್ಕದಲ್ಲಿದ್ದ ರುಕ್ಮಿಣಿ ತನ್ನ ಅಣ್ಣನಿಗೆ ಜೀವ ಭಿಕ್ಷೆ ನೀಡುವಂತೆ ಕೃಷ್ಣನನ್ನು ಪರಿಪರಿಯಾಗಿ ಬೇಡಿಕೊಂಡಳು. ಅವಳ ಮಾತಿಗೆ ಬೆಲೆ ಕೊಟ್ಟು ಶ್ರೀಕೃಷ್ಣನು ರುಕ್ಮಿಯ ಶಿಖೆಯನ್ನೂ ಮೀಸೆಯನ್ನೂ ಕತ್ತರಿಸಿ ದಯೆ ತೋರಿ ಹಾಗೆಯೇ ಬಿಟ್ಟ, ವಾಸ್ತವವಾಗಿ, ಹೀಗೆ ಕೇಶ-ಮೀಸೆಗಳನ್ನು ಕತ್ತರಿಸಿ ಬಿಟ್ಟುಬಿಡುವಂತೆ ಸಲಹೆ ಕೊಟ್ಟವನು. ಅಲ್ಲಿದ್ದ ಬಲರಾಮ ಈ ಕಾರಣದಿಂದ ರುಕ್ಮನಿಗೆ ಬಲರಾಮನ ಮೇಲೆ ಅಸಾಧ್ಯವಾದ ಕೋಪ.

ಪಾಂಡವರು ಯುದ್ಧ ಸಿದ್ಧತೆಯಲ್ಲಿದ್ದಾಗ ಅರ್ಜುನನ ಬಳಿಗೆ ಬಂದು "ಅರ್ಜುನ! ನೀನು ಯುದ್ಧ ಮಾಡಲು ಭಯಪಡುತ್ತಿರುವವನಂತೆ ಕಾಣಿಸುತ್ತಿದ್ದೀ. ನಾನು ಲೀಲಾಜಾಲವಾಗಿ ಗೆಲ್ಲುತ್ತೇನೆ" ಎಂದು ಹೇಳಿದ. ಆಗ ಅರ್ಜುನನು ನಗುತ್ತಾ "ಅಯ್ಯೋ ರುಕ್ಮಿ ನೀನು ನಿನ್ನ ಸೇವಕತನದ ಬುದ್ಧಿಯನ್ನು ಚೆನ್ನಾಗಿ ಅಭಿವ್ಯಕ್ತಿಗೊಳಿಸಿದ್ದೀಯೆ! ಆಹಾ ರುಕ್ಮ! ನಿನ್ನ ಸೇವಾ ರೀತಿ ನನಗೆ ಚೆನ್ನಾಗಿ ಗೊತ್ತಿದೆ. ರುಕ್ಮಿಣಿಯನ್ನು ಅಪಹರಿಸಿಕೊಂಡು ಹೋಗುತ್ತಿದ್ದ ಕೃಷ್ಣನ ಮೇಲೆ ನೀನು ಎಂಥ ವಿಜಯ ಸಾಧಿಸಿದೆ ಎಂಬುದನ್ನು ನಾನು ಚೆನ್ನಾಗಿ ಬಲ್ಲೆ. ನಿನ್ನ ಬಡಾಯಿ ಸಾಕು. ನನಗೆ ನಿನ್ನಂಥವನಿಂದ ಯಾವ ವಿಧವಾದ ಸಹಾಯ ಕೂಡಬೇಕಾಗಿಲ್ಲ. ನೀನು ಇಲ್ಲಿರಬೇಡ-ಹೊರಟುಹೋಗು" ಎಂದು ಚುಚ್ಚಿ ಮಾತಾಡಿದ. ಬಡಾಯಿಗಾರ ರುಕ್ಮಿ ಈಗ ದುರ್ಯೋಧನನ ಬಳಿಗೆ ಹೋಗಿ "ಅಯ್ಯೋ ಕೌರವ! ನಿನಗೆ ಸೋಲಾಗುತ್ತಿದೆಯೆ ? ಹೆದರಬೇಡ. ನಾನು ನಿನಗೆ ಜಯವನ್ನು ತಂದುಕೊಡುತ್ತೇನೆ" ಎಂದು ಹೇಳಿದರೆ ಕೌರವ ತಿರಸ್ಕರಿಸಿದ. ಕೊನೆಗೆ ಬಲರಾಮನೊಡನೆ ಜೂಜಾಡಿ ಸೋತರೂ ನಾನೇ ಗೆದ್ದೆ ಎಂದು ಕೂಚ್ಚಿಕೊಂಡು ಯುದ್ಧಕ್ಕೆ ನಿಂತ. ಆಗ ಬಲರಾಮ ರುಕ್ಮನನ್ನು ಕೊಂದುಹಾಕಿದ.

* * * *

ದಾಮಗ್ರಂಥಿ (ಗ್ರಂಥಿಕ, ಜಯತ್ಸೇನ, ನಕುಲ)

ವಿರಾಟನಗರದಲ್ಲಿ ನಕುಲ ಇಟ್ಟುಕೊಂಡ ಹೆಸರು ದಾಮಗ್ರಂಥಿ. ಆಯುರ್ವೇದ ವಿಜ್ಞಾನಿಯಾಗಿದ್ದುದರಿಂದ ನಕುಲನಿಗೆ ಗ್ರಂಥಿಕ ಎಂಬ ಹೆಸರೂ ಇದೆ. 'ಅಶ್ವಬಂಧೋ ಭವಿಷ್ಯಾಮಿ' ಎಂದು ತೀರ್ಮಾನಿಸಿಕೊಂಡು ವಿರಾಟನ ಬಳಿಗೆ ಬಂದ ನಕುಲನು

ಗ್ರಂಥಿಕೋ ನಾಮ ನಾಮ್ನಾಹಂ....
ಪಾಂಡವೇನ ಪುರಾತಾತ
ಅಶ್ವೇಷ್ವಧಿಕೃತಃ ಪುರಾ

ಎಂದು ಹೇಳುತ್ತಾನೆ. ವಿರಾಟನು ಅವನ ಕೌಶಲಕ್ಕೆ ಮರುಳಾಗಿ ಅವನಿಗೆ ಉತ್ತಮ ಸಂಬಳವನ್ನೂ ವಾಸಕ್ಕೆ ಮನೆಯನ್ನೂ ಕೊಟ್ಟು ಅಶ್ವಪಾಲಕನ ಕೆಲಸಕ್ಕೆ ನೇಮಿಸುತ್ತಾನೆ. ಕುದುರೆಗಳ ಸ್ವಭಾವವನ್ನು ಬಲ್ಲ ದಾಮಗ್ರಂಥಿಯು ಅಶ್ವವಿದ್ಯೆಯನ್ನೂ ಅಶ್ವವೈದ್ಯವನ್ನೂ ಬಲ್ಲ ಆತನು ವಿರಾಟನನ್ನು ನಂಬಿಸಲು ಪಾಂಡವರ ಧರ್ಮರಾಯನ ಶತಸಹಸ್ರಕೋಟಿ ಅಶ್ವಗಳನ್ನು ನೋಡಿಕೊಳ್ಳುತ್ತಿದ್ದೆನೆಂದು ತಿಳಿಸುತ್ತಾನೆ. ವಿರಾಟನಿಗೆ ಪಾಂಡವರೆಂದರೆ ವಿಶ್ವಾಸವಲ್ಲವೆ. "ಅಯ್ಯೋ ನನ್ನ ಬಳಿ ಅಷ್ಟೊಂದು ಕುದುರೆಗಳಿಲ್ಲ" ಎಂದು ಹೇಳಿ ವಿರಾಟನು ಅಶ್ವಶಾಲೆಯ ಅಧ್ಯಕ್ಷನನ್ನಾಗಿ ಗ್ರಂಥಿಕನನ್ನು ನೇಮಿಸುತ್ತಾನೆ. ಪಾಂಡವರ ನೆನಪು ಬಂದು ಅಯ್ಯೋ ಹತಭಾಗ್ಯರಾದ ಪಾಂಡವರು ಕಾಡಿನಲ್ಲಿ ಎಲ್ಲಿದ್ದಾರೋ? ಏನು ಮಾಡುತ್ತಿದ್ದಾರೋ? ಎಂದು ಕೊರಗುತ್ತಾನೆ. ನಕುಲನ ರೂಪ, ನಿಲುವುಗಳನ್ನು ಕಂಡಾಗ ಇವನು ನೌಕರನಂತೆ ಕಾಣುವುದಿಲ್ಲವಲ್ಲ ಎಂದುಕೊಂಡದ್ದೂ ಉಂಟು. ಹೊಸ ಕುದುರೆಗಳನ್ನು ತರಿಸಿಕೊಳ್ಳುವ ಜವಾಬ್ದಾರಿಯನ್ನೂ ಗ್ರಂಥಿಕನಿಗೇ ವಹಿಸುತ್ತಾನೆ. ತನ್ನ ಕೆಲಸವನ್ನು ಅಚ್ಚುಕಟ್ಟಾಗಿ ಮಾಡುತ್ತಾ ದಾಮಗ್ರಂಥಿಯು ರಾಜನು ಮೆಚ್ಚಿಕೊಟ್ಟ ಹಣವನ್ನು ಸೋದರರಿಗೆ ಹಂಚುತ್ತ ಹೋಗುತ್ತಾನೆ.

ಮೊದಲ ಭೇಟಿಯಲ್ಲೇ ದಾಮಗ್ರಂಥಿಯು ವಿರಾಟನ ಮನಸ್ಸನ್ನು ಗೆಲ್ಲುತ್ತಾನೆ. ಪರಿಣಾಮವಾಗಿ ವಿರಾಟನು ಅವನಿಗೆ ಹೇಳುವ ಮಾತು ಇದು :

ದದಾಮಿ ಯಾನಾನಿ ಧನಂ।
ನಿವೇಶನಂ ಮಮಾಶ್ವಸೂತೋ ಭವಿತುಂ ತ್ವಮರ್ಹಸಿ
ಕುತೋಽಸಿ ಕಸ್ಯಾಸಿ ಕಥಂ ತ್ವಮಾಗತಃ।
ಪ್ರಬ್ರೂಹಿ ಶಿಲ್ಪಂ ತವ ವಿದ್ಯತೇ ಚ ಯತ್।

ಇದಕ್ಕೆ ದಾಮಗ್ರಂಥಿಯು ತಾನು ಧರ್ಮರಾಯನ ಅಶ್ವಶಾಲೆಯ ಮುಖ್ಯಸ್ಥನಾಗಿದ್ದುದನ್ನು ಜ್ಞಾಪಿಸಿ ವಿಶ್ವಾಸಗಳಿಸುತ್ತಾನೆ.

'ಅಶ್ವಾನಾಂ ಪ್ರಕೃತಿಂ ವೇದ್ಮಿ' ಎಂದು ಗ್ರಂಥಿಕ ಹೇಳಿದ್ದು ಸತ್ಯವಾದ ಮಾತೇ ಆಗಿದೆ. ಕುದುರೆಗಳ ವಿಷಯದಲ್ಲಿ ಅವನ ಜ್ಞಾನ ಅಸೀಮವಾದದ್ದು. ವಿರಾಟನ ಅಶ್ವಶಾಲೆಯಲ್ಲಿ ಕೆಲಸ ಮಾಡುತ್ತಿದ್ದ ದಾಮಗ್ರಂಥಿಯು, ಸುಶರ್ಮನು ಗೋಗ್ರಹಣ

ಮಾಡಿದಾಗ ವಿರಾಟನು ಅವನ ಮೇಲೆ ಯುದ್ಧಕ್ಕೆ ಹೊರಟಾಗ ಧರ್ಮರಾಯನ ಆಜ್ಞೆಯಂತೆ ತಾನೂ ಯುದ್ಧದಲ್ಲಿ ಪಾಲ್ಗೊಂಡು ಶತ್ರುಗಳನ್ನು ಸದೆ ಬಡಿಯುತ್ತಾನೆ.

ರಾಜಮನೆತನದವನಾಗಿದ್ದರೂ ಅಶ್ವಪಾಲಕನ ವೃತ್ತಿಯನ್ನು ನಿರ್ವಂಚನೆಯಿಂದ ತೃಪ್ತಿಕರವಾಗಿ ಸಾಗಿಸುವ ದಾಮಗ್ರಂಥಿಯು ಪ್ರತಿಷ್ಠೆಗೆ ಅಂಟಿಬೀಳದೆ ಪರಿಸ್ಥಿತಿಗೆ ಹೊಂದಿಕೊಂಡ ಬಗೆ ನಿಜಕ್ಕೂ ಪ್ರಶಂಸೆಗೆ ಯೋಗ್ಯವಾದದ್ದು. ಅಶ್ವಪಾಲನೆಯಂಥ ಜವಾಬ್ದಾರಿಯ ಕಾರ್ಯವನ್ನು ಚಾಣಾಕ್ಷತನದಿಂದ ನಿರ್ವಹಿಸುವಂಥ ಪ್ರತಿಭೆಯೂ ಅವನಿಗಿದ್ದುದು ಇಲ್ಲಿ ಸ್ಪಷ್ಟವಾಗುತ್ತದೆ.

*   *   *   *

ಕೃತ್ಯ

ದೇವದಾನವ ಯುದ್ಧದ ಪರಿಕಲ್ಪನೆಯನ್ನು ಮಹಾಭಾರತವು ಪೋಷಿಸಿಕೊಂಡು ಬಂದಿದೆ ಎನ್ನಲು ಹಲವಾರು ಆಧಾರಗಳಿವೆ. ಅವುಗಳಲ್ಲಿ ಕೌರವರು, ಕೀಚಕ, ಶಿಶುಪಾಲ ಮೊದಲಾದವರುಗಳ ಪೂರ್ವಜನ್ಮದ ರಾಕ್ಷಸನಾಮಗಳನ್ನು ಗುರುತಿಸುವುದೂ ಸೇರಿಕೊಂಡಿದೆ. ಕೃತ್ಯ ಎಂಬುವನು ಒಬ್ಬ ರಾಕ್ಷಸ. ವಾಮಾಚಾರ ಪದ್ಧತಿಯಲ್ಲಿ ಹವನ ಹೋಮಾದಿಗಳನ್ನು ಮಾಡಿ ಈ ರಾಕ್ಷಸನನ್ನು ಸೃಷ್ಟಿಸುತ್ತಾರೆ. ಅವನು ಪ್ರೀತನಾಗಿ ಇವರು ಹೇಳಿದ ಕಾರ್ಯವನ್ನು ಮಾಡುತ್ತಾನೆ.

ರಾಕ್ಷಸರುಗಳಿಗೆ ಯಾಕೋ ತಮ್ಮ ಸಂಖ್ಯೆ ಕ್ಷೀಣಿಸುತ್ತಿದೆ, ತಮ್ಮ ಶಕ್ತಿ ಮಂಕಾಗುತ್ತಿದೆ ಎಂದು ಕಳವಳವಾಗಿತ್ತಂತೆ. ದೇವಾಸುರ ಯುದ್ಧದಲ್ಲಿ ಕಳೆದುಕೊಂಡಿದ್ದ ಶಕ್ತಿ ಮಹಿಮೆ ಅಧಿಕಾರಗಳನ್ನು ಮರಳಿ ಪಡೆಯಲು ನೋಡುತ್ತಿದ್ದರಂತೆ. ಕೌರವರು ಹುಟ್ಟಿದಾಗ ಈ ರಾಕ್ಷಸರಿಗೆ ಪರಮಾನಂದವಾಗದೆ ಇರುತ್ತದೆಯೇ ? ಅವನಿಗೆ ಸರಿಯಾದ ಶಿಕ್ಷಣ ಕೊಡಲು ಸಮಯ ಕಾಯುತ್ತಿದ್ದರು.

ಘೋಷಯಾತ್ರೆಗೆಂದು ವೈಭವದಿಂದ ಹೋಗಿದ್ದ ಕೌರವನು ಗಂಧರ್ವ ನಾಯಕ ಚಿತ್ರಸೇನನಿಂದ ಭಂಗಿತನಾಗಿ ಕೊನೆಗೆ ಭೀಮಾರ್ಜುನರು ಅವನನ್ನು ಬಿಡಿಸಿಕೊಂಡು ಬಂದರಷ್ಟೆ. ಧರ್ಮರಾಯನು ಅವನನ್ನು ತುಂಬ ಗೌರವದಿಂದಲೇ ಮಾತಾಡಿಸಿ ಕಳಿಸಿಕೊಟ್ಟಿದ್ದರು. ಕೌರವ ಮಾತ್ರ ತನಗಾದ ತೇಜೋಭಂಗದಿಂದ ಕಂಗಾಲಾದ. ಆದ್ದರಿಂದ ಹಸ್ತಿನಾವತಿಗೆ ಹಿಂದಿರುಗದೆ ಗಂಗಾನದಿಯ ತೀರದಲ್ಲಿ ಪ್ರಾಯೋಪವೇಶಮಾಡಿ ಸಾಯಬೇಕೆಂದು ತೀರ್ಮಾನಿಸಿಕೊಂಡ. ಉಳಿದ ಕೌರವರು ಭೀಷ್ಮ ಕರ್ಣಶಕುನಿ ಮೊದಲಾದವರು ಹೇಳಿದರೂ ಕೇಳದೆ ತನ್ನ ಪ್ರಾಯೋಪವೇಶವನ್ನು ಮುಂದುವರಿಸಿದ.

ಇತ್ತ ಶುಕ್ರಾಚಾರ್ಯರ ಮುಖಂಡತ್ವದಲ್ಲಿ ರಾಕ್ಷಸರೆಲ್ಲ ಸೇರಿ ಮತ್ತೆ ಶಕ್ತಿಗಳಿಸಲು ಅವ್ಯಾಹತವಾಗಿ ಹವನ ಹೋಮಾದಿಗಳನ್ನು ಮಾಡುತ್ತ ಬಂದರು. ಅವರ ಅಪೇಕ್ಷೆಯಂತೆ ಹೋಮಕುಂಡದಿಂದ 'ಶಕ್ತಿ' ಎಂಬ ಭಯಂಕರ ಶಕ್ತಿ ರಾಕ್ಷಸನು ಮೂಡಿಬಂದ. ಸದ್ಯಕ್ಕೆ ಕೌರವನ ಹಿಂದೆ ತಾವೆಲ್ಲ ನಿಂತು ತಮ್ಮ ಗುಂಪಿನ ಬಲವನ್ನು ಬೆಳೆಸಲು ಅವರೆಲ್ಲ ನಿರ್ಧರಿಸಿದರು. ಅದರ ಮೊದಲ ಹೆಜ್ಜೆಯಾಗಿ ಶಕ್ತಿ ರಾಕ್ಷಸನನ್ನು ಕರೆದು ಗಂಗಾತೀರದಲ್ಲಿ ಉಪವಾಸ ಕುಳಿತಿರುವ ಕೌರವನನ್ನು ತಮ್ಮ ಪಾತಾಳಲೋಕಕ್ಕೆ ಕರೆತರುವಂತೆ ಆಜ್ಞಾಪಿಸಿದರು.

ಶಕ್ತಿ ರಾಕ್ಷಸ ಕೂಡಲೇ ಮಾಯಾಬಲದಿಂದ ಹೋಗಿ ಕೌರವನನ್ನು ಪತ್ತೆ ಹಚ್ಚಿದ. ಕೌರವನನ್ನು ಎತ್ತಿಕೊಂಡು ಪಾತಾಳಲೋಕಕ್ಕೆ ಬಂದು ಅವರಿಗೆ ಒಪ್ಪಿಸಿದ. ಅವರೆಲ್ಲ ಸೇರಿ ಕೌರವನಿಗೆ ರಾಕ್ಷಸನೀತಿಯನ್ನು ಉಪದೇಶಿಸಿದರು.

"ಕೌರವ! ನೀನು ಶೂರ. ಶೂರಜನ ರಕ್ಷಕ. ನಿರ್ಮಲ, ಉಜ್ವಲಾಂಗ. ಆದ್ದರಿಂದ ಹೇಳುತ್ತಿದ್ದೇವೆ. ಅಯ್ಯಾ ಭರತಕುಲ ದೀಪಕ, ನಿನ್ನಂಥ ವೀರನು ಆತ್ಮವನ್ನು ಓನ್ಯೆಸಿಕೊಳ್ಳುವುದು ತರವಲ್ಲ. ಹೀಗೆ ಮಾಡಿದರೆ ದುರ್ಗತಿ ಬರುತ್ತದೆ. ಲೋಕ

ವಿರುದ್ಧವಾದ ಮೂಲಘಾತಕವಾದ ಕಾರ್ಯಕ್ಕೆ ನಿನ್ನಂಥ ವಿವೇಕಿಗಳು ನುಗ್ಗಬಾರದು. ಅಧೈರ್ಯವನ್ನು ಬಿಡು. ಧೈರ್ಯ ತಂದುಕೊಂಡು ಶತ್ರು ಭಂಜನೆ ಮಾಡು ನಾವು ನಿನ್ನ ಸಹಾಯಕ್ಕೆ ಬರುತ್ತೇವೆ. ನಾವೆಲ್ಲ ಈಗಾಗಲೇ ಶಿವನನ್ನು ಆರಾಧಿಸಿ ಒಲಿಸಿಕೊಂಡಿದ್ದೇವೆ. ಅವನು ನಿನ್ನನ್ನು ಸೃಷ್ಟಿಸಿ ನಮಗೆಲ್ಲ ಅಧಿಪತಿಯಾಗಿ ನೇಮಿಸಿದ್ದಾನೆ. ನಿನ್ನ ದೇಹ ವಜ್ರಶಿಲೆಯಿಂದ ನಿರ್ಮಿತವಾಗಿದೆ. ಅಸ್ತ್ರ ಶಸ್ತ್ರಗಳಿಗೆ ಅದು ಅಭೇದ್ಯವಾಗಿದೆ. ಭಗದತ್ತನೇ ಮೊದಲಾದ ಅನೇಕ ರಾಕ್ಷಸರು ನಿನಗೆ ಸಹಾಯಮಾಡಲು ಕಾದಿದ್ದಾರೆ. ನೀನು ಅರ್ಜುನಾದಿಗಳ ಬಗೆಗೆ ಹೆದರದೆ ಯುದ್ಧ ಘೋಷಿಸು. ನಾವೆಲ್ಲ ಬೆಂಬಲಕ್ಕಿದ್ದೇವೆ. ಹೆದರಬೇಡ."

ಇಂಥ ಮಾತುಗಳು ಕೌರವನಿಗೆ ಸಂತೋಷ ತಾರದಿರುವುದುಂಟೇ? ಅವನು ಉಪವಾಸ ಪ್ರಾಯೋಪವೇಶಗಳನ್ನು ಮರೆತು ಉತ್ಸಾಹದಿಂದ ಹಸ್ತಿನಾವತಿಗೆ ಹಿಂದಿರುಗಿದ.

* * * *

ದಮಘೋಷ

ಚೇದಿರಾಜ ದಮಘೋಷನು ಯದುವಂಶದ ಒಬ್ಬ ದೊರೆ. ಅದರಲ್ಲೂ ಸಾತ್ವತ ಕುಲದವನು. ಇವನ ಹೆಂಡತಿ ಶ್ರುತಶ್ರವೆ ಅಥವಾ ಸಾತ್ವತಿ. ಇವಳು ವಸುದೇವನ ತಂಗಿ, ಶ್ರೀಕೃಷ್ಣನಿಗೆ ಸೋದರತ್ತೆ. ದಮಘೋಷನಿಗೆ ಮಗ ಶಿಶುಪಾಲ ಹುಟ್ಟಿದನೆಂಬ ಸಂತೋಷಕ್ಕಿಂತ ಅವನ ವಿಕಾರರೂಪವನ್ನು ನೋಡಿ ಕಸಿವಿಸಿಯಾಗಿತ್ತು. ಶಿಶುಪಾಲನಿಗೆ ಮೂರುಕಣ್ಣು, ನಾಲ್ಕು ಭುಜ, ಅವನು ಕತ್ತೆಯಂತೆ ಕಿರುಚುತ್ತಿದ್ದ. ಆಗಾಗ ಭಯಾನಕವಾಗಿ ಗರ್ಜಿಸುವುದೂ ಇವನ ಹವ್ಯಾಸವಾಗಿತ್ತು. ಮಗುವನ್ನು ಎತ್ತಿ ಆಚೆಗೆ ಬಿಸಾಡಬೇಕು ಎನ್ನಿಸುವಷ್ಟು ಅಸಹ್ಯವಾಗುತ್ತಿತ್ತು. ಆದರೆ ಆ ಸಮಯದಲ್ಲಿ ಆಕಾಶದಾಣಿಯಾಯಿತು.

"ದಮಘೋಷ... ಹೆದರಬೇಡ. ಮಗುವನ್ನು ಶಾಂತರೀತಿಯಿಂದ ಕಾಪಾಡಿ. ಅವನಿಗೆ ಇನ್ನೂ ಮೃತ್ಯುಕಾಲ ಬಂದಿಲ್ಲ. ಇವನನ್ನು ಶಸ್ತ್ರದಿಂದ ಕೊಲ್ಲಬಲ್ಲವನು ಬೇರೆಡೆ ಹುಟ್ಟಿದ್ದಾನೆ"

ದಮಘೋಷನ ಹೆಂಡತಿ ಶ್ರುತಶ್ರವೆ ಆಕಾಶವಾಣಿಯನ್ನೇ ಕೇಳಿದಳು.

"ಆದಿರಲಿ ನನ್ನ ಮಗನ ಸಾವು ಯಾರಿಂದ... ?"

ಆಕಾಶವಾಣಿ ಮತ್ತೆ ಮೊಳಗಿತು.

"ಯಾರ ತೊಡೆಯ ಮೇಲೆ ಮಲಗಿಸಿದರೆ ಈ ಮಗುವಿನ ಹೆಚ್ಚಿನ ಭುಜಗಳು ಮತ್ತು ಕಣ್ಣು ಮಾಯವಾಗಿ ಈ ಮಗು ಎಲ್ಲ ಮಕ್ಕಳಂತಾಗುತ್ತದೆಯೋ ಅವರೇ ಈ ಮಗುವಿನ ಸಾವಿಗೂ ಕಾರಣರಾಗುತ್ತಾರೆ." ಇದೊಂದು ವಿಚಿತ್ರ ಘೋಷಣೆ! ಕಾಪಾಡಿದವರಿಂದಲೇ ಸಾವು! ಗೊಂದಲಗೊಂಡ ದಮಘೋಷ ಶ್ರುತಶ್ರವೆಯರು ಮಗುವನ್ನು ನೋಡಲು ಬಂದವರ ತೊಡೆಯ ಮೇಲೆ ಮಗುವನ್ನು ಮಲಗಿಸಿ ಪರೀಕ್ಷಿಸುತ್ತಿದ್ದರು. ಕೊನೆಗೆ ಶ್ರೀಕೃಷ್ಣನ ತೊಡೆಯಮೇಲೆ ಇಟ್ಟಾಗ ಈ ಸಮಸ್ಯೆ ಪರಿಹಾರವಾಯಿತು. ಕೂಡಲೇ ಶ್ರುತಶ್ರವೆ ದಮಘೋಷರು ಈಗ ಮಗುವಿಗೆ ಜೀವದಾನವನ್ನು ಬೇಡುವ ಸ್ಥಿತಿಗೆ ಬಂದರು. ಈ ಹುಡುಗನ ಅಪರಾಧಗಳನ್ನೆಲ್ಲ ಕ್ಷಮಿಸಬೇಕೆಂದು ಪ್ರಾರ್ಥಿಸಿದರು. "ಕೃಷ್ಣ! ನೀನು ಆರ್ತತ್ರಾಣ ಪರಾಯಣ! ಎಲ್ಲರಿಗೂ ಆಶ್ರಯದಾತ. ಭಯಪೀಡಿತರಿಗೆ ಅಭಯಪ್ರದಾತನಲ್ಲವೆ?" ಎಂದು ಹೊಗಳಿದರು. ಕೃಷ್ಣ ಹೇಳಿದ:

"ನೀವು ಧರ್ಮಜ್ಞರು. ಹೆದರಬೇಡಿ. ನನ್ನಿಂದ ನಿಮ್ಮ ಮಗುವಿಗೆ ಏನೂ ತೊಂದರೆಯಾಗುವುದಿಲ್ಲ. ಈತ ಮಾಡುವ ನೂರು ತಪ್ಪುಗಳನ್ನೂ ನಾನು ಕ್ಷಮಿಸುತ್ತೇನೆ."

ಮಹಾಭಾರತ ಭಾಗವತಗಳಲ್ಲಿ ಶಿಶುಪಾಲನು ಕೃಷ್ಣನಿಗೆ ಮಾಡಿದ ಅಸಂಖ್ಯ ಅಪರಾಧಗಳ ವಿವರಗಳು ದೊರೆಯುತ್ತವೆ. ದಮಘೋಷ ಶ್ರುತಶ್ರವೆಯರು ಕೇಳಿದ್ದು ಪುತ್ರರಕ್ಷಣೆಯ ವರವನ್ನು. ಆದರೆ ಶ್ರೀಕೃಷ್ಣನು ವರವನ್ನು ಕೊಡುವಾಗ 'ನೂರು ತಪ್ಪು' ಗಳನ್ನು ಎಂದು ಸಂಖ್ಯಾನಿರ್ಣಯ ಮಾಡಿ ತಿದ್ದುಪಡಿಯನ್ನು ತಂದ. ಆಗಿನಿಂದ

ಶಿಶುಪಾಲನು ಮಾಡುವ ಅಪರಾಧಗಳನ್ನು ಲೆಕ್ಕವಿಡುತ್ತ ಹೋದ. ರಾಜಸೂಯಯಾಗದ ಸಂದರ್ಭದಲ್ಲಿ ಅವನು ನೂರಾನೆಯ ತಪ್ಪನ್ನು ಮಾಡುವುದನ್ನೇ ಕಾದಿದ್ದು ಅವನನ್ನು ಕೊಂದು ಹಾಕಿದ.

ತಪ್ಪಿಗೆ ಶಿಕ್ಷೆಕೊಡುವುದನ್ನು ಮುಂದೂಡಬಹುದೇ ಹೊರತು ಸಂಪೂರ್ಣವಾಗಿ ತಪ್ಪಿಸಲಾಗುವುದಿಲ್ಲ. ಹುಡುಗನಾಗಿದ್ದಾಗ ಶ್ರೀಕೃಷ್ಣನು ಮಾವನಾದ ಕಂಸನನ್ನು ಕೊಂದಿದ್ದ. ಈಗ ದೊಡ್ಡವನಾದ ಮೇಲೆ ಅಳಿಯನನ್ನು ಕೊಲ್ಲುವ ಸಂದರ್ಭ ಬಂದಿದೆ.

ದಮಘೋಷ ಶ್ರುತಶ್ರವೆಯರಿಗೆ ತಮ್ಮ ಮಗ ಶಿಶುಪಾಲನು ರಾಕ್ಷಸ ಸ್ವಭಾವದವನಾದದ್ದು ಕಸಿವಿಸಿಯ ಸಂಗತಿಯಾಗಿದ್ದರೂ ಪುತ್ರಮೋಹವು ಎಲ್ಲಕ್ಕಿಂತ ಪ್ರಬಲವಾದದ್ದಲ್ಲವೆ ?

* * * *

ಭೀಷ್ಮಕ

ಭೀಷ್ಮಕನು ವಿದರ್ಭದ ಅಧಿಪತಿ. ಭೋಜವಂಶದ ಅರಸ. ಹಿರಣ್ಯರೋಮ ಎಂದೂ ಇವನನ್ನು ಕರೆಯುತ್ತಾರೆ. ಮಹಾವೀರನಾಗಿದ್ದ ಈತ ಇಂದ್ರಸಖನಾಗಿ



ದೇವತೆಗಳಿಗೆ ಪ್ರಿಯನಾಗಿದ್ದ. 'ವ-ಜಯತ್ ಸ ಪಾಂಡ್ಯಕ್ರಥ ಕೈಶಿಕಾನ್' ಎಂದು

ವ್ಯಾಸರು ಹೇಳಿ ಈತ ಪಾಂಡ್ಯರನ್ನು ಕ್ರಥರನ್ನು ಕೈಶಿಕರನ್ನು ಗೆದ್ದು ಪ್ರತಿಷ್ಠೆಯನ್ನು ಹೆಚ್ಚಿಸಿಕೊಂಡನೆನ್ನುತ್ತಾರೆ. ಇವನ ತಮ್ಮ ಆಕೃತಿ.

'ಭ್ರಾತಾಯಸ್ಯಾಕೃತಿಃ ಶೂರೋ ಜಾಮದಗ್ನ್ಯಸಮೋಭವತ್'

ಪರಶುರಾಮನಿಗೆ ಸಮಾನವಾಗಿದ್ದ ಈ ತಮ್ಮನ ಸಹಾಯದಿಂದ ಭೀಷ್ಮಕನ ಕೀರ್ತಿ ಬೆಳಗಿತ್ತು. ಇಂದ್ರನೊಂದಿಗೆ ಆಪ್ತನಾಗಿದ್ದ ಈತ ಆ ಕಾಲದ ಮಹಾ ಬಲಶಾಲಿ ಚಕ್ರವರ್ತಿಯಾಗಿದ್ದ ಮಗಧ ಭೂಪಾಲ ಜರಾಸಂಧನಿಗೆ ಮಹಾಭಕ್ತನೂ ಆಗಿದ್ದನೆಂದು ವ್ಯಾಸರು ಹೇಳುತ್ತಾರೆ. (ಸ ಭಕ್ತೋ ಮಗಧೋ ರಾಜಾ ಭೀಷ್ಮಕಃ ಪರವೀರಹಾ).

ಭೋಜಕಟ ನಗರ ಈತನ ರಾಜಧಾನಿಯಾಗಿತ್ತು. ಕುಂಡಿನೀ ನಗರ ಎಂದೂ ಹೇಳುತ್ತಾರೆ. ಭೀಷ್ಮಕನ ಬಗೆಗೆ ಹೆಚ್ಚಿನ ವಿವರಗಳು ಭಾಗವತದಲ್ಲಿ ದೊರಕುತ್ತವೆ. ಭೀಷ್ಮಕನಿಗೆ ಆರು ಜನ ಮಕ್ಕಳು. ಐದು ಗಂಡು, ಒಂದು ಹೆಣ್ಣು, ರುಕ್ಮಿಣಿ ಇವನ ಮಗಳು. ರುಕ್ಮ ರುಕ್ಮರಥ, ರುಕ್ಮಬಾಹು, ರುಕ್ಮಕೇಶ ಮತ್ತು ರುಕ್ಮಮಾಲಿ ಗಂಡುಮಕ್ಕಳು.

ಇತ್ತ ಇಂದ್ರ ಮೊದಲಾದ ದೇವತೆಗಳ ಸಂಬಂಧವಿದ್ದರೆ ಅತ್ತ ರಾಕ್ಷಸ ಸ್ವಭಾವದ ಜನರೊಂದಿಗೂ ಭೀಷ್ಮಕನು ಸಂಬಂಧವಿರಿಸಿಕೊಂಡಿದ್ದುದು ಒಂದು ವಿಚಿತ್ರ ಸಂಗತಿ. ಇಷ್ಟೇ ಅಲ್ಲ. ಇವನು ಶ್ರೀಕೃಷ್ಣನಿಗೆ ಹೆಣ್ಣು ಕೊಟ್ಟ ಮಾವನೆಂದು ಪ್ರಸಿದ್ಧನಾಗಿದ್ದಾನೆ. ತಾನೆ! ಆದರೆ ತನ್ನ ಐಕೈಕ ಪುತ್ರಿಯನ್ನು ಜರಾಸಂಧನ ಸ್ನೇಹಿತನಾಗಿದ್ದ ಶಿಶುಪಾಲನಿಗೆ ಕೊಟ್ಟು ಮದುವೆ ಮಾಡಲು ಈತನೂ ಇವನ ಮಗನಾದ ರುಕ್ಮನೂ ಮನಸ್ಸು ಮಾಡಿದ್ದರು. ರುಕ್ಮಿಣಿಯ ಸ್ವಯಂವರಕ್ಕೂ ಏರ್ಪಾಡು ಮಾಡಿದ್ದರು. ಆದರೆ ಅಲ್ಲಿ ನ್ಯಾಯ ದೊರೆಯುವ ಭರವಸೆ ಇಲ್ಲದೆ ರುಕ್ಮಿಣಿ ಉಪಾಯವಾಗಿ 'ರಾಕ್ಷಸ ವಿವಾಹ'ವಾಗುವಂತೆ ಶ್ರೀಕೃಷ್ಣನಿಗೆ ಹೇಳಿ ಕಳುಹಿಸಿದ್ದರಿಂದ ಶ್ರೀಕೃಷ್ಣನು ಬಂದು ಇವಳನ್ನು ಅಪಹರಿಸಿ, ಅಡ್ಡ ಬಂದ ವೀರರನ್ನೆಲ್ಲ ಪರಾಭವಗೊಳಿಸಿದುದು ಇತಿಹಾಸ ಪ್ರಸಿದ್ಧ ಕಥನವಾಗಿದೆ. ಜರಾಸಂಧನ ಪತನವಾದ ಮೇಲೆ ಕೂಡ ಭೀಷ್ಮಕನಿಗೆ ಪಾಂಡವರ ಮೇಲೆ ಅಸಹನೆ ಇದ್ದೇ ಇದ್ದುದರಿಂದ ಸಹದೇವನು ರಾಜಸೂಯ ಯಾಗದ ಸಂದರ್ಭದಲ್ಲಿ ದಿಗ್ವಿಜಯಕ್ಕೆಂದು ಬಂದಾಗ ಭೀಷ್ಮಕನು ಪ್ರತಿಭಟಿಸಿ ನಿಂತು ಎರಡು ದಿನ ಹೋರಾಡಿದ. ಕೊನೆಗೆ ಅಧಿಕ ಬಲನಾಗಿದ್ದ ಸಹದೇವನ ಕೈಯಲ್ಲಿ ಕಪ್ಪಕಾಣಿಕೆಗಳನ್ನು ಕೊಟ್ಟು ಕಳಿಸಿದ. ಜರಾಸಂಧನ ಪ್ರಬಲ ಮಿತ್ರ ವರ್ಗದಲ್ಲಿ ಒಬ್ಬನಾಗಿದ್ದ ಈತ ಶಿಶುಪಾಲ ಸಾಲ್ವಾದಿಗಳಂತೆ ಕೃಷ್ಣನೊಂದಿಗೆ ಸೆಣಸದ ಇದ್ದುದರಿಂದ ಉಳಿದುಕೊಂಡ!

* * * *

ಪಂಚೇಂದ್ರರು

ಐವರು ಪಾಂಡವರು ಒಬ್ಬಳು ದ್ರೌಪದಿಯನ್ನು ಮದುವೆಯಾಗುತ್ತಾರಷ್ಟೆ. ಇದು ಲೋಕನೀತಿಗೆ ವಿರೋಧವಾದ ಕ್ರಮವಲ್ಲವೆ? ಆದರೆ ಸಮಾಜದ ಪ್ರತಿಷ್ಠಿತ ವ್ಯಕ್ತಿಗಳೆನಿಸಿಕೊಂಡವರೇ ಹೀಗೆ ಮಾಡಿದರೆ? ವ್ಯಾಸ ಮಹರ್ಷಿಗಳೇ ಇದಕ್ಕೆ ಒಪ್ಪಿಗೆ ಕೊಟ್ಟರೆ...? ಇಂದಿಗೂ ಈ ಪ್ರಶ್ನೆ ಉಳಿದಿದೆ. ವ್ಯಾಸರ ಕಾಲದಲ್ಲೂ ಇತ್ತು. ಅದಕ್ಕೆ ಸಮರ್ಥನೆಗಾಗಿ ಪಂಚೇಂದ್ರರ ಕಥೆ. ಇಂದ್ರಸೇನೆ ಮೌದ್ಗಲ್ಯರ ಕಥೆಗಳು ಹುಟ್ಟಿಕೊಂಡಿವೆ. ಈ ಕಥೆಗಳಲ್ಲಿ ಹುರುಳೂ ಇಲ್ಲ. ತಾರ್ಕಿಕವಾಗಿ ಒಪ್ಪಿಸುವ ಗುಣವೂ ಇಲ್ಲ. ಆದರೂ ಈ ಕಥೆ ಪ್ರಚಲಿತವಾಗಿದೆ. ವ್ಯಾಸರು ದ್ರುಪದನಿಗೆ ಹೇಳುವ ಕಥೆ ಇದು.

ದ್ರೌಪದಿ ಪೂರ್ವಜನ್ಮದಲ್ಲಿ ಇಂದ್ರಸೇನೆ ಎಂಬ ಹೆಸರಿನ ಪತಿವ್ರತೆಯಾಗಿದ್ದಳು. ಇವಳ ಗಂಡ ಮೌದ್ಗಲ್ಯ ಮುನಿ. ಅವನು ರೋಗಿ. ಆದರೂ ಬೇಸರವಿಲ್ಲದೆ ಅವನ ಹೆಂಡತಿ ಪತಿ ಸೇವೆ ಮಾಡುತ್ತಿದ್ದಳು. ಕುಷ್ಠರೋಗಿಯಾದ ಪತಿರಾಯ ಒಂದು ಸಲ ಊಟಮಾಡಿದಾಗ ಎಲೆಯಲ್ಲಿ ಅವನ ಬೆರಳು ಬಿದ್ದುಹೋಯಿತು. ಆದರೂ ಲಕ್ಷಿಸದೆ ಅದನ್ನು ಪಕ್ಕಕ್ಕೆ ಸರಿಸಿ ಇಂದ್ರಸೇನೆ ಊಟಮಾಡಿದಳಂತೆ. ಇವಳ ಸೇವಾತತ್ಪರತೆಯನ್ನು ಕಂಡು ಮೌದ್ಗಲ್ಯನು ಒಂದು ವರಕೊಟ್ಟ. "ಏನು ಬೇಕಾದರೂ ಕೇಳಿಕೋ" ಎಂದ. ಆಗ ಇಂದ್ರಸೇನೆ "ನೀನು ಸುಂದರ ರೂಪ ಧರಿಸಿ ನನ್ನನ್ನು ರಮಿಸಬೇಕು. ಲೋಕಾಂತರಗಳಲ್ಲಿ ಪ್ರವಾಸ ಮಾಡಿಸಬೇಕು" ಎಂದಳು. ಅವನು ಒಪ್ಪಿ ಹಾಗೆಯೇ ಮಾಡಿ ಅವಳನ್ನು ಬಿಟ್ಟು ಘೋರ ತಪಸ್ಸು ಮಾಡಿ ರುದ್ರ ಲೋಕಕ್ಕೆ ಹೋದ. ಅಲ್ಲಿಗೆ ಕಥೆ ಮುಗಿಯುವುದಿಲ್ಲ.

ಇಂದ್ರಸೇನೆಗೆ ಶಾರೀರಕ ಬಯಕೆ ಹೆಚ್ಚಾಯಿತೇ ಹೊರತು ತಗ್ಗಲಿಲ್ಲ. ಆದುದರಿಂದ ಮುಂದೆ ಕಾಶಿರಾಜನ ಮಗಳಾಗಿ ಚಿರಕಾರಿ ಎಂಬ ಹೆಸರಿನಲ್ಲಿ ಬೆಳೆದಳು. ಭರ್ತನಿಗಾಗಿ ಉಗ್ರತಪಸ್ಸು ಮಾಡಿದಳು. ಆಗ ಅವಳ ಬಳಿಗೆ ಇಂದ್ರ ವಾಯು ಯಮ ಮತ್ತು ಅಶ್ವಿನೀದೇವತೆಗಳು ಬಂದರು. ಬಂದು "ನಮ್ಮ ಅಂಶದಲ್ಲಿ ಹುಟ್ಟುವ ಮಕ್ಕಳೊಂದಿಗೆ ನಿನ್ನ ಮದುವೆ" ಎಂದು ಹೇಳಿ ಹೋದರು. ಅನಂತರ ಅವಳು ಜಲಾಹಾರೆಯಾಗಿ ಅನಂತರ ನಿರಾಹಾರೆಯಾಗಿ ಶಿವನನ್ನು ಕುರಿತು ತಪಸ್ಸು ಮಾಡಿದಳು.

ಮುಂದಿನ ಕಥೆ ಇನ್ನೂ ಗೂಢವಾಗಿದೆ. ಒಬ್ಬಳು ಕನ್ಯೆ ಗಂಗಾಜಲದ ಮಧ್ಯೆ ಅಳುತ್ತಾ ಕುಳಿತಿದ್ದಾಳೆ. ಆಕೆಯ ಕಣ್ಣೀರು ಬಂಗಾರದ ತಾವರೆಯಾಗುತ್ತಿದೆ. ದೇವತಗಳು ಆಶ್ಚರ್ಯದಿಂದ ನೀನು ಯಾರು? ಎಂದು ಕೇಳಿದರು. ಅವಳು ಅವರನ್ನೆಲ್ಲ ಪಗಡೆಯಾಡುತ್ತಿರುವ ಶಿವನ ಬಳಿಗೆ ಕರೆದೊಯ್ದಳು. ಅವನು ವರುಣ ಎಂದು ತಿಳಿದ ಇಂದ್ರನು ಅವನ ಮೇಲೆ ಪಗಡೆಯಾಡುತ್ತಿರುವುದಕ್ಕಾಗಿ ಆಕ್ಷೇಪಿಸಿದ. ರುದ್ರನ ಆಜ್ಞೆಯಂತೆ ಅವನನ್ನು ಎಳೆದುಕೊಂಡು ಹೋದರು. ಅಲ್ಲಿ ಹೋದರೆ ಈ ಇಂದ್ರನಂತೆ ಅಲ್ಲಿ ಇನ್ನೂ ನಾಲ್ವರಿದ್ದಾರೆ. ಇವರೇ ಪಂಚೇಂದ್ರರು.

ಅದಲ್ಲದೆ ಒಬ್ಬಳು ಕನ್ಯೆ 'ಪತೀಂ ದೇಹಿ' ಎಂದು ಶಿವನನ್ನು ಐದು ಬಾರಿ ಕೇಳಿದ್ದರಿಂದ ಅವಳಿಗೆ ಪಂಚಪತಿಗಳಾಗುವಂತೆ ಶಿವನು ಹರಸಿದನಂತೆ.

ಇಂಥ ಅಜ್ಞಿಕತೆಗಳನ್ನು ಹೇಳಿ ವ್ಯಾಸರು ನಮ್ಮನ್ನು ಒಪ್ಪಿಸುವ ಪ್ರಯತ್ನ ಮಾಡುವ ಬದಲಿಗೆ ಪಂಚಪತಿತ್ವದ ಕಲ್ಪನೆಯನ್ನು ವಿಸ್ಮಯಕಾರಿಯಾಗಿಯೇ ಉಳಿಸಿದ್ದರೆ ಚೆನ್ನಾಗಿತ್ತು ಎನ್ನಿಸುತ್ತದೆ.

* * * *

ಸುದೇವ

ಮಹಾಭಾರತದ ನಳಚರಿತ್ರೆಯಲ್ಲಿ ಈತನ ವಿಷಯ ಬರುತ್ತದೆ. ನಳದಮಯಂತಿಯರು ರಾಜ್ಯವನ್ನು ಕಳೆದುಕೊಂಡು ಕಾಡಿಗೆ ಹೋದಾಗ ಅವರನ್ನು ಹುಡುಕಿಸಲು ತಂದೆ ಭೀಮರಾಜ ತುಂಬ ಪ್ರಯತ್ನಿಸಿದ. ಕೊನೆಗೆ ನಳ-ದಮಯಂತಿಯರನ್ನು ಯಾರಾದರೂ ಹುಡುಕಿ ಕೊಟ್ಟರೆ ಅವರಿಗೆ ಒಂದು ಸಾವಿರ ಗೋವುಗಳನ್ನೂ ಅಗ್ರಹಾರವನ್ನೂ ಒಂದು ಗ್ರಾಮವನ್ನೂ ಬಹುಮಾನವಾಗಿ ಕೊಡುವುದಾಗಿ ಘೋಷಿಸಿದ. ಸುದೇವ ದಮಯಂತಿಯ ತಮ್ಮನ ಗೆಳೆಯನಾದ ಒಬ್ಬ ಬ್ರಾಹ್ಮಣ. ಅಲ್ಲದೆ ಅವನು ದಮಯಂತಿಯನ್ನು ನೋಡಿದ್ದವನಲ್ಲವೆ ? ಹುಡುಕಿಕೊಟ್ಟು ಬಹುಮಾನ ಪಡೆಯುವ ಆಸೆಯಿಂದ ನದಿ, ಕೆರೆ, ಪರ್ವತ, ಗುಹೆ, ಕ್ಷೇತ್ರ ಗ್ರಾಮ ನಗರಗಳನ್ನೆಲ್ಲ ಸುತ್ತುತ್ತ ಚೇದಿರಾಜನ ಅರಮನೆಗೆ ಬಂದ. ಅಲ್ಲಿ ರಾಜ ರಾಣಿಯರ ಪರಿವಾರದಲ್ಲಿ ರಾಜಕುಮಾರಿ ಸುನಂದಳಿಗೆ ಸೈರಂಧ್ರಿಯ ವೇಷದಲ್ಲಿದ್ದ ದಮಯಂತಿಯನ್ನು ಗುರುತಿಸಿದ. ರಾಣಿಯಾಗಿದ್ದ ದಮಯಂತಿ ಈಗ ವೇಷ ಮರೆಸಿಕೊಂಡು ಸೇವಕಿಯಾಗಿದ್ದಾಳೆಂದು ತಿಳಿಯಿತು. ಅವಳು ತುಂಬ ದುಃಖಿತಳಾಗಿದ್ದಂತೆ ಕಂಡುಬಂದಿತು. ಅಲ್ಲದೆ ತುಂಬ ಕೃಶವಾಗಿದ್ದಳು. ಆದರೂ ಸುದೇವನು ಅವಳ ಗುರುತುಹಿಡಿದ. ಪ್ರತ್ಯಕ್ಷವಾದರೂ ಪ್ರಮಾಣಿಸಿ ನೋಡಬೇಕಲ್ಲವೇ ? ಒಂದು ಅವಕಾಶಕ್ಕಾಗಿ ಕಾದಿದ್ದು ಅವಳ ಬಳಿಗೆ ಹೋದ. ಅವಳು ಸುದೇವನ ಗುರುತು ಹಿಡಿದಳು. ತನ್ನ ದುಃಖದ ಕಥೆಯನ್ನು ಸಾದ್ಯಂತವಾಗಿ ವಿವರಿಸಿ ಬಿಕ್ಕಿ ಬಿಕ್ಕಿ ಅತ್ತಳು. ಈ ದೃಶ್ಯವನ್ನು ಕಂಡ ರಾಜಕುಮಾರಿ ಸುನಂದೆಗೆ ಆಶ್ಚರ್ಯವಾಯಿತು. ಯಾವ ಗಂಡಸಿನೊಂದಿಗೂ ಮಾತಾಡದಿದ್ದ ಸೈರಂಧ್ರಿ ಇಂದು ವಿಪ್ರನೊಂದಿಗೆ ಇರುವುದನ್ನು ಕಂಡು ಅವನನ್ನು ಕರೆಸಿ ಕೇಳಿದಳು. ಸುದೇವನು ದಮಯಂತಿಯ ವಿಷಯವನ್ನೆಲ್ಲ ಹೇಳಿದ. ಅವಳಿಗೂ ದಮಯಂತಿ, ಭೀಮ, ವಿದರ್ಭರಾಜ್ಯ ಎಲ್ಲ ಗೊತ್ತಿದ್ದುದರಿಂದ ನೇರವಾಗಿ ಸೈರಂಧ್ರಿಯ ಬಳಿ ಹೋಗಿ ಅವಳನ್ನು ಪ್ರೀತಿಯಿಂದ ತಬ್ಬಿಕೊಂಡಳು. ವಾಸ್ತವವಾಗಿ ಅವಳ ಅಮ್ಮ ದಮಯಂತಿಗೆ ಚಿಕ್ಕಮ್ಮನಾಗಬೇಕು. ದಮಯಂತಿಯ ತಾಯಿ ಮತ್ತು ಸುನಂದೆಯ ತಾಯಿ ಅಕ್ಕ ತಂಗಿಯರು. ದಶಾರ್ಣದೇಶದವರು. ಚಿಕ್ಕಮ್ಮ ವೀರಬಾಹುವನ್ನು ಮದುವೆಯಾಗಿದ್ದಳು. ಚಿಕ್ಕಮ್ಮನಿಗೂ ಸುದ್ದಿ ತಿಳಿದು ಮಗಳು ದಮಯಂತಿಯನ್ನು ತುಂಬ ಪ್ರೀತಿಯಿಂದ ಸತ್ಕರಿಸಿದಳು. ಅನಂತರ ಸುದೇವನ ಜೊತೆಯಲ್ಲಿ ವಿದರ್ಭಕ್ಕೆ ಕಳಿಸಿಕೊಟ್ಟಳು. ಹೀಗೆ ತನ್ನ ಕಾರ್ಯದಲ್ಲಿ ಕೃತಕೃತ್ಯನಾದೆನೆಂದು ಸುದೇವನು ಹಿಗ್ಗಿದ. ಆದರೆ ಇವನ ಬುದ್ಧಿವಂತಿಕೆಯನ್ನು ಮೆಚ್ಚಿ ಬಹುಮಾನಿಸಿದ ರಾಜನು ಮತ್ತೆ ನಳನನ್ನು ಹುಡುಕಿಕೊಂಡು ಬರುವ ಕೆಲಸವನ್ನು ಸುದೇವನಿಗೆ ವಹಿಸಿದ. ನಳನು ವೇಷಮರೆಸಿಕೊಂಡು ಋತುಪರ್ಣರಾಜನ ಬಳಿ ಸಾರಥಿಯಾಗಿ ಕೆಲಸಮಾಡುತ್ತಿದ್ದಾನೆಂಬ ಸುದ್ದಿ ಸುದೇವನಿಗೆ ತಿಳಿಯಿತು. ಋತುಪರ್ಣನು ಕೂಡ ವಿದರ್ಭರಾಜ ಭೀಮನ ಸ್ನೇಹಿತನೆಂಬುದೂ ತಿಳಿಯಿತು. ಆದುದರಿಂದ ನೇರವಾಗಿ

ಅಲ್ಲಿಗೇ ಹೋಗಿ ಸುದ್ದಿ ಸಂಗ್ರಹಿಸಿ ಋತುಪರ್ಣನ ಬಳಿಗೆ ಹೋಗಿ ತಮ್ಮ ಊಹೆಯನ್ನು ತಿಳಿಸಿದ. ಬಾಹುಕನೇ ನಳನೆಂದು ಪ್ರಮಾಣವಾಗಬೇಕಲ್ಲ. ಅದಕ್ಕೆ ಸುದೇವನು ಗುಟ್ಟಾಗಿ ದಮಯಂತಿಯು ಹೇಳಿಕೊಟ್ಟಿದ್ದಂತೆ ದಮಯಂತಿಯ ಪುನಸ್ಸ್ವಯಂವರದ ಸುದ್ದಿಯನ್ನು ತಲುಪಿಸಿ ಮರುದಿನವೇ ಮದುವೆಯಾದ್ದರಿಂದ ಒಂದು ರಾತ್ರಿಯೊಳಗೇ ಅಯೋಧ್ಯೆಯಿಂದ ಕುಂಡಿನ ಪುರಕ್ಕೆ ಹೊರಡಿಸಿಕೊಂಡು ಬಂದ. ನಿಜವಾದ ನಳನನ್ನು ಬಿಟ್ಟರೆ ಒಂದು ರಾತ್ರಿಯಲ್ಲಿ ಅಷ್ಟು ದೂರ ಪ್ರಯಾಣ ಮಾಡಬಲ್ಲ ರಥಿಕರು ಬೇರೆ ಇಲ್ಲವಾದ್ದರಿಂದ ಇದು ಸತ್ತ್ವ ಪರೀಕ್ಷೆಯೂ ಆಗಿತ್ತು. ಹೀಗೆ ನಳ-ದಮಯಂತಿಯರನ್ನು ಬೇರೆ ಬೇರೆ ಸಂದರ್ಭಗಳಲ್ಲಿ ವಿದರ್ಭರಾಜನ ಅರಮನೆಗೆ ಕರೆತಂದ ಕೀರ್ತಿ ಸುದೇವನಿಗೆ ಸಲ್ಲುತ್ತದೆ.

*   *   *   *

ಡುಂಡುಭ

ಪ್ರಾಣಿದಯಾ ಸಂಘದವರು ಅಗತ್ಯವಾಗಿ ಓದಿ ಪ್ರಚಾರ ಮಾಡಬೇಕಾದ ಕಥೆ ಇದು. ವಿವೇಕವಿಲ್ಲದೆ ಎದುರು ಬಂದ ಹಾವುಗಳನ್ನೆಲ್ಲ ಕೊಲ್ಲುತ್ತ ಹೋಗುವುದು ಸರಿಯಲ್ಲ ಎಂಬ ನಿಲುವನ್ನು ಇದು ಪ್ರತಿಪಾದಿಸುತ್ತದೆ.

ರುರು ಎಂಬಾತ ಪ್ರಮದ್ವರೆಯನ್ನು ಪ್ರೀತಿಸಿದ. ಆದರೆ ಮದುವೆಯಾಗುವುದರೊಳಗೆ ಒಂದು ಹಾವು ಕಚ್ಚಿದ್ದರಿಂದ ಅವಳು ಸತ್ತು ಹೋದಳು. ಛಲವಾದಿಯೂ ಪ್ರಮದ್ವರಾ ಪ್ರೇಮಿಯೂ ಆಗಿದ್ದ ರುರು ತಪಸ್ಸುಮಾಡಿ ತನ್ನ ಆಯುಸ್ಸಿನ ಅರ್ಧಭಾಗವನ್ನು ಪ್ರಮದ್ವರೆಗೆ ಕೊಟ್ಟು ಅವಳನ್ನು ಮತ್ತೆ ಪಡೆದದ್ದು ಒಂದು ಅಪೂರ್ವ ಘಟನೆ. ಸುಕೋಮಲೆಯಾದ ತನ್ನ ಮನದನ್ನೆಯನ್ನು ಹಾವು ಕಡಿಯಿತಲ್ಲ ಎಂಬ ಕಹಿಭಾವನೆ ಮತ್ತು ಸೇಡಿನ ಭಾವನೆ ಅವನ ಅಂತರಂಗದಲ್ಲಿ ಉಳಿದೇ ಉಳಿಯಿತು. ದಾರಿಯಲ್ಲಿ ಸಿಕ್ಕಕಡೆ ದಾಕ್ಷಿಣ್ಯವಿಲ್ಲದೆ ಹಾವುಗಳ ಬೇಟೆಯಾಡುವುದಕ್ಕೆ ಆರಂಭಿಸಿದ.

ಒಂದು ಸಲ ಡುಂಡುಭ ಎಂಬ ಸರ್ಪ ಅವನ ಕಣ್ಣಿಗೆ ಬಿತ್ತು. ಹುತ್ತಗಳನ್ನು ಪೊದೆಗಳನ್ನು ತಡವಿ ಹಾವುಗಳನ್ನು ಕೋಲಿನಿಂದ ಬಡಿದು ಕೊಲ್ಲುತ್ತಿದ್ದ ರುರುವಿಗೆ ಎದುರಿಗೇ ಹಾವು ಸಿಕ್ಕಿದರೆ ಕೇಳಬೇಕೆ ? ಆ ಹಾವಿಗೆ ಮೈ ಸ್ಥೂಲವಾಗಿತ್ತು, ವಯಸ್ಸು ಆಗಿತ್ತು. ಆದುದರಿಂದ ಅದು ಚಲಿಸಲು ಕಷ್ಟಪಡುತ್ತಿತ್ತು. ಆದನ್ನೂ ಚಚ್ಚಲು ಹೋದ. ಡುಂಡುಭ ಅವನನ್ನು ತಡೆದು "ನನ್ನನ್ನೇಕೆ ಕೊಲ್ಲುತ್ತೀ" ಎಂದು ಕೇಳಿತು. ಅವನು ಕಾರಣ ಹೇಳಿದ. ಆದರೆ ರುರು, "ನಾನು ವಿಷದ ಹಾವಲ್ಲವಲ್ಲ! ನಾನೇ ಅಲ್ಲ ನನ್ನ ಜಾತಿಯ ಯಾವ ಸರ್ಪವೂ ವಿಷಸರ್ಪವಲ್ಲ. ನಮ್ಮಿಂದ ಮಾನವರಿಗೆ ಯಾವ ಅಪಾಯವೂ ಇಲ್ಲ" ಎಂದಿತು. ಆ ಮಾತು ಕೇಳಿ ರುರು ಸುಮ್ಮನಾದ. ತನ್ನ ದುಡುಕಿನ ಸ್ವಭಾವದ ಬಗೆಗೆ ಬೇಸರಪಟ್ಟುಕೊಂಡ. ಅಲ್ಲದೆ ಆ ಹಾವು ಜ್ಞಾನಿಯಂತೆ ಮಾತಾಡುತ್ತಿದ್ದುದು ಅವನಿಗೆ ಆಶ್ಚರ್ಯತಂದಿತ್ತು. ಅದು ಸರ್ಪವೇ ಇರಲಿಕ್ಕಿಲ್ಲ ಏನೋ ಕಾರಣದಿಂದ ಶಾಪದಿಂದ ಹೀಗಾಗಿರಬೇಕು ಎಂದು ತರ್ಕಿಸಿ ಅದರ ಕಥೆ ಕೇಳಿದ. ಆ ಹಾವು ತನ್ನ ಪೂರ್ವ ಕಥೆಯನ್ನು ವಿವರಿಸಿತು.

"ರುರು ! ನಾನು ಹಿಂದೆ ಸಹಸ್ರಪಾದ ಎಂಬ ಋಷಿಯಾಗಿದ್ದೆ. ಸಂಘಜೀವಿಯೂ ವಿನೋದ ಜೀವಿಯೂ ಆಗಿದ್ದೆ. ನನಗೆ ಖಗಮ ಎಂಬ ಗೆಳೆಯನಿದ್ದ. ಅವನ ಮನೆಗೆ ಹೋದಾಗ ಅವನು ಯಾಗ ಮಾಡುತ್ತಿದ್ದ. ಅಲ್ಲಿ ಮಾತಿಗೆ ಅವಕಾಶವಿರಲಿಲ್ಲ. ಆದ್ದರಿಂದ ಸುಮ್ಮನೆ ಅಲ್ಲಿ ಬಿದ್ದಿದ್ದ ದರ್ಭೆಗಳನ್ನೇ ಎತ್ತಿಕೊಂಡು ಅದರಲ್ಲಿ ಒಂದು ನಕಲಿ ಹಾವನ್ನು ಮಾಡಿದೆ. ಪರಿಹಾಸಕ್ಕೆಂದು ಅವನ ಯಾಗಕಾರ್ಯ ಮುಗಿದ ಕೂಡಲೇ ದರ್ಭೆಯ ಹಾವನ್ನು ಅವನ ಮೇಲೆ ಎಸೆದೆ. ಅವನು ನಿಜವಾದ ಹಾವೆಂದು ತಿಳಿದು ಹೌಹಾರಿದ. ಮೂರ್ಛೆಹೋದ. ಅನಂತರ ನನ್ನ ಮೇಲೆ ಕೋಪಿಸಿಕೊಂಡು 'ನನ್ನ ಮೇಲೆ ವಿಷರಹಿತ ಹಾವನ್ನು ಎಸೆದೆಯಲ್ಲವೆ ? ನೀನು ಕೂಡ ವಿಷವಿಲ್ಲದ ಹಾವಾಗಿ ಹುಟ್ಟು' ಎಂದು ಶಾಪವನ್ನು ಕೊಟ್ಟ. ನನಗೆ ನನ್ನ ತಪ್ಪಿನ ಅರಿವಾಗಿ

ಪರಿಪರಿಯಾಗಿ ಬೇಡಿಕೊಂಡೆ. ಆಗ ಮುಂದೆ ನಿನಗೆ ಭಾರ್ಗವ ವಂಶವರ್ಧನನಾದ ರುರು ಎಂಬ ಮಹಾತ್ಮನ ಪರಿಚಯವಾದಾಗ ಮತ್ತೆ ಮೊದಲಿನಂತೆ ಮನುಷ್ಯ ಜನ್ಮ ಬರುತ್ತದೆ ಎಂದು ಹೇಳಿದ." ಈ ಕಥೆ ಹೇಳಿ ಮತ್ತೆ ಮನುಷ್ಯ ರೂಪ ಪಡೆದ ಆ ಋಷಿ ಜೀವಹಿಂಸೆ ಒಳ್ಳೆಯದಲ್ಲ ಎಂದು ಹಿತವಚನವನ್ನು ಹೇಳಿ ತನ್ನ ದಾರಿ ಹಿಡಿದು ಹೋದ.

ಸರಸಕ್ಕೆ ಹುಡುಗಾಟಕ್ಕೆ ಪರಿಹಾಸಕ್ಕೆ ಒಂದು ಮಿತಿಯಿರುತ್ತದೆ. ಅದರ ಎಲ್ಲೆಯನ್ನು ಮೀರಿದರೆ ಕೇಡು ತಪ್ಪಿದ್ದಲ್ಲ ಎಂದು ಆದಿಪರ್ವದ ಈ ಕಥೆ ಹೇಳುತ್ತದೆ. 'ದಿಟದ ನಾಗರ ಕಂಡರೆ ಕೊಲ್ಲೆಂಬರಯ್ಯಾ' ಎನ್ನುವ ಬಸವಣ್ಣನವರ ವಚನದಲ್ಲೂ ಮನುಷ್ಯರ ಸರ್ಪಭೀತಿಯ ಬಗೆಗೆ ವ್ಯಂಗ್ಯೋಲ್ಲೇಖವಿದೆ.

*   *   *   *

ಚಿತ್ರಾಂಗದಾ



ಮಣಲೂರು ಅಥವಾ ಮಣಿಪುರವು ಕಾವೇರಿ ನದಿ ಸಮುದ್ರವನ್ನು ಸೇರುವ ಪ್ರದೇಶದಲ್ಲಿನ ಒಂದು ನಗರ. ಅಲ್ಲಿಯ ಪಾಂಡ್ಯರಾಜ ಎಂದು ಹೇಳಲಾಗಿರುವ ಚಿತ್ರವಾಹನನ ಮಗಳು ಚಿತ್ರಾಂಗದೆ. ಹೆಣ್ಣು ಮಗಳಾಗಿ ಹುಟ್ಟಿ ಗಂಡಿನಂತೆ ಬೆಳೆದವಳೆಂಬ ವಿಶಿಷ್ಟ ಕಾರಣಕ್ಕೆ ರವೀಂದ್ರನಾಥ ಠಾಕೂರ್, ಕುವೆಂಪು ಮೊದಲಾದವರು ಈಕೆಯನ್ನು ಕುರಿತೇ ಕೃತಿ ರಚನೆ ಮಾಡಿರುವುದು ಗಮನಿಸಬೇಕಾದ

ವಿಷಯ. ಆದಿಪರ್ವದ ವನವಾಸ ತೀರ್ಥಯಾತ್ರೆಯ ಸಂದರ್ಭದಲ್ಲಿ ಪ್ರವಾಸಿ ಅರ್ಜುನನು ಚಿತ್ರಾಂಗದೆಯನ್ನು ಕಂಡು ಮೋಹಿತನಾಗಿ ಅವಳನ್ನು ಮದುವೆ ಮಾಡಿಕೊಡುವಂತೆ ಚಿತ್ರವಾಹನನನ್ನು ಕೇಳುತ್ತಾನೆ. ಆದರೆ ಚಿತ್ರವಾಹನನು ತನ್ನ ವಂಶದ ಕಥೆ ಹೇಳಿ ಒಂದು ಷರತ್ತನ್ನು ಮುಂದಿಡುತ್ತಾನೆ. ಚಿತ್ರವಾಹನ ವಂಶದ ಪ್ರಭಂಕರನೆಂಬ ರಾಜನು ಉಗ್ರ ತಪಸ್ಸು ಮಾಡಿ ಶಿವನಿಂದ ವರ ಪಡೆದಿದ್ದ. ಇವರ ಸಂತಾನಕ್ಕೆ ಗಂಡಾಗಲಿ ಹೆಣ್ಣಾಗಲಿ ಒಂದೇ ಮಗುವಾಗಲಿ ಎಂಬ ವರ. ಇದುವರೆಗೆ ಗಂಡು ಮಕ್ಕಳೇ ಆಗಿದ್ದರೂ ಚಿತ್ರವಾಹನನಿಗೆ ಮಾತ್ರ ಮಗಳು. ಅದನ್ನು ಹೇಳುತ್ತಾ ರಾಜನು ಅರ್ಜುನನಿಗೆ.

"ಪುತ್ರೋ ಮಮೇಯಮಿತಿ ಮೇ ಭಾವನಾ ಪುರುಷೋತ್ತಮ
ಪುತ್ರಿಕಾ ಹೇತು ವಿಧಿನಾ ಸಂಜ್ಞಿತಾ ಭರತರ್ಷಭ"

"ಇವಳನ್ನು ಮಗ ಎಂಬಂತೆ ಸಾಕಿದ್ದೇನೆ. ಪುತ್ರಪ್ರಾಪ್ತಿಗಾಗಿ ನಿರ್ದಿಷ್ಟವಾಗಿರುವ ಧರ್ಮಶಾಸ್ತ್ರ ವಿಧಿಗೆ ಅನುಗುಣವಾಗಿ 'ಪುತ್ರಿಕೆ' ಎಂದು ಕರೆದಿದ್ದೇನೆ. ಇವಳಲ್ಲಿ ಜನಿಸುವ ಮಗನೇ ನಮ್ಮ ರಾಜ್ಯದ ಒಡೆಯನಾಗಬೇಕು. ಇದೇ ನಾನು ಕೋರುವ ಕನ್ಯಾ ಶುಲ್ಕ" ಹೀಗೆ ಕನ್ಯಾದಾನ ಮಾಡುವ ಪದ್ಧತಿಗೆ 'ಪುತ್ರಿಕಾ ಧರ್ಮ' ಎಂದು ಹೆಸರು. ಅರ್ಜುನ ಇದಕ್ಕೆ ಒಪ್ಪಿಕೊಂಡ. ಮೂರು ವರ್ಷ ಅಲ್ಲಿದ್ದು ಬಭ್ರುವಾಹನ ಎಂಬ ಮಗನನ್ನು ಪಡೆದ. ಹೀಗೆ 'ಕನ್ಯಾತು ಮಮಜಾತೇಯಂ ಕುಲಸ್ಯೋತ್ಪಾದನೀ ಧ್ರುವಂ' (ಚಿತ್ರಾಂಗದೆಯೇ ನನ್ನ ವಂಶವನ್ನು ಬೆಳೆಸುವವಳು) ಎಂಬ ಚಿತ್ರವಾಹನನ ನಂಬಿಕೆ ನೆರವೇರಿತು.

ಮುಂದೆ ಚಿತ್ರಾಂಗದೆಯ ಪ್ರಸ್ತಾವ ಬರುವುದು ಅಶ್ವಮೇಧ ಪರ್ವದಲ್ಲಿ. ಅರ್ಜುನನ ನೇತೃತ್ವದಲ್ಲಿ ಹೊರಟಿದ್ದ ಅಶ್ವಮೇಧ ಯಾಗದ ಕುದುರೆಯನ್ನು ಬಭ್ರುವಾಹನನು ಕಟ್ಟಿ ಹಾಕಿದನಷ್ಟೆ. ಆದರೆ ಈ ವಿಷಯ ತಿಳಿದ ಚಿತ್ರಾಂಗದೆ ಬಭ್ರುವಾಹನನ್ನು ಕರೆಸಿ ಅರ್ಜುನನೇ ನಿಮ್ಮ ತಂದೆ ಎಂದಾಗ ಬಭ್ರುವಾಹನನು ಮತ್ತೆ ಅರ್ಜುನನ ಬಳಿ ಹೋಗಿ ಕ್ಷಮೆ ಯಾಚಿಸಿದ. ಆದರೆ "ನೀನು ನನ್ನ ಮಗನಲ್ಲ. ಯುದ್ಧ ಮಾಡಲು ಹೆದರಿದ ಹೇಡಿ" ಎಂದು ಅರ್ಜುನನು ತಿರಸ್ಕರಿಸಿದಾಗ ತಂದೆ ಮಕ್ಕಳ ನಡುವೆ ಘೋರ ಯುದ್ಧ ನಡೆದು ಬಭ್ರುವಾಹನನು ಅರ್ಜುನನನ್ನೇ ಕೊಂದು ಹಾಕಿದ ಸಂಗತಿಯೂ ಲೋಕವಿದಿತವಾಗಿದೆ. ಈ ದೃಶ್ಯವನ್ನು ಕಂಡು ಕಂಗಾಲಾದ ಚಿತ್ರಾಂಗದೆ ತನ್ನ ಗೆಳತಿ ಉಲೂಪಿ (ಈಕೆಯೂ ಅರ್ಜುನನ ಪತ್ನಿ)ಯೊಂದಿಗೆ ಸಮಾಲೋಚಿಸಿ ಪಾತಾಳದಲ್ಲಿದ್ದ ಮೃತಸಂಜೀವಿನಿಯನ್ನು ತರಿಸಿ ಗಂಡನನ್ನು ಬದುಕಿಸಿಕೊಳ್ಳುತ್ತಾಳೆ.

ಅಶ್ವಮೇಧ ಯಾಗಕ್ಕೆ ಬಂದಿದ್ದ ಚಿತ್ರಾಂಗದೆಯು ಧೃತರಾಷ್ಟ್ರ ಗಾಂಧಾರಿಯರು ಕಾಡಿಗೆ ಹೊರಟಾಗ ಗಾಂಧಾರಿಯ ಸೇವೆ ಮಾಡಿಕೊಂಡು ಅವರ ಸಂಗಡವೇ ಇರುತ್ತಾಳೆ. ಗಾಂಧಾರಿ ಸತ್ತ ಮೇಲೆ ಮತ್ತೆ ಮಣಲೂರಿಗೆ ಬರುತ್ತಾಳೆ.

* * * *

ಮಣಿಮಂತ

ಅರಣ್ಯಪರ್ವದ 165ನೆಯ ಅಧ್ಯಾಯದಲ್ಲಿ ಮಣಿಮಂತ ರಾಕ್ಷಸನ ಪ್ರಸ್ತಾವವಿದೆ. ಪಾಂಡವರು ಯಾತ್ರಾರ್ಥಿಗಳಾಗಿ ಬಂದು ಗಂಧಮಾದನ ಪ್ರದೇಶದಲ್ಲಿ ಪಾರ್ಷ್ಣಿಸೇನ ಮುನಿಯ ಆಶ್ರಮದಲ್ಲಿ ಸ್ವಲ್ಪ ಕಾಲ ತಂಗಿದ್ದರು. ಅಲ್ಲಿದ್ದಾಗ ಒಂದು ವಿಚಿತ್ರ ಘಟನೆ ನಡೆಯಿತು. ಗರುಡನು ಒಂದು ಸರ್ಪವನ್ನು ಕಚ್ಚಿಕೊಂಡು ಹಾರಿದಾಗ ರೆಕ್ಕೆಯ ರಭಸಕ್ಕೆ ಒಂದು ಮರ ಅಲುಗಾಡಿ ಅದರ ಹೂವು ಉದುರಿತು. ಅದು ಪಂಚವರ್ಣ ಸೌರಭದ ಕುಸುಮ. ಶ್ವೇತ ನದಿಯ ತೀರಪ್ರದೇಶದಲ್ಲಿ ದ್ರೌಪದಿಯ ವಸತಿಯ ಮುಂದೆ ಆ ಹೂವು ಬಿದ್ದಿತು. ಅದರ ಕಂಪಿಗೆ ದ್ರೌಪದಿ ಮಾರುಹೋದಳು. ಅವಳ ಬಯಕೆಯನ್ನು ಸಲ್ಲಿಸಲು ಭೀಮನು ಆ ಹೂವನ್ನು ತರುತ್ತೇನೆಂದು ಹೊರಟ. ಇಲ್ಲಿಯ ತನಕ ಈ ಕಥೆ ಸೌಗಂಧಿಕ ಪುಷ್ಪದ ಕಥೆಯಂತೆಯೇ ಇದೆ. ಇವನು ಹೊರಟದ್ದು ಕುಬೇರನ ಒಂದು ತೋಟಕ್ಕೆ. ಶಂಖ ಊದಿಕೊಂಡು ಹೋಗುತ್ತಿದ್ದಾಗ ಮಣಿಮಂತ ಎಂಬ ಮಹಾ ದೈತ್ಯನು ಭೀಮನಿಗೆ ಅಡ್ಡ ಬಂದ. ಹೂವನ್ನು ಕೀಳಬೇಡ ಎಂದು ಅಡ್ಡಿಪಡಿಸಿದ. ಭೀಮ ಕೇಳಲಿಲ್ಲ. ಅವರಿಬ್ಬರ ನಡುವೆ ಭೀಕರ ಹೋರಾಟವಾಯಿತು. ಭೀಮನ ಗದಾಘಾತದಿಂದ ಮಣಿಮಂತ ಸತ್ತ. ಮಣಿಮಂತನ ಸೋಲು ಮತ್ತು ಸಾವಿನ ಸುದ್ದಿ ಕೇಳಿ ಕುಬೇರನೇ ಅಲ್ಲಿಗೆ ಬಂದ. ಆದರೆ ಅವನು ಹಸನ್ಮುಖಿಯಾಗಿಯೇ ಇದ್ದ. ಗೆಳೆಯ ಮಣಿಮಂತನ ಸಾವು ಅವನ ಮೇಲೆ ಏನೂ ಪರಿಣಾಮ ಮಾಡಿರಲಿಲ್ಲ. ಭೀಮನಿಗೆ ಆಶ್ಚರ್ಯ! ಆಗ ಕುಬೇರ ಮಣಿಮಂತನ ಕಥೆಯನ್ನು ಹೇಳಿದ.

ಮಣಿಮಂತ ಒಬ್ಬ ಯಕ್ಷಕುಮಾರ. ಇವನು ಕುಬೇರನ ಆಪ್ತಗೆಳೆಯ. ಒಂದು ದಿನ ಕುಶಾವತೀ ಎಂಬ ಪುಣ್ಯನದಿಯ ತೀರದಲ್ಲಿ ದೇವತೆಗಳು ಸತ್ರಯಾಗ ಮಾಡುತ್ತಿದ್ದಾಗ ಅಲ್ಲಿಗೆ ಕುಬೇರನು ತನ್ನ ಗೆಳೆಯ ಮಣಿಮಂತನನ್ನು ಕರೆದುಕೊಂಡು ಪುಷ್ಪಕವಿಮಾನದಲ್ಲಿ ಬರುತ್ತಿದ್ದ. (ಒಂದು ಕೋಶದಲ್ಲಿ ಸಂಗೀತೋತ್ಸವಕ್ಕೆ ಬರುತ್ತಿದ್ದನೆಂಬ ಹೇಳಿಕೆಯೂ ಇದೆ) ಆಗ ಕಾಳಿನದಿಯ ದಡದಲ್ಲಿ ಅಗಸ್ತ್ಯರು ಸೂರ್ಯನಮಸ್ಕಾರ ಮಾಡುತ್ತಿದ್ದರು. ಇದ್ದಕ್ಕಿದ್ದಂತೆ ಮಣಿಮಂತ ಕೆಳಗೆ ಉಗುಳಿದ. ಅದು ನೇರವಾಗಿ ಅಗಸ್ತ್ಯರ ಮೇಲೇ ಬೀಳಬೇಕೆ? ಅಗಸ್ತ್ಯರಿಗೆ ಸಿಟ್ಟು ಬಂದು ಮಣಿಮಂತನಿಗೆ "ನಿನಗೆ ಮನುಷ್ಯರಿಂದ ಸಾವು ಬರಲಿ" ಎಂದು ಶಾಪಕೊಟ್ಟರು. ಅವನನ್ನು ವಿಮಾನದಲ್ಲಿ ಕರೆತಂದುದಕ್ಕೆ ಕುಬೇರನಿಗೂ ಒಂದು ಶಾಪ. "ನಿನ್ನ ಸೇನೆ ಒಬ್ಬ ಮಾನವನಿಂದ ನಾಶವಾಗಲಿ" ಆ ಶಾಪ ಇಂದು ನೆರವೇರಿರುವುದರಿಂದ ನನ್ನ ಗೆಳೆಯ ಮಣಿಕೇತುವಿನ ರಾಕ್ಷಸತನ ಹೋಗಿ ಈಗ ಅವನು ಮತ್ತೆ ಯಕ್ಷನಾಗಿದ್ದಾನೆ ಎಂಬುದೇ ಕುಬೇರನ ಸಂತೋಷಕ್ಕೆ ಕಾರಣವಾಗಿತ್ತು. ಧರ್ಮರಾಯನಿಗೂ ಮನುಷ್ಯರಿಂದ ದೇವತೆಗಳಿಗೆ ಸಾವು ಬರುತ್ತದೆಂದರೆ ನಂಬಲಾಗದೆ ಅವನು ಈ ಪ್ರಶ್ನೆ ಕೇಳಿದ್ದ. ಕುಬೇರನ ಉತ್ತರ ಸಮಾಧಾನಕರವಾಗಿದ್ದುದರಿಂದ ಭೀಮನು ಧರ್ಮರಾಯನಿಗೂ ಅದನ್ನೇ ಹೇಳಿದ.

ಕೌಶಿಕ

ವನಪರ್ವದಲ್ಲಿ ಮಾರ್ಕಂಡೇಯ ಮಹರ್ಷಿಗಳು ಧರ್ಮರಾಯನಿಗೆ ಹೇಳಿದ ಒಂದು ಕಥೆ ಕೌಶಿಕನದು. ಕೌಶಿಕ ಧನಿಕ, ಜ್ಞಾನಿ, ವೇದವಿಶಾರದ. ಆದರೂ ಅವನು ತಪಸ್ಸ್ವಾಧ್ಯಾಯ ನಿರತನಾಗಿದ್ದ. ಒಂದು ದಿನ ಊರ ಹೊರಗೆ ಒಂದು ಮರದ ಕೆಳಗೆ ತಪಸ್ಸು ಮಾಡುತ್ತ ಕುಳಿತಿದ್ದಾಗ ಒಂದು ಕಾಗೆ (ಬಕಪಕ್ಷಿ ?) ಇವನ ತಲೆಯ ಮೇಲೆ ಹಿಚಿಕೆ ಹಾಕಿತು. ಈ ಬ್ರಾಹ್ಮಣ ಜ್ಞಾನಿಗೆ ಆ ಹಕ್ಕಿಯ ಮೇಲೆ ತುಂಬ ಸಿಟ್ಟು ಬಂದಿತು. ಅದನ್ನೇ ದುರುಗುಟ್ಟಿಕೊಂಡು ನೋಡಿದ. ಇವನ ದೃಷ್ಟಿ ಶಕ್ತಿಯೋ ಅಥವಾ ಆಕಸ್ಮಿಕವೋ ಅಂತೂ ಆ ಪಕ್ಷಿ ಕೆಳಗೆ ಬಿದ್ದು ಸತ್ತುಹೋಯಿತು. ಇದು ತನ್ನ ತಪಶ್ಶಕ್ತಿಯ ಪ್ರಭಾವ ಎಂಬ ಭಾವನೆ ಅವನಿಗೆ ಬಂದಿದ್ದರೆ ಆಶ್ಚರ್ಯವಿಲ್ಲ. ಅನಂತರ ಅವನು ಎಂದಿನಂತೆ ಆ ಗ್ರಾಮದಲ್ಲಿ ಭಿಕ್ಷೆಗೆ ಹೋದ. ಪ್ರಾಣಿ ಹಿಂಸೆ ಮಾಡಿದೆನಲ್ಲ ಎಂಬ ಕೊರಗೂ ಅವನನ್ನು ಕಾಡುತ್ತಿತ್ತು. ನಾಲ್ಕಾರು ಮನೆಗಳಾದ ಮೇಲೆ ಪರಿಚಿತ ಸಾಧ್ವಿಯೊಬ್ಬಳ ಮನೆಗೆ ಹೋದ. ಅವಳು ಭಿಕ್ಷೆ ಹಾಕಲು ಸ್ವಲ್ಪ ತಡ ಮಾಡಿದಳು. ಆ ಬಗ್ಗೆ ವಿವರಣೆಯನ್ನೂ ಕೊಟ್ಟಳು. ತನ್ನ ಪತಿ ಆಗತಾನೇ ಬಳಲಿ ಮನೆಗೆ ಬಂದಿದ್ದರಿಂದ ಅವನಿಗೆ ಊಟ ಬಡಿಸುತ್ತಿದ್ದುದಾಗಿಯೂ ಅದರಿಂದ ತಡವಾಯಿತು ಎಂದೂ ಅವಳು ಹೇಳಿದಳು. ಆದರೆ ಅವನ ದೃಷ್ಟಿಯಲ್ಲಿ ಮನೆಯವರಿಗಿಂತ ಅತಿಥಿ ಮುಖ್ಯವಲ್ಲವೆ ? ಸಿಟ್ಟಿನಿಂದ ಅವಳ ಕಡೆ ನೋಡಿದ. ಅವಳು ನಗುತ್ತ 'ನೀನು ದುರುಗುಟ್ಟಿಕೊಂಡು ನೋಡಿದ ಕೂಡಲೇ ಕೆಳಗೆ ಉರುಳಲು ನಾನೇನು ಪಕ್ಷಿಯಲ್ಲ' ಎಂದು ಹೇಳಿದಳು. ಕೌಶಿಕನಿಗೆ ಆಶ್ಚರ್ಯ. ಕೊನೆಗೆ ಆ ಸಾಧ್ವಿ "ನಿನಗೆ ಧರ್ಮವೆಂದರೇನೆಂಬುದೇ ತಿಳಿದಿಲ್ಲ. ಆ ಬಗೆಗೆ ಹೆಚ್ಚು ತಿಳಿಯಬೇಕಾದರೆ ಮಿಥಿಲಾ ನಗರದಲ್ಲಿರುವ ಧರ್ಮವ್ಯಾಧನ ಮನೆಗೆ ಹೋಗು. ಅವನು ಆತ್ಮಜ್ಞಾನಿಯಾದ ಮಹಾನುಭಾವ" ಎಂದಳು. ಕೌಶಿಕನ ಆಶ್ಚರ್ಯ ಹೆಚ್ಚಾಯಿತು. ನೋಡೋಣವೆಂದು ಮಿಥಿಲೆಗೆ ಹೊರಟ. ಮಾಂಸದ ಅಂಗಡಿಯಲ್ಲಿ ವ್ಯಾಧನು ವ್ಯಾಪಾರದಲ್ಲಿ ನಿರತನಾಗಿದ್ದ. ಒಳಗೆ ಹೋಗಲು ಮನಸ್ಸಾಗದೆ ಕೌಶಿಕನು ಹೊರಗೇ ನಿಂತ. ವ್ಯಾಧನು ವ್ಯಾಪಾರ ಮುಗಿಸಿಕೊಂಡು ಬಂದು ಕೌಶಿಕನನ್ನು ಮನೆಗೆ ಕರೆದ. "ಒಬ್ಬಳು ಪತಿವ್ರತೆ ನಿಮ್ಮನ್ನು ಇಲ್ಲಿಗೆ ಕಳಿಸಿದ್ದಾಳಲ್ಲವೆ ?" ಎಂದು ಕೇಳಿದ. ಕೌಶಿಕನಿಗೆ ಇನ್ನೂ ಆಶ್ಚರ್ಯವಾಯಿತು. ಆದರೂ ವ್ಯಾಧನ ಹಿಂಸಾ ಜೀವನದ ಬಗೆಗೆ ವ್ಯಾಪಾರದ ಬಗೆಗೆ ತನ್ನ ಆಕ್ಷೇಪಣೆ ಸೂಚಿಸಿದ. ಆದರೆ ವ್ಯಾಧನು ತಾನು ಮಾಂಸವನ್ನು ಹೊರಗಿನಿಂದ ತರಿಸಿ ಮಾರಾಟ ಮಾಡುವುದಾಗಿಯೂ ಅದು ತನ್ನ ವೃತ್ತಿ ಧರ್ಮವೆಂದೂ ಅದನ್ನು ಶ್ರದ್ಧೆಯಿಂದ ಹೆಚ್ಚು ಲಾಭದ ಆಸೆಯಿಲ್ಲದೆ ಮಾರಾಟ ಮಾಡುವುದೇ ಧರ್ಮವೆಂದೂ ಹೇಳಿದ. ತಾನು ವೃದ್ಧ ಮಾತಾಪಿತೃಗಳನ್ನು ಹೇಗೆ ಪ್ರೀತಿಯಿಂದ ಸೇವಿಸುತ್ತಿದ್ದೇನೆಂಬುದನ್ನು ಪ್ರತ್ಯಕ್ಷವಾಗಿ ತೋರಿಸಿದ. ಜೀವ ಲಕ್ಷಣ ಮತ್ತು ಅಹಿಂಸಾ ಸ್ವರೂಪವನ್ನು ಕುರಿತು ತನ್ನ ಆಳವಾದ ಚಿಂತನೆಯನ್ನು ಹೇಳಿಕೊಂಡ. ತಾನು ಸಮಸ್ತ ಧರ್ಮಗಳನ್ನೂ ಅಧ್ಯಯನ ಮಾಡಿರುವ ಸಂಗತಿಯನ್ನು ತಿಳಿಸಿದ. ಶಿಷ್ಟಾಚಾರಗಳೆಂದರೆ ಶೌಚ, ದಾನ, ಸತ್ಯ, ದಮ, ಋಜುನಡತೆ,

ಕಾಮಲೋಭ ಪರಿತ್ಯಾಗ, ನಿಷ್ಕ್ರೋಧ, ಅನಸೂಯೆ, ಶೀಲ ರಕ್ಷಣೆ, ಸರ್ವ ಭೂತದಯೆ... ಇತ್ಯಾದಿ ಗುಣಗಳು ಎನ್ನುವ ವ್ಯಾಧನ ಹಿತೋಪದೇಶವು ಅರ್ಥಪೂರ್ಣವಾಗಿವೆ. ಚಿತ್ತಶಾಂತಿ ಪಡೆಯುವುದು ಹೇಗೆ ಎಂಬ ಬಗೆಗೆ ಅವನ ವಿವರಣೆಯಂತೂ ಆಚರಣ ಯೋಗ್ಯವಾಗಿದೆ. ಹೀಗೆ ವಿಸ್ತಾರವಾಗಿ ವ್ಯಾಧನೊಂದಿಗೆ ಚರ್ಚಿಸಿ ಅಹಿಂಸಾ ಸ್ವರೂಪ ಜೀವಲಕ್ಷಣಗಳ ಬಗೆಗೆ ತಿಳಿದುಕೊಂಡ ಕೌಶಿಕನು ಇದುವರೆಗಿನ ತನ್ನ ಸಾಧನೆ ಅಲ್ಪ ಎಂಬುದನ್ನು ಅರ್ಥಮಾಡಿಕೊಂಡು ಮನೆಗೆ ಹಿಂದಿರುಗಿ ತಂದೆ ತಾಯಿಗಳ ಸೇವೆ ಮಾಡುತ್ತ ಜ್ಞಾನಾರ್ಜನೆಯಲ್ಲಿ ತೊಡಗಿದ. ಮೇಲುನೋಟಕ್ಕೆ ಎಲ್ಲರಂತೆ ಸಾಮಾನ್ಯರಾಗಿ ಕಾಣಿಸುವ ಕೆಲವರು ಒಳಗೆ ಗಟ್ಟಿ ವ್ಯಕ್ತಿತ್ವದವರಾಗಿರುವ ಸಂಭವವಿದೆ ಎಂಬ ಸಂಗತಿ ಈ ಕಥೆಯಿಂದ ತಿಳಿಯುತ್ತದೆ.

* * * *

ವೈಷ್ಣವ ಯಾಗ

ರಾಜಸೂಯಯಾಗದಂತೆ ಇದೂ ಒಂದು ಪ್ರಸಿದ್ಧ ಯಾಗ. ಕೌರವನು ಈ ಯಾಗವನ್ನು ಮಾಡಲು ಕರ್ಣನು ಸಹಾಯ ಮಾಡುತ್ತಾನೆ. ವಿಷ್ಣು ಮಹಾಯಜ್ಞ ಎಂದೂ ಇದನ್ನು ಕರೆಯುತ್ತಾರೆ. ಮೊದಲು ವಿಷ್ಣುವೇ ಈ ಯಾಗವನ್ನು ಮಾಡಿದ್ದನಂತೆ.

ರಾಜಸೂಯಯಾಗದಂತೆಯೇ ಇಲ್ಲೂ ದಿಗ್ವಿಜಯ ಆಗತ್ಯ. ಕರ್ಣನು ಸೇನಾಸಮೇತನಾಗಿ ಜಗತ್ತಿನ ನಾನಾ ಮೂಲೆಗಳಿಗೆ ಹೋಗಿ ರಾಜರನ್ನು ಗೆದ್ದು ಭಾರೀ ಪ್ರಮಾಣದಲ್ಲಿ ಕಪ್ಪಕಾಣಿಕೆಗಳನ್ನು ತಂದು ಕೌರವನ ಭಂಡಾರಕ್ಕೆ ಸೇರಿಸುತ್ತಾನೆ. ಅವನು ತಂದ ಧನ ಧಾನ್ಯ ಸಂಗ್ರಹವನ್ನು ನೋಡಿ ಕೌರವನಿಗೆ ತಾನೂ ರಾಜಸೂಯಯಾಗ ಮಾಡಬೇಕು ಎನ್ನಿಸುತ್ತದೆ. ಕರ್ಣ ಒಪ್ಪಿದ. ದೇಶದ ನಾನಾ ಮೂಲೆಗಳಿಂದ ಬಂದ ವಿಪ್ರರನ್ನು ಕೇಳಿದ. ಆದರೆ ಅವರು ಕೌರವನ ಅಣ್ಣ ಧರ್ಮರಾಯನು ಈಗಾಗಲೇ ಈ ಯಾಗ ಮಾಡಿರುವುದರಿಂದ ಈಗ ಮಾಡುವುದು ಬೇಡ ಎಂದರು. ಅಲ್ಲದೆ ಧೃತರಾಷ್ಟ್ರ ಜೀವಂತನಾಗಿದ್ದಾನೆ, ತಂದೆ ಬದುಕಿರುವವರು ಈ ಯಾಗ ಮಾಡುವಂತಿಲ್ಲ ಎಂದು ಹೇಳಿ ವೈಷ್ಣವ ಯಾಗಕ್ಕೆ ಅಷ್ಟೇ ಮಹಿಮೆ ಇರುವುದರಿಂದ ಅದನ್ನು ಮಾಡಲಿ ಎಂದು ಸಲಹೆ ನೀಡಿದರು. ಗೆದ್ದು ತಂದ ಚಿನ್ನದಿಂದ ಶಿಲ್ಪಿಗಳ ಸಹಾಯ ಪಡೆದು ಒಂದು ಚಿನ್ನದ ನೇಗಿಲು ಮಾಡಿಸಿ ಯಜ್ಞ ಭೂಮಿಯನ್ನು ಉಳುಮೆ ಮಾಡಿಸಿ ಮಾಡುವ ಈ ಯಜ್ಞದ ವಿಷಯ ಕೇಳಿ ಧೃತರಾಷ್ಟ್ರ ಭೀಷ್ಮಾದಿಗಳು ತುಂಬ ಸಂತೋಷಪಟ್ಟರು. ದೇಶದ ನಾನಾ ಮೂಲೆಗಳಿಂದ ಸಾರ್ವಜನಿಕರು, ಸಾಧುಗಳು, ರಾಜರುಗಳು ಭಾರಿಯ ಸಂಖ್ಯೆಯಲ್ಲಿ ಸೇರಿದರು. ಅತಿಥಿ ಸತ್ಕಾರದ ಭಾರ ವಿದುರನ ಮೇಲೆ ಬಿತ್ತು. ಯಥೇಚ್ಛವಾಗಿ ಅನ್ನದಾನ, ಸುವರ್ಣದಾನ, ವಸ್ತ್ರದಾನಗಳು ನಡೆದುವು. ಕೌರವನು ಸಕಲರನ್ನೂ ಯಥಾ ಶಕ್ತಿಯಾಗಿ ಸತ್ಕರಿಸಿದ. ಜನರೆಲ್ಲ ಕೌರವನನ್ನು ಹರಸಿದರು. ದುಶ್ಶಾಸನನು ಕಾಡಿನಲ್ಲಿದ್ದ ಪಾಂಡವರಿಗೂ ಆಹ್ವಾನ ನೀಡಿದ್ದ. ಅದರೆ ವನವಾಸ ಅಜ್ಞಾತವಾಸಗಳನ್ನು ಪೂರೈಸುವ ವರೆಗೆ ನಗರಕ್ಕೆ ಬರುವುದಿಲ್ಲ ಎಂದು ಧರ್ಮರಾಯ ಹೇಳಿಕಳಿಸಿದ. ಯಜ್ಞ ಕ್ರಮಬದ್ಧವಾಗಿ ಜರುಗಿ ಕೌರವನಿಗೆ ಅವಭೃತಸ್ನಾನವೂ ಆಯಿತು. ಸತ್ಪುರುಷರು ಮಾಡಬೇಕಾದ ಈ ಯಜ್ಞ ಕಾರ್ಯದಲ್ಲಿ ಎಲ್ಲ ವರ್ಗದ ಜನರೂ ಸಹಕರಿಸಿದರು. ವಿಶ್ವದ ಮಾಂಡಲಿಕರೆಲ್ಲ ಈ ವೈಷ್ಣವ ಯಾಗದ ನೆವದಲ್ಲಿ ದುರ್ಯೋಧನನ ಮಾಂಡಲಿಕರಾದದ್ದೇ ಈ ಯಜ್ಞದ ಫಲ ಎಂದು ಹೇಳಬೇಕು. ಧರ್ಮರಾಯನ ರಾಜಸೂಯ ಯಾಗದ ವೈಭವಕ್ಕೆ ಸರಿಗಟ್ಟುವ ರೀತಿಯಲ್ಲಿ ಈ ಯಾಗ ನಡೆಯಿತೆಂದು ಹಿರಿಯರೆಲ್ಲ ಹೊಗಳಿದರು. ಆ ಯಾಗದ ಮಟ್ಟಕ್ಕೆ ಖಂಡಿತ ಬರುವುದಿಲ್ಲ. ಆದರೂ ಯಶಸ್ವಿ ಯಾಗ ಎಂದು ಕೆಲವರು ತೀರ್ಪುಕೊಟ್ಟರು. ವೈಷ್ಣವಯಾಗವನ್ನು ಯಶಸ್ವಿಯಾಗಿ ಮಾಡಿ ಋಷಿಗಳ ಆಶೀರ್ವಾದವನ್ನು ಪಡೆದಿದ್ದರೂ ಕೌರವನಿಗೆ ಸಮಾಧಾನವಿಲ್ಲ. ಅಣ್ಣನನ್ನು ಯಾವಾಗ ಕೊಂದು ರಾಜಸೂಯಯಾಗವನ್ನೇ ಮಾಡಿಯೇನು ಎಂದು ಅವನು ಲೆಕ್ಕ ಹಾಕುತ್ತಿದ್ದ.

ಕರ್ಣ-ಕೌರವರ ಸ್ನೇಹವು ಈ ವೈಷ್ಣವ ಯಾಗದ ಪ್ರಕರಣದಿಂದಾಗಿ ಮತ್ತಷ್ಟು ಗಾಢವಾಯಿತು. ಧರ್ಮರಾಯನಿಗೂ ಇದು ಚಿಂತೆಯ ವಿಷಯವಾಯಿತು. ವೈಷ್ಣವಯಾಗದ ನಂತರ ಕರ್ಣನು ಬಹಿರಂಗವಾಗಿ ಅರ್ಜುನನನ್ನು ಕೊಲ್ಲುವುದಾಗಿಯೂ ಅಲ್ಲಿಯ ತನಕ ಕಾಲನ್ನು ತೊಳೆಸಿಕೊಳ್ಳುವುದಿಲ್ಲವೆಂದೂ ಪ್ರತಿಜ್ಞೆ ಮಾಡಿದ್ದು ಮತ್ತು ಕೌರವನ ಸೈನ್ಯಸಂಪತ್ತನ್ನು ಹೆಚ್ಚಿಸಿದ್ದು ಧರ್ಮರಾಯನ ಚಿಂತೆ ಹೆಚ್ಚಾಗಲು ಕಾರಣ.

ಸಭಾಪರ್ವದಲ್ಲಿ ರಾಜಸೂಯಯಾಗದ ನಂತರ ಕೌರವನು ಹಸ್ತಿನಾವತಿಗೆ ಬಂದಾಗ ಧೃತರಾಷ್ಟ್ರನು ಕೌರವನ ಅಸೂಯೆಯನ್ನು ತಿಳಿದು "ನೀನೂ ಬೇಕಾದರೆ 'ಸಪ್ತತಂತು' ಯಾಗವನ್ನು ಮಾಡು" ಎನ್ನುತ್ತಾನೆ. ಆದರೆ ಕೊನೆಗೆ ಜ್ಯೋತಿಷಿಗಳ ಒಪ್ಪಿಗೆಯಿಲ್ಲವೆಂಬುದನ್ನು ಅರ್ಥಮಾಡಿಕೊಂಡ ಕೌರವನು ವೈಷ್ಣವ ಯಾಗವನ್ನೇ ಮಾಡಬೇಕಾಯಿತು.

* * * *

ಕೋಟಿಕಾಸ್ಯ

ಸೌವೀರ ಸಿಂಧು ದೇಶದ ಸುರಥ ರಾಜನ ಮಗ ಕೋಟಿಕಾಸ್ಯ. ಇವನು ಕೌರವನ ತಂಗಿಯ ಗಂಡನಾದ ಜಯದ್ರಥನ ಸ್ನೇಹಿತ. ಒಮ್ಮೆ ಸೈಂಧವನು ಕೋಟಿಕಾಸ್ಯ ಮತ್ತು ಅನುಚರರೊಂದಿಗೆ ಸಾಲ್ವದೇಶಕ್ಕೆ ಹೊರಟಿದ್ದ. ಶಾಲ್ವರಾಜನ ಮಗಳನ್ನು ಮದುವೆಯಾಗುವುದು ಅವನ ಪ್ರಯಾಣದ ಉದ್ದೇಶ. ಆದರೆ ಹೋಗುವ ದಾರಿಯಲ್ಲಿ ಅವನು ಆಕಸ್ಮಾತ್ತಾಗಿ ದ್ರೌಪದಿಯನ್ನು ನೋಡಿದ. ಅವಳು ಯಾರು ಎಂದು ಅವನಿಗೆ ಗೊತ್ತಿಲ್ಲ. ಆದರೆ ಆವಳ ರೂಪಕ್ಕೆ ಮರುಳಾದ. ಅವನ ಕಾಮುಕ ನೀತಿ ಎಷ್ಟು ಅಭದ್ರವಾದದ್ದೆಂದರೆ ಆವನು ಕೋಟಿಕಾಸ್ಯನಿಗೆ ಹೇಳಿದ: "ಗೆಳೆಯ ಈ ಹೆಂಗಸು ಸಿಕ್ಕಿದರೆ ನಾವು ಆ ಮದುವೆಗೆ ಹೋಗುವ ಅವಶ್ಯಕತೆ ಇಲ್ಲ. ಅವಳು ಯಾರೆಂದು ವಿಚಾರಿಸಿಕೊಂಡು ಬಾ." ಕೋಟಿಕಾಸ್ಯ ಆವಳ ಬಳಿಗೆ ಬಂದ. ಅವಳು ಯಾರೆಂದು ದ್ರೌಪದಿಯನ್ನೇ ಕೇಳಿ ತಿಳಿದುಕೊಂಡ. ದ್ರೌಪದಿಗೆ ಕೋಟಿಕಾಸ್ಯ ಯಾರೆಂದು ಗೊತ್ತಿತ್ತು. ಆದುದರಿಂದ ಅವಳು ಬಂದವನು ಸೈಂಧವನೆಂಬುದನ್ನು ತಿಳಿದ ಮೇಲೆ ಇನ್ನಷ್ಟು ಗೆಲುವಾದಳು. ಸೈಂಧವ ಎಂದರೆ ನನ್ನ ಅಣ್ಣ ಇದ್ದಂತೆ ಅಲ್ಲವೇ? "ಕೋಟಿಕಾಸ್ಯ ನಿನ್ನ ಮಿತ್ರನನ್ನೂ ಇಲ್ಲಿಗೆ ಕರೆದುಕೊಂಡು ಬಾ. ನೀವೆಲ್ಲ ನಮ್ಮ ಅತಿಥಿ ಸತ್ಕಾರವನ್ನು ಸ್ವೀಕರಿಸಿ ಹೋಗಬೇಕು." ಎಂದಳು. ಆ ಮಾತನ್ನು ಸೈಂಧವನಿಗೆ ಹೇಳಲು ಬಂದ ಕೋಟಿಕಾಸ್ಯ ಆಕೆ ಯಾರೆಂಬುದನ್ನು ತಿಳಿಸಿದ. ಕೋಟಿಕಾಸ್ಯನಿಗೆ ಕೂಟಮಿತ್ರ ಎಂಬ ಹೆಸರು ಇತ್ತು ಎಂದು ವ್ಯಾಸರು ಹೇಳುತ್ತಾರೆ. ಅದು ಅವನಿಗೆ ಅನ್ವರ್ಥ ನಾಮವೇ ಆಗಿತ್ತು. ಸೈಂಧವನು ಆಕೆ ದ್ರೌಪದಿ ಎಂದು ತಿಳಿದ ಮೇಲೂ ಅವಳನ್ನು ಹೊತ್ತುಕೊಂಡು ಹೋಗಲು ನಿಶ್ಚಯಿಸಿದ. ಪಾಂಡವರು ಯಾರೂ ಇಲ್ಲ ಎಂದು ಗೊತ್ತಾದ ಮೇಲಂತೂ ಅವನ ಉತ್ಸಾಹಕ್ಕೆ ರೆಕ್ಕೆ ಮೂಡಿತ್ತು. ಕೋಟಿಕಾಸ್ಯನು ಗೆಳೆಯನ ದುರ್ವರ್ತನೆಯನ್ನು ತಡೆಯುವ ಬದಲಿಗೆ ಉತ್ತೇಜಿಸುವ ಮಟ್ಟಕ್ಕೆ ಇಳಿದ. ದ್ರೌಪದಿ ಸೈಂಧವನಿಗೆ ಬುದ್ಧಿಹೇಳಿದರೂ ಅವನು ಕೇಳಲಿಲ್ಲ. ಆಗ ತಾನೇ ಹೋಗಿ ಸೈಂಧವನ ರಥವನ್ನು ಏರುವಷ್ಟು ಧೈರ್ಯ ಅವಳಿಗೆ. ಧೌಮ್ಯರು ಮಾತ್ರ ರಕ್ಷೋಘ್ನ ಸೂಕ್ತವನ್ನು ಜಪಿಸುತ್ತ ರಥದ ಹಿಂದೆಯೇ ಓಡಿ ಬಂದರು. ತುಂಬ ಗಲಭೆಯಾಯಿತು. ಭೀಮಾದಿಗಳು ಓಡೋಡಿ ಬಂದರು. ಭೀಮನು ಸೈಂಧವನ ಮೇಲೆ ಆಕ್ರಮಣ ಮಾಡಲು ಬಂದರೆ ಕೋಟಿಕಾಸ್ಯ ಅದಕ್ಕೆ ಅವಕಾಶ ಕೊಡದೆ ತಾನೇ ಅಡ್ಡಬಂದು ಯುದ್ಧಕ್ಕೆ ನಿಂತ. ಭೀಮನು ಮೊದಲು ಕೋಟಿಕಾಸ್ಯನ ಮೇಲೇ ಯುದ್ಧ ಮಾಡಬೇಕಾಯಿತು. ಗದೆ ಬೀಸಿ ಅವನ ಸಾರಥಿಯನ್ನು ಭೀಮನು ಕೊಂದ. ಅನಂತರ ತನ್ನ ಕೈಯಲ್ಲಿದ್ದ ಪ್ರಾಸವನ್ನು ಬೀಸಿ ಕೋಟಿಕಾಸ್ಯನನ್ನು ತುಂಡರಿಸಿದ.

ಸ್ನೇಹಿತನಾಗಿ ಕೋಟಿಕಾಸ್ಯನು ಸೈಂಧವನಿಗೆ ಸರಿಯಾದ ಹಿತವಚನ ಹೇಳಲಿಲ್ಲ. "ದ್ರೌಪದಿಯು ನಿಮ್ಮನ್ನೆಲ್ಲ ಆಹ್ವಾನಿಸಿದ್ದಾಳೆ. ನೀನು ನಿನ್ನ ತಮ್ಮಂದಿರು ಬಲಾಹಕ ತ್ರಿಗರ್ತಾಧಿಪತಿ, ಕ್ಷೇಮಂಕರ, ಸುಪುಷ್ಪ, ಕಂಜರ ಮೊದಲಾದ ಎಲ್ಲ ರಾಜರುಗಳನ್ನು ಆಹ್ವಾನಿಸಿದ್ದಾಳೆ" ಎಂದು ಕೋಟಿಕಾಸ್ಯ ಹೇಳಿದಾಗ ಸೈಂಧವನು "ನನ್ನ ಮನಸ್ಸು

ದ್ರೌಪದಿಯಲ್ಲಿ ನೆಟ್ಟಿದೆ. ಅವಳ ಆತಿಥ್ಯ ಸ್ವೀಕರಿಸಬೇಕಂತೇನು ? ಆಯಿತು. ಅವಳನ್ನೇ ಸ್ವೀಕರಿಸುತ್ತೇನೆ" ಎಂದು ಅಶ್ಲೀಲವಾಗಿ ಹೇಳಿದರೆ ಜಯದ್ರಥನ ಅಕ್ರಮವರ್ತನೆಯನ್ನು ಖಂಡಿಸುವ ಬದಲಿಗೆ, ಅವನನ್ನು ಎಚ್ಚರಿಸುವ ಬದಲಿಗೆ ಉತ್ತೇಜನ ನೀಡುವಷ್ಟು ಕೀಳು ಅಭಿರುಚಿ ಕೋಟಿಕಾಸ್ಯನದು. ಇಂಥ ನೀಚನನ್ನು ಬೆಂಬಲಿಸಲು ಹೋಗಿದ್ದು, ಅಡ್ಡ ಬಂದು ಭೀಮನನ್ನು ಎದುರಿಸಿ ನಿಂತದ್ದು ಕೋಟಿಕಾಸ್ಯನ ಬಗೆಗೆ ನಮಗೆ ಕನಿಕರ ಭಾವವೇ ಮೂಡದಂತೆ ಮಾಡಿದೆ.

ಕಾಮುಕರಾದವರಿಗೆ ಕಡಿವಾಣಹಾಕುವ ಗೆಳೆಯರಿಲ್ಲದೆ ಹೋದರೆ ಇಂಥ ಅನಾಹುತಗಳು ಜರುಗುತ್ತವೆ.

*　*　*　*

ಕಥೆಯೊಳಗೊಂದು ಕಥೆ

ಸುಮಿತ್ರ ಎಂಬ ರಾಜನಿದ್ದ. ಅವನು ಒಂದು ದಿನ ಬೇಟೆಗೆಂದು ಹೊರಟ. ಒಂದು ಜಿಂಕೆ ಕಾಣಿಸಿತು. ಅದನ್ನು ಅಟ್ಟಿಸಿಕೊಂಡು ಹೋದ. ಗುರಿಯಿಟ್ಟು ಬಲವಾಗಿ ಊರುವಂತೆ ಬಾಣವನ್ನು ಬಿಟ್ಟ. ಆ ಬಾಣ ಮೈಗೆ ನಾಟಿಕೊಂಡರೂ ಕೂಡ ಆ ಜಿಂಕೆ ಓಡಿ ಎತ್ತಲೋ ಮಾಯವಾಯಿತು. ಅದನ್ನು ಹುಡುಕುತ್ತ ಬಲು ದೂರ ಹೋಗಿದ್ದ. ಬೆಟ್ಟ ನದಿ ಕಾಡುಗಳನ್ನೆಲ್ಲ ಬಳಸಿ ಅದರ ಹಿಂದೆ ಹೋಗಿದ್ದ. ಆಯಾಸವಾಯಿತೇ ಹೊರತು ಬೇಟೆ ಸಿಕ್ಕಲಿಲ್ಲ. ಹತ್ತಿರದಲ್ಲಿಯೇ ವೃಷಭ ಮುನಿಗಳ ಆಶ್ರಮ. ಅಲ್ಲಿ ಹೋಗಿ ಅವರೊಂದಿಗೆ ತಾತ್ವಿಕ ಸಂವಾದವನ್ನು ಆರಂಭಿಸಿದ. "ಪೂಜ್ಯರೆ, ಜಿಂಕೆಯ ಆಸೆಗೆ ನನ್ನನ್ನೇ ಮರೆತು ಪ್ರಯತ್ನಿಸಿದೆ. ಆಸೆ ದೊಡ್ಡದಲ್ಲವೆ? ಆ ಆಸೆಗಿಂತ ದೊಡ್ಡದಾದುದು ಲೋಕದಲ್ಲಿ ಬೇರೆ ಯಾವುದಿದೆ?" ಸ್ವಲ್ಪ ಹಿಂದೆ ಇನ್ನೊಬ್ಬನೂ ಸುಮಿತ್ರರ ಗುರುಗಳನ್ನು ಅದೇ ಪ್ರಶ್ನೆ ಕೇಳಿದ್ದ. ಇಬ್ಬರಿಗೂ ಅನ್ವಯಿಸುವಂತೆ ಉತ್ತರ ನೀಡಲು ಪ್ರಯತ್ನಿಸಿದ ಗುರು ವೃಷಭ ಮುನಿಗಳು ಒಂದು ದೃಷ್ಟಾಂತ ಕಥೆಯನ್ನು ಹೇಳಿದರು. ಅದು ಸ್ವತಃ ವೃಷಭರೇ ಕಂಡ ಪ್ರಕರಣ. ಆ ಕಥೆಯನ್ನು ಗುರುಗಳು ವಿವರಿಸಲು ಆರಂಭಿಸಿದರು.

"ಸುಮಿತ್ರ ಮತ್ತು ಸ್ನೇಹಿತರೆ. ಬಹಳ ಹಿಂದೆ ನಾನು ತೀರ್ಥಯಾತ್ರೆಗೆ ಹೋಗಿದ್ದೆ. ಬದರಿಗೆ ಹೋಗಿ ಅಲ್ಲಿ ನರನಾರಾಯಣರ ದರ್ಶನವನ್ನು ಪಡೆದು ಹತ್ತಿರದಲ್ಲಿ ಇದ್ದ ಒಂದು ಆಶ್ರಮಕ್ಕೆ ಪ್ರವೇಶಿಸಿದೆ. ಅಲ್ಲಿ 'ತನು' ಎಂಬ ಋಷಿಗಳಿದ್ದರು. ಅವರದು ಬಡಕಲು ದೇಹ, ಆದರೆ ಅಸಾಧಾರಣ ಎತ್ತರ. ಮಹಾತಪಸ್ವಿ ಆತ. ಮಹಿಮಾವಂತರು. ಅವರ ಸುತ್ತ ಶಿಷ್ಯರು ಕುಳಿತಿದ್ದರು. ನಾನೂ ಕುಳಿತು ಅವರೊಂದಿಗೆ ಸಂವಾದ ಆರಂಭಿಸಿದೆ. ನಮ್ಮ ಮಾತು ಇನ್ನೂ ಮುಗಿದಿಲ್ಲ. ಅಷ್ಟರಲ್ಲಿ ಪರಿವಾರ ಸಮೇತ ಅಲ್ಲಿಗೆ ಕುದುರೆ ಏರಿ ವೀರದ್ಯುಮ್ನ ಬಂದ. ಅವನು ತನ್ನ ಸಂಕಟ ಹೇಳಿಕೊಂಡ. ಅವನ ಮಗನ ಹೆಸರು ಭೂರಿ. ಭೂರಿಯು ಕೆಲವು ದಿನಗಳ ಹಿಂದೆ ಬೇಟೆಗೆಂದು ಕಾಡಿಗೆ ಹೋಗಿ ಕಾಣೆಯಾಗಿದ್ದಾನಂತೆ. ಎಲ್ಲೆಲ್ಲಿ ಹುಡುಕಿದರೂ ಸಿಕ್ಕಲಿಲ್ಲವಂತೆ. ಸುಳಿವು ಕೂಡ ದೊರಕಲಿಲ್ಲವಂತೆ. ಅದಕ್ಕೆ ನಾನೇ ಹುಡುಕಲು ಬಂದೆ. ಮಧ್ಯೆ ತಮ್ಮನ್ನು ಕಂಡು ಹೋಗಲು ಬಂದೆ. ನನ್ನ ಮಗನನ್ನು ಅಗಲಿ ನಾನು ಬಾಳಲಾರೆ. ಕಾಣದಿದ್ದರೆ ನಾನೂ ಪ್ರಾಣ ಬಿಡುತ್ತೇನೆ. ಪೂಜ್ಯರೆ, ನನಗೆ ಮಗನನ್ನು ಕಾಣುವ ಆಸೆ ತುಂಬ ಪ್ರಬಲವಾಗಿದೆ. ಅದು ನೆರವೇರುವಂಥದೆ? ಆಸೆಗಿಂತ ಯಾವುದು ದೊಡ್ಡದು?"

ಅಂದರೆ ಈ ಕಥೆಯ ವಸ್ತುವೂ ಸುಮಿತ್ರ ಕೇಳಿದ್ದ ಪ್ರಶ್ನೆಯ ಸ್ವರೂಪದ್ದೇ ಆಗಿದೆ. ಒಬ್ಬ ಬೇಟೆಯ ಜಿಂಕೆ ಸಿಕ್ಕದೆ ನರಳಿದ್ದರೆ ಇವನು ಮಗನೇ ಸಿಕ್ಕದೆ ತೊಳಲಾಡುತ್ತಿದ್ದಾನೆ. ಆಗ ಅಸಾಧಾರಣ ಎತ್ತರದ ತನು ಮಹರ್ಷಿಗಳು ಸಮಾಧಾನಚಿತ್ತರಾಗಿ ವೀರದ್ಯುಮ್ನನಿಗೆ ಹಿತವಚನವನ್ನು ಹೇಳಿದರು. ಕಾಣದ ಮಗನಿಗಾಗಿ ಹಾತೊರೆಯುವುದು ದೇಹವನ್ನು ಕೃಶಗೊಳಿಸುವ ಸಾಧನವಾದೀತು.

ಅದು ಬದುಕನ್ನೇ ಕೃಶಗೊಳಿಸುತ್ತದೆ. ಈ ಬಗೆಗೆ ಅನವಶ್ಯಕವಾಗಿ ಚಿಂತೆ ಮಾಡುವುದು ಸರಿಯಲ್ಲ. ಹೀಗೆ ಬಹಳ ಕಾಲ ಉಪದೇಶವನ್ನಿತ್ತ ನಂತರ ಆ 'ತನು' ಮಹರ್ಷಿಗಳು ತಮ್ಮ ಯೋಗಮಹಿಮೆಯಿಂದ ಒಳಗೆ ಯಾರನ್ನೋ ಕೂಗುವಂತೆ 'ಭೂರಿದ್ಯುಮ್ನಾ' ಎಂದು ಜೋರಾಗಿ ಕೂಗಿದರು. ವೀರದ್ಯುಮ್ನನಿಗೆ ಆಶ್ಚರ್ಯವಾಯಿತು. ಸುತ್ತಲೂ ನೋಡಿದ. ಒಳಗಿನಿಂದ ಭೂರಿದ್ಯುಮ್ನನು 'ಬಂದೆ ಗುರುಗಳೇ!' ಎನ್ನುತ್ತ ಹೊರಗೆ ಬರಬೇಕೆ? ಅವನನ್ನು ಕಂಡು ವೀರದ್ಯುಮ್ನನಿಗೆ ತುಂಬ ಸಂತೋಷವಾಯಿತು. ಆಗ ತನು ಋಷಿಯು ಇದೇ ಭೂರಿದ್ಯುಮ್ನನು ಹಿಂದೆ ತನು ಋಷಿಗಳು ಕೇಳಿದ ಸುವರ್ಣಕಲಶವನ್ನೂ ನಾರುಮಡಿಗಳನ್ನೂ ದಾನವಾಗಿಕೊಡಲು ನಿರಾಕರಿಸಿದ್ದನಂತೆ. ಆದ್ದರಿಂದ ತನು ಋಷಿಗೆ ಮೊದಲು ಕೋಪ ಬಂದರೂ ಅನಂತರ ಅವುಗಳ ಮೇಲಣ ಆಸೆ ಹೋಯಿತಂತೆ. ಭೂರಿದ್ಯುಮ್ನನ ಮೇಲೂ ಅವರಿಗೆ ಪ್ರತೀಕಾರ ಭಾವ ಮೂಡಲಿಲ್ಲ.

ಆಸೆಯನ್ನು ತೊರೆದವರು ದುರ್ಲಭರು ಎಂದು ಹೇಳುವುದು ಮತ್ತು ಆಸೆಯಿಟ್ಟುಕೊಳ್ಳದೆ ಬದುಕಬೇಕು ಎನ್ನುವುದು ಈ ಕಥೆಗಳ ಮೂಲತಿರುಳು.

* * * *

ಉಲೂಪಿ

ಅರ್ಜುನನಿಗೆ ಚಿತ್ರಾಂಗದೆ, ದ್ರೌಪದಿಯರೇ ಅಲ್ಲದೆ ಉಲೂಪಿ ಎಂಬ ಪತ್ನಿಯೂ ಇದ್ದಳು. ಚಿತ್ರಾಂಗದೆಯ ಮಗ ಬಭ್ರುವಾಹನನು ಅರ್ಜುನನನ್ನು ಯುದ್ಧದಲ್ಲಿ ಕೊಲ್ಲುವ ವಿಷಯ ಅಶ್ವಮೇಧಿಕ ಪರ್ವದಲ್ಲಿ ಬರುತ್ತದಷ್ಟೆ. ಆಗ ಸಂಜೀವನ ಮಣಿಯನ್ನು ತರಿಸಿ ಅರ್ಜುನನನ್ನು ಬದುಕಿಸಿದ ಧೀರ ಮಹಿಳೆ ಇವಳು.

ಉಲೂಪಿ ಗಂಗಾ ನದಿಯ ತಟಕ್ಕೆ ಸ್ನಾನಕ್ಕೆಂದು ಬಂದವಳು ತೀರ್ಥಯಾತ್ರಾ



ನಿಮಿತ್ತ ಅಲ್ಲಿಗೆ ಬಂದಿದ್ದ ಅರ್ಜುನನ್ನು ಕಂಡಳು. ಇಬ್ಬರಲ್ಲೂ ಪರಸ್ಪರ ಪ್ರೇಮಾಂಕುರವಾಯಿತು. ಉಲೂಪಿಯ ಅಪ್ಪ ಕೌರವ್ಯ ನಾಗರಾಜ. (ಐರಾವತ ಕುಲೇ ಜಾತಾ ಕೌರವ್ಯೋ ನಾಮಪನ್ನಗಃ) ಅವಳಿಗೆ ಈ ಮೊದಲೇ ಒಬ್ಬ ನಾಗನೊಂದಿಗೆ ಮದುವೆಯಾಗಿತ್ತು. ಆದರೆ ನಾಗಕುಲ ವೈರಿಯಾದ ಗರುಡನು ಈಕೆಯ ಗಂಡನನ್ನು ಕೊಂದು ಹಾಕಿದ್ದ. ಸಂತಾನ ಹೀನೆಯಾಗಿ ಕೊರಗುತ್ತಿದ್ದ ಉಲೂಪಿಗೆ ಅರ್ಜುನನ್ನು ಮದುವೆಯಾಗುವ ಮನಸ್ಸು. ಆದರೆ ತಾನು ತೀರ್ಥಯಾತ್ರೆಗೆ ಬಂದಿರುವುದರಿಂದ ಒಂದು ವರ್ಷ ಬ್ರಹ್ಮಚಾರಿಯಾಗಿ ಇರಬೇಕಾಗಿದೆ ಎಂದು ಅರ್ಜುನನ ಹೇಳಿಕೆ ಉಲೂಪಿ ಪರಮ ಸುಂದರಿಯೇ ಅಲ್ಲದೆ ಮನವೊಲಿಸುವ ಮಾತುಗಾರಳೂ ಆಗಿದ್ದುದರಿಂದ ಅರ್ಜುನನು ಅವಳ ರೂಪದ ಮತ್ತು ಮಾತಿನ ಬಲೆಗೆ ಸಿಕ್ಕದೆ ತಪ್ಪಿಸಿಕೊಳ್ಳುವಂತಿರಲಿಲ್ಲ. ಅವಳನ್ನು ಮದುವೆಯಾಗಿ ಸ್ವಲ್ಪ ಕಾಲವಿದ್ದು ಅರ್ಜುನ ತನ್ನ ಪ್ರಯಾಣವನ್ನು ಮುಂದುವರಿಸಿದ. ನಾಗಕುಲದ ಈ ಕನ್ಯೆ ಮತ್ತು ಅರ್ಜುನರ ಸಮಾಗಮದ ಫಲವಾಗಿ ಇರಾವಂತ ಎಂಬ ಮಗ ಹುಟ್ಟಿದನಷ್ಟೆ. ಉಲೂಪಿ ಮಗನ ಪೋಷಕಿ ಪಾಲಕಿಯಾಗಿ ತನ್ನ ತೌರು ಮನೆಯಲ್ಲೇ ಉಳಿದುಕೊಂಡಳೇ ಹೊರತು ಮತ್ತೆ ಗಂಡನನ್ನು ನೋಡುವ ಪ್ರಯತ್ನ ಮಾಡಲಿಲ್ಲ. ಗಂಡನ ಒಳಿತನ್ನೇ ಬಯಸಿ "ನೀರಿನಲ್ಲಿ ನಿನಗೆ ಯಾರಿಂದಲೂ ಅಪಾಯ ಬಾರದು, ನೀನು ಅಜೇಯನಾಗಿರು" ಎಂಬ ವರವನ್ನೂ ಆಕೆ ಅರ್ಜುನನಿಗೆ ನೀಡಿದ್ದಳು.

ಮುಂದೆ ತಂದೆಯ ಮರಣಾನಂತರ ಉಲೂಪಿ ಸಾಮ್ರಾಜ್ಯದಲ್ಲಿ ಎಲ್ಲರ ವಿಶ್ವಾಸ ಗೌರವಗಳಿಗೆ ಪಾತ್ರಳಾಗಿದ್ದಳೆಂದು ಮಹಾಭಾರತ ಹೇಳುತ್ತದೆ. ಮಹಾಭಾರತ ಯುದ್ಧದಲ್ಲಿ ತನ್ನ ಪತಿಗೆ ಶ್ರೇಯಸ್ಸನ್ನು ಬಯಸಿ ಸೇನೆಯನ್ನೂ ಮಗ ಇರಾವಂತನನ್ನೂ ಅರ್ಜುನನ ಬಳಿಗೆ ಕಳಿಸಿಕೊಟ್ಟ ಕೀರ್ತಿ ಉಲೂಪಿಗೆ ಸಲ್ಲುತ್ತದೆ. ಅರ್ಜುನನ ಇನ್ನೊಬ್ಬಳು ಪತ್ನಿಯಾದ ಚಿತ್ರಾಂಗದೆಯೊಂದಿಗೆ ಇವಳ ಸ್ನೇಹ ತುಂಬ ಆಪ್ತವಾಗಿತ್ತು. ಆದುದರಿಂದ ಬಭ್ರುವಾಹನ ಎಂಬ ಮಗನೇ ತಂದೆ ಅರ್ಜುನನನ್ನು ಕೊಂದಾಗ ಚಿತ್ರಾಂಗದೆಯ ದುಃಖವನ್ನು ಶಮನಗೊಳಿಸಲು ಉಲೂಪಿ ಸಂಜೀವನ ಮಣಿಯನ್ನು ತರಿಸಿ ಗಂಡನನ್ನು ಬದುಕಿಸಿಕೊಟ್ಟು ಚಿತ್ರಾಂಗದೆಗೆ ಸಂತೋಷವಾಗುವಂತೆ ಮಾಡಿದಳು.

ಹಾಗೆ ನೋಡಿದರೆ ಉಲೂಪಿ ಅರ್ಜುನನೊಂದಿಗೆ ಸರಿಯಾಗಿ ಸಂಸಾರ ಮಾಡಲೇ ಇಲ್ಲ. ಆದರೆ ಆಶ್ರಮವಾಸ ಪರ್ವದಲ್ಲಿ ಅರ್ಜುನಾದಿಗಳು ಮಹಾಪ್ರಸ್ಥಾನವನ್ನು ಆರಂಭಿಸಿದಾಗ ಈಕೆ ಬದುಕಿನಲ್ಲಿ ಆಸಕ್ತಿ ಕಳೆದುಕೊಂಡು ಗಂಗಾನದಿಯಲ್ಲಿ ಮುಳುಗಿ ಜೀವ ಕಳೆದುಕೊಂಡದ್ದು ಅವಳ ಪ್ರೀತಿಯ ಆಳವನ್ನು ತಿಳಿಸುವಂಥ ಘಟನೆ.

* * * *

ಉಚಥ್ಯ

ಉಚಥ್ಯಮುನಿ ಒಬ್ಬ ಮಹಾಸಾಧಕ. ಆಂಗಿರಸ ವಂಶದವನು. ಸೋಮ ಋಷಿಯ ಮಗಳನ್ನು ಮದುವೆಯಾಗಿದ್ದ. ದಂಪತಿಗಳು ಆಶ್ರಮದಲ್ಲಿ ಸುಖವಾಗಿದ್ದರು. ಈಕೆಯ ಮೇಲೆ ವರುಣ ದೇವನ ಕಣ್ಣು ಬಿದ್ದಿತ್ತು. ಮೊದಲೇ ಅವಳನ್ನು ನೋಡಿ ಪ್ರೀತಿಸಿದ್ದ. ಆದರೆ ಅವಳಿಗೆ ಮದುವೆಯಾದ ಮೇಲೂ ವರುಣನ ಮನಸ್ಸು ಬದಲಾಗಲಿಲ್ಲ. ಸೂಕ್ತ ಸಮಯಕ್ಕಾಗಿ ಕಾಯುತ್ತಿದ್ದ. ಒಂದು ದಿನ ಉಚಥ್ಯನು ಯಮುನಾ ನದಿಯ ಬಳಿಗೆ ಪ್ರಯಾಣ ಮಾಡಿದುದನ್ನು ಕಂಡ ವರುಣನು ಆಶ್ರಮಕ್ಕೆ ಬಂದು ಅವಳನ್ನು ಅಪಹರಿಸಿ ವರುಣ ನಗರಿಗೆ ಒಯ್ದ. ಅಲ್ಲಿ ಬಲಾತ್ಕಾರವಾಗಿ ಅವಳೊಂದಿಗೆ ಭೋಗ ಜೀವನವನ್ನು ನಡೆಸುತ್ತಿದ್ದ. ವಿಶ್ವಸಂಚಾರಿಯಾದ ನಾರದರಿಗೆ ಈ ಸುದ್ದಿ ತಿಳಿಯಿತು. ಅವರು ತಾವೇ ನೇರವಾಗಿ ಹೋಗಿ ಅವಳನ್ನು ಕಳಿಸಿಕೊಡು ಎಂದು ಬುದ್ಧಿಹೇಳಿದರು. ಋಷಿಪತ್ನಿಯರನ್ನು ಪೀಡಿಸಿದರೆ ಕೇಡು ತಪ್ಪದು ಎಂದು ಎಚ್ಚರಿಸಿದರು. ಆದರೆ ವರುಣ ಇವನ ಮಾತಿಗೆ ಬೆಲೆಕೊಡಲಿಲ್ಲ. ತತ್‌ಕ್ಷಣ ನಾರದ ಉಚಥ್ಯನ ಬಳಿಗೆ ಹೋಗಿ ಎಲ್ಲವನ್ನೂ ತಿಳಿಸಿದ. ವರುಣನ ಉದ್ಧಟತನಕ್ಕೆ ತಕ್ಕ ಶಿಕ್ಷೆ ಮಾಡು ಎಂದು ಕೋರಿದ. ಅಪಾರ ತಪಶ್ಶಕ್ತಿಯುಳ್ಳ ಉಚಥ್ಯನು ಸಮುದ್ರ ತೀರಕ್ಕೆ ಹೋದ. ಸ್ವಲ್ಪ ಹೊತ್ತು ಸಮುದ್ರನನ್ನೇ ದುರುಗುಟ್ಟಿಕೊಂಡು ನೋಡಿದ, ಉಚಥ್ಯನ ತಪೋಜ್ವಾಲೆಯ ಪರಿಣಾಮವಾಗಿ ಸಮುದ್ರವು ಸಂಪೂರ್ಣವಾಗಿ ಒಣಗಿ ಮರುಭೂಮಿಯಂತಾಯಿತು. ವರುಣ ಪುರವೂ ಹಾಳಾಯಿತು. ಕೂಡಲೇ ವರುಣದೇವ ದಿಗ್ಭ್ರಮೆಹೊಂದಿ ಉಚಥ್ಯನ ಬಳಿಗೆ ಬಂದ. ಅವರಿಬ್ಬರ ನಡುವೆ ಸಂಧಾನವಾಯಿತು. ವರುಣನು ಉಚಥ್ಯನ ಪತ್ನಿಯನ್ನು ತಂದು ಒಪ್ಪಿಸಿ ತನ್ನ ಅಕೃತ್ಯಕ್ಕೆ ಕ್ಷಮೆ ಯಾಚಿಸಿದ.

ನೋಡಲು ಬಹಳ ಸರಳ ಕಥೆಯಂತೆ ಇದು ಕಾಣುತ್ತದೆ. ಆದರೆ ದೇವ ವರ್ಗದಲ್ಲೂ ಅತಿಕಾಮುಕರು, ಪರಭಾರ್ಯಾಸಕ್ತರು, ಹಿತವಾದಕ್ಕೆ ಕಿವಿಗೊಡದವರು, ಅಕೃತ್ಯಕ್ಕೆ ಹೇಸದವರು, ನೀತಿ ವಿಮುಖರು ಇರುತ್ತಾರೆಂಬುದಕ್ಕೆ ಇಂದ್ರ ಬುಧ ಚಂದ್ರ ಬೃಹಸ್ಪತಿ ಮೊದಲಾದ ದೇವನಾಯಕರುಗಳೇ ಉದಾಹರಣೆಯನ್ನು ಒದಗಿಸಬಲ್ಲರು. ವರುಣನಿಗೂ ಇಂದ್ರನ ಚಾಳಿ ಬಂದಿತ್ತು. ಆದರೆ ಬಲಿಷ್ಠನೂ ಮಹಾತಪಸ್ವಿಯೂ ಆದ ಉಚಥ್ಯನಂಥವನು ಎದುರು ನಿಂತದ್ದರಿಂದ ವರುಣನ ಆಟ ನಡೆಯಲಿಲ್ಲ. ಅಲ್ಲದೆ ಈ ಪ್ರಕರಣವು ಮನುಷ್ಯ ಶಕ್ತಿ ದೈವೀ ಶಕ್ತಿಯೊಂದಿಗೆ ಸೆಡ್ಡುಹೊಡೆದು ನಿಂತು ಗೆಲ್ಲಬಲ್ಲುದೆಂಬುದನ್ನು ಸೂಚಿಸುತ್ತದೆ.

ಮಹಾಭಾರತದ ಅನುಶಾಸನಿಕ ಪರ್ವದಲ್ಲಿ ವರ್ಣಿತವಾಗಿರುವ ಪೂರ್ವಘಟನೆಯಿದು. ಭೀಷ್ಮರು ಧರ್ಮರಾಯನಿಗೆ ಹಿತೋಪದೇಶ ಮಾಡುತ್ತ ಅಹಂಕಾರ ಪಡಬಾರದು ಎಂಬುದಕ್ಕೆ ಕಾರ್ತವೀರ್ಯಾರ್ಜುನನ ಕಥೆ ಹೇಳಿ ಉಚಥ್ಯನ ಉದಾಹರಣೆಯನ್ನು ಕೊಡುತ್ತ ಈ ಪ್ರಸಂಗವನ್ನು ವರ್ಣಿಸಿದ್ದಾರೆ. ಕಾರ್ತವೀರ್ಯಾರ್ಜುನನು ಸಪ್ತದ್ವೀಪಗಳನ್ನು ಆಳುತ್ತ ಮಹಾಬಲಶಾಲಿಯಾಗಿ

ಮೆರೆಯುತ್ತಿದ್ದನು. ತನ್ನ ಸಾವಿರ ಬಾಹುಗಳ ಮುಂದೆ ಯಾರೂ ನಿಲ್ಲಲಾರರು ಎಂದು ಜಂಬ ಪಡುತ್ತಿದ್ದನು. ನನಗೆ ಸಮಾನರು ಯಾರು? ಎಂದು ಒಮ್ಮೆ ಗಟ್ಟಿಯಾಗಿ ಕೂಗಿಕೊಂಡಾಗ ವಾಯುದೇವನು ಅವನ ಬಳಿಗೆ ಬಂದು ಉಚಥ್ಯನು ತಪಸ್ಸಿನಿಂದ ಶಕ್ತಿಗಳಿಸಿ ವರುಣನನ್ನೇ ಹೇಗೆ ಬೊಗ್ಗು ಬಡಿದನೆಂಬ ಸಂಗತಿಯನ್ನು ಹೇಳಿ ಅಹಂಭಾವವಿರಬಾರದೆಂದು ಬೋಧಿಸಿದನು. ದೇವತೆಗಳು ಕೂಡ ಕೆಲವು ಸಂದರ್ಭಗಳಲ್ಲಿ ಹದ್ದುಮೀರಿ ವರ್ತಿಸುತ್ತಾರೆಂಬುದಕ್ಕೆ ವರುಣನ ಕಥೆಯೇ ಸಾಕ್ಷಿ. ವರುಣನು ನಾರದನಂಥ ಹಿತೈಷಿ ಬಂದು ಹಿತ ವಾದ ಹೇಳಿದರೂ ಕೇಳದೆ ಅವಮಾನಕ್ಕೆ ಗುರಿಯಾದ.

* * * *

ಪರಶುರಾಮ

ಎರಡು ಯುಗಗಳಲ್ಲಿ ಬದುಕಿದ್ದನೆಂದು ಹೇಳಲಾಗುವ ಪರಶುರಾಮನು ಒಬ್ಬ ಅವತಾರ ಪುರುಷನೆಂಬ ಕೀರ್ತಿಗೂ ಪಾತ್ರನಾಗಿದ್ದಾನೆ. ರಾಮಾಯಣ, ಭಾಗವತ, ಪುರಾಣಗಳಲ್ಲೆಲ್ಲ ಈತನ ವ್ಯಕ್ತಿತ್ವ ಚಿತ್ರಣಗೊಂಡಿದೆ. ಮಹಾಭಾರತದ ಮಟ್ಟಿಗೆ ಹೇಳುವುದಾದರೆ ಇವನು ಜಮದಗ್ನಿ ಋಷಿ ರೇಣುಕೆಯರ ಐವರು ಮಕ್ಕಳಲ್ಲಿ ಕೊನೆಯವನು. ಕರ್ಣ ಮತ್ತು ಭೀಷ್ಮರಿಬ್ಬರೂ ಈತನ ಶಿಷ್ಯರು. ತಂದೆಯ ಅಪ್ಪಣೆಯನ್ನು ಪಾಲಿಸಿ ತಾಯಿಯನ್ನೇ ಕೊಂದು ಮತ್ತೆ ಬದುಕಿಸಿಕೊಂಡ ಮಹಿಮಾವಂತ ಈತ. ಅಪ್ಪನನ್ನು ಕೊಂದನೆಂಬ ಸಿಟ್ಟಿಗೆ ಇಪ್ಪತ್ತೊಂದು ಸಲ ಭೂಮಂಡಲವನ್ನೆಲ್ಲ ಸುತ್ತಿ ಕ್ಷತ್ರಿಯ ಕುಲವನ್ನು ನಾಶಪಡಿಸಿದವನು ಈತ. ತಾಯಿಯನ್ನು ಕಡಿಯುವುದಿಲ್ಲ ಎಂದು ತಿರಸ್ಕರಿಸಿದ ಸೋದರರಾದ ರುಮಣ್ವಂತ ಸುಷೇಣ ವಸು ವಿಶ್ವಾವಸುಗಳು ತಂದೆಯ ಶಾಪಕ್ಕೆ ಗುರಿಯಾದಾಗ ತಂದೆಯನ್ನು ಪ್ರಾರ್ಥಿಸಿ ಶಾಪವನ್ನು ತಪ್ಪಿಸಿದ ಕೀರ್ತಿಶಾಲಿ.

ಮಹಾಭಾರತದಲ್ಲಿ 'ಪರಶುರಾಮ' ಎಂಬ ಹೆಸರಿಲ್ಲ. ಭಾರ್ಗವ, ಜಾಮದಗ್ನ್ಯ ಮೊದಲಾದ ಹೆಸರುಗಳಿವೆ ಅಷ್ಟೇ. ಈತ ತೋಡಿದ ಐದು ಸರೋವರಗಳ ಸಮಂತ ಪಂಚಕ ಒಂದು ಪವಿತ್ರ ತೀರ್ಥಕ್ಷೇತ್ರವಾಗಿದೆ. ಇವನು ಕೊಂದ ರಾಜರುಗಳ ರಕ್ತದಿಂದ ಕೆಂಪಾಗಿದ್ದ ಇಲ್ಲಿಯ ನೀರಿನಿಂದ ಪರಶುರಾಮನು ಪಿತೃಗಳಿಗೆ ತರ್ಪಣವನ್ನು ಕೊಟ್ಟನಂತೆ. ಆ ಕಾಲದ ಮಹಾಬಲಶಾಲಿ ಎನ್ನಿಸಿದ್ದ ಹೈಹಯ ವಂಶದ ಕಾರ್ತವೀರ್ಯಾರ್ಜುನನನ್ನು ಕೊಂದದ್ದು ಈತನ ಸಾಧನೆ. ತಪಸ್ಸು ಮಾಡುತ್ತಿರುವಾಗಲೇ ಶಿವನ ಆಹ್ವಾನವನ್ನು ಮನ್ನಿಸಿ ರಾಕ್ಷಸರನ್ನು ಕೊಂದು ಬಂದು ಮತ್ತೆ ತಪಸ್ಸನ್ನು ಪೂರೈಸಿದವನೆಂದು ಮಹಾಭಾರತ ಹೇಳುತ್ತದೆ. ಇವನು ಇಪ್ಪತ್ತೊಂದು ಸಲ ಭೂಪ್ರದಕ್ಷಿಣೆ ಮಾಡಿ ಕೊಂದದ್ದು ಸಾಮಾನ್ಯ ರಾಜರನ್ನಲ್ಲ. ಕಾರ್ತವೀರ್ಯ, ಮತ್ಸ್ಯರಾಜ, ಮಗಧರಾಜ, ನಿಷಾದರಾಜ, ಕಾನ್ಯಕುಬ್ಜ, ಅವಂತಿ, ಸೌರಾಷ್ಟ್ರಗಳ ಅರಸರುಗಳನ್ನು–ಇವನ ಹೆಸರು ಕೇಳಿದರೆ ರಾಜರೆಲ್ಲ ನಡುಗುತ್ತಿದ್ದರಂತೆ. ಮದುವೆ ಮನೆಗೆ ಇವನು ನುಗ್ಗುವುದಿಲ್ಲ ಎಂಬುದನ್ನು ತಿಳಿದಿದ್ದ ರಾಜರುಗಳು ಇವನು ಬರುವ ಸುದ್ದಿ ತಿಳಿದಕೂಡಲೇ ಹಸೆಮಣೆಯ ಮೇಲೆ ಕುಳಿತು ಸಾವಿನಿಂದ ಪಾರಾಗುತ್ತಿದ್ದರಂತೆ.

ಮಹಾಭಾರತದ ಉದ್ಯೋಗ ಪರ್ವದಲ್ಲಿ ಶ್ರೀಕೃಷ್ಣನು ಸಂಧಿಗೆಂದು ಕೌರವನ ಆಸ್ಥಾನಕ್ಕೆ ಬಂದಾಗ ಅವನನ್ನು ನೋಡಲು ಬಂದಿದ್ದ ಮಹರ್ಷಿಗಳಲ್ಲಿ ಪರಶುರಾಮನೂ ಒಬ್ಬ. ಇನ್ನೆರಡು ಮುಖ್ಯ ಸಂದರ್ಭಗಳು ಪರಶುರಾಮನೊಂದಿಗೆ ನೇರ ಸಂಬಂಧ ಹೊಂದಿವೆ. ಪರಶುರಾಮನಿಗೆ ಭೀಷ್ಮ ಶಿಷ್ಯ ತಾನೇ? ಆದರೆ ಅಂಬೆ ಬಂದು ಬೇಡಿಕೊಂಡಳೆಂಬ ಕಾರಣಕ್ಕೆ ಭೀಷ್ಮರನ್ನು ಬ್ರಹ್ಮಚರ್ಯದಿಂದ ತಪ್ಪಿಸಿ ವಿವಾಹ ಲೋಕಕ್ಕೆ ಕಾಲಿಡುವಂತೆ ಮಾಡಲು ಪ್ರಯತ್ನಿಸಿ ಕುರುಕ್ಷೇತ್ರದಲ್ಲಿ ಶಿಷ್ಯನೊಂದಿಗೆ ಹೋರಾಡಿ ಸೋತದ್ದು ಒಂದು ವಿಶಿಷ್ಟ ಘಟನೆ. ಕರ್ಣನು ಬ್ರಾಹ್ಮಣನೆಂದು ಸುಳ್ಳು

ಹೇಳಿಕೊಂಡು ಬಂದಾಗ ಅವನಿಗೆ ಶಸ್ತ್ರಗುರುವಾಗಿ ಶಿಕ್ಷಣ ಕೊಟ್ಟ ಪರಶುರಾಮನು ಒಮ್ಮೆ ಅವನ ತೊಡೆಯ ಮೇಲೆ ಮಲಗಿ ನಿದ್ದೆ ಮಾಡಿದ. ಒಂದು ಕೀಟವು ಕರ್ಣನನ್ನು ಕಚ್ಚಿದರೂ ಅವನು ಗುರುವಿಗೆ ನಿದ್ರಾಘಾತವಾಗಬಾರದೆಂದು ಸುಮ್ಮನೆ ಆ ನೋವನ್ನು ಸಹಿಸಿಕೊಂಡದ್ದು, ರಕ್ತಸುರಿದು ಎಚ್ಚರಗೊಂಡ ಪರಶುರಾಮನು "ಕರ್ಣ ನೀನು ಸುಳ್ಳು ಹೇಳಿದ್ದೀಯೇ, ನಾನು ಹೇಳಿಕೊಟ್ಟ ಯಾವ ದಿವ್ಯಾಸ್ತ್ರವೂ ನಿನಗೆ ಮುಖ್ಯವಾದ ಸಮಯದಲ್ಲಿ ಸ್ಮರಣೆಗೆ ಬಾರದಿರಲಿ" ಎಂದು ಶಾಪಕೊಟ್ಟದ್ದು ಎರಡೂ ದುರ್ಘಟನೆಗಳೇ.

ಪರಶುರಾಮನ ಬಗೆಗೆ ಹೆಚ್ಚು ತಿಳಿಯಲು ಅಪೇಕ್ಷಿಸುವವರು ಜಿ.ಪಿ.ರಾಜರತ್ನಂ ಅವರ 'ಗಂಡುಗೊಡಲಿ' ನಾಟಕವನ್ನು ಓದಬೇಕು.

* * * *

ಪಂಚಶಿಖ

ಆಸುರೀ ಎಂಬ ಋಷಿಯ ಶಿಷ್ಯನಾದ ಪಂಚಶಿಖನಿಗೆ ಕಾಪಿಲೆ ಮುನಿ ಎಂಬ ಹೆಸರೂ ಇದೆ. ಪಂಚಶಿಖ ಮಗುವಾಗಿದ್ದಾಗಲೇ ತಾಯಿಯನ್ನು ಕಳೆದುಕೊಂಡಿದ್ದ. ಕಪಿಲೆ ಎಂಬುವವಳು ಎದೆಹಾಲು ಕುಡಿಸಿ ಇವನನ್ನು ಬೆಳೆಸಿದ್ದರಿಂದ ಕಾಪಿಲೆ ಎಂಬ ಹೆಸರಿನಿಂದಲೂ ಇವನನ್ನು ಕರೆಯುತ್ತಿದ್ದರು. ಮಹಾಜ್ಞಾನಿಯೂ ಅನುಭವಶಾಲಿಯೂ ಶಾಸ್ತ್ರಪಾರಂಗತನೂ ಆಗಿದ್ದ ಈತ ಒಮ್ಮೆ ಮಿಥಿಲಾ ನಗರಕ್ಕೆ ಬಂದ. ಅಲ್ಲಿನ ಮಹಾರಾಜ ಜನದೇವ ಎಂಬಾತ (ಜನಕ ಇರಬಹುದೆ ?). ಮಿಥಿಲೆ ಒಂದು ಸುಸಂಸ್ಕೃತ ನಗರ. ಮಹಾಜ್ಞಾನಿಗಳಿದ್ದ ಊರು. ಜನದೇವನ ಆಸ್ಥಾನದಲ್ಲಿ ಒಂದು ನೂರು ಜನ ವಿದ್ವಾಂಸರಿದ್ದರು. ಅವರೆಲ್ಲ ತತ್ವಶಾಸ್ತ್ರದಲ್ಲಿ ಮಹಾ ನಿಷ್ಣಾತರು. ಆದರೂ ಅವರುಗಳು ಜೀವ ಸಿದ್ಧಾಂತದ ವಿಷಯ ಹೇಳುತ್ತಿದ್ದರೆ ಜನದೇವನಿಗೆ ಅವುಗಳಲ್ಲಿ ಏನೋ ಕೊರತೆ ಕಾಣಿಸುತ್ತಿತ್ತು. ಅವರ ಮಾತುಗಳೆಲ್ಲ ಶಬ್ದಾಡಂಬರದ ಪ್ರದರ್ಶನಕ್ಕೇ ಮೀಸಲಾಗಿವೆ ಎನ್ನಿಸುತ್ತಿತ್ತು. ಅವರ ಮಾತುಗಳಲ್ಲಿ ಅಂತರಂಗ ಸ್ಪಂದಕ ಶಕ್ತಿ ಕಾಣುತ್ತಿರಲಿಲ್ಲ ಅವನಿಗೆ. ಮನಸ್ಸಿಗೆ ತೃಪ್ತಿಯಿಲ್ಲದಿದ್ದರೂ ಜನದೇವನು ಸುಮ್ಮನೆ ಸೌಜನ್ಯಕ್ಕೆ ಗೋಣಾಡಿಸಿ ಮೆಚ್ಚುವಂತೆ ನಟಿಸುತ್ತಿದ್ದ. ಶಾಸ್ತ್ರ ಮುಖವಾದ ಪಂಡಿತೋಕ್ತಿಗೂ ಸ್ವಾನುಭವ ಸಂಪನ್ನವಾದ ಹೃದಯೋಕ್ತಿಗೆ ವ್ಯತ್ಯಾಸವಿರುವುದಿಲ್ಲವೆ ?

ಆದರೆ ಪಂಚಶಿಖನು ಬಂದ ಮೇಲೆ ಆವರಣವೇ ಬದಲಾಯಿತು. ಪಂಚಶಿಖ ಪ್ರಾಮಾಣಿಕವಾಗಿ ವಸ್ತು ಸಂಗತಿಗಳನ್ನು ಬಲ್ಲವನಾಗಿದ್ದ. ವಿಷಯವನ್ನು ಇದು ಹೀಗೇ ಇರತಕ್ಕದ್ದು ಎಂದು ನಿರ್ಣಯಿಸಿ ಹೇಳುವ ಶಕ್ತಿ ಅವನಿಗೆ ಕರಗತವಾಗಿತ್ತು. ಇವನ ಮಾತಿಗೆ ಎದುರು ತರ್ಕವನ್ನು ಹೂಡುವುದೇ ಕಷ್ಟವಾಗುತ್ತಿತ್ತು. ಅಲ್ಲದೆ ಉಳಿದವರ ಹೇಳಿಕೆಗಿಂತ ಈತನ ಮಾತುಕಥೆ, ಕಥನ ಕ್ರಮ, ಸಂವಾದ ರೀತಿ ಎಲ್ಲವೂ ಭಿನ್ನವಾಗಿದ್ದುವು. ಮನುಷ್ಯ ಸತ್ತಮೇಲೆ ಕೂಡ ಅವನ ಸಾಧನೆಗಳು ನಾಶವಾಗುವುದಿಲ್ಲ. ಜೀವಕ್ಕೆ ಅಂಟಿಕೊಂಡೇ ಇರುತ್ತವೆ ಎಂಬುದು ಆತನ ಪ್ರತಿಪಾದನೆ. ಅದನ್ನು ತರ್ಕಬದ್ಧವಾಗಿ ಸ್ಥಾಪಿಸಬಲ್ಲ ನಿರೂಪಣ ಶಕ್ತಿಯೂ ಅವನಿಗೆ ಇತ್ತು. ಪಂಚ ಕರ್ಮೇಂದ್ರಿಯ, ಜ್ಞಾನೇಂದ್ರಿಯ ಮತ್ತು ಪ್ರಾಣಶಕ್ತಿಗಳ ವಿಷಯವನ್ನು ಸಾಂಖ್ಯತತ್ವಕ್ಕೆ ಅನುಗುಣವಾಗಿ ವಿವರಿಸಿ ಜಾತಿ ವೈರಾಗ್ಯ, ಕರ್ಮವೈರಾಗ್ಯ ಮತ್ತು ಸರ್ವಸ್ವ ವೈರಾಗ್ಯಗಳ ಸ್ವರೂಪವನ್ನು ಪಂಚಶಿಖನು ಪರಿಚಯ ಮಾಡಿಕೊಡುತ್ತಿದ್ದ ರೀತಿಯಂತೂ ಜನದೇವನಿಗೆ ಅದ್ಭುತ ಅನುಭವವನ್ನು ಕೊಡುತ್ತಿತ್ತು. ಈ ದೇಹವನ್ನು ನಾಶಶೀಲ ಎಂದು ನಂಬುವವನಿಗೆ ಪುನರ್ಜನ್ಮವಿಲ್ಲ. ದೇಹವು ನಶ್ವರ ಶೀಲವಾದುದರಿಂದ ಸ್ವಂತ ಸುಖ ಎಂಬುದು ಇಲ್ಲ ಎಂಬುದು ಇವನ ಸಂವಾದದ ತಿರುಳು. ಇವನ ಮಾತು ಕೇಳುತ್ತ ಹೋದಂತೆಲ್ಲ ಜನದೇವನು ಅವನ ಕಡೆಗೆ ಆಕರ್ಷಿತನಾಗತೊಡಗಿದ. ಪಂಚಶಿಖನಿಂದ 'ದಮ' ಸ್ವಭಾವದ ವಿವರಣೆಯನ್ನು ಕೇಳಿದ ಮೇಲಂತೂ ಜನದೇವನು ಪಂಚಶಿಖನೇ ತನ್ನ ಗುರು ಎಂದು ನಿರ್ಧರಿಸಿದ್ದೂ

ಉಂಟು. ಆದರೂ ಆಸ್ಥಾನದಲ್ಲಿ ವಾದ ಮಂಡನೆಯಾಗಬೇಕಲ್ಲ. ಜನದೇವನು ನೂರು ಪಂಡಿತರನ್ನೂ ಎದುರಿಸಿ ಅವರನ್ನೆಲ್ಲ ನಾನಾ ಬಗೆಯ ವಾದದಿಂದ ಮಂತ್ರಮುಗ್ಧರನ್ನಾಗಿ ಮಾಡಿದ. ಅವನು ಲೀಲಾಜಾಲವಾಗಿ ಎಲ್ಲರಿಗೂ ಉತ್ತರಕೊಟ್ಟ. ಆದರೆ ಅವನು ಎತ್ತಿದ ಪ್ರಶ್ನೆಗಳಿಗೆ ಆ ಪಂಡಿತರು ಸರಿಯುತ್ತರ ಕೊಡಲಾಗದೆ ಹೆಣಗುತ್ತಿದ್ದರು. ಈ ಗೋಷ್ಠಿಯನ್ನು ನೋಡುತ್ತಿದ್ದ ಜನದೇವನು ತನ್ನ ಕಡೆಯ ನೂರು ವಿದ್ವಾಂಸರನ್ನು ಕೈಬಿಟ್ಟು ಪಂಚಶಿಖನನ್ನೇ ಗುರುವೆಂದು ಸ್ವೀಕರಿಸಿ ಅವನನ್ನು ಹಿಂಬಾಲಿಸಿದನು. ಪಂಚಶಿಖನ ಬೋಧೆಯಿಂದ ಲಾಭಪಡೆದು ಯಾವುದಕ್ಕೂ ಅಂಟಿಕೊಳ್ಳದೆ ನಿರ್ಮಮತೆಯಿಂದ ನಿರ್ಲಿಪ್ತನಾಗಿರುವುದನ್ನು ಕಲಿತನು. ಇವನ ನಿರ್ಮಮತೆಯನ್ನು ನೋಡಿ ಮಿಥಿಲೆಗೆ ಬೆಂಕಿಬಿದ್ದರೂ ಜನದೇವನಿಗೆ ಏನೂ ಆಘಾತವಾಗುವುದಿಲ್ಲ ಎಂದು ಜನರು ಪ್ರಸಿದ್ಧೋಕ್ತಿಯನ್ನೇ ಕಟ್ಟಿದರು.

* * * *

ದಿಲೀಪ

ಇಕ್ಷ್ವಾಕು ವಂಶದ ಕಥೆ ಮಹಾಭಾರತದಲ್ಲಿ ಹೇಗೆ ಬಂತು ಎಂದು ಆಶ್ಚರ್ಯಪಡಬೇಕಾಗಿಲ್ಲ. ಧರ್ಮರಾಯನಿಗೆ ಲೋಮಶ, ಮಾರ್ಕಂಡೇಯಾದಿಗಳು ಹೇಳಿದ ಪೂರ್ವಕಥೆಗಳಲ್ಲಿ ಷೋಡಶ ಚಕ್ರವರ್ತಿಗಳ ಕಥೆಗಳು ಪ್ರಸಿದ್ಧವಾದುವು. ಈ ನಾಯಕರೆಲ್ಲ ಪುರಾಣ ಇತಿಹಾಸಗಳ ಕಾಲದಿಂದ ಕೀರ್ತಿವಂತರಾಗಿರುವವರು. ಇಕ್ಷ್ವಾಕು ವಂಶ ಅಥವಾ ರಘುವಂಶದಲ್ಲಿ ಪ್ರಸಿದ್ಧನಾಗಿರುವವನು ದಿಲೀಪ ಚಕ್ರವರ್ತಿ. ಔನ್ನತ್ಯದಾತೃತ್ವಗಳಲ್ಲಿ ಈತನನ್ನು ಮೀರಿಸುವವರೇ ಇರಲಿಲ್ಲ. ಇವನು ಎಂಥ ಯುದ್ಧ ಕುಶಲಿ ಎಂದರೆ ಇವನು ರಥದಲ್ಲಿ ಕುಳಿತು ಯುದ್ಧಕ್ಕೆ ಹೊರಟರೆ ರಥದ ಚಕ್ರಗಳು ನೀರಿನಲ್ಲಿ ಕೂಡ ಮುಳುಗುತ್ತಿರಲಿಲ್ಲವಂತೆ.

ಪಂಚ ಶಬ್ದಂ ನ ಜೀರ್ಯಂತೇ ಖಟ್ವಾಂಗಸ್ಯ ನಿವೇಶನೇ
ಸ್ವಾಧ್ಯಾಯ ಘೋಷೋ ಜ್ಯಾಘೋಷ: ಪಿಬತಾಶ್ನೀತ ಭಾರತ

ಎಂಬ ಹೆಗ್ಗಳಿಕೆಯೂ ಈತನದೇ. ಅಂದರೆ ದಿಲೀಪನ ಅರಮನೆಯಲ್ಲಿ ಯಾವಾಗಲೂ ವೇದಾಧ್ಯಯನದ ಶಬ್ದ, ಧನುಷ್ಟಂಕಾರದ ಶಬ್ದ, ಕುಡಿಯಿರಿ, ತಿನ್ನಿ, ಅನುಭವಿಸಿ ಆನಂದವಾಗಿರಿ ಎಂಬ ಐದು ಶಬ್ದಗಳನ್ನು ಕೇಳಬಹುದಾಗಿತ್ತಂತೆ. (ಖಟ್ವಾಂಗ ಎಂದರೆ ದಿಲೀಪ–ಅವನ ಮನೆಯ ವರ್ಣನೆ ಇದು) ಈ ಚಕ್ರವರ್ತಿ ನೂರು ಯಜ್ಞಗಳನ್ನು ಯಶಸ್ವಿಯಾಗಿ ಮಾಡಿದವನು. ಅವರಿವರಿರಲಿ ದೇವೇಂದ್ರನೇ ಖುದ್ದು ಹಾಜರಾಗಿ ಇವನ ಯಜ್ಞಗಳನ್ನು ನೋಡಿ ಸಂತೋಷಪಡುತ್ತಿದ್ದನಂತೆ! ಇವನು ಹಂಚಿದ ಸುವರ್ಣ ವಸ್ತುಗಳಿಗೆ ಲೆಕ್ಕವಿಲ್ಲ. ಯಾಗ ಸಮಯದಲ್ಲಿ ಆ ಆವರಣದಲ್ಲೆಲ್ಲ ಮಧುರ ಪಾನೀಯದ ಕಾಲುವೆಗಳೇ ಹರಿಯುತ್ತಿದ್ದುವಂತೆ, ಅನ್ನದ ಬೆಟ್ಟಗಳನ್ನು ಕಾಣಬಹುದಾಗಿತ್ತಂತೆ. ದಿಲೀಪನು ರಾಗಖಾಂಡವ ಎಂಬ ಭಕ್ಷ್ಯವನ್ನು ತಯಾರು ಮಾಡುವುದರಲ್ಲಿ ಪ್ರಸಿದ್ಧನಾಗಿದ್ದ. ಅದನ್ನು ಎಲ್ಲರಿಗೂ ಬಡಿಸಲಾಗುತ್ತಿತ್ತು. ದಿಲೀಪನ ರಾಜ್ಯದಲ್ಲಿ ಆನೆಗಳು ಅಪಾರ ಸಂಖ್ಯೆಯಲ್ಲಿ ಇದ್ದುವು. ಹದಿಮೂರು ಸಾವಿರ ಅಪ್ಸರೆಯರು ಅಲ್ಲಿಗೆ ಬಂದು ನರ್ತನೋತ್ಸವ ಮಾಡುತ್ತಿದ್ದರಂತೆ. ಗಂಧರ್ವರಾಜ ವಿಶ್ವಾವಸುವೇ ಬಂದು ವೀಣೆ ನುಡಿಸುತ್ತಿದ್ದನಂತೆ!

ಈ ದಿಲೀಪನ ಪತ್ನಿ ಸುದಕ್ಷಿಣೆ ಎಂಬಾಕೆ. ಮದುವೆಯಾಗಿ ಬಹಳಕಾಲವಾದರೂ ಈ ದಂಪತಿಗಳಿಗೆ ಮಕ್ಕಳಾಗಲಿಲ್ಲ. ಆಗ ಕುಲಗುರು ವಸಿಷ್ಠರ ಸಲಹೆಯಂತೆ ದಿಲೀಪನು ನಂದಿನಿ ಧೇನುವನ್ನು ಶ್ರದ್ಧೆಯಿಂದ ಪೂಜಿಸುತ್ತಿದ್ದ. ಅದರ ಹಿಂದೆ ಹಗಲು ರಾತ್ರಿ ಭೇದವಿಲ್ಲದೆ ಪ್ರಯಾಣ ಮಾಡುತ್ತಿದ್ದ. ಅದಕ್ಕೆ ಯಾರಿಂದಲೂ ಅಪಾಯವಾಗದಂತೆ ನೋಡಿಕೊಳ್ಳುವ ಹೊಣೆ ಅವನದಾಗಿತ್ತು. ಒಮ್ಮೆ ಅವನು ನೋಡುತ್ತಿದ್ದಂತೆ ಒಂದು ಸಿಂಹ ಆ ಹಸು ನಂದಿನಿಯನ್ನು ತಿನ್ನಲು ಬಂದಿತು. ಅದನ್ನು ಕಾಪಾಡಲು ದಿಲೀಪನು ಬಿಲ್ಲೆತ್ತಿದರೆ ಬಾಣ ಹೂಡುವುದಕ್ಕೆ ಕೂಡ ಆಗದಂತೆ ಅವನ ಕೈ ಸೋತು ಬಿದ್ದಿತ್ತು. ಕೊನೆಗೆ ದಿಲೀಪನು ಬೇಕಾದರೆ ತನ್ನನ್ನೇ ಅರ್ಪಿಸುವುದಾಗಿಯೂ ಹಸುವನ್ನು ಮಾತ್ರ ತಿನ್ನಬಾರದೆಂದೂ ಸಿಂಹವನ್ನು ಬೇಡಿಕೊಂಡ. ಆ ಕೂಡಲೇ ನಂದಿನಿಯು ಮಧ್ಯೆ

ಬಂದು "ದಿಲೀಪ ರಾಜ! ನಿನ್ನ ಗುರುಭಕ್ತಿಯನ್ನು ಪರೀಕ್ಷಿಸುವುದಕ್ಕಾಗಿ ನಾನೇ ಈ ಮಾಯಾ ಕ್ರೀಡೆಯನ್ನಾಡಿದೆ. ನೀನು ಪರೀಕ್ಷೆಯಲ್ಲಿ ಸಂಪೂರ್ಣ ಗೆಲುವು ಸಾಧಿಸಿದ್ದೀಯೆ. ನೀನು ಅರಮನೆಗೆ ಹಿಂದಿರುಗು ಕಾಲಕ್ರಮದಲ್ಲಿ ನಿನಗೆ ಸಂತಾನವಾಗುತ್ತದೆ." ಎಂದು ವರವನ್ನು ಕೊಟ್ಟಿತು.

ಮಹಾಭಾರತದಲ್ಲಿ ಸೃಂಜಯನು ಪುತ್ರ ಸುವರ್ಣಷ್ಠೀವಿಯ ಸಾವಿಗಾಗಿ ತಳಮಳಿಸುತ್ತಿದ್ದಾಗ ನಾರದರು ಅವನ ದುಃಖವನ್ನು ತಗ್ಗಿಸಲು ದಿಲೀಪನು ಪಟ್ಟ ಕಷ್ಟಗಳನ್ನು ವಿವರಿಸುತ್ತ ಈ ಕಥೆ ಹೇಳಿದ್ದಾರೆ. ತಮ್ಮ ತಮ್ಮ ಕಷ್ಟಗಳೇ ಹೆಚ್ಚಿನವು ಎಂದುಕೊಳ್ಳುವವರಿಗೆ ಇಂಥ ಕಥೆಗಳ ತೌಲನಿಕ ಅಧ್ಯಯನ ಮಾಡಿಸುವುದು ಅಗತ್ಯ.

* * * *

ಸೋಮದತ್ತ

ಸೋಮದತ್ತನನ್ನು ಕುರುಪುಂಗವ ಬಾಹ್ಲಿಕಾತ್ಮಜ ಕೌರವ ಎಂದೂ ಹಲವಾರು ಹೆಸರುಗಳಿಂದ ಕರೆಯಲಾಗಿದೆ. ಕುರುವಂಶದ ಸೋಮದತ್ತನು ಪ್ರತೀಪರಾಜನ



ಮೊಮ್ಮಗ. ಬಾಹ್ಲಿಕರಾಜನ ಮಗ. ವೃಷ್ಣಿವಂಶದ ಶಿನಿ ಮತ್ತು ವಸುದೇವ ಇಬ್ಬರೂ ಗೆಳೆಯರು. ದೇವಕಿಯ ಸ್ವಯಂವರ ಸಂದರ್ಭದಲ್ಲಿ ಈ ಶಿನಿರಾಜನು ವಸುದೇವನ ಪರವಾಗಿ, ನೆರೆದಿದ್ದ ಎಲ್ಲ ರಾಜರನ್ನೂ ಸೋಲಿಸಿ ದೇವಕಿಯನ್ನು ರಥದಲ್ಲಿ

ಕುಳ್ಳಿರಿಸಿಕೊಂಡು ಹೊರಟ. ಇದು ಸೋಮದತ್ತನಿಗೆ ಹಿಡಿಸಲಿಲ್ಲವಾದುದರಿಂದ ರಥವನ್ನು ಅಡ್ಡಗಟ್ಟಿದ. ಶಿನಿ-ಸೋಮದತ್ತರಿಗೆ ಅರ್ಧ ದಿನದ ಮಲ್ಲಯುದ್ಧ ನಡೆದು ಶಿನಿ ಜಯಗಳಿಸಿದ. ಸಾವಿರಾರು ಜನರ ಎದುರಿಗೆ ಸೋಮದತ್ತನನ್ನು ನೆಲಕ್ಕೆ ಕೆಡವಿ ಕತ್ತಿ ಹಿರಿದು ಸೋಮದತ್ತನ ಜುಟ್ಟನ್ನು ಹಿಡಿದುಕೊಂಡು ಅವಮಾನಿಸಿದ. ಕೊನೆಗೆ 'ಬದುಕಿಕೋ ಹೋಗು' ಎಂದು ಕನಿಕರಿಸಿ ಕೈಬಿಟ್ಟ. ಅವಮಾನಿತನಾದ ಸೋಮದತ್ತನು ಘೋರ ತಪಸ್ಸು ಮಾಡಿ ಶಿವನನ್ನು ಒಲಿಸಿಕೊಂಡ. ಆದರೆ ಅವನು ಶಿವನಲ್ಲಿ ಬೇಡಿದ ವರ ಏನು ಗೊತ್ತೆ?

ಪುತ್ರಮಿಚ್ಛಾಮಿ ಭಗವನ್ ಯೋ ನಿಪಾತ್ಯ ಶಿನೇಃ ಸುತಂ
ಮಧ್ಯೇ ರಾಜ ಸಹಸ್ರಾಣಾಂ ಪದಾ ಹನ್ಯಾಚ್ಚ ಸಂಯುಗೇ ॥

'ಶಿವನೇ ನನಗೆ ಒಬ್ಬ ಮಗನನ್ನು ಕರುಣಿಸು. ಯುದ್ಧದಲ್ಲಿ ಶಿನಿಯ ಪುತ್ರನನ್ನು ಸಾವಿರಾರು ಜನರೆದುರಿಗೆ ವಧಿಸುವಂಥ ಮಗನನ್ನು ಕರುಣಿಸು'

ಆದರೆ ಈಗಾಗಲೇ ಶಿವನನ್ನು ಕುರಿತು ತಪಸ್ಸು ಮಾಡಿ ತನ್ನ ಮಕ್ಕಳಿಗೆ ಏನೂ ಆಗಬಾರದೆಂದು ಶಿನಿಯು ವರ ಪಡೆದಿದ್ದುದನ್ನು ಜ್ಞಾಪಿಸಿ ಆ ವರವನ್ನು ಕೊಡಲಾರೆನೆಂದೂ ಆದರೆ ಸಾವಿರಾರು ಜನರೆದುರಿಗೆ ಸಾತ್ಯಕಿಯನ್ನು ಕೆಡವಿ ಅವಮಾನಗೊಳಿಸಬಹುದೆಂದೂ ಈಶ್ವರ ತಿಳಿಸಿದ.

ದ್ರೋಣರ ನಾಯಕತ್ವದಲ್ಲಿ ಹೋರಾಡುತ್ತಿದ್ದ ಸೋಮದತ್ತನ ಮಗ ಭೂರಿಶ್ರವನು ಸಾತ್ಯಕಿಯೊಂದಿಗೆ ಯುದ್ಧ ಮಾಡಿ ಕೆಳಗೆ ಬೀಳಿಸಿ ಅವಮಾನ ಗೊಳಿಸಿದ. ಆದರೆ ಅಷ್ಟರಲ್ಲಿ ಅರ್ಜುನನು ಭೂರಿಶ್ರವನ ಭುಜಗಳನ್ನು ಕತ್ತರಿಸಿ ಹಾಕಿ ಮುಂದಿನ ಅಪಾಯವನ್ನು ತಡೆದ. ಆಗ ಸಂಜಯನು ಭೂರಿಶ್ರವನ ಮೇಲೆ ಏರಿ ಹೋಗಿ ಅವನನ್ನು ಕೊಂದ. ಸೋಮದತ್ತನಿಗೆ ತುಂಬ ಬೇಸರವಾಯಿತು.

ಪರಾಙ್ಮುಖಾಯ ದೀನಾಯ ನ್ಯಸ್ತಶಸ್ತ್ರಾಭ ಸಾತ್ಯಕೇ
ಕಥಂ ಪ್ರಾಯೋಪವಿಷ್ಟಾಯ ಪಾರ್ಥೇನ ಛಿನ್ನಬಾಹವೇ
ನೃಶಂಸಂ ಪತನೀಯುಂಚ ತಾದೃಶಂ ಕೃತವಾನಸಿ

('ಅಲ್ಲ ಸಂಜಯ! ಯುದ್ಧ ವಿಮುಖನಾಗಿ, ದೀನನಾಗಿ, ಶಸ್ತ್ರರಹಿತನಾಗಿರುವ, ಆಮರಣ ವ್ರತನಿಷ್ಠನಾದ ಭೂರಿಶ್ರವನನ್ನು ಕ್ಷಾತ್ರಧರ್ಮ ಪರಾಯಣನಾದ ನೀನು ಹೇಗೆ ಕೊಂದೆ?')

ಆದರೆ ಸಂಜಯ, ಇದನ್ನೆಲ್ಲ ಕೇಳುವ ಸ್ಥಿತಿಯಲ್ಲಿರಲಿಲ್ಲ. ಕೊನೆಗೆ ಸೋಮದತ್ತನೇ ಸಂಜಯನ ಮೇಲೆ ಯುದ್ಧಕ್ಕೆ ನಿಂತ. ಸಿಟ್ಟಿನಿಂದ ಕುದಿಯುತ್ತಿದ್ದ ಸಂಜಯನು ಸೋಮದತ್ತನನ್ನೂ ಕೊಂದುಹಾಕಿದ.

* * * *

ಅಕಂಪನ

ಮಹಾಭಾರತ ಯುದ್ಧದಲ್ಲಿ ಅಭಿಮನ್ಯು ಹೋರಾಡಿ ಸತ್ತನಷ್ಟೆ. ಆಗ ಧರ್ಮರಾಯನು ಶೋಕ ಸಂತಪ್ತನಾಗಿದ್ದ. ಅವನನ್ನು ಸಮಾಧಾನಪಡಿಸಲು ಬಂದ ವೇದವ್ಯಾಸರು ಧರ್ಮರಾಯನಿಗೆ ಅಕಂಪನನೆಂಬುವವನು ಮಗನನ್ನು ಕಳೆದುಕೊಂಡ ಸಂದರ್ಭವನ್ನು ಹೇಳಿ ಸಮಾಧಾನಪಡಿಸುತ್ತಾರೆ.

ಅಕಂಪನನು ಕೃತಯುಗದ ಒಬ್ಬ ದೊರೆ. ಇವನ ಮಗ ಹರಿ. ಆತ ತಂದೆಯ ಪರವಾಗಿ ಶತ್ರುಗಳ ಮೇಲೆ ಯುದ್ಧ ಮಾಡುತ್ತ ಸತ್ತ. ಇವನ ತಂದೆ ಅಕಂಪನನಿಗೆ ಯುದ್ಧದಲ್ಲಿ ಜಯವೇನೋ ಆಯಿತು. ಆದರೆ ಪುತ್ರನು ಸತ್ತನಲ್ಲ ಎಂಬ ಶೋಕ ಅವನನ್ನು ತೀವ್ರವಾಗಿ ಕಾಡಿತು. ಆಗ ಅವನನ್ನು ಸಮಾಧಾನಪಡಿಸಲು ನಾರದರೇ ಅಲ್ಲಿಗೆ ಬರುತ್ತಾರೆ. ಮೃತ್ಯುವಿನ ಅನಿವಾರ್ಯತೆಯ ಬಗೆಗೆ ತಿಳಿಯಹೇಳುತ್ತಾರೆ. ಆದರೆ ಅಕಂಪನನಿಗೆ ಪೂರ್ಣ ಸಮಾಧಾನವಿಲ್ಲ. ಅವನದು ಒಂದೇ ಕೊರಗು. ಅಲ್ಲ ನಾರದರೆ! ನನ್ನ ಮಗನು ದೇವೇಂದ್ರನಿಗೆ ಸಮನಾದ ಬಾಹು ಪರಾಕ್ರಮ ಉಳ್ಳವನು. ಭೀಕರ ಸಮರದಲ್ಲಿ ನನ್ನ ಮಗ ಎಂಥ ಅದ್ಭುತ ಶಕ್ತಿಯ ಪ್ರದರ್ಶನ ಮಾಡಿದ್ದಾನೆ. ಅಂಥವನಿಗೆ ಶುಷ್ಕಸಾವು ಹೇಗೆ ಬಂದಿತು? ವೀರನಾದ ನನ್ನ ಮಗನ ಸುತ್ತಲೂ ಸೇರಿಕೊಂಡು ಶತ್ರುವೀರರೆಲ್ಲರೂ ಸೇರಿ ಕೊಂದು ಹಾಕಿದರಲ್ಲ! ಇದು ಧರ್ಮಯುದ್ಧವೇ? ಇದು ನ್ಯಾಯವೇ? ಮೃತ್ಯು ಎಂದರೇನು? ಅದರ ಬಲ ವೀರ್ಯ ಎಂಥವು? ಎಂದು ಪ್ರಶ್ನೆ ಹಾಕಿದ. ಆಗ ನಾರದರು ಅಕಂಪನನಿಗೆ ಒಂದು ದೃಷ್ಟಾಂತ ಕಥೆ ಹೇಳುತ್ತಾರೆ.

"ಅಕಂಪನ! ಕೇಳು. ಸೃಷ್ಟಿ ಆರಂಭವಾದಾಗ ಜನರಿಗೆ ಸಾವು ಎಂಬುದೇ ಇರಲಿಲ್ಲ. ತುಂಬ ವಯಸ್ಸಾದವರು ತಮ್ಮ ಮೊಮ್ಮಕ್ಕಳ ಮರಿಮಕ್ಕಳ ಜೊತೆಯಲ್ಲಿ ಬಾಳ್ವೆ ನಡೆಸಬೇಕಾಗುತ್ತಿತ್ತು. ಸಿಟ್ಟುಗೊಂಡ ಬ್ರಹ್ಮನ ನೇತ್ರಾಗ್ನಿಯಿಂದ ಜಗತ್ತೇ ನಾಶವಾಗುತ್ತಿದೆ. ಭೂಮಿಯ ಭಾರ ಹೊರಲಾಗದೆ ಭೂದೇವಿ ಸಂಕಟಪಟ್ಟಳು. ಆಗ ಶಿವನು ಬ್ರಹ್ಮನಿಗೆ ಭೂತ-ಭವಿಷ್ಯತ್-ವರ್ತಮಾನ ಎಂಬ ಕಾಲವಿಭಜನೆಯ ತಂತ್ರವನ್ನು ಹೇಳಿಕೊಟ್ಟ. ಬ್ರಹ್ಮನು ಮೃತ್ಯುದೇವತೆಯನ್ನು ಸೃಷ್ಟಿಸಿದ. ಜನರನ್ನು ಕೊಲ್ಲಲು ಅವಳು ನಿರಾಕರಿಸಿದಳು. ಇಂಥ ಕ್ರೌರ್ಯ ನನಗೆ ಇಷ್ಟವಿಲ್ಲ ಎಂದಳು. ಈ ಬಗೆಗೆ ಧೇನುಕಾಶ್ರಮದಲ್ಲಿ ದೀರ್ಘಕಾಲ ತಪಸ್ಸನ್ನೂ ಮಾಡಿದಳು. ಆಗ ಬ್ರಹ್ಮನು "ಹೆದರಬೇಡ, ಹುಟ್ಟಿದವರು ಸಾಯಲೇಬೇಕು ಎಂಬುದು ನನ್ನ ನಿಯಮ. ಆ ನಿಯಮವನ್ನು ಪಾಲಿಸುವುದಷ್ಟೇ ನಿನ್ನ ಕೆಲಸ. ಇದಕ್ಕೆ ಜಗತ್ತು ನಿನ್ನನ್ನು ನಿಂದಿಸುವುದಿಲ್ಲ." ಎಂದು ಹೇಳಿದನಂತೆ. ಈ ಕಥೆಯನ್ನು ಹೇಳಿ ನಾರದ ಅಕಂಪನನಿಗೆ ಸಮಾಧಾನ ಮಾಡಿದರಂತೆ. ಅದನ್ನೇ ವ್ಯಾಸರು ಧರ್ಮರಾಯನಿಗೆ ಹೇಳುತ್ತಿದ್ದಾರೆ.

ಸಾವು ಎಲ್ಲ ಜೀವರಿಗೆ ಸಮಾನವಾದದ್ದು. ಆ ಸಮಯದಲ್ಲಿ ಎಂಥ ಸ್ವಸ್ಥ ಚಿತ್ತರಾದವರಿಗೂ ಮನಸ್ಸು ಕೆಡುತ್ತದೆ. ತಮ್ಮ ಕಣ್ಣೆದುರಿಗೇ ಮಕ್ಕಳು ಸತ್ತ ಸಂದರ್ಭದಲ್ಲಂತೂ ಇಂಥವರ ಶೋಕ ಇಮ್ಮಡಿಯಾಗುತ್ತದೆ. ರನ್ನನ ಅಜಿತ

ಪುರಾಣದಲ್ಲಿ, ಕಿಸಾಗೌತಮಿಯ ಕಥೆಯಲ್ಲಿ, ಜೈನ ಕಾವ್ಯಗಳಲ್ಲಿ ಈ ಸಾವಿನ ಬಗೆಗೆ ಅಪಾರ ಚಿಂತನೆ ನಡೆದಿರುವುದನ್ನು ಕಾಣಬಹುದಾಗಿದೆ. ಬದುಕಿನ ಮೂಲಭೂತವಾದ ಈ ಪ್ರಶ್ನೆ ಜೀವಜಾತವನ್ನೆಲ್ಲ ಕಾಡುವ ಒಂದು ಜ್ವಲಂತ ಶೇಷ ಪ್ರಶ್ನೆಯಾಗಿದೆ. ಇತಿಹಾಸ ಮರುಕಳಿಸುತ್ತದೆ ಎಂಬುದಕ್ಕೆ ಅಭಿಮನ್ಯುವಿನ ಸಾವು ಅರ್ಜುನ ಧರ್ಮರಾಯಾದಿಗಳಿಗೆ ತಂದ ವ್ಯಥೆಯಷ್ಟೇ ತೀವ್ರವಾದದ್ದು. ಹರಿ ಸತ್ತಾಗ ಅಕಂಪನನಿಗೆ ಆದ ವ್ಯಥೆ. ಎಳೆಯ ಮಕ್ಕಳು ವೀರ ಮರಣವನ್ನಪ್ಪಿದರೆ ತಂದೆಗೆ ಆಗುವ ದುಃಖ ಹೇಳತೀರದು.

* * * *

ಚಕ್ರವ್ಯೂಹ

ವ್ಯೂಹ ಎಂಬ ಮಾತಿನಲ್ಲಿ ಎದುರಾಳಿಯನ್ನು ಅತಂತ್ರಗೊಳಿಸುವ ಒಂದು ಪೂರ್ವಯೋಜಿತ ವ್ಯವಸ್ಥೆ ಎಂಬ ಅರ್ಥವಿದೆ. 'ವಿವಿಧಾಭಿಖ್ಯಾ ವ್ಯೂಹಃ' (ಅನೇಕ ಹೆಸರಿನ ವ್ಯೂಹಗಳಿವೆ) ಎಂದು ಶಕುನಿಕ ಮಗ ಉಲೂಕನು ಹೇಳುತ್ತಾನೆ. ಶಾಂತಿಪರ್ವದಲ್ಲಿ ಭೀಷ್ಮರು ಧರ್ಮರಾಜನಿಗೆ ಮಂತ್ರಿಗಳು ಖಾತಕವ್ಯೂಹ ತತ್ತ್ವಜ್ಞರಾಗಿರಬೇಕು" ಎನ್ನುತ್ತಾರೆ. ಖಾತಕ ಎಂದರೆ ಎದುರಾಳಿಯನ್ನು ವಿಚ್ಛಿದ್ರಗೊಳಿಸುವ ವ್ಯೂಹ ರಚನೆ ಎಂದರ್ಥ. ಮಹಾಭಾರತ ಯುದ್ಧದಲ್ಲಿ ಬಳಕೆಗೊಂಡ ಅನೇಕ ವ್ಯೂಹಗಳ ಹೆಸರುಗಳಿವೆ. ಚಂದ್ರವ್ಯೂಹ, ಕ್ರೌಂಚವ್ಯೂಹ, ಗರುಡವ್ಯೂಹ, ಶಕಟವ್ಯೂಹ, ಅರ್ಧ ಚಂದ್ರವ್ಯೂಹ, ಮಂಡಲಾರ್ಧವ್ಯೂಹ ಇತ್ಯಾದಿ. ಇವುಗಳಲ್ಲಿ ಬಹಳ ಸಂಕೀರ್ಣವಾದದ್ದು ಪದ್ಮವ್ಯೂಹ ಅಥವಾ ಚಕ್ರವ್ಯೂಹ. ಅರ್ಜುನನಿಲ್ಲದಾಗ ದ್ರೋಣರು ಒಡ್ಡಿದ ವ್ಯೂಹ ಇದು. ಚಕ್ರದ ಅರಗಳ ಸ್ಥಾನದಲ್ಲಿ ಮಹಾವೀರರು ಸ್ಥಿರವಾಗಿ ನಿಂತು ಏನೇ ಆಗಲಿ ಯುದ್ಧ ಭೂಮಿ ತೊರೆಯುವುದಿಲ್ಲ ಎಂದು ಪ್ರತಿಜ್ಞೆಮಾಡುತ್ತಾರೆ. ಅವರ ಧ್ವಜಗಳೆಲ್ಲ ಸ್ವರ್ಣಮಯ, ವಸ್ತ್ರಗಳೆಲ್ಲ ರಕ್ತವರ್ಣದವು. ಅವರು ರಕ್ತಾಭರಣಗಳನ್ನು ಧರಿಸಿರುತ್ತಾರೆ. ಎಲ್ಲರ ರಥಗಳ ಮೇಲೆ ರಕ್ತವರ್ಣದ ಬಾವುಟಗಳು ಅಗರು ಚಂದನದ ವಾಸನೆಯುಳ್ಳ ಹಾರಗಳನ್ನು ಧರಿಸಿ ನಿಂತಿರುತ್ತಾರೆ. ಚಕ್ರವ್ಯೂಹದಲ್ಲಿ ಒಳಗೆ ಪ್ರವೇಶಿಸಲು ಅವಕಾಶವಿರುತ್ತದೆ ಆದರೆ ಒಳ ಹೋಗುತ್ತ ಹೋಗುತ್ತ ಎಲ್ಲ ದಾರಿಗಳೂ ಮುಚ್ಚಿಕೊಂಡು ಶತ್ರುಗಳು ನಿರ್ಮಿಸಿದ ಒಂದೇ ದಾರಿಯಲ್ಲಿ ಪ್ರಯಾಣ ಮಾಡುವ ಸಂದರ್ಭ ಒದಗುತ್ತದೆ. ಹೊರಬರುವುದು ಕಷ್ಟ. ಅರ್ಜುನನಿಗಾದರೆ ಈ LABYRINTH ಎನ್ನುವ ವ್ಯೂಹಗಳ ಒಳಶಿಲ್ಪದ ಪರಿಚಯವಿತ್ತು. ಆದರೆ ಅಭಿಮನ್ಯುವಿಗೆ ಪೂರ್ಣಪ್ರಮಾಣದ ಜ್ಞಾನವಿರಲಿಲ್ಲ.

ಇದು ಚಕ್ರಾಕೃತಿಯ ಅಥವಾ ಗೋಳಾಕೃತಿಯ ಸೇನಾ ರಚನೆ ಎನ್ನುತ್ತಾರೆ. ನಿರ್ದಿಷ್ಟ ಆಯಕಟ್ಟಿನ ಜಾಗಗಳಲ್ಲಿ ವೀರರು ಇರುತ್ತಾರೆ. ಉದಾಹರಣೆಗೆ ಚಕ್ರವ್ಯೂಹದಲ್ಲಿ ಕೃಪ, ಕರ್ಣ, ಕೌರವ ಮೊದಲಾದವರು ಆರಂಭದ ಮುಖ್ಯ ಸ್ಥಾನಗಳಲ್ಲಿದ್ದರು. ಸೇನಾ ಮುಖದಲ್ಲಿ ಸ್ವಯಂ ದ್ರೋಣರೇ ನಿಂತಿದ್ದರು. ಎರಡು ಪಾರ್ಶ್ವಗಳಲ್ಲಿ ಶಕುನಿ, ಶಲ್ಯ ಮೊದಲಾದವರಿದ್ದರು. ಎಡಭಾಗದಲ್ಲಿ ಅಶ್ವತ್ಥಾಮ ಜಯದ್ರಥರು ಕಾವಲಿದ್ದರು. ಅಭಿಮನ್ಯುವಿಗೆ ಒಳನುಗ್ಗುವ ಮಾರ್ಗ ತಿಳಿದಿರುವುದರಿಂದ ಭೀಮ, ಧರ್ಮರಾಯ, ಸಾತ್ಯಕಿ, ಧೃಷ್ಟದ್ಯುಮ್ನ ಮೊದಲಾದವರೆಲ್ಲ ಅಭಿಮನ್ಯುವಿನ ಹಿಂದೆಯೇ ಒಳನುಗ್ಗಿ ಅಭಿಮನ್ಯುವಿಗೆ ಸಹಾಯಕರಾಗಿ ಹೋರಾಡುವುದೆಂದು ನಿಶ್ಚಯಿಸಿದ್ದರು. ಆದರೆ ಆ ದಿನ ಸೈಂಧವನು ಶಿವನಿಂದ ವರ ಪಡೆದು ಒಳಗೆ ಯಾರೂ ನುಗ್ಗದಂತೆ ಅವರನ್ನೆಲ್ಲ ತಡೆದುದರಿಂದ ಅಭಿಮನ್ಯು ಒಂಟಿಯಾದ. ಇಷ್ಟಾದರೂ ಕೌರವ ವೀರರಿಗೆ ಅಭಿಮನ್ಯುವನ್ನು ಎದುರಿಸಲಾಗಲಿಲ್ಲ. ಕೊನೆಗೆ ದ್ರೋಣರ ಸಲಹೆಯಂತೆ ಹಿಂದಿನಿಂದ ಬಂದು ಬಿಲ್ಲು ಕತ್ತರಿಸಿ, ಕತ್ತಿ ಕಿತ್ತುಕೊಂಡು ಅವನನ್ನು ಕೊಂದು ಹಾಕಿದರು.

ಯುದ್ಧದಲ್ಲಿ ಸೋಲುಗೆಲುವು ಮುಖ್ಯವಲ್ಲ. ಚಕ್ರವ್ಯೂಹವನ್ನು ಭೇದಿಸುವ ಪ್ರಾಮಾಣಿಕ ಪ್ರಯತ್ನ ಮಾಡಿದ ಅಭಿಮನ್ಯು ಅದರಲ್ಲಿ ಸೋತರೂ ತನ್ನ ಧೈರ್ಯ, ಸಾಹಸ ಮತ್ತು ಆಕ್ರಮಣಶೀಲತೆಗಳ ಸತ್ವದಿಂದ ಶತ್ರು ಪಕ್ಷದವರ ಗಮನವನ್ನು ಸೆಳೆದು ಅವರಿಂದ ಹೊಗಳಿಸಿಕೊಳ್ಳುವಷ್ಟು ದೊಡ್ಡವನಾಗಿ ಬೆಳೆದಿದ್ದಾನೆ. ಅಭಿಮನ್ಯುವನ್ನು ಲಜ್ಜಾಶೀಲ, ಕ್ರುದ್ಧ, ಸನ್ಮಾನಕಾರ, ರೂಪವಂತ, ಶತ್ರು ಭಯಂಕರ, ಸ್ವಜನ ವತ್ಸಲ, ಮೃತ್ಯುಭಯವಿಲ್ಲದವನು ಎಂದೆಲ್ಲ ಮಹಾಭಾರತವು ಹೊಗಳಿದೆ. ವ್ಯೂಹಗಳಲ್ಲೆಲ್ಲ ದುರ್ಗಮವೆನಿಸಿದ ಚಕ್ರವ್ಯೂಹವನ್ನು ಒಳಹೊಕ್ಕು ಧೈರ್ಯವಾಗಿ ಶತ್ರುಗಳನ್ನು ಎದುರಿಸಿದ ಕೀರ್ತಿ ಆ ಬಾಲಕನಿಗೆ ಸಲ್ಲುತ್ತದೆ.

* * * *

ವಿಚಿತ್ರವೀರ್ಯ

ಪಾಂಡು ಧೃತರಾಷ್ಟ್ರ ಇವರು ವಿಚಿತ್ರವೀರ್ಯನ ಕ್ಷೇತ್ರಜ್ಞ ಪುತ್ರರು. ವಿಚಿತ್ರವೀರ್ಯನು ಚಿತ್ರಾಂಗದನ ತಮ್ಮ. ಶಂತನು-ಸತ್ಯವತಿಯರ ಮಗ. ಭೀಷ್ಮರಿಗೂ ಈತ ಮಲತಮ್ಮನಾಗಬೇಕು. ಎಳೆಯನಾದ, ರೋಗಗ್ರಸ್ತನಾದ ಈತ ತೀರ ಸಾಧಾರಣ ವ್ಯಕ್ತಿಯಾಗಿದ್ದ. ಅಥವಾ ಭೀಷ್ಮರಂಥ ಉಜ್ವಲ ಕ್ಷಾತ್ರ ಪ್ರಭೆಯ ಎದುರಿಗೆ ಇವನು ಮಂಕಾಗಿ ಕಂಡಿದ್ದರೂ ಆಶ್ಚರ್ಯವಿಲ್ಲ. ಇವನ ಅಣ್ಣ ಚಿತ್ರಾಂಗದ ಮಹಾರಾಜ. ಇವನು ತನ್ನದೇ ಹೆಸರಿನ ಗಂಧರ್ವನೊಬ್ಬನೊಂದಿಗೆ ಹಿರಣ್ವತೀ ನದೀತೀರದಲ್ಲಿ ಹೋರಾಡಿ ಸತ್ತ. (ತನ್ನ ಹೆಸರನ್ನೇ ಇವನೂ ಇಟ್ಟುಕೊಂಡಿದ್ದನೆಂಬುದೇ ಗಂಧರ್ವನ ಅಸಮಾಧಾನಕ್ಕೆ ಕಾರಣವಂತೆ!) ಆಗ ಪಟ್ಟಕ್ಕೆ ಬಂದ ವಿಚಿತ್ರವೀರ್ಯ ಇನ್ನೂ ಬಾಲಕ. ಪಟ್ಟ ಕಟ್ಟಿಸಿಕೊಂಡಿದ್ದರೂ ಆಡಳಿತವನ್ನೆಲ್ಲ ಅಣ್ಣ ಭೀಷ್ಮರಿಗೆ ಒಪ್ಪಿಸಿ ಆನಂದವಾಗಿ ವಿನೋದ ಕ್ರೀಡೆಗಳಲ್ಲಿ ಕಾಲಕಳೆಯುತ್ತಿದ್ದ. ಇವನು ಯುವಕನಾದ. ಕಾಶಿರಾಜನು ತನ್ನ ಮೂವರು ಹೆಣ್ಣುಮಕ್ಕಳಿಗಾಗಿ ಒಂದು ಸ್ವಯಂವರವನ್ನು ಏರ್ಪಡಿಸಿದ್ದ. ಮದುವೆಯ ಸಂದರ್ಭದಲ್ಲಿ ಕಾಶಿರಾಜನು ತನ್ನ ಹೆಣ್ಣು ಮಗಳನ್ನು ಕುರುವಂಶದವರಿಗೆ ಕೊಡುವ ರೂಢಿಯನ್ನು ಪಾಲಿಸುತ್ತಿಲ್ಲ ಎಂಬ ಲೋಪವನ್ನು ನೆವವಾಗಿಟ್ಟುಕೊಂಡು ಭೀಷ್ಮನು ವಿಚಿತ್ರವೀರ್ಯನ ಬದಲಿಗೆ ತಾನೇ ಹೋಗಿ ರಾಜರನ್ನೆಲ್ಲ ಸದೆ ಬಡಿದು ಮೂವರು ಹೆಣ್ಣುಮಕ್ಕಳಾದ ಅಂಬೆ, ಅಂಬಿಕೆ, ಅಂಬಾಲಿಕೆಯರನ್ನು ಹಸ್ತಿನಾವತಿಗೆ ಕರೆತಂದ. ಕಾಶಿರಾಜನು ಹಳೆಯ ಸಂಪ್ರದಾಯಗಳನ್ನು ಗೌರವಿಸದೆ ಈ ಬಾರಿ ಭೀಷ್ಮ ವಿಚಿತ್ರವೀರ್ಯರಿಗೆ ಆಹ್ವಾನವನ್ನು ಕೂಡ ಕಳಿಸದೆ ಅವಮಾನ ಮಾಡಿದ್ದನಲ್ಲವೆ. ಅದರ ಪರಿಣಾಮ ಭೀಷ್ಮರ ಈ ದಾಳಿ. ಅಂಬೆ ಒಪ್ಪಲಿಲ್ಲವಾದ್ದರಿಂದ ಅವಳನ್ನು ಹಿಂದಕ್ಕೆ ಕಳುಹಿಸಿ ಉಳಿದಿಬ್ಬರನ್ನು ವಿಚಿತ್ರವೀರ್ಯನಿಗೆ ಮದುವೆ ಮಾಡಿದ. ಮದುವೆಯಾದ ಮೇಲೆ, ತರುಣ ವೀರನಾದ ವಿಚಿತ್ರವೀರ್ಯನು ರಾಜ್ಯಾಡಳಿತದ ಚುಕ್ಕಾಣಿ ಹಿಡಿಯಬೇಡವೆ? ಭೀಷ್ಮರೇ ಆಡಳಿತವನ್ನು ಮುಂದುವರಿಸುತ್ತಿದ್ದುದರಿಂದ ಈತ ಸಂಪೂರ್ಣ ನಿರಾಸಕ್ತನಾದ. ಒಂದೇ ಸಮನೆ ಏಳು ವರ್ಷ ಭೋಗಾಸಕ್ತನಾಗಿಯೇ ವಿಲಾಸ ಜೀವನ ನಡೆಸಿದ. ಅಸಂಯಮ ಪೂರ್ಣ ಜೀವನ ವಿಧಾನದಿಂದಾಗಿ ಇವನು ರಾಜಯಕ್ಷ್ಮ ಎಂಬ ಕ್ಷಯರೋಗದಿಂದ ನರಳಿ ಎಳೆ ವಯಸ್ಸಿನಲ್ಲೇ ಅಕಾಲ ಮರಣವನ್ನಪ್ಪಬೇಕಾಯಿತು ಎಂದು ಆದಿಪರ್ವದ 102ನೆಯ ಅಧ್ಯಾಯದಲ್ಲಿ ವಿವರಿಸಲಾಗಿದೆ.

ಇವನ ಬದುಕಿನ ಉದ್ದಕ್ಕೂ ಎಡವಟ್ಟುಗಳೇ ತುಂಬಿವೆ. ಜವಾಬ್ದಾರಿಯೇ ಇಲ್ಲದ ವಯಸ್ಸಿನಲ್ಲಿ ಪಟ್ಟ ಬಂದದ್ದು, ಅಣ್ಣ ತೀರಿಕೊಂಡದ್ದರಿಂದ ಸರಿಯಾದ ಪಿತೃಷಿ ಇಲ್ಲದಂತಾದದ್ದು, ಮದುವೆ ಮನೆಗೆ ಹೋಗಿ ನಿನ್ನ ಪರಾಕ್ರಮವನ್ನು ಪ್ರದರ್ಶಿಸಿ ಕನ್ಯೆಯನ್ನು ಪಡೆ ಎಂದು ಹೇಳದೆ ಭೀಷ್ಮನು ತಾನೇ ಆ ಕೆಲಸಕ್ಕೆ ಮುಂದಾದದ್ದು ಎಲ್ಲ ಎಡವಟ್ಟಿನ ಸಂಗತಿಗಳೇ ಆಗಿವೆ. ತಾನು ಇಕ್ಕಟ್ಟುಗಳ ಸರಪಳಿಯಲ್ಲಿ ಸಿಕ್ಕಿ ನಲುಗಿದ ವಿಚಿತ್ರ ವೀರ್ಯ ತನ್ನ ಜವಾಬ್ದಾರಿಗಳನ್ನೇ ಅರಿಯದಿದ್ದುದೇ ಈ ದುರಂತಕ್ಕೆ ಕಾರಣ.

ನದೀ ತೀರಗಳು ಉದ್ಯಾನಗಳು ವಿಲಾಸ ಸೌಧಗಳು ವಿಚಿತ್ರವೀರ್ಯನಿಗೆ ಮುಖ್ಯವೆನಿಸಿದುವೇ ಹೊರತು ಆ ರಾಜ್ಯದ ಆಡಳಿತವಲ್ಲ. ತನ್ನ ಭಾರ್ಯೆಯರಿಬ್ಬರನ್ನೂ ಅಪುತ್ರಕರಾಗುವಂತೆ ಮಾಡಿ ಇಡೀ ವಂಶಧಾರೆಯನ್ನು ಬತ್ತಿಸುವ ಕೆಲಸ ಮಾಡಿದ್ದು ಸಣ್ಣ ಸಂಗತಿಯೇನಲ್ಲ. ವೇದವ್ಯಾಸರೇ ತಾಯಿಯ ಮಾತಿನಂತೆ ಅಲ್ಲಿಗೆ ಬಂದು ಸಂತಾನವನ್ನು ಕರುಣಿಸಲು ಪ್ರಯತ್ನಿಸಿದರೂ ಅದೂ ರಾಣಿಯರಿಂದಾಗಿ ಒಂದು ಅವಿವೇಕದ ಸಂದರ್ಭವಾಗಿ ಪರಿಣಮಿಸಿದ್ದು ದುರದೃಷ್ಟ ಎನ್ನಬಹುದು. ಇಡೀ ಚಂದ್ರವಂಶದಲ್ಲೇ ಅತ್ಯಂತ ದುರ್ಬಲ ರಾಜನೆಂದು ಹೇಳಬಹುದಾದ ವಿಚಿತ್ರವೀರ್ಯನು ಪಾಂಡವ ವಂಶದ ಮೂಲಪುರುಷನಾಗಿರುವುದು ಉಲ್ಲೇಖಾರ್ಹ ಸಂಗತಿಯಾಗಿದೆ.

* * * *

ಶತಯೂಪ

ಆಶ್ರಮ ವಾಸಿಕ ಪರ್ವದಲ್ಲಿ ಧೃತರಾಷ್ಟ್ರ ವಿದುರ ಕುಂತಿ ಗಾಂಧಾರಿಯರು ನಗರವನ್ನು ಬಿಟ್ಟು ತಪಸ್ಸಾಧನೆಗೆ ಅರಣ್ಯ ಪ್ರದೇಶಕ್ಕೆ ಹೊರಡುತ್ತಾರಷ್ಟೆ. ಗಂಗಾ ನದಿಯನ್ನು ದಾಟಿ ಅವರು ಕೊನೆಗೆ ನೆಲೆ ನಿಂತದ್ದು ಶತಯೂಪ ಎಂಬ ರಾಜರ್ಷಿಯ



ತಪೋವನದಲ್ಲಿ. ಇದು ಕುರುಕ್ಷೇತ್ರ ಪ್ರದೇಶದಲ್ಲಿದೆ. ಶತಯೂಪನು ಕೇಕಯ ರಾಜ್ಯದ ದೊರೆ. ಇವನ ತಂದೆ ಶತಚೈತ್ರ. ಅಜ್ಜ ಸಹಸ್ರಚೈತ್ರ. ಕೇಕಯ ರಾಜನಾಗಿದ್ದ

ಸಹಸ್ರಚೈತ್ಯನು ಶತಚೈತ್ಯ (ಶತದ್ಯುತ)ನಿಗೆ ಪಟ್ಟಕಟ್ಟಿ ಈ ತಪೋವನಕ್ಕೆ ಬಂದು ನೆಲೆಸಿದ್ದ. ಶತದ್ಯುತನೂ ಹೀಗೆ ಮಾಡಿದ್ದ. ಧೃತರಾಷ್ಟ್ರಾದಿಗಳು ಬರುವ ವೇಳೆಗೆ ಶತಯೂಪ ರಾಜನೂ ಇಲ್ಲಿಗೆ ಬಂದು ನೆಲೆಸಿದ್ದ. 'ಶತಯೂಪಶ್ಚ ರಾಜರ್ಷಿರ್ವೃದ್ಧಃ ಪರಮ ಧಾರ್ಮಿಕಂ' ಎಂದು ವ್ಯಾಸರು ಹೇಳುತ್ತಾರೆ. ಮಹಾಜ್ಞಾನಿಯಾಗಿದ್ದ ಶತಯೂಪನು ಧೃತರಾಷ್ಟ್ರ ವಿದುರಾದಿಗಳನ್ನು ಸ್ವಾಗತಿಸಿ ಅವರ ವಾಸ್ತವ್ಯಕ್ಕೆ ಎಲ್ಲ ಏರ್ಪಾಡುಗಳನ್ನೂ ಮಾಡಿದ್ದನು. ಅಷ್ಟೇ ಅಲ್ಲ. ತಾನೇ ಧೃತರಾಷ್ಟ್ರನಿಗೆ ಅರಣ್ಯಕ ವಿಧಿಯನ್ನು ಉಪದೇಶ ಮಾಡಿದ. ಸ್ವಯಂ ಸಾಧಕನಾಗಿದ್ದ ಶತಯೂಪನ ತಪೋವನದಲ್ಲಿ ಧೃತರಾಷ್ಟ್ರಾದಿಗಳು ತಪೋಜೀವನಕ್ಕೆ ಹೊಂದಿಕೊಂಡರು. ಪುತ್ರಶೋಕವನ್ನು ಮರೆಯುವುದಕ್ಕೆಂದು ಬಂದಿದ್ದ ಧೃತರಾಷ್ಟ್ರ ಗಾಂಧಾರಿಯರಿಗೆ ಆಶ್ರಮ ವಾಸದಿಂದ ನಿಜವಾದ ನೆಮ್ಮದಿ ದೊರಕಿತ್ತು.

ಒಮ್ಮೆ ಧೃತರಾಷ್ಟ್ರನನ್ನು ಕಾಣಲು ನಾರದ, ದೇವಲ, ಪರ್ವತ, ವ್ಯಾಸ ಮೊದಲಾದವರು ಆಶ್ರಮಕ್ಕೆ ಬಂದರು. ಶತಯೂಪನೂ ಅವರನ್ನೆಲ್ಲ ಸ್ವಾಗತಿಸಿ ಸತ್ಕರಿಸಿದ. ಶತಯೂಪ-ನಾರದ ಸಂವಾದ' ಎಂಬ ಭಾಗದಲ್ಲಿ ಈ ವಿವರಗಳಿವೆ.

ಶತಯೂಪನಿದ್ದ ವನದ ಹೆಗ್ಗಳಿಕೆಯನ್ನು ವ್ಯಾಸರು ವಿವರವಾಗಿ ತಿಳಿಸುತ್ತಾರೆ. ಭಗದತ್ತನ ಅಜ್ಜ ಶೈಲಾಲಯ ಎಂಬ ದೊರೆ ಇಲ್ಲಿ ತಪಸ್ಸು ಮಾಡಿದ್ದನೆಂದು ಹೇಳುತ್ತಾರೆ.

ವಜ್ರಧರೋಪಮನಾಗಿದ್ದ (ಇಂದ್ರನಿಗೆ ಸಮನಾಗಿದ್ದ) ಪೃಷಧ್ನ ಎಂಬ ಹೆಸರಿನ ಮಾಂಧಾತ ಪುತ್ರನ ನಿರ್ವಾಣ ಕ್ಷೇತ್ರವೂ ಇದೇ ಆಗಿತ್ತು. ಪರಮ ಧಾರ್ಮಿಕನಾದ ದೊರೆ ಶಶಲೋಮ ಇಲ್ಲಿದ್ದುದನ್ನು ನಾರದರು ವಿವರಿಸುತ್ತಾರೆ. ಇವರೆಲ್ಲರ ಕಥೆ ಹೇಳುವ ಉದ್ದೇಶ 'ತ್ವಂಚಾಪಿ ರಾಜಶಾರ್ದೂಲ ತಪಸ್ತೋಂತೇ ಶ್ರಿಯಾವೃತ' (ಎಲೈ ಧೃತರಾಷ್ಟ್ರ ಅವರೆಲ್ಲರಂತೆ ನೀನೂ ತಪಸ್ಸು ಮಾಡಿ ತೇಜೋಸಂಪನ್ನತೆಯನ್ನು ಪಡೆ) ಎಂದು ಹೇಳುವುದೇ ಆಗಿದೆ. ಆದರೂ ಶತಯೂಪನಿಗೆ ಧೃತರಾಷ್ಟ್ರನ ಭವಿಷ್ಯದ ವಿಷಯದಲ್ಲಿ ಕುತೂಹಲ. ಆ ಕುತೂಹಲವನ್ನು ತಣಿಸಲು ನಾರದರು ಈಗಾಗಲೇ ದೇವ ವರ್ಗದವರು ಧೃತರಾಷ್ಟ್ರನಿಗೆ ದೇವಲೋಕ ಪ್ರಾಪ್ತಿಯಾಗುವ ರಹಸ್ಯದ ವಿಷಯ ತಮಗೆ ಗೊತ್ತಾಗಿದೆ ಎಂದು ಹೇಳುತ್ತಾರೆ. ಅಲ್ಲದೆ ಧೃತರಾಷ್ಟ್ರನ ಮನಸ್ಸಿನ ಅಳುಕನ್ನು ಹೋಗಲಾಡಿಸಲು "ಪಾಂಡುಃ ಸ್ಮರತಿ ತೇ ನಿತ್ಯಂ ಬಲಹಂ ತೇ ಸಮೀಪಗಃ (ಇಂದ್ರನ ಬಳಿಯೇ ಪಾಂಡುವು ಸದಾ ನಿನ್ನ ಶ್ರೇಯಸ್ಸನ್ನೇ ಕೋರುತ್ತಿದ್ದಾನೆ) ಎಂದೂ ಹೇಳುತ್ತಾರೆ. ಹೀಗೆ ಬೆಂದ ಮನಸ್ಸಿನ ಧೃತರಾಷ್ಟ್ರನಿಗೆ ಶಾಂತವಾದ ಪ್ರದೇಶದಲ್ಲಿ ಹಿಂದಿನದನ್ನೆಲ್ಲ ಮರೆತು ನೆಮ್ಮದಿಯಿಂದ ನೆಲೆಸಲು ಸೂಕ್ತ ಪ್ರದೇಶವನ್ನು ಬಿಟ್ಟು ಕೊಟ್ಟ ಶ್ರೇಯಸ್ಸು ಶತಯೂಪನಿಗೆ ಸಲ್ಲುತ್ತದೆ.

ಶತಯೂಪನು ತಪಸ್ಸಿಗೆ ಕುಳಿತಿದ್ದುದರಿಂದ ಈ ತಪೋವನಕ್ಕೆ ಈ ಹೆಸರು ಬಂದಿತೋ ಅಥವಾ ನೂರಾರು ಯಾಗದ ಬಲಿಸ್ತಂಭಗಳು ಅಲ್ಲಿದ್ದುದರಿಂದ ಬಂದ ಹೆಸರೋ ಹೇಳುವುದು ಕಷ್ಟ.

* * * *

ಜಟಾಸುರ

ಅರಣ್ಯವಾಸದ ಕಾಲದಲ್ಲಿ ಪಾಂಡವರು ಗಂಧಮಾದನ ಪರ್ವತದಲ್ಲಿದ್ದಾಗ ಜಟಾಸುರನು ದ್ರೌಪದಿಯನ್ನು ಹೊತ್ತೊಯ್ಯಬೇಕೆಂದು ತೀರ್ಮಾನಿಸುತ್ತಾನೆ. ಜತೆಗೆ ಭೀಮನು ಇಲ್ಲದ ಸಮಯವನ್ನು ಸಾಧಿಸಿ ಪಾಂಡವರನ್ನೆಲ್ಲ ಎಳೆದುಕೊಂಡು ಹೋಗುವುದು ಮತ್ತು ಅವರೆಲ್ಲರ ಶಸ್ತ್ರಾಸ್ತ್ರಗಳನ್ನೂ ಅಪಹರಿಸುವುದು ಅವನ ಸಂಕಲ್ಪವಾಗಿತ್ತು. ಅದಕ್ಕೆ ಅಗತ್ಯವಾದ ಬೇಹುಗಾರಿಕೆಯನ್ನು ಅವನು ಮಾಡಿದ. ಒಬ್ಬ ಬ್ರಾಹ್ಮಣನ ವೇಷ ಹಾಕಿಕೊಂಡು ಪಾಂಡವರ ಅತಿಥಿಯಾಗುವಷ್ಟು ಆತ್ಮೀಯ ಸಂಪರ್ಕಪಡೆದ. ಅಲ್ಲದೇ ಆಗಾಗ ಧರ್ಮರಾಯನ ಬಳಿಗೆ ಬಂದು ಹೋಗುತ್ತಿದ್ದು ಸೂಕ್ತ ಸಮಯಕ್ಕಾಗಿ ಕಾಯುತ್ತಿದ್ದ. ಒಂದು ಸೂಕ್ತ ಅವಕಾಶ ಒದಗಿಬಂತು. ಘಟೋತ್ಕಚನು ತನ್ನ ಅನುಚರರೊಂದಿಗೆ ಊರಿಗೆ ಹಿಂದಿರುಗಿದ್ದ. ಲೋಮಶ ಮಹರ್ಷಿಗಳು ತಮ್ಮ ಗುಂಪಿನೊಂದಿಗೆ ಸ್ನಾನಕ್ಕೆ ಮತ್ತು ಪುಷ್ಪಗಳನ್ನು ತರುವುದಕ್ಕೆ ಹೋಗಿದ್ದರು. ಭೀಮನು ಬೇಟೆಗೆಂದು ಹೋಗಿದ್ದ. ಈ ಸಮಯದಲ್ಲಿ ಜಟಾಸುರನು ಒಳಗೆ ನುಗ್ಗಿ ದ್ರೌಪದಿ ಧರ್ಮರಾಯ ನಕುಲ ಸಹದೇವರನ್ನು ಹೊತ್ತೊಯ್ದ. ಸಹದೇವನು ಹೇಗೋ ತಪ್ಪಿಸಿಕೊಂಡು ಭೀಮನಿಗೆ ಸುದ್ದಿ ತಿಳಿಸಲು ಕೂಗುತ್ತ ಕೌಶಿಕ ಎಂಬ ಕತ್ತಿಯನ್ನು ಹಿರಿದು ಜಟಾಸುರನ ಮೇಲೆ ಆಕ್ರಮಣಕ್ಕೆ ಸಿದ್ಧನಾದ. ಅಷ್ಟರಲ್ಲಿ ಭೀಮನಿಗೆ ಕೂಗು ಕೇಳಿಸಿದ್ದರಿಂದ ಅವನು ಓಡಿಬಂದ. ಮೊದಲು ರಾಕ್ಷಸನ ಹಿಡಿತದಿಂದ ಧರ್ಮರಾಯಾದಿಗಳನ್ನು ಬಿಡಿಸಿದ. ಅನಂತರ ಅವರಿಬ್ಬರ ಮಧ್ಯೆ ಘೋರ ಯುದ್ಧವಾಯಿತು. ದಾರಿಯಲ್ಲಿ ಸಿಕ್ಕ ಮರಗಳನ್ನೇ ಕಿತ್ತು ಇಬ್ಬರೂ ಹೊಡೆದಾಡಿದರು. ಅನಂತರ ಶಿಲಾಯುದ್ಧವನ್ನೂ ಮಾಡಿದರು. ಕೊನೆಗೆ ಮಲ್ಲಯುದ್ಧದಲ್ಲಿ ಭೀಮನು ಜಟಾಸುರನನ್ನು ಕೊಂದ. ಧರ್ಮರಾಯನು ಈ ಮುನ್ನ ತನ್ನ ಮಹಿಮೆಯಿಂದ ತನ್ನ ದೇಹವನ್ನು ತುಂಬ ಭಾರಮಾಡಿಕೊಂಡದ್ದರಿಂದ ರಾಕ್ಷಸನಿಗೆ ಅವರನ್ನೆಲ್ಲ ಹೊತ್ತು ಓಡಲು ಸಾಧ್ಯವಾಗದೆ ನಿಧಾನವಾಗಿ ನಡೆದು ಭೀಮನ ಕೈಗೆ ಸಿಕ್ಕಿಕೊಂಡ. ಸಹದೇವನು ಕತ್ತಿಹಿರಿದು ಯುದ್ಧ ಮಾಡಲು ಹೋದಾಗ ಧರ್ಮರಾಯನು ಅದನ್ನು ತಪ್ಪಿಸಿ ತಾನೇ ಅವನ ದೇಹ ಸತ್ವವನ್ನು ಹೀರಿಕೊಂಡಿರುವುದರಿಂದ ಅವನು ನಡೆಯಲಾರನೆಂದೂ ಯಾರೂ ಹೆದರಬಾರದೆಂದೂ ಹೇಳಿದ. ಅಲ್ಲದೆ ತನ್ನ ಆತಿಥ್ಯವನ್ನು ಸ್ವೀಕರಿಸಿ ತನ್ನ ಮೇಲೇ ಕೈಮಾಡುವುದು ಧರ್ಮವಲ್ಲ ಎಂದು ರಾಕ್ಷಸನಿಗೆ ಹೇಳಿದ. "ನನ್ನ ಆಯುಧ ಶಸ್ತ್ರಾಸ್ತ್ರಗಳನ್ನು ಹಿಂದಕ್ಕೆ ಕೊಟ್ಟು ಸರಿಯಾದ ರೀತಿಯಲ್ಲಿ ಯುದ್ಧಮಾಡಿ ಸೋಲಿಸಿದ ನಂತರ ಏನು ಬೇಕಾದರೂ ಮಾಡು. ಹೀಗೆ ಶಸ್ತ್ರಾಸ್ತ್ರವಿಲ್ಲದೆ ನಿರಾಯುಧರಾದವರನ್ನು ಹಿಂಸಿಸುವುದು ಸರಿಯಲ್ಲ" ಎಂದು ಹೇಳಿದ. ಮಹಿಳೆಯನ್ನು ಹೊತ್ತೊಯ್ಯುವುದಂತೂ ಆತ್ಮ ಘಾತಕವಾದ ಪಾಪಚರ್ಯೆಯಾಗುತ್ತದೆ ಎಂದು ಎಚ್ಚರಿಸಿದ. ರಾಕ್ಷಸರು ವಿಚಾರವಂತರು ನೀತಿಪರರು ಎಂದು ತಮ್ಮ ಸಹದೇವನಿಗೆ ಹೇಳಿ ಅವನು ಯುದ್ಧಕ್ಕೆ ಹೋಗದಂತೆ ತಡೆದಿದ್ದ. ಧರ್ಮರಾಯನು ಈ ಪ್ರಕರಣದಲ್ಲಿ

ತುಂಬ ವಿಚಿತ್ರರೀತಿಯಲ್ಲಿ ಯೋಚಿಸುವವನಂತೆ ಕಾಣುತ್ತಾನೆ ಎಂಬುದು ನಿಜ. ಆದರೆ ಎಂಥ ಉತ್ಕಟ ಪರಿಸ್ಥಿತಿಯಲ್ಲೂ ಧರ್ಮರಾಯನು ತನ್ನ ಮನಸ್ಸಿನ ಸಮತೋಲವನ್ನು ಕಳೆದುಕೊಳ್ಳುತ್ತಿರಲಿಲ್ಲ ಎಂಬುದು ಸ್ಪಷ್ಟವಾಗುತ್ತದೆ.

ಜಟಾಸುರನು ಮಹಾಬ್ರಾಹ್ಮಣನಂತೆ ವೇಷಹಾಕಿಕೊಂಡು ತನ್ನ ವೇದ ಜ್ಞಾನವನ್ನು ಪ್ರದರ್ಶಿಸಿ ಧರ್ಮರಾಯನ ಮನಸ್ಸನ್ನು ಗೆದ್ದುಕೊಂಡು ಅನಂತರ ತನ್ನ ರಾಕ್ಷಸೀ ಸ್ವಭಾವವನ್ನು ಕಾಣಿಸಿರುವುದು ರಾಕ್ಷಸರು ಎಂಥ ಮಾಯಾವಿಗಳೆಂಬುದನ್ನು ತೋರಿಸಿಕೊಡುತ್ತದೆ.

* * * *

ತಂತಿಪಾಲ

ವಿರಾಟನಗರದಲ್ಲಿ ಅಜ್ಞಾತವಾಸದ ಅವಧಿಯಲ್ಲಿ ಸಹದೇವನಿಗಿದ್ದ ಹೆಸರು ತಂತಿಪಾಲ. ತಂತಿ ಎಂದರೆ ವಾಕ್ ಎಂಬ ಅರ್ಥವೂ ಇದೆ. ಗೊಲ್ಲರಂತೆ ವೇಷಧರಿಸಿ ಗೊಲ್ಲರ ಭಾಷೆಯಲ್ಲೇ ಮಾತಾಡುತ್ತ ಬಂದ ಇವನಿಗೆ ಅರಿಷ್ಟನೇಮಿ (ಅಡ್ಡಿಯಿಲ್ಲದ ಚಕ್ರವುಳ್ಳವನು) ಜಯದ್ಬಲ ಎಂಬ ಹೆಸರುಗಳೂ ಇವೆ. ತಂತಿಪಾಲ ಎಂದರೆ ಹಸು-ಎತ್ತುಗಳನ್ನು ಕಟ್ಟುವ ತಂತಿ ಎಂಬರ್ಥದ ಜೊತೆಗೆ ಕೊಟ್ಟ ಮಾತನ್ನು ಉಳಿಸಿಕೊಳ್ಳುವವನು, ಆಜ್ಞಾಪಾಲಕ ಎಂಬರ್ಥಗಳೂ ಇವೆ. ಗೋವುಗಳ ಸ್ವಭಾವ, ನಡವಳಿಕೆಗಳೆಲ್ಲ ಅವನಿಗೆ ಚೆನ್ನಾಗಿ ತಿಳಿದಿದ್ದುವು. ವಿರಾಟನ ಬಳಿಗೆ ಬಂದು ಪರಿಚಯ ಮಾಡಿಕೊಳ್ಳುತ್ತೇನೆಂದು ಧರ್ಮರಾಯನಿಗೆ ಮೊದಲೇ ಹೇಳುತ್ತಾನೆ.

ತಂತಿಪಾಲ ಇತಿ ಖ್ಯಾತೋ ನಾಮ್ನಾಹಂ ವಿದಿತಸ್ತ್ವಥ
ನಿಪುಣಂ ಚ ಕರಿಷ್ಯಾಮಿ ವ್ಯೇತು ತೇ ಮಾನ ಸೋ ಜ್ವರಃ

"ನನ್ನ ಹೆಸರು ತಂತಿಪಾಲ ಎಂದು ವಿರಾಟನಿಗೆ ಹೇಳುತ್ತೇನೆ. ತುಂಬ ಎಚ್ಚರಿಕೆಯಿಂದ ವ್ಯವಹರಿಸುತ್ತೇನೆ ನೀನು ಹೆದರಬೇಕಾಗಿಲ್ಲ." ಆತ ವಿರಾಟನ ಬಳಿಗೆ ಬಂದಾಗ "ರಾಜ! ನಿನ್ನ ಬಳಿ ಆಶ್ರಯ ಬೇಡಿ ಬಂದಿದ್ದೇನೆ. ರಾಜಸಿಂಹರಾದ ಪಾಂಡವರು ಎಲ್ಲಿಗೆ ಹೋದರೋ ತಿಳಿಯದು. ಉದ್ಯೋಗವಿಲ್ಲದೆ ಬದುಕುವುದು ಕಷ್ಟ. ನಿನ್ನನ್ನು ಬಿಟ್ಟರೆ ಬೇರೆ ರಾಜರನ್ನು ನಾನು ಇಷ್ಟಪಡುವುದಿಲ್ಲ. ಧರ್ಮರಾಜನ ಬಳಿ ಒಂದು ನೂರ ಎಂಟು ಸಾವಿರ ಹಸುಗಳಿದ್ದುವು. ನಾನೇ ಆ ಗೋವುಗಳ ಪಾಲಕನಾಗಿದ್ದೆ. ತಂತಿಪಾಲ ಎಂದು ನನ್ನ ಹೆಸರು. ನಾನು ವೈಶ್ಯ. ಗೋವುಗಳ ಪರೀಕ್ಷೆಯಲ್ಲಿ ಅಗ್ರಗಣ್ಯ. ಅವಕ್ಕೆ ಏನು ರೋಗ ಬಂದರೂ ಗುಣಪಡಿಸಬಲ್ಲೆ..."

ಚಕ್ರವರ್ತಿಯ ಗಾಂಭೀರ್ಯ ಮುಖ ತೇಜಸ್ಸುಳ್ಳ ತಂತಿಪಾಲ ಸಾಮಾನ್ಯ ಅಧಿಕಾರಿ, ವೈಶ್ಯ ಎಂದು ರಾಜನಿಗೆ ನಂಬಿಕೆ ಬರಲಿಲ್ಲ.

ಸಹದೇವನ ಮೇಲೆ ವಿಶ್ವಾಸವಿರಿಸಿದ ವಿರಾಟನು

ಪಶೂನ್ ಸ ಪಾಲಾನ್ ಭವತೇ ದದಾಮ್ಯಹಂ
ತ್ವದಾಶ್ರಯಾ ಮೇ ವಶವೋ ಭವಂತ್ವಿಹ

(ನನ್ನಲ್ಲಿರುವ ಒಂದೇ ಬಣ್ಣದ, ವಿವಿಧ ಬಣ್ಣಗಳ ಹಸುಗಳನ್ನು ಸಕಲ ಗೋಪಾಲರೊಂದಿಗೆ ನಿನಗೆ ಒಪ್ಪಿಸಿದ್ದೇನೆ. ಇನ್ನೂ ಮುಂದೆ ನೀನೇ ಅವುಗಳ ಒಡೆಯ.)

ಎಂದು ಹೇಳಿ ತಂತಿಪಾಲನನ್ನು ನೇಮಿಸಿಕೊಂಡ. ಅವನು ಕೋರಿದಷ್ಟು ಹಣವನ್ನು ಕೊಡಲು ಒಪ್ಪಿಕೊಂಡ. ತಂತಿಪಾಲನು ತನ್ನನ್ನು ಯಾರೂ ಗುರುತಿಸದಿರುವುದನ್ನು ಕಂಡು ಸಂತೋಷಪಟ್ಟು ಕ್ರಿಯಾತತ್ಪರನಾಗಿದ್ದ.

ತನ್ನ ಬಿಡುವಿಲ್ಲದ ಕೆಲಸದ ನಡುವೆಯೂ ತಂತಿಪಾಲನು ಇತರ ಸೋದರರೊಡನೆ ಆಗಾಗ ಕಲೆಯುತ್ತಿದ್ದ. ದ್ರೌಪದಿಯು ಕೌರವನಿಗೆ ಪತ್ತೆಯಾಗದಂತೆ ಎಲ್ಲರೂ ಎಚ್ಚರಿಕೆ ವಹಿಸುತ್ತಿದ್ದರು.

ಮುಂದೆ ಸುಶರ್ಮನು ಗೋಗ್ರಹಣ ಮಾಡಿದಾಗ ವಿರಾಟನು ಯುದ್ಧಕ್ಕೆ ಹೋದಾಗ ಅಣ್ಣನ ಅಪ್ಪಣೆಯಂತೆ ತಂತಿಪಾಲನೂ ಯುದ್ಧದಲ್ಲಿ ಭಾಗವಹಿಸಿ ವಿರಾಟನು ಗೆಲ್ಲಲು ನೆರವಾದನು.

ವೈಶ್ಯ ಎಂದರೆ ಬೇರೆ ವೇಷ ಧರಿಸಿದವನು ಎಂಬರ್ಥವನ್ನೂ ವ್ಯಾಖ್ಯಾನಕಾರರು ಕೊಟ್ಟಿದ್ದಾರೆ. ಮಹಾಭಾರತ ಯುದ್ಧದ ಹದಿನೆಂಟು ದಿನಗಳಲ್ಲೂ ಪಾಂಡವರ ಪರವಾಗಿ ಕೌರವ ಸೇನೆಯೆದುರು ಉಗ್ರವಾಗಿ ಕಾದಾಡಿದ ವ್ಯಕ್ತಿ ತಂತಿಪಾಲ.

* * * *

ಅನುಬಂಧ



ಈ ಗ್ರಂಥ ಮಹಾಭಾರತದ ಬಹುತೇಕ ಪಾತ್ರಗಳನ್ನು ಪರಿಚಯ ಮಾಡಿಕೊಡುವ ಒಂದು ಪುಟ್ಟ ವಿಶ್ವಕೋಶ ಎನ್ನಬಹುದು. ಇದರಲ್ಲಿ ಬರುವ ಅನೇಕ ಹೆಸರುಗಳು ಹೆಚ್ಚಾಗಿ ಜನರಿಗೆ ಪರಿಚಿತವಲ್ಲ. ಪಾಂಡವರು, ಕೌರವರು, ಕೃಷ್ಣ, ಬಲರಾಮ, ವಿರಾಟ, ದ್ರುಪದ ಮೊದಲಾದ ಪರಿಚಿತ ಹೆಸರುಗಳ ಜೊತೆಗೆ ಸುಮಾರು 280 ರಷ್ಟು ಹೊಸ ಹೆಸರುಗಳು ಇಲ್ಲಿ ಬರುತ್ತವೆ. ಮಹಾಭಾರತದ ಹಿರಿಮೆಗೆ ಇಲ್ಲಿಯ ಸಣ್ಣಪುಟ್ಟ ಪಾತ್ರಗಳೂ ಕೂಡ ಮೆರುಗು ನೀಡಿವೆ. ಆಸಕ್ತರು ಮಹಾಭಾರತದಲ್ಲಿ ಇವುಗಳನ್ನು ಕಂಡುಹಿಡಿದು ಓದಿ ತಮ್ಮ ಜ್ಞಾನವನ್ನು ಬಿತ್ತರಿಸಿಕೊಳ್ಳಲು ಈ ಪುಟ್ಟ ಲೇಖನಗಳು ಸಹಾಯ ಮಾಡುತ್ತವೆ.

ಅಲ್ಲದೆ ಚಕ್ರವ್ಯೂಹ, ಯುದ್ಧ ವಿವರಗಳು, ಜಂಬೂದ್ವೀಪ, ಸಪ್ತಸಾಗರಗಳು ಮೊದಲಾದ ಅನೇಕ ಸಂಗತಿಗಳು ಇಲ್ಲಿ ಪ್ರಸ್ತಾವಿತವಾಗಿವೆ. ಈ ಲೇಖನಗಳ ಅವಲೋಕನದಿಂದ ಮಹಾಭಾರತ ಕಾವ್ಯದ ಪಾರ್ಶ್ವನೋಟ ನಮಗಿಲ್ಲಿ ಲಭ್ಯವಾಗುತ್ತದೆ. "ವ್ಯಾಸ ಮನಸ್ಸಾಗರ ಸಂಭೂತ" ಎನಿಸಿದ ಈ ಪಾತ್ರಗಳನ್ನು ಇಲ್ಲಿ ದರ್ಶನ ಮಾಡಿ ನಮ್ಮ ಲೋಕ ಜ್ಞಾನವನ್ನು ವಿಸ್ತರಿಸಿಕೊಳ್ಳಬಹುದು.

ಪ್ರಕಾಶಕರು



ವಸಂತ ಪ್ರಕಾಶನ
ಬೆಂಗಳೂರು